UNIVERSAL
LIBRARY
OU_198066
UNIVERSAL
LIBRARY

# ಸದಭಿಪ್ರಾಯ

**ಡಾ. ಎಸ್. ಸಿ. ನಂದೀಮಠ,**

M. A. PHD.

**ಪ್ರಿನ್ಸಿಪಾಲ ಲಿಂಗರಾಜ ಕಾಲೇಜ**

**ಬೆಳಗಾಂವ.**

*Date 21-4-40*

ಶ್ರೀಮಾನ್,

**ಜಿ. ಎಚ್ ಹೊಸೂರ, ಮುಳಗುಂದ**

**ಇವರಿಗೆ—**

“……..ತಾವು ದಯವಿಟ್ಟು ಕಳಿಸಿಕೊಟ್ಟ ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ “ **ಮುರಘರಾಜೇಂದ್ರ** ವಿಜಯ ” ವೆಂಬ ಗ್ರಂಥವು ಹಸ್ತಗತವಾಯಿತು. ಈ ಗ್ರಂಥವನ್ನು ಓದಿ ನೋಡಿದೆನು. ತಾವು ಪಟ್ಟ ಶ್ರಮದಬಗ್ಗೆ ನನ್ನ ಸಂಪೂರ್ಣ ಸಹಾನುಭೂತಿಯಿದೆ. ಈ ಕೆಲಸವು ಸ್ತುತ್ಯವಾಗಿರುವದು………”

ತಮ್ಮ

**ಶಿ. ಚ. ನಂದೀಮಠ,**

ಪ್ರಿನ್ಸಿಪಾಲ ಲಿಂಗರಾಜ ಕಾ

**ಬೆಳಗಾಂವ.**

|| ಓಂ ತತ್ಸತ್ ||

ವಿದ್ಯಾರಣ್ಯ ಗ್ರಂಥಮಾಲಾ ಪುಷ್ಪ ೨೧.

### ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ

# ಮುರಘರಾಜೇಂದ್ರ ವಿಜಯ

— ಅಥವಾ —

# ವೀರಶೈವ ಮತಾಬ್ಧಿ ಚಂದ್ರೋದಯ.

ಪ್ರಸ್ತಾವನಾ ಲೇಖಕರು:
ಶ್ರೀಮಾನ್ ಎಮ್. ಎಸ್. ಸರದಾರ, ಬಿ. ಎ. (ಆಕ್ಸನ್)
ಬಾರ್-ಆಟ್-ಲಾ. ಸೊಲ್ಲಾಪೂರ.

ಲೇಖಕ:
"ಕರ್ನಾಟಕ ವಿದ್ಯಾವಿನೋದಿ"
**ಜಿ. ಎಚ್. ಹೊಸೂರ, ಮುಳಗುಂದ**

ಗೃಹಲಕ್ಷ್ಮೀ, ಸ್ವರಾಜ್ಯ-ವಿಯೋಗ, ವಿಂಧ್ಯಾಚಲ (೪ ಖಂಡ) ಶ್ರೀರಾಮ ಹೃದಯ, ಕೇವಲ ಮಾತೃಭೂಮಿಗಾಗಿ! ಸ್ವಾಮಿ ವಿವೇಕಾನಂದ ಬೋಧಾಮೃತ, ಶ್ರೀ ರಾಮಕೃಷ್ಣ ಸದ್ಬೋಧಸುಧಾ, ಶ್ರೀ ಬ್ರಹ್ಮಾನಂದ ಮಹಾರಾಜ ಚರಿತ್ರೆ, ಪ್ರೇಮಸಂಕಲ್ಪ, ಭಾರತೀಯ ಶ್ರೇಷ್ಠತ್ವ, ಪಂ. ಜವಾಹರಲಾಲ ನೆಹರು, ಇತ್ಯಾದಿ ಗ್ರಂಥಗಳ ಕರ್ತೃ

ಪ್ರಕಾಶಕ;
**ಎಸ್. ಎಚ್. ಹೊಸೂರ,**
**ಮ್ಯಾನೇಜರ ವಿದ್ಯಾರಣ್ಯ ಗ್ರಂಥಮಾಲಾ ಆಫೀಸ ಮುಳಗುಂದ**

ಈ ಪುಸ್ತಕದ ಎಲ್ಲ ಹಕ್ಕುಗಳು ಗ್ರಂಥಕರ್ತರಿಂದ ಕಾದಿಡಲ್ಪಟ್ಟಿವೆ.

೧೯೪೦ ] [ ಬೆಲೆ ೧-೪-೦

ಶ್ರೀ ಶಂಕರ ಕರ್ನಾಟಕ ಪುಸ್ತಕ ಭಾಂಡಾರ.
ಪ್ರಕಾಶಕರು, ಪುಸ್ತಕ ವ್ಯಾಪಾರಿಗಳು.

# ಮುನ್ನುಡಿ.

“ ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಶ್ರೀ ಮುರಘರಾಜೇಂದ್ರ ವಿಜಯ ” ಅಥವಾ “ ವೀರಶೈವ ಮತಾಬ್ಧಿ ಚಂದ್ರೋದಯ ” ವೆಂಬ ಗ್ರಂಥವನ್ನು ನನ್ನಕಡೆಗೆ ಗ್ರಂಥಕರ್ತರಾದ ಶ್ರೀ. ಜಿ. ಎಚ್. ಹೊಸೂರರವರು ಮುನ್ನುಡಿಯನ್ನು ಬರೆಯುವದಕ್ಕಾಗಿ ಕಳಿಸಿದರು. ನಾಲ್ಕು ದಿವಸಗಳಲ್ಲಿಯೇ ಪ್ರಸ್ತಾವನೆಯನ್ನು ಕಳುಹಿಸಿರೆಂದು ಅವರು ಬರೆದದ್ದರಿಂದ ಪುಸ್ತಕವನ್ನು ಅವಲೋಕಿಸಲಿಕ್ಕೆ ಅವಸರವಾಯಿತು. ಆದರೂ ಪುಸ್ತಕವನ್ನು ಸಂಪೂರ್ಣ ಅವಲೋಕಿಸಿದೆನು. ಗ್ರಂಥವು ಬಹಳೇ ಉತ್ತಮರೀತಿಯಿಂದ ಬರೆಯಲ್ಪಟ್ಟದೆ. ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರಘರಾಜೇಂದ್ರ ಮಹಾಸ್ವಾಮಿಗಳ ಸಾದ್ಯಂತ ಚರಿತ್ರೆಯು ಹೃದಯಂಗಮಯವಾಗಿ ಬರೆಯಲ್ಪಟ್ಟದೆ. ಇದು ಸಕಲ ವೀರಶೈವರು ಆಸ್ಥೆಯಿಂದ ಓದಲರ್ಹವಾಗಿರುವದು. ಇದರಲ್ಲಿಯ ಪ್ರತಿ ಅಧ್ಯಾಯಗಳೂ ಬಹಳ ಮಹತ್ವವಿರುವವು. ೧೧ ನೇ ಅಧ್ಯಾಯದಲ್ಲಿ ಶ್ರೀಗಳವರು ವಿದ್ಯಾಪ್ರಸಾರಕ್ಕೆ ಮಾಡಿದ ಸಹಾಯಗಳು ನಮೂದಿಸಲ್ಪಟ್ಟವೆ. ಇವಲ್ಲದೆ ಶ್ರೀ ಶ್ರೀಗಳವರು ಮಾಡಿದ ಧನಸಹಾಯಗಳು ಇನ್ನೂ ಕೆಲವಿರುವವೆಂದು ನನ್ನ ಊಹೆ. ಉದಾಹರಣಾರ್ಥವಾಗಿ ಸೊಲ್ಲಾಪುರದಲ್ಲಿ ಶ್ರೀ ಕಲ್ಯಾಣಶೆಟ್ಟಿ ವಕೀಲರು ಹೊರಡಿಸಿರುವ “ ಸುದರ್ಶನ ” ವೆಂಬ ಮರಾಠೀ ವಾರಪತ್ರಿಕೆಯು ಶ್ರೀ ಶ್ರೀಗಳವರ ಆಶ್ರಯ ಸಹಾಯ ಬಲದಿಂದಲೇ ನಡೆದಿರುತ್ತದೆ. ಹೀಗೆ ಇನ್ನೂ ಅನೇಕ ಕಡೆಗೆ ಶ್ರೀ ಶ್ರೀಗಳವರ ಉದಾರ ದೇಣಿಗೆ, ಸಹಾಯಗಳು ಆಗಿರುತ್ತವೆ; ಆಗುತ್ತಿರುತ್ತವೆ. ಗ್ರಂಥಕರ್ತರು ೮೫ ನೇ ಪುಟದಲ್ಲಿ ಬರೆದಂತೆ “ ಭರತಖಂಡದಲ್ಲಿ ವಿದ್ಯಾಪ್ರಸಾರಕ್ಕೂ, ಅನಾಥರಿಗೂ ಇವರಷ್ಟು ಧನದ ಧಾರೆ ಎರೆದು ಸಹಾಯ ಮಾಡಿದವರಲ್ಲಿ ಯಾವ ಮಠದ ಸ್ವಾಮಿಗಳೂ ಇಲ್ಲವೆಂದು ಸೂರ್ಯ ಪ್ರಕಾಶದಷ್ಟು ಸ್ಪಷ್ಟವಿರುತ್ತದೆ. ” ಇದು ಅಕ್ಷರಶಃ ಸತ್ಯವಿರುತ್ತದೆ. ಕೇವಲ ವೀರಶೈವ ಸಮಾಜದವರಿಷ್ಟೇ ಅಲ್ಲದೆ, ಇನ್ನಿತರ ಅನೇಕ ಸಮಾಜಗಳು ಶ್ರೀ ಶ್ರೀಗಳವರಿಂದ ಸಹಾಯವನ್ನು ಪಡೆದಿರುತ್ತವೆ.

ಇದಲ್ಲದೆ ಶ್ರೀ ಶ್ರೀಗಳವರು ಉಜ್ವಲ ಕನ್ನಡದಭಿಮಾನಿಗಳೂ, ಕರ್ನಾಟಕ ಏಕೀಕರಣದ ಪ್ರಶ್ನೆಯಲ್ಲಿ ತುಂಬಾ ಸಹಾನುಭೂತಿಯುಳ್ಳವರೂ ಇರುವರು. ೧೯೩೭ ರಲ್ಲಿ ಧಾರವಾಡದಲ್ಲಿ ಕೂಡಿದ ೭ ನೇ ಕರ್ನಾಟಕ ಏಕೀಕರಣ ಸಮ್ಮೇಲನದ ಉದ್ಘಾಟನೆಯನ್ನು ಶ್ರೀ ಶ್ರೀಗಳವರೇ ಮಾಡಿದರು. ಕರ್ನಾಟಕದ ಅಭ್ಯುದಯ ವಾಗಬೇಕಾದರೆ ಕರ್ನಾಟಕಕ್ಕೆ ಸ್ವತಂತ್ರವಾದ ಪ್ರಾಂತವು ಬೇಕೆಂದು ಅವರ ಅಭಿಪ್ರಾಯವು. ಇದನ್ನು ಶ್ರೀ ಹೊಸೂರರವರು ಸ್ಮರಣೆತಂದು ೧೪ ನೇ ಅಧ್ಯಾಯದಲ್ಲಿ ವಾಚಕರ ಮುಂದಿಟ್ಟಿರುವರು. ಹಾಗು ಇನ್ನೂ ಶ್ರೀಗಳವರಿಂದ ಜರುಗಿದ ಅನೇಕ ಸಾಮಾಜಿಕ, ಧಾರ್ಮಿಕ ಕಾರ್ಯಗಳನ್ನು ಅಲ್ಲಲ್ಲಿ ನಮೂದಿಸಿರುವದು ಶ್ರೀ ಹೊಸೂರರವರ ಕುಶಲತೆಯನ್ನು ವ್ಯಕ್ತಪಡಿಸುತ್ತದೆ.

ಶ್ರೀಗಳವರು ಸಂಸ್ಕೃತ ಪಂಡಿತರಿದ್ದು ಆಧ್ಯಾತ್ಮ ಶಾಸ್ತ್ರದಲ್ಲಿ ಇವರ ಕೈ ಯಾರೂ ಹಿಡಿಯುವಂತಿಲ್ಲ. ಈ ವಿಷಯದಮೇಲಿನ ಇವರ ವ್ಯಾಖ್ಯಾನಗಳು ಕೇಳತಕ್ಕಂಥವಿರುತ್ತವೆ.

ಶ್ರೀಮಜ್ಜಗದ್ಗುರು ಶೂನ್ಯಸಿಂಹಾಸನಾಧಿಪತಿಗಳಾದ ಶ್ರೀ ಜಯದೇವ ಮುರಘರಾಜೇಂದ್ರ ಮಹಾಸ್ವಾಮಿಗಳು ತಮ್ಮ ಔದಾರ್ಯದಿಂದಲೂ, ಪಾಂಡಿತ್ಯದಿಂದಲೂ, ವಿದ್ಯಾಪಕ್ಷಪಾತದಿಂದಲೂ, ಸಮತೋಲ ಬುದ್ಧಿಯಿಂದಲೂ ತಮ್ಮ ಸತ್ಕೀರ್ತಿಯನ್ನು ನಾಲ್ಕೂ ದಿಕ್ಕುಗಳಲ್ಲಿ ಹಬ್ಬಿಸಿರುವರು. ಇಂಥ ಮಹಾನುಭಾವರ ಚರಿತ್ರೆಯನ್ನು ಬರೆದದ್ದಕ್ಕಾಗಿ ಎಲ್ಲ ಸಮಾಜಗಳು ಗ್ರಂಥಕರ್ತರಾದ ಶ್ರೀ ಜಿ. ಎಚ್. ಹೊಸೂರರವರಿಗೆ ಋಣಿಯಾಗಿರುತ್ತವೆ.

**ಸೊಲ್ಲಾಪೂರ**
ತಾ.೨೭– ೪—೧೯೪೦.

**ಎಮ್. ಎಸ್. ಸರದಾರ,**
ಬಿ. ಎ. (ಆಕ್ಸನ್) ಬಾರ–ಆಟ–ಲಾ.

ಹೊಳಲು ಹಿರಿಯಮಠದ

**ಶ್ರೀಮಾನ್ ಚಂದ್ರಶೇಖರ ಶಾಸ್ತ್ರಿಗಳು ವ್ಯಾಕರಣತೀರ್ಥ,**

ಪ್ರಿನ್ಸಿಪಾಲ ಶಂಕರ ಸಂಸ್ಕೃತ ಕಾಲೇಜ ಯಾದಗಿರಿ

**ಇವರ ಸದಭಿಪ್ರಾಯಯುಕ್ತ**

# ಇನ್ನೊಂದು ನುಡಿ.

ಕನ್ನಡದಲ್ಲಿ ನುರಿತ ಲೇಖಕರೂ, ವಿನಯಗುಣ ಸಂಪನ್ನರೂ ಆದ ಶ್ರೀಮಾನ್ ಜಿ. ಎಚ್. ಹೊಸೂರರವರಿಂದ ಬರೆಯಲ್ಪಟ್ಟಿರುವ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರಘರಾಜೇಂದ್ರ ಮಹಾಸ್ವಾಮಿಗಳವರ ಚರಿತ್ರೆಯನ್ನು ಆದ್ಯಂತವಾಗಿ ಓದಿ ನೋಡಿ ಪರಮಾನಂದ ಭರಿತನಾದೆನು. ಶ್ರೀಮಾನ್ ಹೊಸೂರರವರು ಈಗಾಗಲೇ ಗೃಹಲಕ್ಷ್ಮಿ, ಸ್ವರಾಜ್ಯವಿಯೋಗ, ವಿಂಧ್ಯಾಚಲ, ಶ್ರೀರಾಮಹೃದಯ, ಕೇವಲ ಮಾತೃಭೂಮಿಗಾಗಿ ಸ್ವಾಮಿ ವಿವೇಕಾನಂದ ಬೋಧಾಮೃತ, ಶ್ರೀರಾಮಕೃಷ್ಣ ಸದ್ಬೋಧಸುಧಾ, ಪ್ರೇಮಸಂಕಲ್ಪ ಮೊದಲಾದ ೨೦-೨೨ ಗ್ರಂಥಗಳನ್ನು ಬರೆದು ಪ್ರಕಟಿಸಿ ಕನ್ನಡ ಸಾಹಿತ್ಯ ಸೇವೆಯನ್ನು ಮಾಡಿ, ಅಖಿಲ ಕನ್ನಡ ನಾಡಿಗೆ ಪರಿಚಿತರಾಗಿರುತ್ತಾರೆ. ಈಗ ಇವರು ಶ್ರೀ ಶ್ರೀ ಜಗದ್ಗುರು ಜಯದೇವ ಮುರಘರಾಜೇಂದ್ರ ಮಹಾಸ್ವಾಮಿಗಳು ಬೃಹನ್ಮಠ ಚಿತ್ರದುರ್ಗ ಇವರ ಚರಿತ್ರೆಯನ್ನು ಸಂಗ್ರಹಿಸಿ ಜಗದ್ಗುರು ಮಹಾಸ್ವಾಮಿಗಳ ಜನ್ಮಭೂಮಿಯಾದ ಬಿನ್ನಾಳ, ವಿದ್ಯಾಭ್ಯಾಸಸ್ಥಳ ಗದಗ, ಸಿಂಹಾಸನ ಸ್ಥಳ ಚಿತ್ರದುರ್ಗ ಇತ್ಯಾದಿ ಸ್ಥಳಗಳಿಗೆ ಹೋಗಿ ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮಹಾಸ್ವಾಮಿಗಳ ಚರಿತ್ರೆಯನ್ನು ಪರಮ ಭಕ್ತಿಯಿಂದ ಬರೆದು ಪ್ರಕಟಿಸಿರುವದನ್ನು ನೋಡಿದರೆ, ಯಾವ ಕನ್ನಡಿಗನಿಗೆ ತಾನೇ ಸಂತೋಷವಾಗಲಿಕ್ಕಿಲ್ಲ ? ಸಾಹಿತ್ಯ ಪ್ರಪಂಚದಲ್ಲಿ ಜಾತಿ-ಮತ-ಪಂಥಗಳಿಗೆ ಸ್ಥಾನವಿಲ್ಲ; ನಾವೆಲ್ಲರೂ ಕನ್ನಡ ಕುಲದವರೆಂದು ಹೇಳುವದೇನೋ ನಿಜವಾದರೂ ಕೃತಿಯಲ್ಲಿ ತೋರಿಸುವ ಪುಣ್ಯಾ

ತ್ಮರು ವಿರಳವೆಂದು ಕಳೆದ ೧೫ ವರ್ಷಗಳಿಂದ ಅನೇಕ ಸಾರ್ವಜನಿಕ ಸಂಸ್ಥೆಗಳಲ್ಲಿ ಕೆಲಸಮಾಡುವ ನನಗೆ ಅನುಭವವಾಗಿರುವದು. ಆದರೆ ನನ್ನ ಪ್ರಿಯ ಸ್ನೇಹಿತರಾದ ಶ್ರೀಮಾನ್ ಜಿ. ಎಚ್. ಹೊಸೂರರವರು ಇದಕ್ಕೆ ಅಪವಾದವಾದದ್ದು ನನಗೆ ಬಹಳೇ ಸಂತೋಷವಾಗಿರುತ್ತದೆ.

ಇನ್ನು ಶ್ರೀ ಜಗದ್ಗುರುಗಳ ವಿಷಯಕ್ಕೆ ನಾನು ಒಂದೆರಡು ಮಾತುಗಳನ್ನು ಇಲ್ಲಿ ಹೇಳದೆ ಇರಲಾರೆನು. ಕಳೆದ ೨೦ ವರ್ಷಗಳಿಂದ ನಾನು ಶ್ರೀ ಜಗದ್ಗುರುಗಳನ್ನು ಬಲ್ಲೆನು. ಶ್ರೀಗಳವರು ವೀರಶೈವ ಸಮಾಜಕ್ಕೂ ತನ್ಮೂಲಕ ಕರ್ಣಾಟಕಕ್ಕೂ ಮಾಡಿದ ಉಪಕಾರಗಳು ಹೇರಳವಾಗಿವೆ. ಇವರಷ್ಟು ಪರೋಪಕಾರವನ್ನು ಮಾಡಿದ ಸ್ವಾಮಿಗಳವರು ಸದ್ಯಕ್ಕೆ ವೀರಶೈವ ಸಮಾಜದಲ್ಲಿ ಮಾತ್ರವಲ್ಲ; ಯಾವ ಸಮಾಜದಲ್ಲಿಯೂ ಇಲ್ಲವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಇವರು ಅನೇಕ ವಿದ್ಯಾಸಂಸ್ಥೆಗಳಿಗೆ ಹೇರಳವಾದ ಧನಸಹಾಯವನ್ನು ಮಾಡಿ ಸಾವಿರಾರು ವಿದ್ಯಾರ್ಥಿಗಳನ್ನುದ್ಧಾರಮಾಡಿರುವದು ಸಾಧಾರಣವಾದ ಕಾರ್ಯವಲ್ಲವು. ವೀರಶೈವ ಸಮಾಜದಲ್ಲಿ ಸಾವಿರಾರು ಮಠಗಳುಂಟು. ಎಲ್ಲಾ ಮಠದವರೂ ಇವರಂತೆಯೇ ತಮ್ಮ ತಮ್ಮ ಕೈಲಾದಮಟ್ಟಿಗೆ ಕಾರ್ಯಗಳನ್ನು ಮಾಡಿದ್ದೇ ಆದರೆ, ಜಗತ್ತಿನಲ್ಲಿ ಇಷ್ಟರೊಳಗಾಗಿಯೇ ವೀರಶೈವ ಮತವು ಜಾಜ್ವಲ್ಯಮಾನವಾಗುತ್ತಿದ್ದಿತು. ಶ್ರೀ ಶ್ರೀಗಳವರು ಅಧಿಕಾರಕ್ಕೆ ಬಂದು ೩೭ ವರ್ಷಗಳಾದರೂ ಒಂದು ದಿವಸವಾದರೂ ಅವರಿಗೆ ಜ್ವರಬಂದಿಲ್ಲವೆಂಬುವ ಒಂದೇ ಉದಾಹರಣೆಯಿಂದ ಅವರ ನಿಯಮಿತತನ, ಬ್ರಹ್ಮಚರ್ಯ ಪರಿಪಾಲನೆಯು ಚನ್ನಾಗಿ ಗೋಚರವಾಗುವದು. ಇವರು ಅಧಿಕಾರವನ್ನು ಹೊಂದಿದ ಮೇಲೆ ಬೃಹನ್ಮಠದ ಕೀರ್ತಿಯು ಕರ್ನಾಟಕದಲ್ಲಿ ಬೆಳೆಯುತ್ತಿರುವರಲ್ಲದೆ, ಶ್ರೀಮಠಕ್ಕೆ ಅಪಾರವಾದ ಆಸ್ತಿಯನ್ನು ಮಾಡಿ ಹದಿನೆಂಟು ಲಕ್ಷ ಮೀರಿ ದಾನಮಾಡಿದ್ದು ಸಾಮಾನ್ಯವಾದ ಮಾತಲ್ಲ ಇಂಥ ವ್ಯಕ್ತಿಗಳು ಜಗತ್ತಿನಲ್ಲಿ ಉದ್ಭವಿಸುವದು ವಿರಳವೆಂದು ಹೇಳಬಹುದು. ಇಂತಹ ವೃದ್ಧಾಪ್ಯಕಾಲದಲ್ಲಿಯೂ ಶ್ರೀಗಳವರು ತಮ್ಮ ನಿತ್ಯನೈಮಿತ್ತಿಕ ಕಾರ್ಯಗಳನ್ನು ಮಾಡಿಕೊಂಡು ಸಂಸ್ಥಾನದ ಕೆಲಸಗಳನ್ನು ನೋಡುತ್ತಿರುವದನ್ನು ನೋಡಿದರೆ ಇಂತಹ ಕರ್ತವ್ಯನಿಷ್ಠರಾದವರು ನಮ್ಮ ಸಮಾಜದಲ್ಲಿ ಇಲ್ಲವೆಂದು ಹೇಳದಿರಲಾ

ರೆನು. ಶ್ರೀ ಜಗದ್ಗುರುಗಳು ಮಾಡಿದ ಅನಂತ ಕಾರ್ಯಗಳು ಶ್ರೀಯುತ ಹೊಸೂರರವರು ಶಕ್ಯವಿದ್ದಷ್ಟು ಶೋಧಿಸಿ, ಸರಳಭಾಷೆಯಿಂದ ಸರಸವಾಗಿ ವರ್ಣಿಸಿರುವದನ್ನು ನೋಡಿದರೆ ಗ್ರಂಥಕಾರರ ಕುಶಲತೆಯು ವ್ಯಕ್ತವಾಗುತ್ತದೆ. ವಾಚಕರು ಸಂಪೂರ್ಣವಾಗಿ ಓದಿನೋಡಿ, ಜಗದ್ಗುರುಗಳು ಮಾಡತಕ್ಕ ಕಾರ್ಯಗಳಲ್ಲಿ ಒಂದೊಂದನ್ನಾದರೂ ಕಲಿತರೆ ಕರ್ನಾಟಕಕ್ಕೆ ಮಹತ್ತರವಾದ ಉಪಕಾರವಾಗುವದು. ದೊಡ್ಡವರ ಚರಿತ್ರೆಗಳು ಸಾಧಾರಣ ಜನರಿಗೆ ಒಳ್ಳೇ ಪ್ರಯೋಜನಕಾರಿಗಳಾಗುತ್ತವೆ. ಇದೇ ಬುದ್ಧಿಯಿಂದ ಶ್ರೀಮಾನ್ ಜಿ. ಎಚ್. ಹೊಸೂರರವರು ಪರಿಶ್ರಮವಹಿಸಿ ಜಗದ್ಗುರುಗಳವರ ಚರಿತ್ರೆಯನ್ನು ಸುಂದರವಾಗಿ ಚಿತ್ರಿಸಿರುತ್ತಾರೆ. ಕನ್ನಡಿಗರೆಲ್ಲರೂ ಈ ಚರಿತ್ರೆಯನ್ನು ತಪ್ಪದೇ ಓದಬೇಕೆಂದು ಹೇಳಿ, ಶ್ರೀ ಜಗದ್ಗುರುಗಳು ಇನ್ನೂ ಅನಂತಕಾಲ ಜೀವಿಸಿ, ಕನ್ನಡನಾಡಿನಲ್ಲಿ ಅನೇಕ ಕಾರ್ಯಗಳನ್ನು ಮಾಡಿ, ಸ್ಥಿರವಾದ ಕೀರ್ತಿಯನ್ನು ಸಂಪಾದಿಸಲೆಂದು ಪರಮಾತ್ಮನನ್ನು ಕುರಿತು ಅನನ್ಯಭಾವದಿಂದ ಬೇಡಿಕೊಳ್ಳುತ್ತೇನೆ. ಹಾಗು ಶ್ರೀಯುತ ಹೊಸೂರರವರು ಜಗದ್ಗುರುಗಳವರ ಚರಿತ್ರೆಯನ್ನು ಬರೆದು ಕನ್ನಡಿಗರ ಮುಂದಿಟ್ಟಿದ್ದಕ್ಕೆ ಇನ್ನೊಮ್ಮೆ ಅವರ ಅಭಿನಂದನೆಯನ್ನು ಮಾಡಿ ಈ ನನ್ನ ಅಭಿಪ್ರಾಯವನ್ನು ಮುಗಿಸುತ್ತೇನೆ.

೨—೫—೪೦.

**ಚಂದ್ರಶೇಖರ ಶಾಸ್ತ್ರೀ ವ್ಯಾಕರಣತೀರ್ಥ**
**ಹಿರೇಮಠ ಹೊಳಲು,**
ಪ್ರಿನ್ಸಿಪಾಲ ಶಂಕರ ಸಂಸ್ಕೃತ ಕಾಲೇಜ ಯಾದಗಿರಿ.

# ವಿಷಯಾನುಕ್ರಮಣಿಕೆ.


| ಅಧ್ಯಾಯ | ಅಧ್ಯಾಯಗಳ ಹೆಸರು | ಪುಟ |
| --- | --- | --- |
| ೧ | ವಿಷಯಪ್ರವೇಶ. .... .... .... | ೧ |
| ೨ | ಜನನ. .... .... .... .... | ೬ |
| ೩ | ಬಾಲಲೀಲೆ. .... .... .... .... | ೧೬ |
| ೪ | ವಿದ್ಯಾಭ್ಯಾಸ. .... .... .... | ೨೪ |
| ೫ | ಕಾಶಿಯಲ್ಲಿಯ ವಿದ್ಯಾರ್ಜನೆಯೂ, ಲೋಕಮಾನ್ಯ ಟಿಳಕರ ಪ್ರಭೃತಿಗಳೂ. .... .... | ೩೩ |
| ೬ | ಅಥಣಿಯ ಶ್ರೀ ಶ್ರೀ ಶಿವಯೋಗಿಗಳ ಭವಿಷ್ಯ. | ೩೮ |
| ೭ | ಚಿನ್ಮೂಲಾದ್ರಿಯ ಬೃಹನ್ಮಠದ ಪೀಠ ಪ್ರಭಾವ. | ೪೮ |
| ೮ | ಸಿಂಹಾಸನಾರೋಹಣ. .... .... .... | ೫೫ |
| ೯ | ದಿಗ್ವಿಜಯ. .... .... .... .... | ೬೪ |
| ೧೦ | ಶಾಖಾಮಠಗಳ ಸುವ್ಯವಸ್ಥೆ. .... .... | ೭೭ |
| ೧೧ | ವಿದ್ಯಾಪ್ರಸಾರಕ್ಕೆ ಸಹಾಯ. .... .... | ೮೫ |
| ೧೨ | ಮಹಾತ್ಮಾ ಗಾಂಧಿಯವರೂ, ಶ್ರೀ ಶ್ರೀ ಜಗದ್ಗುರುಗಳೂ. .... .... .... .... | ೯೩ |
| ೧೩ | ಮೈಸೂರ ಶ್ರೀಮನ್ಮಹಾರಾಜರೂ, ಶ್ರೀ ಶ್ರೀ ಜಗದ್ಗುರುಗಳೂ. .... .... .... | ೧೦೦ |
| ೧೪ | ಶ್ರೀ ಜಗದ್ಗುರು ಮಹಾಸ್ವಾಮಿಗಳಿಂದ ಜರುಗಿದ ಬೇರೆ ಕೆಲವು ಮಹತ್ವದ ಕಾರ್ಯಗಳು. .... | ೧೧೭ |
| ೧೫ | ಶ್ರೀ ಜಗದ್ಗುರು ಮಹಾಸ್ವಾಮಿಗಳ ಬಗ್ಗೆ ಮಹನೀಯರು ವ್ಯಕ್ತಪಡಿಸಿದ ಪೂಜ್ಯಭಾವ. .... | ೧೨೬ |

# ಅರ್ಪಣಪತ್ರಿಕೆ.

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ

## ಮುರಘರಾಜೇಂದ್ರ ವಿಜಯ

... ಅಥವಾ ...

**ವೀರಶೈವ ಮತಾಬ್ಧಿ ಚಂದ್ರೋದಯ,**

ಎಂಬ

ಈ ಪವಿತ್ರವಾದ ಚರಿತಾತ್ಮಕ ಗ್ರಂಥಕುಸುಮವು

ಶ್ರೀ ಮದನಾದಿ ಪರಮಶಿವ ಪರಂಜ್ಯೋತಿ ಶೂನ್ಯಸಿಂಹಾಸನಾರೂಢರಾದ
ಚಿತ್ರದುರ್ಗದ

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ
ಮುರಘರಾಜೇಂದ್ರ ಮಹಾಸ್ವಾಮಿಗಳ

**॥ ದಿವ್ಯಚರಣಗಳಿಗೆ ॥**

**ಗ್ರಂಥಕರ್ತನಿಂದ:-**

ಭಕ್ತಿಪುರಸ್ಸರ
ಕಾಣಿಕೆಯಾಗಿ ಅರ್ಪಿಸಲ್ಪಟ್ಟಿದೆ.



ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ
ಮುರಘರಾಜೇಂದ್ರ ಮಹಾಸ್ವಾಮಿಗಳು
ಚಿತ್ರದುರ್ಗ.

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು

ಜಯದೇವ

# ಶ್ರೀ ಮುರಘ-ರಾಜೇಂದ್ರ ವಿಜಯ

ಅಥವಾ

## ವೀರಶೈವ ಮತಾಬ್ಧಿಚಂದ್ರೋದಯ.

## ೧ನೇ ಅಧ್ಯಾಯ.

### ವಿಷಯ ಪ್ರವೇಶ

ಧರ್ಮೋದ್ಧಾರಕ್ಕಾಗಿ ಮಹಾತ್ಮರು ಈಶ್ವರಾಂಶದಿಂದ ಜನಿಸಿ ಜಗತ್ತಿಗೆ ಮಾರ್ಗವನ್ನು ತೋರಿಸುತ್ತಾರೆ. ಇವರು ತಮ್ಮ ಜ್ಞಾನಾಮೃತದಿಂದ ಜಗತ್ತನ್ನೇ ಆನಂದಗೊಳಿಸುವರು. ಆಧ್ಯಾತ್ಮ ಜೀವನದಲ್ಲಿ ಜಗತ್ತಿಗೆ ಜ್ಯೋತಿಸ್ವರೂಪರಾದ ಮಹಾತ್ಮರಿಗೆ ನಮ್ಮ ಕರ್ನಾಟಕವು ಜನ್ಮಸ್ಥಾನವಾಗಿರುವದೆಂದರೆ ಅತಿಶಯೋಕ್ತಿಯೆನಿಸದು. ಹೀಗೆ ಕರ್ನಾಟಕವಲ್ಲಿ ಅವತರಿಸಿ ಧರ್ಮೋದ್ಧಾರ ಕಾರ್ಯವನ್ನು ಮಾಡಿದವರಲ್ಲಿ ವೀರಶೈವ ಮತೋದ್ಧಾರಕರಾದ ಶ್ರೀ ಬಸವೇಶ್ವರರು ಇಡೀ ಜಗತ್ತಿಗೇ ವಂದ್ಯರಾಗಿರುವರೆಂದು ಮುಕ್ತಕಂಠದಿಂದ ಹೇಳಬಹುದು. ಇವರು "ಪರಮಾ

ತ್ಮನ ಕಳೆಯಾದ ಲಿಂಗವು ದೇಹದಲ್ಲಿಯೇ ಇದೆ." ಎಂಬ ತತ್ವವನ್ನು ಅಂಗೀಕರಿಸಿ ಜಗತ್ತಿಗೆಲ್ಲ ಲಿಂಗವೇ ಪರಬ್ರಹ್ಮವೆಂದೂ, ಆ ಲಿಂಗದ ಹೊರತು ದೇವರಿಲ್ಲೆಂದೂ ಧರ್ಮದಲ್ಲಿ ಜಾಗೃತಿಯನ್ನುಂಟು ಮಾಡಿದ ವಿಭೂತಿಗಳು. ವೇದದೊಳಗಿನ ಕರ್ಮಜಾಲವನ್ನು ಅಲ್ಲಗಳೆದು, ಶಬ್ದ ಜಾಲದಿಂದ ಪಾರಾಗಿ ನಿಃಶಬ್ದ ಪರಬ್ರಹ್ಮ ಸ್ಥಿತಿಗೆ ಮುಟ್ಟಿದ ಮುಕ್ತರು !! ಜಗತ್ತಿನ ಕಲ್ಯಾಣಕ್ಕಾಗಿ ವಚನವೇದವನ್ನು ನುಡಿದವರು; ಹಾಗು ನುಡಿದಂತೆ ನಡೆದವರು !! ಇವರು ತಮ್ಮಲ್ಲಿದ್ದ ಸದಾಚಾರ, ಸದ್ವಿಚಾರ, ಸದ್ವಚನಗಳ ಪ್ರಭಾವದಿಂದ ಧರ್ಮಜ್ಯೋತಿಯನ್ನು ಬೆಳಗಿದ ಪ್ರಭಾವಶಾಲಿಗಳು ! ನಂದೀಶ್ವರನ * ಅವತಾರ

---

* (೧) ಶ್ರೀಬಸವೇಶ್ವರರು ಕೈಲಾಸದಲ್ಲಿಯ ನಂದೀಶ್ವರನ ಅವತಾರವೆಂದು ಮಹಾದೇವರಾಯರ ಶಿಲಾಶಾಸನ ನಂ. ೨ ರಿಂದ ತಿಳಿದು ಬರುತ್ತದೆ. ಇದು ಮಿ. ಇಲಿಯಟ್‌ರವರು ಮುಂಬೈ ರಾಯಲ್ ಏಶಿಯಾಟಿಕ್ ಸೊಸಾಯಟಿಯಲ್ಲಿದ್ದ ಮಿ. ಫ್ಲೀಟ್‌ರವರಿಗೆ ಒದಗಿಸಿಕೊಟ್ಟದ್ದಾಗಿರುತ್ತದೆ. ಇದನ್ನು ಶ್ರೀಮಾನ್. ಡಾಕ್ಟರ ನಂದೀಮಠರವರು ಶಿವಾನುಭವ ಸಂ. ೪. ಸಂ. ೨ ರಲ್ಲಿ ಪ್ರಕಟಗೊಳಿಸಿರುವರು.

ಎನೆಸೆಗೆಳ್ದದ್ವಿಜ ಬಿನ್ನಪದಿ ಶಿವಜಗಕ್ಕೀ ಮಾರ್ಗಮಂ ತೋರಬೇಕೇ |
ಕೈನಲಾದ ಪ್ರಭು ನಂದಿನಾಥನ ಮೊಗಂ ನೋಡಲ್ಕೆ ಶ್ರೀ ಸಂಗಮೋ ||
ಶನಪುತ್ರಂ ಬಸವಯ್ಯ ಬಂಕನದರಿಂ ಶಿವಮುದ್ಧ ದೇವಂಜನ |
ಕೈನಿಮಿತ್ತಂ ಶಿವದೇವನಾಗಿಯು ಗಣ ಶ್ರೀಪಾದಮಂ ತೋರುವೇಂ || ೧ ||

—ಮಹಾದೇವರ ಶಿಲಾಶಾಸನ ನಂ. ೨.

ಮತ್ತು ಕೆಳಗಿನ ಅವತರಣಿಕೆಗಳು ಬಸವೇಶ್ವರರು ನಂದೀಶ್ವರನ ಅವತಾರವೆಂಬುದಕ್ಕೆ ಆಧಾರಗಳಾಗಿವೆ.

(೨) ಅವತಾನಮಂತ್ರನಮಸ್ತೇಭ್ಯೋ ಹೃದಯಂತುತೇನ ಇತಿರುದ್ರಾಣಾಂ ಸುಖಯಿತ್ವಶ್ಚ ಶ್ರವಣಾತ್ ಜಗದ್ಧಿತಾಯ ಕಲಿಯುಗೇ ನಂದೀಶ್ವರಾದಯೋ, ಬಸವೇಶ್ವರಾದಿ ಪುರಾತನ ನೂತನ ಭಕ್ತಾ ಭವಂತಿ.

— ವೀರಶೈವಚಿಂತಾಮಣಿಯಲ್ಲಿಯ ಶಂಕರಸಂಹಿತೆ.

(೩) ಶಿಲಾದಶ್ಚ ಸುತಶ್ಚಾಯಂ ಕಾಮರೂಪೀ ಮಹಾಜವಃ | ಮಮಾಂಗಸ್ಪರ್ಶ ಯೋಗಶ್ಚ ಮಮವಾಹನತಾಂಗತಃ|| ವಸವಾಹ್ಯೋಹಿ ಗಿರಿಜೆ ಮಮಪೂರ್ಣಾಂಶು ಸಂಭವಃ | ಶಿಲಾದಸ್ಯಸುತಃ ಶ್ರೀಮಾನ್ನಂದಿನಾಮಾ ಮಹಾಜವಃ |

—ಸ್ಕಂದಪುರಾಣ

(೪) ಇದಲ್ಲದೆ ಸಿಂಗಿರಾಜಪುರಾಣ ಸಂಸ್ಕೃತ ಬಸವಪುರಾಣ, ಪ್ರಭುಲಿಂಗಲೀಲೆಗಳೂ ಇದಕ್ಕೆ ಆಧಾರಗಳಾಗಿವೆ.

ವೆಂದು ಖ್ಯಾತಿಯನ್ನು ಪಡೆದವರು! ಅಂತೇ ಶೂನ್ಯಸಿಂಹಾಸನದಮೊದಲನೇ ಅಧಿಪತಿಗಳಾದ ಶ್ರೀ ಮನ್ನಿರಂಜನ ಜಗದ್ಗುರು ಪ್ರಭುದೇವರು —“ ಕಲ್ಯಾಣವೆಂಬ ಪ್ರಣತಿಯಲ್ಲಿ ಸುವಿಚಾರವೆಂಬ ಬತ್ತಿಗೆ ಭಕ್ತಿರಸವೆಂಬ ತೈಲವನೆರೆದು, ಬಸವಂಣನೆಂಬ ಜ್ಯೋತಿಯ ಮುಟ್ಟಿಸಲು, ತೊಳಗಿ ಬೆಳಗುತಿರ್ದಯ್ಯಾ ಶಿವನಪ್ರಕಾಶ.” ಎಂದು ಬಸವಣ್ಣನವರ ಪ್ರಭಾವವನ್ನು ಕುರಿತು ಅಪ್ಪಣೆ ಕೊಡಿಸುವರು. ಹಾಗು ಭಕ್ತಿಭಾಂಡಾರಿಯಾದ ಬಸವಂಣನವರ ಯೋಗ್ಯತೆಯನ್ನು ಪರೀಕ್ಷಿಸಿ ಸಂತುಷ್ಟರಾಗಿ, ಇವರು ಮತ್ತೊಂದು ಪ್ರಸಂಗದಲ್ಲಿ —“ ಕುಲದೊಳಗೆ ಹುಟ್ಟಿ ಕುಲವ ಬೆರೆಸದೆ, ತನ್ನನಿಲವ ಬಲಿದಿಪ್ಪವರಾರು ಹೇಳಾ? ಹಬ್ಬಿದ ಮೂರು ಬೆಟ್ಟಕ್ಕೆ ತನ್ನ ಮನವ ಹಬ್ಬಲೀಯ್ಯದೆ, ಲಿಂಗಜಂಗಮಕ್ಕೆ ಸವಿಸಿ ಸ್ವಯಲಿಂಗವಪ್ಪರಿನ್ನಾರು ಹೇಳಾ? ಸ್ವಯೋಲಿಂಗ ಸ್ವಯೋಶರಣ, ಸ್ವಯೋಭೋಗವೆಂಬುದಾಗಿ ಗುಹೇಶ್ವರಾ, ನಿಮ್ಮ ಶರಣ ಸಂಗನ ಬಸವಣ್ಣಂಗೆ ನಮೋ ನಮೋ ಎಂಬೆನು.” ಎಂದು ಉದ್ಗಾರಗಳನ್ನು ತೆಗೆದಿರುವರು. ಬಸವೇಶ್ವರರು, “ ವೀರಶೈವಧರ್ಮವೆಂದರೆ ಸಾಮೂಹಿಕ ಧರ್ಮವು; ಈ ಧರ್ಮದ ತಿರುಳನ್ನರಿತುಕೊಂಡು ಸ್ವಾತಂತ್ರ್ಯ ಸಮಾನತೆ, ಆತ್ಮೀಯಭಾವನೆಗಳಿಂದ ಸಾಮೂಹಿಕ ಜೀವನದಲ್ಲಿ ವೀರಶೈವನಾದವನು ಬೆರೆತುಕೊಳ್ಳುವದೇ ಮೋಕ್ಷವನ್ನು ಪಡೆದಂತೆ; “ಸರ್ವಂಶಿವಮಯಂಜಗತ್„ ಎಂದು ತಿಳಿದು ಸಂಸಾರವನ್ನು ಶಿವಮಯ ಅಂದರೆ ಕಲ್ಯಾಣಕರವಾಗಿ ಮಾಡುವದೇ ವೀರಶೈವರ ಆಯುಷ್ಯದ ಗುರಿಯು.” ಎಂದು ಸಾರಿ ಕಲ್ಯಾಣದಲ್ಲಿ ಶ್ರೀಮನ್ನಿರಂಜನ ಜಗದ್ಗುರು ಶೂನ್ಯ ಸಿಂಹಾಸನವನ್ನು ಸ್ಥಾಪಿಸಿದರು. * ಈ ಸಂಗತಿಯು ವಾತುಲಾಗಮ ಹಾಗೂ ವೀರಶೈವರಿಗೆ ಅತಿಮಾನ್ಯವಾದ ಪ್ರಭುಲಿಂಗಲೀಲೆಯಲ್ಲಿಯ ಅಡಿಟಿಪ್ಪಣಿಯಲ್ಲಿ ಕೊಟ್ಟ ಆಧಾರಗಳಿಂದ ಸ್ಪಷ್ಟವಾಗದಿರದು. ಈ ಶಿವಾನುಭವಶೂನ್ಯ ಸಿಂಹಾಸನಕ್ಕೆ ಶ್ರೀಮನ್ನಿರಂಜನ

---

* [೧] ಕಲೌತತ್ಪ್ರಭುದೇವಸ್ಯ ಪೀಠಂ ಕಲ್ಯಾಣ ಪತ್ತನೇ । ಬಸವೇಶಾದಿ ಪ್ರಮಥ ಸಂದೋಹ ಪರಿಕಲ್ಪಿತಂ ॥ — ವಾತುಲಾಗಮ.

[೨] ಸರ್ವಾತ್ಮನಃ ಸಗುಣನಿರ್ಗುಣಯೋಗಸಂ ವಿದ್ರೂಪಸ್ಯ ತಸ್ಯ ಭುವನತ್ರಯಸಂವಿಧಾತುಃ । ಚಿತ್ರಂ ಕಿಮಲ್ಲಮಗುರೋಂತಿಭಕ್ತ ಸಂಘೇಪ್ಸಂತಃ ಸ್ತುವಸ್ತು ಗುರುರಾಸನ ಮಾರುರೋಹ ॥

ಪ್ರಭುಲಿಂಗಲೀಲೆ ಅ. ೨೨. ಶ್ಲೋ. ೬೯.

ಜಗದ್ಗುರು ಪ್ರಭುದೇವರೇ ಮೂಲ ಪುರುಷರು ಇವರ ಕರಕಮಲ ಸಂಜಾತರು. ಶ್ರೀ ಮನ್ನಿರಂಜನ ಚನ್ನಬಸವ ಪ್ರಭುಗಳು, ಇವರು ಶ್ರೀಪ್ರಭುದೇವರ ತರುವಾಯ ಜಗದ್ಗುರು ನಿರಂಜನ ಶೂನ್ಯ ಸಿಂಹಾಸನದ ಅಧಿಪತಿಗಳಾದರು. ಮುಂದೆ ಈ ಪರಂಪರೆಯಿಂದಲೇ ಶ್ರೀ ಮನ್ನಿರಂಜನ ಶೂನ್ಯ ಪೀಠದಿಂದ ಅಧಿಷ್ಠಿತವಾದಂಥ ಅನೇಕ ಶಾಖೋಪಶಾಖ ಮಠಗಳು ನಿರ್ಮಿತವಾದವು. ಷಟ್‌ಸ್ಥಲ ಪ್ರಕಾಶವು ಹರಡಲ್ಪಟ್ಟಿತು ಶ್ರೀ ಮದನಾದಿ ಅಲ್ಲಮಪ್ರಭುದೇವರಿಂದ ಪ್ರಸಾರವಾದ ಈ ಪರಂಪರೆಯಲ್ಲಿ ಈ ಜಗದ್ಗುರು ಸಿಂಹಾಸನಕ್ಕೆ ಶ್ರೀ ಚನ್ನಬಸವೇಶ್ವರರು ( ಕಲ್ಯಾಣ,) ಶ್ರೀ ಸಿದ್ಧರಾಮ ( ಸೊಲ್ಲಾಪುರ ) ಅನಾದಿ ಗಣೇಶ ( ಗೊಹೆ-ಗೋವೆ ) ಆದಿ ಗಣೇಶ್ವರ ( ವೈಸರಡಿ- ಪ್ರಭುಸ್ವಾಮಿ ಬೆಟ್ಟ. ) ನಿರ್ಮಾಯ ಗಣೇಶ್ವರ ( ಮಹೇಶ್ವರ ಬೆಟ್ಟ ) ನಿರಂಜನಸ್ವಾಮಿ ( ಕಲ್ಯಾಣ ) ಜ್ಞಾನಾನಂದ ( ಶ್ರೀ ಶೈಲ ) ಆತ್ಮ ಗಣವರ, ಅಧ್ಯಾತ್ಮ ಗಣನಾಥ, ರುದ್ರಮುನಿ ( ನಿಡುಗಲ್ಲ ) ಬಸವಪ್ರಭು, ಆದಿಲಿಂಗಸ್ವಾಮಿ ( ಕಲ್ಲೂರ ) ಚನ್ನವೀರಸ್ವಾಮಿ, ಗೋಸಲಸಿದ್ಧೇಶ್ವರ, ಶಂಕರದೇವ, ದಿವ್ಯಲಿಂಗೇಶ, ಗೋಸಲಚನ್ನಬಸವೇಶ, ತೋಂಟದಸಿದ್ಧೇಶ್ವರ. ಇತ್ಯಾದಿ ‡ ನಿರಂಜನಮೂರ್ತಿಗಳು ಅಧಿಪತಿಗಳಾದರೆಂದು ಕಂಡು ಬರುತ್ತದೆ. ಚನ್ನಬಸವೇಶ್ವರರೂ ಇವರ ಕರಕಮಲ ಸಂಜಾತರೂ ಈ ಜಗದ್ಗುರು ಪೀಠದ ಪರಂಪರೆಯನ್ನು ಪ್ರಸಾರ ಮಾಡುವಾಗ ತೋಂಟದಸಿದ್ಧೇಶ್ವರ ಸ್ವಾಮಿಗಳು ಚಿನ್ಮೂಲಾದ್ರಿಯ ನಿರಂಜನ ಜಗದ್ಗುರು ಮಠದ ಅಧಿಪತಿಗಳಾದರು. ಶ್ರೀ ಚನ್ನಬಸವೇಶ್ವರರ ಪರಂಪರಾಗತ ಮಠಗಳಲ್ಲಿ ಪ್ರಾಮುಖ್ಯವಾದದ್ದೂ, ಪ್ರಸಿದ್ಧವಾದದ್ದೂ ಆದ ಜಗದ್ಗುರು ಮಠವೆಂದರೆ ಈ ಚಿನ್ಮೂಲಾದ್ರಿಯ ಮುರಘರಾಜೇಂದ್ರ ಬೃಹನ್ಮಠವೇ ಎಂದು ಹೇಳಬಹುದು. ಈ ಪೀಠಕ್ಕೆ ಇಂದಿನವರೆಗೆ ೨೪ ಅಧಿಪತಿಗಳಾದರೆಂದು ಕಂಡುಬರುತ್ತದೆ. ತೋಂಟದ ಸಿದ್ದೇಶ್ವರರ ತರುವಾಯ ಈ ಪೀಠವನ್ನು ನಿರಕ್ಷರರ ಬೋಳ ಬಸವೇಶ್ವರ, ಶ್ರೀ ಸಿದ್ಧವೀರ ಸ್ವಾಮಿ, ಸಿದ್ಧ

‡ (೧) ನಿರಂಜನವಂಶ ರತ್ನಾಕರ. ( ರಾ. ಸಾ ಹಳಕಟ್ಟಿಯವರ ಶಿವಾನುಭವದಿಂದ)

(೨) ವಿರೂಪಾಕ್ಷ ಪಂಡಿತರ ಚನ್ನಬಸವ ಪುರಾಣ

ದೇಶಿಕೇಂದ್ರಸ್ವಾಮಿ, ಗಗನಸ್ವಾಮಿ ಕಟ್ಟಿಗೆಹಳ್ಳಿಸ್ವಾಮಿ, ಇಮ್ಮಡಿ ಮುರಘ ರಾಜೇಂದ್ರಸ್ವಾಮಿಗಳು ಇತ್ಯಾದಿ ೨೪ ಜನ ಸ್ವಾಮಿಗಳುಅಲಂಕರಿಸಿರುವರು. ಈ ಇಮ್ಮಡಿ ಮುರಘರಾಜೇಂದ್ರ ಸ್ವಾಮಿಗಳು ಮಹಾ ತಪಸ್ವಿಗಳು; ಇವರು ಪೀಠಾರೋಹಣರಾದ ಮೇಲೆ ಅನೇಕ ಮಹಾತ್ಮ್ಯಗಳನ್ನು ತೋರಿಸಿ ದರು. ಚಿತ್ರದುರ್ಗದ ಮದಕರಿ ನಾಯಕನಿಗೆ ಇವರ ಅನುಗ್ರಹವಾದುದ ರಿಂದಲೇ ಅರಸೊತ್ತಿಗೆಯು ಪ್ರಾಪ್ತವಾಯಿತು. ಇವರು ದಿಲ್ಲೀ ಶಹರಕ್ಕೆ ದಯಮಾಡಿಸಿದಾಗ ಇವರ ಪಾದೋದಕದಿಂದ ಅರಮನೆಯಲ್ಲಿ ಸತ್ತ ಆನೆಯು ಜೀವಂತವಾಯಿತು. ಇದರಿಂದ ಬಾದಶಹನು ಸಂತುಷ್ಟನಾಗಿ ಇವ ರಿಗೆ ಶಿಖಾಶೈಲ ಶೂನ್ಯಪೀಠ ಪ್ರಣವಸಿಕ್ಕೆ ಮುಂತಾದವುಗಳನ್ನು ಕೊಟ್ಟು ಗೌರವಿಸಿದನು. ಇವುಗಳನ್ನು ಈ ಮಹಾ ಸ್ವಾಮಿಗಳು ಚಿನ್ಮೂಲಾದ್ರಿಯ ಬೃಹನ್ಮಠಕ್ಕೆ ತಂದು ಅನೇಕ ಲೀಲೆಗಳನ್ನು ತೋರಿಸಿ ದುರ್ಗದ ಭರಮನಾ ಯಕನಿಂದ ೩೬೦ ಅಂಕಣಗಳುಳ್ಳ ಭವ್ಯಮಂಟಪದ ಮಠವನ್ನು ಕಟ್ಟಿಸಿದರು. ಇವರ ಕಾಲದಲ್ಲಿ ಅನೇಕ ಜಾಹಗೀರುಗಳು ಈ ಮಠಕ್ಕೆ ದೊರೆತವು. ಇವ ರಿಂದ ಮುಂದೆ ೧೫ ಮಂದಿ ಜಗದ್ಗುರುಗಳು ಚಿನ್ಮೂಲಾದ್ರಿಯ ಶೂನ್ಯ ಸಿಂಹಾಸನವನ್ನು ಅಲಂಕರಿಸಿ ಕರ್ನಾಟಕದ ಮುಖ್ಯ ಜನಾಂಗವಾದ ವೀರ ಶೈವ ಜನಸಮುದಾಯದಲ್ಲಿ ಧರ್ಮಭಾನುವಿನಂತೆ ಪ್ರಕಾಶಿಸಿದರು. ಈ ಜಗದ್ಗುರು ಪೀಠದ ೨೪ನೇ ಸ್ವಾಮಿಗಳೇ ಈಗ ಪಟ್ಟಾದಿಕಾರಿಗಳಾಗಿರುವ ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರಘರಾಜೇಂದ್ರ ಮಹಾಸ್ವಾಮಿಗಳು; ಇವರು ಸದ್ಯಕ್ಕೆ ಕರ್ನಾಟಕದಲ್ಲಲ್ಲದೆ, ಇಡೀ ಭರತ ಖಂಡದಲ್ಲಿ ತಮ್ಮ ಸದ್ಗುಣಂಗಳಿಂದಲೂ, ತಪಸ್ಸಾಮರ್ಥ್ಯದಿಂದಲೂ, ದೇ ದೀಪ್ಯಮಾನರಾಗಿರುವರು. ವೀರಶೈವ ವಿದ್ಯಾರ್ಥಿಗಳ ಸೌಕರ್ಯಕ್ಕೂ ವಿದ್ಯಾಭಿ ವೃದ್ಧಿಗೂಪರಮಸಹಾಯಕರಾಗಿ ಇಡಿ ಕರ್ನಾಟಕಕ್ಕೆ ಕಲ್ಪವೃಕ್ಷಪ್ರಾಯ ರಾಗಿರುವರು. ಇವರಚರಿತ್ರೆಯು ಭರತಖಂಡದ ಜೀವಜ್ಯೋತಿಗೆಹೊಸಕಳೆಯ ನ್ನು ತರುವಂತಹದಾಗಿರುವದು. ಕಾರಣ ಈ ಮಹಾಸ್ವಾಮಿಗಳ ದಿವ್ಯಚರಿತ್ರೆ ಯನ್ನುನಮ್ಮ ಕನ್ನಡಿಗರಿಗಾಗಿ ಯಥಾಮತಿಯಾಗಿ ಮುಂದೆ ಚಿತ್ರಿಸುವೆವು

# ೨ ನೇ ಅಧ್ಯಾಯ.

## ಜನನ

*ಯದಾ ಯದಾ ಪ್ರಾಣಿಶಿವೈಕ್ಯಭಾಜಾಂ ಹಾನಿರ್ಭವೇದ್ಭೂಮಿತಲೇಗಣೇಶಾಃ
ತದಾತದಾ ಮರ್ತ್ಯಕುಲೇವತೀರ್ಯ ಸಂಭೂಯಕುರ್ವಂತಿಹಿಧರ್ಮಸಂಸ್ಥಾಂ

— ಶಂಕರ ಸಂಹಿತೆ.

ಸಾಧು ಸತ್ಪುರುಷರ ತವರಮನೆಯೆಂದುಹೆಸರಾಗಿದ್ದ ಕರ್ನಾಟಕದಲ್ಲಿ ನಿಜಾಮರಾಜ್ಯದಕೊಪ್ಪಳ ಜಾಹಗೀರಿಗೆ ಸೇರಿದ ಬಿನ್ನಾಳವೆಂಬ ಗ್ರಾಮವಿದೆ. ಇಲ್ಲಿ ವೇದಮೂರ್ತಿಗಳಾದ ಚನ್ನಬಸವಯ್ಯರೆಂಬವರು ವೀರಶೈವಾಚಾರ ಸಂಪನ್ನರಾದ ಹಿರೇಮಠದ ಒಡೆಯರು. ಸತ್ಕುಲ ಪ್ರಸೂತರಾದ ಇವರು ತಮ್ಮ ಕುಲಶೀಲಗಳಿಗೊಪ್ಪುವಂತೆ ವೀರಶೈವ ಧರ್ಮದಲ್ಲಿ ನಿಷ್ಠಾವಂತರಾಗಿಯೂ, ವಿವೇಕಿಗಳಾಗಿಯೂ ಗೃಹಸ್ಥಾಶ್ರಮ ಧರ್ಮವನ್ನು ಪಾಲನೆ ಮಾಡಿಕೊಂಡು ಇರುತ್ತಿದ್ದರು. ಇವರು ಶಿವಾರ್ಚನೆ ಮಾಡಿ ಶಿವಲಿಂಗತೀರ್ಥವನ್ನು ಸ್ವೀಕರಿಸದೆ ಅನ್ನಗ್ರಹಣವನ್ನು ಮಾಡುತ್ತಿದ್ದಿಲ್ಲ; ಗುರುಲಿಂಗ ಜಂಗಮರಲ್ಲಿ ಇವರ ವಿಶ್ವಾಸ ಬಹಳ. ದಯಾ ನ್ಯಾಯ ಸತ್ಯ ಪರೋಪಕಾರಾದಿ ಸದ್ಗುಣಗಳು ಇವರಲ್ಲಿ ಮನೆಮಾಡಿಕೊಂಡಿದ್ದವು. ಇವರಧರ್ಮಪತ್ನಿಯಹೆಸರು‡ಬೊರಾಂಬೆ.(ಭ್ರಮರಾಂಬೆ) ಇವಳಾದರೂಪತಿಗೆಅನುರೂಪಳು;ಪತಿಯೇ ಪರಶಿವನೆಂದು ತಿಳಿದು ನಡೆಯುವಂಥವಳು. ಪತಿಯ ಆಜ್ಞೆಯ ಹೊರತು ಇವಳು ಏನನ್ನೂ ಮಾಡುತ್ತಿದ್ದಿಲ್ಲ. ಪಾತಿವ್ರತ್ಯಪ್ರಭಾವದ ಮೂಲಕ ಕಾಮ ಕ್ರೋಧಾದಿ ಷಡ್ವರ್ಗಗಳು ಇವಳನ್ನು ಸೋಂಕಿರಲಿಲ್ಲ. ಪತಿಸೇವೆಯಲ್ಲಿ ಸದಾ ಆನಂದದಿಂದಿರುವದೇ ಇವಳ ನಿತ್ಯದ ಜೀವನಕ್ರಮವು. “ ಸದಾಪ್ರಹೃಷ್ಟಯಾ ಭಾವ್ಯಂ ಗೃಹಕಾರ್ಯೇಷುದಕ್ಷಯಾ । ಸುಂಸ್ಕೃತೋಪಸ್ಕರಯಾ ವ್ಯ

* ಲಿಂಗಾಂಗ ಸಾಮರಸ್ಯ ರೂಪ ಧರ್ಮಗಳಿಗೆ ಯಾವಾಗ ಗ್ಲಾನಿಯು ಸಂಭವಿಸುವದೋ ಆಗ ಗಣೇಶ್ವರರು ಮರ್ತ್ಯ ಕುಲದಲ್ಲಿ ಅವತರಿಸಿ ಧರ್ಮಸ್ಥಾಪನೆಯನ್ನು ಮಾಡುತ್ತಾರೆ.

‡ ಶ್ರೀಶೈಲದಲ್ಲಿರುವ ಭ್ರಮರಾಂಬಾದೇವಿಗೆ ಹೀಗೆ ಕರೆಯುವ ವಾಡಿಕೆಯುಂಟು.

ಯೇಚಾಮುಕ್ತಹಸ್ತಯಾ||" ಎಂದು ವೀರಶೈವ ಸ್ತ್ರೀಧರ್ಮದಲ್ಲಿ ಬೋಧಿಸಿರುವಂತೆ ಇವಳು ಯಾವಾಗಲೂ ಆನಂದಿತಳಾಗಿಯೇ ಇದ್ದುಕೊಂಡು ಚತುರತೆಯಿಂದ ಗೃಹಕೃತ್ಯಗಳಲ್ಲಿ ಆಸಕ್ತಳಾಗಿರುತ್ತಿದ್ದಳು. ಬಂದಂಥ ಭಕ ಮಾಹೇಶ್ವರರಿಗೆ ಅನ್ನವಸ್ತ್ರಾದಿಗಳನ್ನು ದಾನ ಮಾಡುತ್ತ ಬಿನ್ನಾಳದ ಹಿರೇಮಠದ ಮನೆತನಕ್ಕೆ ಇವಳು ಗೃಹಲಕ್ಷ್ಮಿ ಸ್ವರೂಪಳಾಗಿದ್ದಳು. ಇದರಿಂದ ಇವರ ಮನೆಗೆ ಅತಿಥಿ ಅಭ್ಯಾಗತರೂ, ಶಿವಶರಣರೂ, ಶಿವಯೋಗಿಗಳೂ, ಮೇಲಿಂದ ಮೇಲೆ ಬರುತ್ತಿದ್ದರು. ಇವರ ಆದರಾತಿಥ್ಯವನ್ನು ಪರಮಾದರದಿಂದ ಮಾಡಿ ಈ ದಂಪತಿಗಳು ಕೃತ ಕೃತ್ಯರಾಗುತ್ತಿದ್ದರು. ಈ ಪುಣ್ಯವಿಶೇಷದಿಂದ ಇವರರಿಗೆ ಎರಡು ಗಂಡು ಸಂತಾನ, ಸುಖದಿಂದ ಉಂಡುಡಲಿಕ್ಕೆ; ಇಷ್ಟನ್ನು ದೇವರು ದಯಪಾಲಿಸಿದ್ದನು; ಇವರು ಮನೆತನದಿಂದ ಬಡವರಿದ್ದರೂ, ಶಿವಶರಣರಾದ ಶ್ರೀಬಸವೇಶ್ವರರು ತಮ್ಮ ಅಮೃತವಾಣಿಯಿಂದ- "ಮನೆನೊಡಾ ಬಡವರು, ಮನನೋಡಾ ಸಂಪನ್ನರು. ಧನನೋಡಾ ಬಡವರು; ಘನಮನಸಂಪನ್ನರು. ಕೂಡಲ ಸಂಗನ ಶರಣರು ಕೆರೆುಗಳಿಲ್ಲದ ಕಲಿಗಳು; ಆರಿಗುಪಮಿಸಬಾರದು." ಎಂದು ಹೇಳಿರುವಂತೆ ನಮ್ಮ ಚನಬಸವಯ್ಯಾರ ವಾಸ್ತವ್ಯವಿತ್ತು. ಸತ್ಪುರುಷರ ಸೇವಾರೂಪ ತಪಸ್ಸಿನಿಂದ ಪರಿಪಕ್ವಮನಸ್ಕರಾಗಿದ್ದ ಇವರಿಗೆ ಇಹಜನ್ಮದ ಯಾವದೊಂದು ಭೋಗದಾಶೆಯು ಅಂಟಿಕೊಂಡಿರದಿದ್ದರೂ, ಶಿವಾಂಶಸಂಭೂತನಾದ ಶಿವಯೋಗಿಯು ಯಾವ ವಂಶದಲ್ಲಿ ಜನಿಸುವನೋ ಆ ವಂಶವು ಪವಿತ್ರವಾಗುವದು ಅವನ ಮಾತಾಪಿತೃಗಳು ಮುಕ್ತರಾಗುವರು. ಕಾರಣ ವೀರಶೈವ ಕುಲ ಕೋಟಿಯನ್ನು ಉದ್ಧಾರ ಮಾಡುವಂಥ ಪುತ್ರನೋರ್ವನು ತಮ್ಮ ಉದರದಲ್ಲಿ ಜನಿಸಬೇಕೆಂಬ ಆಕಾಂಕ್ಷೆಯು ಇವರಲ್ಲಿ ಉದಯವಾಗಿತ್ತು. ತದನುರೂಪವಾಗಿ ಪರಮೇಶ್ವರನ ಆರಾಧನೆಯನ್ನು ಇವರು ಮಾಡತೊಡಗಿದ್ದರು.

ವಾಚಕರೇ, ಸಂಪೂರ್ಣ ಭಕ್ತಿಯಿಂದ ಮರೆಹೊಕ್ಕ ಶಿವಭಕ್ತರ ಅಭೀಷ್ಟವನ್ನು ಪೂರ್ಣಗೊಳಿಸದೆ ಇರಲು, ಶಿವನಿಗೆ ಎಷ್ಟು ಮಾತ್ರಕ್ಕೂ ಸರಿಯೆನಿಸುವದಿಲ್ಲ. ಬೇಕಾದಷ್ಟು ಕೆಲಸಗಳಿದ್ದರೂ ಅವನ್ನೆಲ್ಲ ಬದಿಗಿಟ್ಟು ಭಕ್ತೋದ್ಧಾರಕ್ಕಾಗಿ ಅವನು ತಟ್ಟನೆ ಬಂದು ನಿಲ್ಲುವನು. ಯಾಕೆಂದರೆ ಅವನು

ಭಕ್ತಾಭಿಮಾನಿಯು. ತನ್ನ ಬಿರುದನ್ನು ಕಾಯ್ದುಕೊಳ್ಳಲು ಅವನು ಹಗಲಿರುಳು ಪ್ರಯತ್ನಿಸುವನು. ಇದರಂತೆ ಶಿವಭಕ್ತರಾದ ಈ ಧರ್ಮನಿಷ್ಠ ದಂಪತಿಗಳ ಮನೋಭೀಷ್ಟವನ್ನು ಪೂರ್ಣ ಮಾಡಲಿಕ್ಕೆ ಜಗದೀಶ್ವರನಿಗೆ ಬಹಳ ದಿನಗಳನ್ನು ಕಳೆಯಲಿಕ್ಕಾಗಲಿಲ್ಲ. ಇದಕ್ಕಾಗಿ ಒಂದು ಸಂಕೇತವನ್ನೂ ಅವನು ಈ ದಂಪತಿಗಳಿಗೆ ತೋರಿಸಬೇಕಾಯಿತು.

ಒಂದುದಿನ ಭ್ರಮರಾಂಬೆಯು ಬೆಳಿಗ್ಗೆ ದ್ದ ಮುಖ ಮಾರ್ಜನಗಳನ್ನು ತೀರಿಸಿಕೊಂಡು ವಿಭೂತಿ ಧರಿಸಿ, ತನ್ನ ಗೃಹಕೃತ್ಯಗಳಲ್ಲಿ ತೊಡಗಿದ್ದಳು ಆಗ ಒಬ್ಬ ಶಿವಯೋಗಿಗಳು ಅಕಸ್ಮಾತ್ತಾಗಿ ಆಗಮಿಸಿದರು. ಇವರು ನಿರ್ಮಲಾಂತಃಕರಣರೂ, ವಿವೇಕಿಗಳೂ, ವಿರಾಗಿಗಳೂ ಆಗಿದ್ದು ಲೋಭ-ಮೋಹ ವಿದೂರರೂ, ಜೀವಪರಮಾತ್ಮರ ಯಥಾರ್ಥಸ್ವರೂಪವನ್ನು ತಿಳಿದವರೂ ಆಗಿದ್ದರು. ಇವರು ವಿಷಯಭ್ರಮೆಯಿಂದ ವಿಮುಕ್ತರಾದವರಿದ್ದು, ಶಿವಾದ್ವೈತ ಸಿದ್ಧಾಂತವನ್ನು ಅರಿತವರಾಗಿದ್ದರು. ಶಿವಧ್ಯಾನದಲ್ಲಿ ಇವರ ಆಸಕ್ತಿ ಬಹಳ. ಶಿವಸ್ವರೂಪದ ಜ್ಞಾನ, ಭಸ್ಮೋದ್ಧೂಲನ, ರುದ್ರಾಕ್ಷಧಾರಣ ಇವುಗಳಿಂದ ಇವರು ಕೈಲಾಸದಿಂದದಿಂದಬಂದ ಪರಶಿವನಂತೆ ಕಾಣುತ್ತಿದ್ದರು. ಇವರು ಸದಾಶಿವಲಿಂಗಧಾರಣದಿಂದ ಯುಕ್ತರಾದವರೂ, ಶಿವಲಿಂಗಾರ್ಚನೆಯಲ್ಲಿ ನಿರತರಾದವರೂ, ಲಿಂಗಾಂಗಸಾಮರಸ್ಯಸ್ವರೂಪವನ್ನು ಬಲ್ಲವರೂ ಶಿವಾದ್ವೈತವಾಸನೆಯಲ್ಲಿ ಮಗ್ನರಾದವರೂ ಆಗಿದ್ದರು.

ಇಂತಹ ಶಿವಯೋಗಿಶ್ರೇಷ್ಠರು ಅಕಸ್ಮಾತ್ತಾಗಿಆಗಮಿಸಿದ್ದನ್ನು ಕಂಡು ಆ ಜಂಗಮ ದಂಪತಿಗಳಿಗೆ ಹಿಡಿಸಲಾರದಷ್ಟು ಸಂತೋಷವಾಯಿತು. ಆಗ ಅವರು ಭಕ್ತಿಯಿಂದ ನಮಸ್ಕರಿಸಿ ಆದರ ಸತ್ಕಾರಗಳಿಂದ ಅವರ ಮನಸ್ಸನ್ನು ಪ್ರಸನ್ನೀಕರಿಸಿ ಬಿನ್ನವಿಸಿಕೊಂಡದ್ದೇನಂದರೆ— " ಶಿವಯೋಗಿಶ್ರೇಷ್ಠರೇ, ಅಕಸ್ಮಾತ್ತಾಗಿ ಈ ಬಡ ಜಂಗಮರ ಮನೆಗೆ ಆಗಮಿಸಿ, ನಮ್ಮ ಆದರ ಸತ್ಕಾರಗಳನ್ನು ಸ್ವೀಕರಿಸಿದ್ದಕ್ಕಾಗಿ, ನಮಗೆ ಹಿಡಿಸಲಾರದಷ್ಟು ಆನಂದವಾಗಿದೆ. ಎಲೈ ಶಿವಜ್ಞಾನ ಸಂಪನ್ನರೇ, ಭವರೋಗದಿಂದ ಬಳಲುತ್ತಿರುವ ನಮ್ಮನ್ನು ಉದ್ಧರಿಸಿರಿ ಮೋಕ್ಷವನ್ನು ಅನುಗ್ರಹಿಸಿರಿ " ಎಂದು ಶುದ್ಧಾಂತಃಕರಣದಿಂದ ಪ್ರಾರ್ಥಿಸಿದರು.

ಆಗ ಶಿವಯೋಗಿಗಳು—“ ದುಃಖಮಯವಾದ ಈ ಸಂಸಾರದಲ್ಲಿಯ ಜನನ ಮರಣ ಶೃಂಖಲೆಗಳು ಕಡಿದುಹೋಗುವದಕ್ಕೆ ಶಿವಾನುಗ್ರಹವೇ ಮುಖ್ಯವಾದದ್ದು. ಮುಮುಕ್ಷುತ್ವದಲ್ಲಿ ಮಮತೆಯೂ, ಸಂಸಾರದಲ್ಲಿ ಅನಾಸಕ್ತಿಯೂ, ಶಿವಭಕ್ತರಲ್ಲಿಭಕ್ತಿಯೂ ಶೈವಶಾಸ್ತ್ರದಲ್ಲಿ ಶ್ರದ್ಧೆಯೂ ಇದ್ದವರಿಗೇ ನಮ್ಮ ಶಿವಾಗಮಗಳಲ್ಲಿ ಹೇಳಿರುವಂತೆ [ ಯೇಷಾಂ ಶರೀರಿಣಾಂ ಶಕ್ತಿಃ ಪತತ್ಯ ಪಿನಿವರ್ತಯೇ ತೇಷಾಂ ತಲ್ಲಿಂಗ ಮೌತ್ಸುಕ್ಯಂ ಮುಕ್ತೌ ದ್ವೇಷೌ ಭವಸ್ಥಿತೌ। ಭಕ್ತಿಶ್ಚ ಶಿವಭಕ್ತೇಷುಶ್ರದ್ಧಾ ತಚ್ಛಾಸಕೇ ವಿಧೌ ಮೃಗೇಂದ್ರಾಗಮ. ] ಚಕ್ಷುರ ಗೋಚರವಾದ ಶಿವಾನುಗ್ರಹ ವಾಗುವದು. ಇಂಥ ಲಕ್ಷಣಗಳು ನಿಮ್ಮಲ್ಲಿರುವದರಿಂದ ನೀವು ನಿಶ್ಚಯವಾಗಿಯೂ ಶಿವಾನುಗ್ರಹಕ್ಕೆ ಪಾತ್ರರಾಗಿರುವಿರಿ. ಇಂಥ ಶಿವಾನುಗ್ರಹ ಸಂಪನ್ನರಾದ ನಿಮ್ಮನ್ನು ಕಂಡು ನನ್ನ ನೇತ್ರಗಳು ಸಫಲವಾದವು. ನಮ್ಮ ಪರಮ ಪೂಜ್ಯ ಗ್ರಂಥವಾದ ಸಿದ್ಧಾಂತ ಶಿಖಾಮಣಿಯಲ್ಲಿ ಹೇಳಿದಂತೆ.

ಶುದ್ಧಾ ನಿಯಮ ಸಂಯುಕ್ತಾಃ ಶಿವಾರ್ಪಿತ ಫಲಾಗಮಾಃ।
ಮೋಽರ್ಚಯಂತಿ ಶಿವಂಲೋಕೇ ವಿಜ್ಞೇಯಾಸ್ತೇ ಗಣೇಶ್ವರಾಃ॥ ( ಸಿ ಶಿ )

ಶುದ್ಧರಾಗಿಯೂ ನಿಯಮಸಂಪನ್ನರಾಗಿಯೂ ಫಲಪ್ರಾಪ್ತಿಯನ್ನು ಶಿವಾರ್ಪಿತ ಮಾಡಿದವರಾಗಿಯೂ, ಶಿವನನ್ನು ಪೂಜಿಸುವ ನೀವು ಪರಮ ಶ್ರೇಷ್ಠರು. ಕಾರಣ ನಿಮಗಾಗಿ ನಾನೊಂದು ಭವಿಷ್ಯವನ್ನು ಸೂಚಿಸುವೆನು. ನೆನಪಿಡಿರಿ ಇಂತಹ ಕುಲ-ಶಿಲಸಂಪನ್ನರಾದ ನಿಮ್ಮ ಪುಣ್ಯಗರ್ಭದಲ್ಲಿಮಹಾತಪಸ್ವಿಯೋರ್ವರು ಶೀಘ್ರದಲ್ಲಿಯೇ ಉದಯಿಸುವರು ಅವರ ಅವತಾರದಿಂದ ನಿಮ್ಮ ಕುಲಕೋಟಿಯು ಉದ್ಧಾರವಾಗುವದು ಅವರು ಅಲೌಕಿಕ ಪುರುಷರೂ ಜಗದ್ವಂದ್ಯರೂ ಆಗುವರು. ಅವರಿಂದ ಇಡೀ ವೀರಶೈವ ಸಮಾಜದ ಉದ್ಧಾರವಾಗುವದು. ಆದರೆ ಮುಂದೆ ನೀವು ಮಾಡಬೇಕಾದುದಿಷ್ಟೇ; ಅವರು ನಿಮ್ಮ ಮನೆಯನ್ನುಉದ್ಧಾರ ಮಾಡಲಿಕ್ಕೆ ಬಂದಪುರುಷರಾಗಿರದೆ, ಜಗದುದ್ಧಾರ ಮಾಡಲಿಕ್ಕೆ ಬಂದ ಮಹಾಪುರುಷರಾಗಿರುವರು. ಕಾರಣಅವರನ್ನು ನೀವು ಮನೆ.ಗಿಟ್ಟುಕೊಳ್ಳದೆ, ಜಗದುದ್ಧಾರಕ್ಕೆ ನೀಡಬೇಕೆಂದು ನಮ್ಮಸೂಚನೆಯು ಅರ್ಥಾತ್ ಇದೀಗಶ್ರೀ ತೋಂಟದಾರ್ಯರ ಮಠಕ್ಕೆ ಸಲ್ಲಬೇಕೆಂದಿರುವ ಶಿವಬಸಯ್ಯನೆಂಬ ಬಾಲಕನನ್ನು ಬಿಟ್ಟುಕೊಟ್ಟು ನಿಮ್ಮ ಗರ್ಭದಿಂದಮುಂದೆ

ಜನಿಸುವ ಮಹಾಪುರುಷರನ್ನೇ ನೀಡಬೇಕು ಇದರಿಂದ—

ತತ್ಕುಲಂಹಿ ಸದಾಶುದ್ಧಂ ಸಫಲಂ ತಸ್ಯ ಜೀವಿತಂ।
ಯಸ್ಯಚಿತ್ತಂ ಶಿವೇಸಾಕ್ಷಾತ್ ದ್ವಿಲೀನಯ ಬಹಿರ್ಮುಖಂ॥ ( ಸಿ. ಶಿ. )

ಎಂದು ಶ್ರೀ ಶಿವಯೋಗಿಶಿವಾಚಾರ್ಯರು ಸಿದ್ಧಾಂತಶಿಖಾಮಣಿಯಲ್ಲಿಹೇಳಿದಂತೆಶಿವನಲ್ಲಿ ತನ್ಮಯರಾದ ಅರ್ಥಾತ್ ಶಿವನಲ್ಲಿ ಅಂತರ್ಮುಖರಾದನಿಮ್ಮ ವಂಶವುಉದ್ಧಾರವಾಗುವದು. ನಿಮ್ಮ ಜೀವನವು ಸಾರ್ಥಕವಾಗುವದು. ಎಂದು ಬೋಧಿಸಿದರು.

ವಾಚಕ ಮಹಾಶಯರೇ, ಶಿವಯೋಗಿಗಳ ಈ ಪ್ರಾಸಾದಿಕ ವಾಣಿಯಿಂದ ಆರ್ಯ ಚನ್ನಬಸವಯ್ಯನವರಿಗೂ ಮಾತೋಶ್ರೀ ಬೋರಾಂಬೆಗೂ ಆರಂಭಕ್ಕೆ ಸಖೇದಾಶ್ಚರ್ಯವೆನಿಸಿದರೂ, ಸಜ್ಜನರ ಸೇವೆಯಿಂದಲೂ, ಶಿವಾರ್ಪಣ ಬುದ್ಧಿಯಿಂದಲೂ ಪರಿಪಕ್ವ-ಮನಸ್ಕರಾಗಿದ್ದ ಇವರು “ ಹಾಗೇ ಆಗಲೆಂದು ” ತಟ್ಟನೇ ಒಪ್ಪಿಗೆಯನ್ನಿತ್ತು ಅವರ ಆಜ್ಞೆಯನ್ನು ಶಿರಸಾವಹಿಸಿದರು. ಶಿವಯೋಗಿಗಳು ದರ್ಶನಾಶೀರ್ವಾದಗಳಿಂದ ಆ ದಂಪತಿಗಳನ್ನು ಸಂತೋಷಪಡಿಸಿ ಮುಂದಿನ ಭವಿತವ್ಯವನ್ನು ಸೂಚಿಸಿ ಹೊರಟುಹೋದರು.

ಮುಂದೆ ಆ ದಂಪತಿಗಳು ಶಿವಯೋಗಿಗಳ ಭವಿತವ್ಯವು ಎಂದು ಸತ್ಯವಾಗುವದೆಂದು ಮಾರ್ಗಪ್ರತೀಕ್ಷೆಯನ್ನು ಮಾಡುತ್ತಿರಲು, ತುಸು ದಿವಸಗಳಲ್ಲಿಯೇ ಭವಿಷ್ಯವು ನಿಜವಾಗುವಯೋಗವು ಪ್ರಾಪ್ತವಾಯಿತು. ಬೋರಾಂಬೆಯು ಗರ್ಭವತಿಯಾಗಿ ದಿವ್ಯ ಕಾಂತಿಯಿಂದ ಶೋಭಿಸಹತ್ತಿದಳು. ಅವಳಿಗೆ ಭೋಜನದಲ್ಲಿ ಅರುಚಿಯು ಉತ್ಪನ್ನವಾಯಿತು. ಮೋರೆಯ ಮೇಲೆ ಶುಭ್ರ ತೇಜವು ಪ್ರಾಪ್ತಯಿತು. ಹೊಟ್ಟೆಯನ್ನು ಶಿವಾಂಶ ಸಂಭೂತವಾದ ವಿಭೂತಿಯೊಂದು ವ್ಯಾಪಿಸಿದ್ದರಿಂದ ಇವಳಿಗೆ ಶಿವಪೂಜೆ, ಶಿವಕಥಾಶ್ರವಣ, ಗುರು-ಲಿಂಗ ಜಂಗಮರಿಗೆ ಅನ್ನದಾನ, ಇವುಗಳ ಹೊರತು ಬೇರೆ ಇಚ್ಛೆಯೇ ಆಗುತ್ತಿರಲಿಲ್ಲ. ಶಿವಾರ್ಪಣ ಬುದ್ಧಿಯಿಂದ ಸೇವಿಸುವ ಶಿವ ತೀರ್ಥಪ್ರಸಾದಗಳು ಇವಳಿಗೆ ಅಮೃತಪ್ರಾಯವಾಗಿ ತೋರುತ್ತಿದ್ದವು. ಸಾಮಾನ್ಯ ಸ್ತ್ರೀಯರಂತೆ ಮಣ್ಣುಬೂದಿಗಳನ್ನು ತಿನ್ನುವದರಲ್ಲಿ ಆಸಕ್ತಿಯೂ ಗೃಹಕೃತ್ಯಗಳಲ್ಲಿ ಬೇಸರಿಕೆಯೂ ಇವಳಿಗೆ ಉತ್ಪನ್ನವಾಗದೆ, ಸತ್ಯ, ಶಿವ

ಜ್ಞಾನ, ಶಿವಾನಂದಗಳಲ್ಲಿಯೇ ಇವಳುಮಗ್ನಳಾಗಿರುತ್ತಿದ್ದಳು. ಈ ಮೇರೆಗೆ ಬೋರಾಂಬೆಯು ಗರ್ಭವು ಬೆಳೆಯುತ್ತಿರಲು ಒಂದುದಿನ ರಾತ್ರಿಯುಬೆಳಗಿನ ಜಾವದಲ್ಲಿ ವಿಲಕ್ಷಣವಾದ ಸ್ವಪ್ನವೊಂದು ಆ ಸಾಧ್ವಿಗೆ ಬಿದ್ದಿತು. ಅದರಲ್ಲಿ ತನ್ನ ಗರ್ಭದಿಂದ ಓರ್ವ ದೇದಿಪ್ಯಮಾನವಾದ ವಿಭೂತಿಯು ಆವಿರ್ಭವಿಸಿದಂತೆಯೂ, ಕೈಲಾಸದಿಂದ ಪಾರ್ವತಿದೇವಿಯು, ಲಕ್ಷ್ಮಿ—ಸರಸ್ವತಿ ಮೊದಲಾದಸುವಾಸಿನಿಯರೊಡನೆತನ್ನ ಮಗುವಿನಜನ್ಮೋತ್ಸವಕ್ಕೆ ಆಗಮಿಸಿದಂತೆಯೂ ಭಾಸವಾಯಿತು. ಹಾಗೂ ಸ್ವರ್ಗದಿಂದ ಪುಷ್ಪವೃಷ್ಟಿಯಾದಂತೆಯೂದೇವದುಂದುಭಿಯುಬಾರಿಸಿದಂತೆಯೂ ತೋರಿತು. ಆಗ ಬೋರಾಂಬೆಗೆ ಆದಆನಂದಕ್ಕೆ ಎಣ್ಣೆಯಿಲ್ಲದಾಯಿತುನೇತ್ರಗಳಲ್ಲಿಆನಂದಬಾಷ್ಪಗಳು ಸುರಿಯುತ್ತಿದ್ದವು. ಹೀಗಿರುವಾಗ ತಟ್ಟನೆ ಎಚ್ಚರಾಗಲು, ನೇತ್ರಗಳಿಂದ ಹೋಗುತ್ತಿದ್ದ ಆನಂದಬಾಷ್ಪಗಳನ್ನು ಒರಸಿಕೊಂಡು ಈ ಸಂಗತಿಯನ್ನು ಪತಿಗೆ ವಿದಿತಪಡಿಸಿದಳು. ಆಗ ಚನ್ನಬಸವಾರ್ಯರು ಸತ್ಪುರುಷರಾದ ಶಿವಯೋಗಿಗಳ ಭವಿತವ್ಯವು ಸತ್ಯವಾಗುವ ಸೂಚನೆಯಿದೆಂದು ಉದ್ಗಾರತೆಗೆದು ಧರ್ಮಪತ್ನಿಯ ಆನಂದವನ್ನು ದ್ವಿಗುಣಿತಗೊಳಿಸಿದರು.

ಹೀಗೆ ಈ ಸತಿ-ಪತಿಯರು ಹರ್ಷಭರಿತರಾಗಿರಲು ಬೋರಾಂಬೆಯ ತೇಜೋಮಯ ಗರ್ಭಕ್ಕೆ ಅಷ್ಟ ಮಾಸಗಳು ತುಂಬಿದವು. ಆಗ ಆ ಗರ್ಭಕ್ಕೆ ವೀರಶೈವ ಧರ್ಮ *ಶಾಸ್ತ್ರಕ್ಕನುಸರಿಸಿ,

ನಿತ್ಯಾನಂದ ಸ್ವರೂಪಾಂ ನಿರುಪಮವಿಭವಾಂ ನಿಷ್ಕಲಾಂ ನಿರ್ವಿಶೇಷಾಂ|
ನಿರ್ವ್ಯಾಜೇನೋರ್ಧ್ವ ಮಾಯಾ ವಿರಚಿತವಪುಷಂ ವಿಶ್ವವಂದ್ಯಾಂಪರಂತಾಂ||
ಆಧಾರಾಮಾದಿಶಕ್ತಿಂ ಗುಣಗಣ ನಮಿತಾಂ ದೇವದೇವೀಂ ಶಿವಾಖ್ಯಾಂ|
ವಂದೇ ಹೃತ್ಪದ್ಮಪೀಠೇಪರಮಶಿವಪದಾಂಶ್ರೀಮತೀ ಮೂರ್ಧ್ವಸಂಜ್ಞಾಂ|| ೧ ||

ಎಂದು ಪರಬ್ರಹ್ಮಸ್ವರೂಪಿಯಾದ ಶಿವಕಲೆಯನ್ನು ಧ್ಯಾನಿಸಿ ಲಿಂಗಧಾರಣವನ್ನು ಮಾಡಿದರು. ಮುಂದೆ ತಿಂಗಳಾವಧಿಯಾಗಿ ನವಮಾಸಗಳು ತುಂಬಲು ಶಿವಯೋಗಿಗಳ ಭವಿತವ್ಯವು ಎಲ್ಲರಿಗೂ ದೃಷ್ಟಿಗೋಚರವಾಗುವ ಶುಭ ಸಮಯವು ಪ್ರಾಪ್ತವಾಯಿತು. ಪ್ರಸೂತ ವೇದ

* ಪ್ರಮಾಣ:- ವೀರಶೈವ ಸ್ಥಿತಾನಾಂತ ಮಾಸಿಗರ್ಭಾಷ್ಟಮೇಗುರುಃ |
ಪಂಚಸೂತ್ರ ಕೃತಂ ಲಿಂಗಂ ಧ್ಯಾರಯೇ ವಿಧಿವಚ್ಛುಭಂ ||

ನೆಯು ನೆವಮಾತ್ರಕ್ಕೆ ತೋರಿ ಶಾಲಿವಾಹನ ಶಕೆ ೧೭೯೬ ನೇ ಭಾವನಾಮ ಸಂವತ್ಸರ ಶ್ರಾವಣಶುದ್ಧ ಪೌರ್ಣಿಮೆ ಗುರುವಾರ ದಿವಸ ಮಾತೋಶ್ರೀ ಬೋರಂಬೆಯ ಗರ್ಭದಿಂದ ಶಿವಾಂಶ ಸಂಭೂತನಾದ ಅದ್ವಿತೀಯ ತೇಜಸ್ಸಿನಿಂದೊಪ್ಪುವ ಪುತ್ರರತ್ನವು ಭೂಮಿಯ ಮೇಲೆ ಅವತರಿಸಿತು. ಅಂದು ವೀರಶೈವ ಧರ್ಮದೇವತೆಯು ಮೈಯು ಹರ್ಷದಿಂದ ಉಬ್ಬಿತು! ವೀರಶೈವ ಧರ್ಮಭಾನುವು ತನಗೆ ಅಡ್ಡಾದ ಅಧರ್ಮರೂಪ ಮೇಘಗಳನ್ನೋಡಿಸಲು ಚಂಡಮಾರುತನು ಬಂದನೆಂದು ಕುಲು-ಕುಲು ನಗಹತ್ತಿದನು!! ವೀರಶೈವ ಧರ್ಮಾಂಬುಧಿಯು ಆನಂದದಿಂದ ಉಕ್ಕೇರಿತು!!! ಮಂದಮಾರುತನು ಸುಗಂಧಯುಕ್ತನಾಗಿ ಬೀಸಿದನು. ಆಕಾಶವು ಮೇಘಗಳಿಲ್ಲದೆ ನಿರ್ಮಲವಾಗಿ ತೋರಿತು. ಕೂಡಲೇ ಶುಭಾಂಗನೆಯರು ಮಂಗಳಾರತಿಯನ್ನು ತಂದು ಮಾತೋಶ್ರೀ ಬೋರಾಂಬೆಗೂ ದಿವ್ಯಕಾಂತಿಯಿಂದೊಪ್ಪುವ ಆ ಚಿತ್ ಸ್ವರೂಪ ಶಿಶುವಿಗೂ ಆನಂದದಿಂದ ಬೆಳಗಿ ಕೃತಾರ್ಥರಾದರು.

ಇಂತಹ ಶಿವಾಂಶ ಸಂಭೂತರಾದ ನಮ್ಮ ಚರಿತ್ರನಾಯಕರು ಅವತರಿಸಿದ ಕಾಲದಲ್ಲಿ ಗ್ರಹಗಳ ಸ್ಥಿತಿಯು ಹೇಗಿತ್ತೆಂಬುದು ಕೆಳಗೆಕೊಟ್ಟ ಜನ್ಮ ಲಗ್ನದ ಕುಂಡಲಿಯಿಂದ ಗೊತ್ತಾಗುತ್ತದೆ. ಈ ವಿಷಯವನ್ನು ಕುರಿತು ಕರ್ನಾಟಕದಲ್ಲಿಯ ಪ್ರಸಿದ್ಧ ಜೋತಿಷಜ್ಞರಾಗಿದ್ದ ಶ್ರೀಮಾನ್ ಎಲ್. ವ್ಹಿ. ಕಟ್ಟಿಮುಳಗುಂದ ಇವರು ಶ್ರಮವಹಿಸಿ ಶೋಧಿಸಿ ಕುಂಡಲಿ ಹಾಕಿ, ಮಹಾಸ್ವಾಮಿಗಳ ಜಾತಕ ಫಲವನ್ನು ಏರ್ಪಡಿಸಿರುವರು ಶಾಲಿವಾಹನಶಕೆ ೧೭೯೬ ಭಾವನಾಮ ಸಂವತ್ಸರದ ಶ್ರಾವಣ ಶುದ್ಧ ಪೌರ್ಣಿಮೆ ಗುರುವಾರ ತಾರೀಖು ೨೭—೮—೧೮೭೪ ನೇ ಇಸ್ವಿ ದಿವಸ ಸೂರ್ಯೋದಯವಾದ ನಂತರ ೫ ಘಟಿಕಾ ೪೮ ಪಲ ಕನ್ಯಾಲಗ್ನ ಧನಿಷ್ಠಾನಕ್ಷತ್ರದಲ್ಲಿ ನಮ್ಮ ಚರಿತ್ರನಾಯಕರು ಅವತರಿಸಿರುವರೆಂದು ಗೊತ್ತಾಗುತ್ತದೆ.†

† ಈ ಸಂಗತಿಯನ್ನು ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರಘರಾಜೇಂದ್ರ ಮಹಾಸ್ವಾಮಿಗಳ ಜನ್ಮಸ್ಥಾನವಾದ ಕೊಪ್ಪಳಕ್ಕೆ ಸಮೀಪದಲ್ಲಿರುವ ಬಿನ್ನಾಳ ಗ್ರಾಮಕ್ಕೆ ಹೋಗಿ ಅಲ್ಲಿಯ ಹಿರಿಯರನ್ನು ಕೇಳಿಯೂ ಬೇರೆರೀತಿಯಿಂದ ಶೋಧ ಮಾಡಿಯೂ ಗೊತ್ತು ಪಡಿಸಿದ್ದಾಗಿರುತ್ತದೆ.

# ಜನನಕಾಲದ ಕುಂಡಲಿಯು.




## ಈ ಜಾತಕದ ಫಲಗಳು

೧ ಬಾಲ್ಯದಲ್ಲಿ ತಾಯಿ-ತಂದೆಗಳಿಂದ ಅಗಲುವರಾರುವರು. ಘನವಂತರಿಂದ ಪೋಷಿಸಲ್ಪಡುವರು.

೨ ಚಿಕ್ಕವಯಸ್ಸಿನಲ್ಲಿಯೇ ಅತ್ಯಂತ ವೈರಾಗ್ಯ ಹುಟ್ಟುವದು.

೩ ದೂರ ದೇಶಗಮನ. ಆರಂಭದಲ್ಲಿ ಹಿತಶತ್ರುಗಳಿಂದ ತೊಂದರೆ.

೪ ಸಮಾಜದಲ್ಲಿ ಅತ್ಯಂತ ಪೂಜ್ಯರೆಂದಿನಿಸಿಕೊಳ್ಳುವರು ವಿರಕ್ತರಾಗುವರು

೫ ಅತಿ ವಿದ್ವಾಂಸರೆಂದೆನಿಸಿ ಕೊಳ್ಳುವರು ಕೀರ್ತಿವಂತರಾಗುರು.

೬ ರಾಜಾಧಿ ರಾಜರಿಂದರೂ, ಪೂಜ್ಯ ಮಹನೀಯರಿಂದಲೂ ಮನ್ನಿಸಲ್ಪಡುವವರಾಗುವರು.

೭ ಮಧ್ಯಮ ಆಯುಷ್ಯವು ಕೇವಲ ಮಹೋತ್ಸವದಲ್ಲಿಯೇ ಕಳೆಯುವದು ಕಿಂಚಿತ್ ತೊಂದರೆ ಆದರೂ ದಿಗ್ವಿಜಯ.

೮ ದಾನ-ಧರ್ಮಗಳಿಗೆ ನೀರಿನಂತೆ ಹಣವನ್ನೀಯುವರು.

೯ ಧರ್ಮಕಾರ್ಯದಲ್ಲಿ ತೊಡಗಿದ್ದರೂಕಿಂಚಿತ ತೊಂದರೆ ಒದಗುವಸಂಭವ ಆದರೆ ಅದರ ಲೇಪವಿಲ್ಲ.

೧೦ ಅನ್ನದಾನ ವಿದ್ಯಾದಾನ ಬಹಳ ಮಾಡುವವರಾಗುವರು.

೧೧ಸಂಪೂರ್ಣ ಆರೋಗ್ಯಶಾಲಿಗಳು.

೧೨ ವಿಶ್ವಕುಟುಂಬಿಗಳೂ ಜಗದ್ಬಂಧುಗಳೂ ಎನಿಸುವರು

೧೩ ದೀರ್ಘಾಯುಷಿಗಳಾಗುವರು.

ವಾಚಕರೇ, ಕೇವಲ ಶಿವಾಂಶಸಂಭೂತರಾದ ನಮ್ಮ ಚರಿತ್ರ ನಾಯಕರ ಜನನದಿಂದ ಮಾತಾಪಿತೃಗಳಾದ ಬೋರಾಂಬೆಯವರಿಗೂ ಚನ್ನಬಸವಾರ್ಯರಿಗೂ ಉಳಿದ ಬಂಧು ಬಳಗದವರಿಗೂ ಆದ ಆನಂದಕ್ಕೆ ಪಾರವೇ ಇದ್ದಿಲ್ಲ. ಯಾಕಂದರೆ ಜನಿಸಿದ ಮಗುವು ಸಾಮಾನ್ಯ ತರದ್ದಾಗಿರದೆ, ಜಗದೀಶನ ಸಂಕೇತದಂತೆ ವೀರಶೈವ ಸಮಾಜಕ್ಕೆ ಮಹದುಪಕಾರವನ್ನು ಮಾಡಲು ಬಂದ ಪರಶಿವನ ಅವತಾರವಾಗಿತ್ತು. ಶಿವಯೋಗಿಗಳ ಭವಿಷ್ಯ ಕಥನದಿಂದ ಅಂತರ-ರಹಸ್ಯವು ಹೀಗೆಂದು ಗೊತ್ತಾಗಿದ್ದರೂ, ಪೂರ್ವಾರ್ಜಿತ ಕರ್ಮದಿಂದ ಪ್ರಪಂಚ ಮಾಯೆಯಲ್ಲಿ ಶಿಲ್ಕಿದ್ದ ಆ ಮಾತಾ ಪಿತೃಗಳಿಗೆ ಪುತ್ರವ್ಯಾಮೋಹವು ವ್ಯಾಪಿಸದೆ ಬಿಡಲಿಲ್ಲ. ಆ ಪುತ್ರರತ್ನದ ಸಂದರ್ಶನದಿಂದ ಮಾತೋಶ್ರೀ ಬೋರಾಂಬೆಗೆ ಆದಆನಂದವು ಹೊಟ್ಟೆಯಲ್ಲಿ ಹಿಡಿಸಲಾರದಷ್ಟಾಗಿದ್ದರೂ ಇಂಥ ಅಭೂತಪೂರ್ವ ಸುಂದರಕೂಸನ್ನು ಎರಡನೆಯವರ ಮಠಕ್ಕೆ ಹೇಗೆ ಸಲ್ಲಬೇಕೆಂಬ ಲೋಭವು ಆ ಸಾಧ್ವಿಯನ್ನು ಆವರಿಸದೆ ಇರಲಿಲ್ಲ. ಇದರಿಂದ ಆಕೆಯ ಆನಂದದ ಭರತಿಗೆ ಸ್ವಲ್ಪ ಕುಗ್ಗು ಬಂದಿತು. ಆದರೂ ಜಗದೀಶನು ಶೈಶವಾವಸ್ಥೆಯಲ್ಲಿಯ ಕೂಸಿನ ಬಾಲಲೀಲೆಗಳ ಮಾಯೆಯಿಂದ ಆ ಕುಗ್ಗನ್ನು ಹೋಗಲಾಡಿಸದೆ ಇರಲಿಲ್ಲ. ಮಾತಾ-ಪಿತೃಗಳು ಪುನಃಪುನಃ ಮಾಯೆಯಿಂದ ಪರಿವೇಷ್ಟಿತರಾಗಿ ಶೈಶವಾವಸ್ಥೆಯಲ್ಲಿದ್ದ ಕೂಸಿನ ಬಾಲಲೀಲೆಗಳನ್ನು ನೋಡುವದರಲ್ಲಿ ಮಗ್ನರಾಗಿದ್ದರು. ಅಷ್ಟರಲ್ಲಿ ವೀರಶೈವ ದೀಕ್ಷಾಕ್ರಮಕ್ಕನುಸಾರವಾಗಿ, ಶಿಶುವಿಗೆ ದೀಕ್ಷಾಂಗ ಭೂತ ಸಕಲ ಸಂಸ್ಕಾರಗಳು ಜರುಗಲ್ಪಟ್ಟಿತು. ಮೊದಲು ಕೂಸಿನ ಸ್ಥೂಲ ಸೂಕ್ಷ್ಮ ಕಾರಣ ನಾಮಕ ಮೂರು ಶರೀರಗಳಲ್ಲಿರುವ ಆಣವ, ಮಾಯಿಕ, ಕಾರ್ಮಿಕಗಳೆಂಬ ಮೂರು ಮಲಗಳನ್ನು ವೇಧಾ, ಮನು, ಕ್ರಿಯಾರೂಪ ದೀಕ್ಷೆಯಿಂದ ಪರಿಶುದ್ಧಗೊಳಿಸಿದರು. ಅನಂತರ ಶಿವನ ಚಿತ್ಕಳೆಯನ್ನು ಶರೀರದಲ್ಲಿ ಧರಿಸಲ್ಪಡುವ ಭಾವಲಿಂಗದಲ್ಲಿ ಅಳವಡಿಸಿ, ಅಲ್ಲಿಂದ ಮನಸ್ಸಿಗೆ ತಂದು, ಮನಸ್ಸಿನಿಂದ ದೃಷ್ಟಿಗೆ ನಿಲಿಸಿ, ಸಚ್ಚಿದಾನಂದ ಸ್ವರೂಪವಾದ ಶಿವಲಿಂಗವನ್ನು ಶಿಶುವಿನ ಕೊರಳಲ್ಲಿ ಬಂಧಿಸಿ ಷಡಕ್ಷರಿ ಮಂತ್ರವನ್ನು ಉಪದೇಶಿಸಿದರು. ತರುವಾಯ ವೀರಶೈವ ಸಮಾಜದ ಅಜ್ಞಾನಾಂಧಕಸುರಾಂತಕ ವೀರ ನೆಂದೆನಿಸಿಕೊಳ್ಳುವ ಈ ಶಿಶುವಿಗೆ ಚಿನ್ನವೀರದೇವನೆಂದು ಹೆಸರಿಟ್ಟು ನಾಮಕರಣ ಮಹೋತ್ಸ

ವವನ್ನು ಮಾಡಿದರು.

ವಾಚಕರೇ, ನಮ್ಮ ಚರಿತ್ರನಾಯಕರು ತಮ್ಮ ಅವತಾರ ಕಾರ್ಯದಲ್ಲಿ ಚಾರ್ವಾಕಾದಿ ನಾಸ್ತಿಕ ಮತಗಳನ್ನು ಖಂಡಿಸಿ, ವೀರಶೈವ ಮತವನ್ನು ಪರಿಪುಷ್ಟಗೊಳಿಸಿದರು! ಶಿವಾದ್ವೈತ ಸಿದ್ಧಾಂತಗಳನ್ನು ವೇದ, ಆಗಮ, ಉಪನಿಷತ್ತುಗಳ ಆಧಾರದಿಂದ ಶಿಷ್ಯರಿಗೆ ಬೋಧಿಸಿ ವೀರಶೈವ ಭಕ್ತಿಯನ್ನು ಬೆಳಸಿದರು!! ದುಷ್ಟರನ್ನು ನಿಗ್ರಹಿಸಿ, ಶಿಷ್ಟರನ್ನು ಪರಿಪಾಲಿಸಿ ಮೋಕ್ಷಪ್ರಾಪ್ತಿಯ ಮಾರ್ಗವಾದ ಕ್ರಿಯಾ ಜ್ಞಾನಸ್ವರೂಪವನ್ನು ಜಗತ್ತಿಗೆ ತೋರಿಸಿ ಕೊಟ್ಟರು! ಅಂದಮೇಲೆ ಈ ಮಹನಿಯರು ವೀರಶೈವ ಸಮಾಜದ ಉದ್ಧಾರಕ್ಕಾಗಿ ಬಂದ ಅವತಾರಿಕ ಪುರುಷರೆಂದು ಯಾರಿಗೆ ಸೂರ್ಯಪ್ರಕಾಶದಷ್ಟು ಸ್ಪಷ್ಟವೆನಿಸಲಿಕ್ಕಿಲ್ಲ?

ವಾಚಕ ಮಹಾಶಯರೇ, ಶ್ರೀ ಚೆನ್ನವೀರದೇವರ ಈ ಪವಿತ್ರವಾದ ಜನನೋತ್ಸವ ಚರಿತ್ರೆಯನ್ನು ಯಾರು ಶ್ರದ್ಧೆಯಿಂದ ಓದುವರು, ಅಥವಾ ಕೇಳುವರು, ಅವರುಸಂತಾನ ವಿರಹಿತರಾಗಿದ್ದರೆ ಸಂತಾನಗಳನ್ನು ಪಡೆದು ಸುಖದಿಂದ ಬಾಳುವರು. ದರಿದ್ರರು ತಮ್ಮ ದಾರಿದ್ರ್ಯದಿಂದ ಮುಕ್ತರಾಗಿ ಐಶ್ವರ್ಯಸುಖಾದಿಗನ್ನು ಹೊಂದುವರು. ರೋಗಿಗಳು ನಿರೋಗಿಗಳಾಗುವರು ವಿದ್ಯೆಯಿಲ್ಲದವರು ವಿದ್ಯಾವಂತರಾಗುವರು. ಭಕ್ತಿಯುತರು ನಿರ್ಮಲವಾದ ಭೋಗಗಳನ್ನೂ ಮೋಕ್ಷಸುಖವನ್ನೂ ಪಡೆಯುವರು. ಯಾಕಂದರೆ "ಚಾರಿತ್ರ್ಯಾತಿಶಯಂ ಮಹಾಂತರೊಳಗಾಧಂ ತೀರ್ಥ ಮಹಾತ್ಮಕಿವೋಲ್„ ಎಂಬ ಕವಿಯುಉಕ್ತಿಯು ಸಟಿಯಾದೀತೆ?

---

# ೩ನೇ ಅಧ್ಯಾಯ.

## ಬಾಲ ಲೀಲೆ

ವೀರಶೈವ ಜನಾಂಬುಧಿಗೆ ಚಂದ್ರ ಸ್ವರೂಪನಂತಿದ್ದ ಚೆನ್ನವೀರ ದೇವನು ಶುಕ್ಲ ಪಕ್ಷದ ಚಂದ್ರಮನಂತೆ ದಿನ ದಿನಕ್ಕೆ ಬೆಳೆಯ ಹತ್ತಿದನು. ಇವನ ಬಾಲಲೀಲೆಗಳಿಂದ ಜನನೀ ಜನಕರಿಗಾಗುವ ಆನಂದಕ್ಕೆ ಎಣೆಯಿಲ್ಲ ದಾಗಿತ್ತು. ಇವನ ಆಟಗಳನ್ನು ಎಷ್ಟು ನೋಡಿದರೂ ನೋಟಕರ ಮನಸ್ಸು ತಣಿಯುತ್ತಿದ್ದಿಲ್ಲ. ಈತನ ಬಾಲಲೀಲೆಗಳನ್ನು ನೋಡುವಾಗ ಮನಸ್ಸಿನ ಲವಲವಿಕೆಯು ಹೆಚ್ಚಾಗುತ್ತಿತ್ತು, ಈತನ ಸುಂದರ ರೂಪವನ್ನು ನೋಡು ವಾಗ ನೇತ್ರಗಳ ಆನಂದವು ದ್ವಿಗುಣಿತ ವಾಗುತ್ತಿತ್ತು. ಹಸನ್ಮುಖದ ಈತನ ತೊದಲ್ನುಡಿಗಳನ್ನು ಕೇಳುವಾಗ ಕರ್ಣೇಂದ್ರಿಯಗಳ ಬಯಕೆಯು ಬಲಿಯು ತ್ತಿತ್ತು. ಈತನ ನೆತ್ತಿಯನ್ನು ಮೂಸಿನೋಡುವಾಗ ಘ್ರಾಣೇಂದ್ರಿಯದ ಪ್ರೀ ತಿಯು ವೃದ್ಧಿಂಗತವಾಗುತ್ತಿತ್ತು. ಈತನ ಕೋಮಲವಾದದೇಹವನ್ನು ಆಲಿಂ ಗಿಸುವಾಗ ಆಗುವ ಸ್ಪರ್ಶೇಂದ್ರಿಯಸುಖಕ್ಕೆ ಯಾವಸುಖವೂ ಹೋಲುತ್ತಿದ್ದಿಲ್ಲ ಇದರಿಂದ ಇವನು ಆ ಬಾಲವೃದ್ಧರಿಗೆಲ್ಲ ಮೋಹಕವಸ್ತುವೆಂದೆನಿಸಿದ ನು. ಈ ಬಾಲ ಮೂರ್ತಿಯ ಮೈಕಾಂತಿಯು ಕಾದಬಂಗಾರದಂತೆ ತೇಜಃಪುಂ ಜವಾಗಿತ್ತು. ನೇತ್ರಗಳಲ್ಲಿ ಅದ್ವಿತೀಯವಾದ ತೇಜಸ್ಸು ಹೊಳೆಯುತ್ತಿತ್ತು. ಉಲ್ಲಾಸಯುಕ್ತವಾದ ಮುಖವು ಕಮಲದಂತೆ ದುಂಡಗಿತ್ತು. ತುಂಬಿದ ಮೈಕಟ್ಟು ಮನೋಹರವಾಗಿತ್ತು. ಸ್ವಭಾವವಂತೂ ಸ್ವಚ್ಛಂದವಾದುದು; ಇದರಿಂದ ಇವನನ್ನು ನೋಡಿದೊಡನೆ ಹಸಿವೆ ನೀರಡಿಕೆಗಳು ಹರಿದು ಹೋಗುತ್ತಿದ್ದವು ಚೆನ್ನವೀರದೇವನು ದೊಡ್ಡವನಾಗುತ್ತ ನಡೆದಂತೆ ಇವನ ಬಾಲಲೀಲೆಗಳು ಎಲ್ಲರಿಗೂ ಹೆಚ್ಚು ಕೌತುಕವನ್ನುಂಟು ಮಾಡಹತ್ತಿದವು. ಇವನು ಬಾಲಭಾವದಿಂದ ಜ್ಯೋತಿಯನ್ನು ಹಿಡಿಯಲು ಹಂಬಲಿಸುವನು, ದೇವರ ಜಗಲಿಯ ಮೇಲೆ ಹತ್ತಿ ಕುಳಿತುಕೊಳ್ಳುವನು; ಹಾಲುಮೊಸರಿನ ಪಾತ್ರೆಗಳನ್ನು ಉರುಳಿಸುವನು; ಗಡಗಿ ಮಡಕಿಗಳನ್ನು ಒಡೆಯುವನು; ಕಾಳಲ್ಲಿ ಹಿಟ್ಟು ಬೆರಿಸುವನು; ಇವನ ಕಿಡಿಗೇಡಿತನವನ್ನು ನೋಡಿ ಬೋರಾಂಬೆಯು ಕೈಯೊಳಗಿನ ಕೆಲಸಗಳನ್ನು ಬಿಟ್ಟು ಕೌತುಕದಿಂದ

ನೋಡುತ್ತ ನಿಲ್ಲುತ್ತಿದ್ದಳು. ಆಗ ಚೆನ್ನವೀರದೇವನ ತುಂಟುತನವು ಮತ್ತಿಷ್ಟು ಹೆಚ್ಚಾಗಿ ಇವಳ ಆನಂದಕ್ಕೆ ಭರತಿ ಬರುತ್ತಿತ್ತು. ವೀರಶೈವ ಸಮಾಜಕ್ಕೆ ಜ್ಞಾನಾಮೃತ ಪ್ರಾಶನವನ್ನು ಮಾಡಿಸಲು ಬಂದ ಚೆನ್ನವೀರ ದೇವನು ತಾಯಿಯ ಮೊಲೆಯನ್ನು ಮುಗುಳು ನಗೆ ನಗುತ್ತ ಕುಡಿಯುತ್ತಿದ್ದನು. ಆಗ ಬಾಲಕನ ಮುಖಚರ್ಯವು ಶಾಂತವೂ ಪ್ರಸನ್ನವೂ ಆಗಿರುತ್ತಿತ್ತು. ಇದರಿಂದ ಈ ಶಿಶುವು ಈಶ್ವರಾಂಶ ಸಂಭೂತವೆಂದು ಸಾಮಾನ್ಯರಿಗೆ ಸಹ ಕಂಡುಬರುತ್ತಿತ್ತು. ಆಗ ದೊಡ್ಡ ದೊಡ್ಡ ವಿಭೂತಿಗಳಲ್ಲಿ ಕಂಡು ಬರುವ ಶಿವಕಳೆಗಳು ಈಬಾಲಮೂರ್ತಿಯಲ್ಲಿ ವಿರಾಜಿಸುತ್ತಿದ್ದವು. ಅದರಿಂದ ಸುಜ್ಞಾನಾಂಬೆಯು ತನ್ನ ಮಗನಾದ ಅಲ್ಲಮ ಪ್ರಭುವನ್ನು ಕಂಡು ಕೌತುಕದಿಂದ [ ಸುತೋಽಯಮಸ್ಮಾಕಮಲೌಕಿಕಶ್ಚಾನ್ನ ಯಸ್ಯಕಸ್ಯಾಪಿಚ ಭೂತಭಾವಃ| ಕೃತಾರ್ಥತಾಯ್ಯೈ ಗುರುರಾವಯೋಸ್ತು ಪ್ರತ್ಯಕ್ಷತಾಮೇತಿ ದೃಶೋರ್ಗುಹೇಶಃ|| ಪ್ರ-ಲಿಂ-ಲೀ-ಅ-೬ ಶ್ಲೊ ೯೦ ] “ ನನ್ನ ಮಗುವು ಅಲೌಕಿಕ ವಿಭೂತಿಯು. ಇದು ಅಭೂತ ಪೂರ್ವವಾದ ಮಗುವು. ನಮ್ಮನ್ನು ಕೃತಾರ್ಥರನ್ನಾಗಿ ಮಾಡಲು ಸಾಕ್ಷಾತ್ ಶಿವನೇ ಜನ್ಮತಾಳಿರುವನು. ಎಂದು ಹರ್ಷೋದ್ಗಾರಗಳನ್ನು ತೆಗೆದಂತೆ” ಆನಂದದಿಂದ ಬೋರಾಂಬೆಯು ತನ್ನ ಪತಿಯ ಮುಂದೆ ಅಂತರ್ಭಾವವನ್ನು ವ್ಯಕ್ತ ಮಾಡುತ್ತಿದ್ದಳು.

ಚೆನ್ನವೀರದೇವನು ಮಾತಾ ಪಿತೃಗಳ ಹತ್ತರ ಪ್ರೇಮದಿಂದಲೂ ಉಲ್ಲಾಸದಿಂದಲೂ ಸಮಭಾವದಿಂದಲೂ ವರ್ತಿಸುತ್ತಿದ್ದನು ಹಟಮಾರಿತನ, ಅಳಬುರಕತನ ಮೊದಲಾದ ಹೇಡಿಗುಣಗಳು ತಿಲಮಾತ್ರವಾದರೂ ಇವನನ್ನು ಸೋಂಕಿರಲಿಲ್ಲ. ಶೈಶವಾವಸ್ಥೆಯಲ್ಲಿರುವಾಗ ತಾಯಿಯು ಉಣಿಸಲು ಬಂದರೆ, ಇವನು ಒಮ್ಮೆಓಡುವನು, ಒಮ್ಮೆ ಜಿಗಿಯುವನು, ಒಮ್ಮೆ ಕುಣಿಯುವನು, ಒಮ್ಮೆ ಹಾಡುವನು. ಹೀಗೆ ಬಾಲರೂಪದಿಂದ ಚೆನ್ನವೀರ ದೇವನು ಲೀಲಾವಿನೋದದಲ್ಲಿ ಮಗ್ನನಾಗಿರುವದನ್ನು ಕಂಡ್ರು ಮಾತಾ-ಪಿತೃಗಳೂ ನೆರೆಹೊರೆಯುವರೂ ಅಸಮಾನ್ಯವಾದ ಆನಂದದಲ್ಲಿ ಮಗ್ನರಾಗುತ್ತಿದ್ದರು.

ಶ್ರೀಚೆನ್ನವೀರದೇವನು ತುಸು ದೊಡ್ಡವನಾಗಲು ತನ್ನ ಸಮಾನ ವಯಸ್ಸಿನ ಗೆಳೆಯರೊಡನೆ ಅಂಗಳದಲ್ಲಿ ಅನೇಕ ತರದ ಆಟಗಳನ್ನು ಆಡುತ್ತಿದ್ದನು.

ಇವನು ತನ್ನ ಗೆಳೆಯರನ್ನೆಲ್ಲ ಒಟ್ಟುಗೂಡಿಸಿ ಶಿವಭಜನೆ ಮಾಡಿಸುತ್ತ ತಾನು ಮಧ್ಯದಲ್ಲಿ ನಿಂತು ಚಪ್ಪಾಳೆ ಬಾರಿಸುತ್ತ ಕುಣಿಯುತ್ತಿದ್ದನು. ಒಮ್ಮೊಮ್ಮೆ ಅವರೊಡನೆ ಚಿಣೀ-ಫಣಿ ಆಡುವನು; ಒಮ್ಮೆ ಫಣಿ-ಚಂಡು ಬೊಗರೆಗಳ ನ್ನಾಡುವನು, ಒಮ್ಮೆ ಗುಂಡುಗಳನ್ನು ಹೊಡೆಯುವನು. ಒಮ್ಮೆ ತನ್ನ ಗೆಳೆಯರನ್ನೆಲ್ಲ ಕರಕೊಂಡು ಸ್ವಚ್ಛಂದದಿಂದ ಅಡವಿಗೆ ಹೊರಟು ಹೋಗು ವನು. ಹೀಗೆ ಅನೇಕ ಲೀಲೆಗಳಿಂದ ಗೆಳೆಯರನ್ನು ಆನಂದಗೊಳಿಸುತ್ತಿದ್ದನು.

ಈ ಮೇರೆಗೆ ನಮ್ಮ ಚರಿತ್ರನಾಯಕನು ಕೌಮಾರಾವಸ್ಥೆಯಲ್ಲಿ ಬಾಲಕ್ರೀಡೆಯಲ್ಲಿ ಮಗ್ನನಾಗಿರುತ್ತಿದ್ದರೂ, ತನ್ನ ಇಷ್ಟಲಿಂಗವನ್ನು ಪೂಜಿಸದೆ ಇಷ್ಟಲಿಂಗಕ್ಕೆ ನೈವೇದ್ಯವನ್ನು ಅರ್ಪಿಸದೆ, ಯಾವ ಪದಾರ್ಥವನ್ನೂ ಇವನು ಸೇವಿಸುತ್ತಿದ್ದಿಲ್ಲ, ದಿನಾಲು ನಿರ್ಮಲೋದಕದಿಂದ ಸ್ನಾನಮಾಡಿ, ಭಸ್ಮ ಧರಿಸಿ ಶಿವಸ್ವರೂಪವಾದ ತನ್ನ ಇಷ್ಟಲಿಂಗವನ್ನು ಕರಪೀಠದಲ್ಲಿಟ್ಟುಕೊಂಡು, ಗಂಧ-ಬಿಲ್ವ-ಪುಷ್ಪಾದಿಗಳಿಂದ ಪೂಜಿಸಿ, ನೈವೇದ್ಯವನ್ನು ಸಮರ್ಪಿಸಿ, ಅದ ನ್ನು ಎಲ್ಲರಿಗೂ ಕೊಟ್ಟು. ಅನಂತರ ತಾನು ಭುಂಜಿಸುತ್ತಿದ್ದನು. ತುಸು ದೊಡ್ಡವನಾದ ಮೇಲಂತೂ ಶಿವಕಥೆಯನ್ನು ಶ್ರವಣಮಾಡುವದು, ಶಿವನ ಸ್ತೋತ್ರ ಮಾಡುವದು, ಶಿವನಾಮವನ್ನು ಜಪಿಸುವದು, ಶಿವನ ಪಾದಾರ ವಿಂದವನ್ನು ಸೇವಿಸುವದು, ಶಿವನನ್ನು ಪೂಜಿಸುವದು, ನಮಸ್ಕರಿಸುವದು, ಶಿವನಲ್ಲಿ ದಾಸ್ಯಭಾವದಿಂದ ಲೀನನಾಗುವದು, ಶಿವನಲ್ಲಿ ಆತ್ಮಸಮರ್ಪಣೆಯ ನ್ನು ಮಾಡುವದು, ಇಂಥ ನವವಿಧಶಿವಭಕ್ತಿಯಲ್ಲಿಯೇ ತಲ್ಲೀನನಾಗಿರುತ್ತಿ ನುದ್ದ, ಒಟ್ಟನಮೇಲೆ ಹೇಳಬೇಕಂದರೆ, ಇವನು ತನ್ನ ಕೌಮಾರಾವಸ್ಥೆಯ ಲ್ಲಿಯೇ, ಲಿಂಗದಲ್ಲಿ ಪ್ರಾಣವನ್ನೂ ಪ್ರಾಣದಲ್ಲಿ ಲಿಂಗವನ್ನೂ ಸಂಬಂಧಿಸಿ, ಮನಸ್ಸನ್ನು ಶಿವನಲ್ಲಿ ಅಳವಡಿಸಿ, ಆಂತರಿಕ ಶಿವಭಕ್ತಿಯಿಂದಲೇ ಇರುತ್ತಿ ದ್ದನು. ಅಂತೂ ಲಿಂಗಾಂಗಸಾಮರಸ್ಯವನ್ನು ಕುರಿತು ವಚನಶಾಸ್ತ್ರಕಾ ರರು ಹೇಳಿರುವಂತೆ—

"ಅಂಗದಿಂದ ಲಿಂಗದಸುಖ; ಆ ಲಿಂಗಾಂಗ ಸುಖದಿಂದ ಪರಮಸುಖ ದೊರಕೊಂಬುವದು ನೋಡಾ. ಆ ಅಂಗ-ಲಿಂಗ-ಸಂಗ-ಸಮರಸೈಕ್ಯವನ್ನು ಕೂಡಲಚನ್ನಸಂಗಾ ನಿಮ್ಮ ಶರಣನಾದ ಮಹಲಿಂಗೈಕ್ಯ ಬಲ್ಲನಲ್ಲದೆ ಉಳಿದ

ವರೆತ್ತು ಬಲ್ಲಿರಯ್ಯಾ" ಎಂಬೀ ವಚನದ ರಹಸ್ಯವನ್ನು ಅರಿತವನಾಗಿದ್ದನು. ಹಾಗು ಲಿಂಗವು ಪರಮಾತ್ಮನ ಪ್ರತೀಕವೆಂದೂ, ಇದರ ಸಹಾಯದಿಂದ ನಿರಾಕಾರನಾದ ಶಿವನ ಅರ್ಚನ, ಧ್ಯಾನ್ಯಾದಿಗಳನ್ನು ಮಾಡಿ ನಿರ್ಗುಣಸ್ಥಿತಿಗೆ ಹೋಗುವ ಪದ್ಧತಿಯನ್ನು ಬಾಲ್ಯದಲ್ಲಿಯೇ ಇವನು ಅನುಸರಿಸಿದ್ದನು. ಈ ವಿಷಯದಲ್ಲಿ

"ಲಿಂಗವೆಂಬುದು ಪರಶಕ್ತಿಯುತ ಪರಶಿವನ ನಿಜದೇಹ; ಲಿಂಗವೆಂಬುದು ಪರಶಿವನ ಘನತೇಜ; ಲಿಂಗವೆಂಬುದು ಪರಶಿವನ ನಿರತಿಶಯಾನಂದಸುಖ; ಲಿಂಗವೆಂಬುದು ಪರಶಿವನ ಪರಮಜ್ಞಾನ, ಲಿಂಗವೆಂಬುದು ಷಡಧ್ವಮಯ ಜಗಜ್ಜನ್ಮಭೂಮಿ. ಲಿಂಗವೆಂಬುದು ಅಖಂಡವೇದ........ ಉರಲಿಂಗವಿದ್ದ ಪ್ರೀಯ ಪರಮೇಶ್ವರಾ" ಎಂಬ ಮಹೋದಯರ ವಚನದ ತಿರುಳನ್ನು ಸಾಭಾವಿಕವಾಗಿಯೇ ಅರಿತವನಾಗಿದ್ದಂತೆ ಕಂಡುಬರುತ್ತಿತ್ತು.

ವಾಚಕರೇ, ಇಂಥ ಚಿಕ್ಕವಯಸ್ಸಿನಲ್ಲಿ ನಮ್ಮ ವಯಸ್ಸಿನಲ್ಲಿ ನಮ್ಮ ಇಂಥ ಶ್ರೀ ಚೆನ್ನವೀರದೇವನ ಹೃದಯಾಕಾಶದಲ್ಲಿ ಇಂಥ ಜ್ಞಾನಪ್ರಕಾಶವು ಹೇಗೆಬಿತ್ತೆಂದು ವಿಚಾರಕ್ಕೊಳಗಾಗುವಿರೇನು? ಛೇ ಇದೇನೂ ಅತಿಶಯೋಕ್ತಿಯೆಂದು ತಿಳಿಯಬೇಡಿರಿ. ಭಗವದಂಶಸಂಭೂತರಾದ ಧ್ರುವ, ಪ್ರಲ್ಹಾದರ ಚಿಕ್ಕತನದಲ್ಲಿಯ ಚರಿತ್ರೆಗಳು ನಮಗೇನು ಬೋಧಿಸುವವೆಂಬುದನ್ನು ವಿಚಾರಿಸಿರಿ ಇನ್ನು ಪುರಾಣಕಾಲವನ್ನು ಬಿಟ್ಟು ಐತಿಹಾಸಿಕ ಕಾಲದಲ್ಲಿ ವಿಚಾರಿಸಿದರೂ ಶ್ರೀಶಂಕರಾಚಾರ್ಯ, ಗೌತಮಬುದ್ಧ ಇವರು ಹೇಗೆ ಜ್ಞಾನೋದಯವನ್ನು ಪಡೆದು ವೇದಾಂತಾದಿ ಸಕಲಶಾಸ್ತ್ರಗಳಲ್ಲಿ ಗತಿಯನ್ನು ಹೊಂದಿ ಸನ್ಯಾಶಾಶ್ರಮನ್ನು ಸ್ವೀಕರಿಸಿದರೆಂಬದು ಕಂಡುಬರುತ್ತದೆ. ಇದರಂತೆ ಜಾನ್‌ಸ್ಟುಅರ್ಟಮಿಲ್ಲರು ಸಹ ಚಿಕ್ಕವಯಸ್ಸಿನಲ್ಲಿಯೇ ಮಾತೃಭಾಷೆಯಲ್ಲಿ ನಿಷ್ಣಾತರಾಗಿ ಗ್ರೀಕಲ್ಯಾಟಿನಭಾಷೆಗಳನ್ನು ಅಭ್ಯಾಸಿಸಿ, ಮಹಾಜ್ಞಾನಿಗಳೆಂದು ಹೆಸರಾದರು ಇಂತಹ ಉದಾಹರಣೆಗಳು ಮತ್ತೆ ಕೆಲವು ಕಾಣಬರುವು. ಇರಲಿ, ಲೋಕೋತ್ತರ ವಿಭೂತಿಗಳ ಬಾಲ್ಯವನ್ನು ಸಾಮಾನ್ಯಜನರ ಬಾಲ್ಯಕ್ಕೆ ಹೋಲಿಸಿ ವಿಚಾರಿಸುವದು ಯುಕ್ತವಲ್ಲೆಂದು ಹೇಳಿ ಮುಂದೆ ಸಾಗುವೆವು.

ಈ ಮೇರೆಗೆ "ಬೀಜಕ್ಕೆ ಬಿಡುವದನ್ನು ಹೀಚಿಯಲ್ಲಿಯೇ ನೋಡಿರೆಂಬ ನಾಣ್ಣುಡಿಯಂತೆ ವೀರಶೈವಧರ್ಮಭಾನುವಿನಂತಿದ್ದ ಶ್ರೀಚೆನ್ನವೀರದೇವನ ಬಾಲ್ಯವು ಸಾಗಿರಲು ಇವನಿಗೆ ಆರುವರ್ಷಗಳು ತುಂಬಿದವು. ಇವನಬುದ್ಧಿ ಕುಶಾಗ್ರತೆಯು ವಿವಿಧರೀತಿಯಲ್ಲಿ ತೋರಬರಹತ್ತಿತು. ಆಗ ಚನ್ನಬಸವಾರ್ಯರು ಒಂದುಶುಭಮುಹೂರ್ತವನ್ನು ಶೋಧಿಸಿ, ಆದಿವಸಗಣಪತಿಹಾಗೂಸರಸ್ವತಿಯ ಪೂಜೆಯನ್ನು ಮಾಡಿಸಿ ಓಂಕಾರಪೂರ್ವಕವಾಗಿ ಅಕ್ಷರಾಭ್ಯಾಸವನ್ನು ಪ್ರಾರಂಭಿಸಿ ಬಿನ್ನಾಳದ ಬಸವೇಶ್ವರಗುಡಿಯಲ್ಲಿಯ ಗಾವಠಿಶಾಲೆಗೆಹಾಕಿದರು. ಇವನು ಒಂದೇ ಒಂದುದಿವಸದಲ್ಲಿ ಮೂಲಾಕ್ಷರಗಳನ್ನು ಕಲಿತು ಮುಂದೇ ಏನು ಕಲಿಯಬೇಕೆಂದು ಶಾಲೆಯ ಅಯ್ಯನವರನ್ನು ಕೇಳಿದನು; ಆಗ ಇವನ ಬುದ್ಧಿಕೌಶಲ್ಯವನ್ನೂ ಪ್ರಸನ್ನಚಿತ್ತವನ್ನೂ ಕಂಡು ಶಾಲೆಯ ಅಯ್ಯನವರಿಗೂ ತಂದೆ ತಾಯಿಗಳಿಗೂ ಸೋಜಿಗವಾಯಿತು. ಈಮೇರೆಗೆ ಚೆನ್ನವೀರನ ಪ್ರಾಥಮಿಕ ವಿದ್ಯಾಭ್ಯಾಸವು ಸಾಗಿದಾಗ ಶಾಲೆಯಲ್ಲಿ ವಿದ್ಯಾರ್ಥಿವರ್ಗದಲ್ಲಿಯ ಅಗ್ರಸ್ಥಾನವನ್ನು ಇವನು ಯಾರಿಗೂ ಕೊಡಲಿಲ್ಲ. ಪ್ರತಿಯೊಂದಕ್ಕೆ ಇವನೇ ಹಿರೇಮಣಿಯು. ಈ ಕ್ರಮದಿಂದ ಕೆಲವು ದಿನಗಳವರೆಗೆ ಇವನ ಬಾಲಪಾಠಾಭ್ಯಸವು ಸಾಗಲು ಆಗಿನ ಪದ್ಧತಿಯಂತೆ ಶಾ. ಶ. ೧೭೦೪ ನೇ ಚಿತ್ರಭಾನು ಸಂವತ್ಸರದಲ್ಲಿ † ಮತಿಹಿಡಿಯುವ ವಿಧಾನವು ವಿದ್ಯಾರ್ಥಿಯಾದ ಶ್ರೀಚೆನ್ನವೀರದೇವನಿಂದ ಪಾಲಿಸಲ್ಪಟ್ಟಿತು. ಹೀಗೆ ಕೆಲವು ದಿವಸ ಬಿನ್ನಾಳದ ಗಾವಠಿಶಾಲೆಯಲ್ಲಿ ಪ್ರಾಥಮಿಕ ಅಭ್ಯಾಸವು ಸಾಗಿದ ಮೇಲೆ ಆರಕೆರೆ ಎಂಬಲ್ಲಿ ಕೆಲವು ದಿವಸ ಪಾಠಕ್ರಮವು ನಡೆಯಿತು. ಇಷ್ಟ

---

† ಮತಿಹಿಡಿಯುವ ಪದ್ಧತಿಯೆಂದರೆ— ಭಾವಿಕೆಶನದ ಆ ಹಿಂದಿನಕಾಲದಲ್ಲಿ ೧ ಮಣ ಅರಿಷಣ ೧ ಮಣ ಕುಂಕುಮ ೮ ಮಣ ಉತ್ತತ್ತಿ ೮ ಮಣ ಅಡಿಕೆ ೧೦೦ ಟೆಂಗಿನಕಾಯಿ ಇತ್ಯಾದಿ ಹೀಗೆ ಪೂಜಾಸಾಮಗ್ರಿಗಳನ್ನು ದೇವರ ಪೂಜೆಗೆ ಸಮರ್ಪಿಸಲ್ಪಟ್ಟಿದೆ ಎಂದು ಯಾದಿಯನ್ನು ಬರೆದು, ಶಕ್ಯವಿದ್ದಷ್ಟು ಯಾದಿಯಲ್ಲಿಯ ಸಾಮಾನುಗಳನ್ನು ಪೂಜೆಗೆ ಒದಗಿಸಿ ಪೂಜೆ ಮಾಡಿಸಿ ಆ ಯಾದಿಯನ್ನು ವಿದ್ಯಾರ್ಥಿಯ ಕೈಯಿಂದ ಓದಿಸುವದು. ಇದಾದಮೇಲೆಯೇ ಕೈಬರದ (ಫೈಲ) ಕಾಗದಗಳನ್ನು ಓದಿಸಲಿಕ್ಕೆ ಆಗ ಪ್ರಾರಂಭಿಸುತ್ತಿದ್ದರಂತೆ ಇದಕ್ಕೆ ಮತಿಹಿಡಿಯುವ ಪದ್ಧತಿ ಅನ್ನುತ್ತಿದ್ದರು.

ಸ್ಥಳ: ಶ್ರೀ-ಶ್ರೀ-ಗಳವರು ಅಪ್ಪಣೆ ಕೊಡಿಸಿದ ಸಂಗತಿಗಳ ಮೇಲಿಂದ ಸಂಗ್ರಹಿಸಿದ್ದು.

ರಲ್ಲಿ ಎಂಟುವರ್ಷಗಳು ತುಂಬಿ ಅದ್ವಿತೀಯವಾದ ಶಿವಕಳೆಯು ಮೋರೆಯ ಮೇಲೆ ಪ್ರಜ್ವಲಿಸಹತ್ತಿತು. ಆಗ ಇವನ ಸಾಧಕಾವಸ್ಥೆಯನ್ನು ಕಂಡು, ಮಾಹೇಶ್ವರದೀಕ್ಷೋಪನಯನ ಸಂಸ್ಕಾರವನ್ನು ಮಾಡಿದರು. ಇದರಿಂದ ಖನಿಯೊಳಗುದ್ಭವಿಸಿದರತ್ನವು ಸಾಣೆಸಿ ತೇಜೋಮಯವಾಗಿ ಮಾಡಲ್ಪಡುವಂತೆ ಶ್ರೀಚೆನ್ನವೀರದೇವನು ಈಮಹೇಶ್ವರದೀಕ್ಷೋಪನಯನಸಂಸ್ಕಾರದಿಂದ ಪ್ರೋತ್ಸಾಹಿತನಾದನು.

ಇದರಿಂದ ಬಂಗಾರಕ್ಕೆ ಕುಂದಣ ಕೂಡಿದಂತಾಗಿ ಶ್ರೀಚೆನ್ನವೀರದೇವನ ಆತ್ಮಜ್ಞಾನವು ವೃದ್ಧಿಂಗವಾಯಿತು. ಆಗ ಇವನ ಹೃತ್ಪದ್ಮಪೀಠದಿಂದ “ ಎನ್ನ ಕರಸ್ಥಲಮಧ್ಯದಲ್ಲಿ ಪರಮ ನಿರಂಜನ ಕುರುಹದೋರಿದ ಆ ಕುರುಹಿನಮಧ್ಯದಲ್ಲಿ ಅರುಹಿನಕಳೆದೋರಿದಆ ಕಳೆಯ ಮಧ್ಯದಲ್ಲಿ ಮಹಾಜ್ಞಾನದ ಬೆಳಗ ತೋರಿದ ಆ ಬೆಳಗಿನ ನಿಲವಿನೊಳಗೆ ಎನ್ನತೋರಿದ ತನ್ನೊಳಗೆ ಎನ್ನನಿಟ್ಟುಕೊಂಡ ಮಹಾಗುರುವಿಗೆ ನಮೋ ನಮೋಎನುತಿರ್ದೆನಯ್ಯಾ ” ಎಂಬ ವಚನವಾಣಿಯ ರಹಸ್ಯವು ಹೊರಡದೆ ಇರಲಿಲ್ಲ.

ಮಹೇಶ್ವರ ದೀಕ್ಷೋಪನಯನ ಸಂಸ್ಕಾರವಾದ ಮೇಲೆ ಚೆನ್ನವೀರದೇವನ ಆಯುಷ್ಯಮಣವು ಮಾತಾಪಿತೃಗಳ ಸನ್ನಿಧಿಯಲ್ಲಿ ಕಳೆಯಲಿಕ್ಕಾಗಲಿಲ್ಲ ತುಸು ದಿವಸಗಳಲ್ಲಿ ಈಶಸಂಕಲ್ಪದ ಮೇರೆಗೆ ತಂದೆ ತಾಯಿಗಳನ್ನಗಲಿ ಹೋಗುವ ಯೋಗವು ಇವನಿಗೆ ಪ್ರಾಪ್ತವಾಯಿತು. ಮಾತೋಶ್ರೀ ಬೊರಾಂಬೆಗೂ ಚನ್ನಬಸವಾರ್ಯರಿಗೂ “ ನೀವು ಹರಿಕೆ ಹೊತ್ತಂತೆ ವೀರಶೈವ ಸಮಾಜಕ್ಕೆ ಆಧಾರಪುರುಷನಾಗುವ ಈ ಬಾಲಕನನ್ನು ಮನೆಯಲ್ಲಿಟ್ಟುಕೊಳ್ಳದೆ ನಿಮ್ಮ ಮನೆತನದ ಪೂರ್ವ ಪದ್ಧತಿಯಂತೆ ತೋಂಟದಾರ್ಯರ ಮಠಕ್ಕೆ ನೀಡಿರೆಂಬ ಸಂಕೇತವು ಸ್ವಪ್ನದ್ವಾರದಿಂದಲೂ ಬೇರೆ ವಿಧದಿಂದಲೂ ಹೊಳೆಯಹತ್ತಿತು. ಆಗ ಗುರುಲಿಂಗಜಂಗಮರ ಸೇವಾವಿಶೇಷದಿಂದ ಪರಿಪಕ್ವ ಮನಸ್ಕರಾಗಿದ್ದ ಆ ದಂಪತಿಗಳು ಸಂಸಾರದ ಯಾವ ಮೋಹಕ್ಕೂ ಒಳಗಾಗದೆ, ತಾವು ಹರಿಕೆ ಹೊತ್ತಂತೆ ಬಾಲಕನಾದ ಶ್ರೀಚೆನ್ನವೀರದೇವನನ್ನುಡಂಬಳದ ಶ್ರೀ ತೋಂಟದಾರ್ಯರ ಮಠಕ್ಕೆ ಒಪ್ಪಿಸಲು ನಿರ್ಧರಿಸಿದರು.

ಮನಸ್ಸಿನಲ್ಲಿ ನಿರ್ಧರಿಸಿದಂತೆ ಈ ಜಂಗಮದಂಪತಿಗಳು ಒಂದು ದಿನ ಮಗನಾದ ಶ್ರೀಚೆನ್ನವೀರದೇವನನ್ನು ಸಂಗಡ ಕರಕೊಂಡು ಡಂಬಳದ ಶ್ರೀ

ಮೃತ್ಯುಂಜಯ ತೋಂಟದಾರ್ಯ ಸ್ವಾಮಿಗಳ ಸನ್ನಿಧಿಗೆ ಬಂದು ವಿನಯದಿಂದ ನಮಸ್ಕರಿಸಿ, —" ಮಹಾಸ್ವಾಮಿೞ ನಾವು ಬಿನ್ನಾಳದ ಹಿರೇಮಠದ ಜಂಗಮರು. ಜಗದೀಶನ ಪ್ರಸಾದದಿಂದ ಈ ಬಾಲಕನು ನಮ್ಮ ಉದರದಲ್ಲಿ ಜನಿಸಿರುವನು. ಇವನು ಹುಟ್ಟುವ ಮೊದಲು ಇವನನ್ನು ನಾವು ಮನೆಗಿಟ್ಟುಕೊಳ್ಳದೆ ತಮ್ಮ ಮಠಕ್ಕೆ ಸಲ್ಲುತೇವೆಂದು ಸಂಕಲ್ಪ ಮಾಡಿದ್ದೆವು ಅದರಂತೆ ಈಗ ತಿಂಗಳಿಂದ ಇವನನ್ನು ಸನ್ನಿಧಿಗೆ ಸಲ್ಲಲು ಸಂಕೇತಗಳು ಆಗಹತ್ತಿವೆ. ಕಾರಣ ಅದ್ವಿತೀಯ ಶಿವಕಲೆಗಳಿಂದೊಪ್ಪುವ ಈ ಬಾಲಕನನ್ನು ಸಂಸಾರಿಗಳಾದ ನಾವು ಇಟ್ಟುಗೊಳ್ಳಲಿಕ್ಕೆ ಬಾರದಂತಿದ್ದದರಿಂದ ಈ ಬಾಲರತ್ನವನ್ನು ಮಹಾತ್ಮರಾದ ತಮ್ಮ ಸ್ವಾಧೀನ ಮಾಡಲು ಬಂದಿರುವೆವು. ಸ್ವೀಕರಿಸಿ ಅನುಗ್ರಹ ಮಾಡಬೇಕೆಂದು " ಬಿನ್ನವಿಸಿಕೊಂಡರು. ಆಗ ಶ್ರೀಮೃತ್ಯುಂಜಯತೋಂಟದಾರ್ಯ ಸ್ವಾಮಿಗಳು ಈ ದಂಪತಿಗಳ ನಿಸ್ಪೃಹತೆಯನ್ನೂ ವೈರಾಗ್ಯವನ್ನೂ ಕಂಡು ಆಶ್ಚರ್ಯಭರಿತರಾಗಿ—

" ಜಂಗಮಶ್ರೇಷ್ಠರೇ, ವೀರಶೈವಸಮಾಜಕ್ಕೆ ರತ್ನಪ್ರಾಯದಂತಿರುವ ಈ ಬಾಲಕನನ್ನು ನಿಸ್ವಾರ್ಥಬುದ್ಧಿಯಿಂದ ನಮಗೆ ಸಲ್ಲಲು ಬಂದದ್ದು ನೋಡಿ, ಅತ್ಯಾನಂದವಾಯಿತು. ಇವನು ಅಲೌಕಿಕ ಪುರುಷನಾಗುವದೆಂಬದನ್ನು ಇವನ ಮೋರೆಯ ಮೇಲಿನ ಲಕ್ಷಣಗಳೇ ಹೇಳುತ್ತೇವೆ ಇವನಿಂದ ನಿಮ್ಮ ಕುಲಕೋಟಿಯು ಉದ್ಧಾರವಾಗುವದಲ್ಲದೆ ಇಡೀ ವೀರಶೈವ ಜನಾಂಗವೇ ಉದ್ಧಾರವಾಗುವ ಯೋಗವಿದೆ. ತೇಜಃಪುಂಜವಾದ ಶಿವಕಲೆಯು ಇವನ ಮೋರೆಯಮೇಲೆ ಪ್ರಜ್ವಲಿಸುತ್ತಿದೆ. ಇವನು ಮುಂದೆ ಮಹಾಮಹಿಮಾಶಾಲಿಯಾಗಿ ಜಗತ್ತಿನಲ್ಲಿ ಪ್ರಕಾಶಿಸುವನು. ನಿಮ್ಮಿಷ್ಟದಂತೆ ಆಗಲಿ " ಎಂದು ಮಠದಲ್ಲಿರಲು ಅಪ್ಪಣೆಯನ್ನಿತ್ತು ಆ ದಂಪತಿಗಳಿಗೆ ಆಶೀರ್ವಾದ ಮಾಡಿ ಕಳಿಸಿಕೊಟ್ಟರು.

ವಾಚಕಮಹಾಶಯರೇ, ಕೋಮಲಹೃದಯದವರೂ, ಸಾತ್ವಿಕರೂ ಆದ ಆ ಜಂಗಮ ದಂಪತಿಗಳ ಮನೋದಾರ್ಢ್ಯವನ್ನೂ ನಿಸ್ಪೃಹತೆಯನ್ನೂ ನೋಡಿದಿರಾ ! ಕುಲೋತ್ತುಂಗನಾದ ಚೆನ್ನ(ಸುಂದರ)-ವೀರ-ಮಗುವನ್ನು ಯಾವ ಸ್ವಾರ್ಥಕ್ಕೂ ಒಳಗಾಗದೆ, ಚಿಕ್ಕವಯಸ್ಸಿನಲ್ಲಿಯೇ ಹೇಗೆ ಸ್ವಾಮಿಗಳ ವಶಕ್ಕೆ ಸಲ್ಲಿಸಿದರು ! ಲೋಕಕಲ್ಯಾಣದ ಈ ಕೆಲಸದಲ್ಲಿ ಪ್ರಪಂಚದ ಯಾವ

ದೊಂದು ಮೋಹಕ್ಕೆ ಒಳಗಾಗಿ ಇವರು ಸ್ವಲ್ಪಾದರೂ ತಡೆಯನ್ನುಂಟು ಮಾಡಲಿಲ್ಲ!! ಆಹಹಾ! ಶಿವಾನುಗ್ರಹಕ್ಕೆ ಪಾತ್ರರಾದ ಮಹನೀಯರ ಯೋಗ್ಯತೆಯನ್ನು ಯಾರು ಬಣ್ಣಿಸಲು ಸಮರ್ಥರು? ಇವರು ತಮ್ಮನ್ನೂ ತಮ್ಮ ಯಾವತ್ತೂ ವಸ್ತುಗಳನ್ನೂ ಶಿವರೂಪವೆಂದೇ ಭಾವಿಸಿ ನಡೆಯುವರು. ಇದರಿಂದ ಇವರಿಗ್ಗೆ ಇದೇ ಜನ್ಮದಲ್ಲಿ ಶಿವಜ್ಞಾನವುಂಟಾಗಿ ಶಿವಸಾಯುಜ್ಯ ಪದವಿಯು ಪ್ರಾಪ್ತವಾಗುವದು. ಅಂತೇ ಶ್ರೀಶಿವಯೋಗಿ ಶಿವಾಚಾರ್ಯರು ಇಂಥ ಮಹನೀಯರನ್ನು ಕುರಿತು "ಆತ್ಮಾನಮುಖಿಲಂವಸ್ತು ಶಿವಮಾನಂದ ಚಿನ್ಮಯಂ। ಏಕೀಭಾವೇನಸತತಂ ಸಂಪಶ್ಯನ್ನೇವಪಶ್ಯತಿ" ಎಂದು ಹೃದಯಂಗಮವಾಗಿ ವರ್ಣಿಸಿದ್ದಾರೆ. ಆಹಹಾ! ಧನ್ಯರು!! ಶ್ರೀಚೆನ್ನವೀರ ದೇವನ ಮಾತಾ ಪಿತೃಗಳು ಧನ್ಯರು!!!

# ೪ನೇ ಅಧ್ಯಾಯ
# ವಿದ್ಯಾಭ್ಯಾಸ.

ಹಿಂದಿನ ಅಧ್ಯಾಯದಲ್ಲಿ ಹೇಳಿದಂತೆ ಚೆನ್ನವೀರದೇವನು ಶ್ರೀ ತೋಂಟದಾರ್ಯರಸ್ವಾಮಿಗಳ ಮಠಕ್ಕೆ ಬಂದು ಇರಹತ್ತಿದಮೇಲೆ ಅಲ್ಲಿಯ ಸ್ವಾಮಿಗಳ ಲಕ್ಷ್ಯವು ಇವನಿಗೆ ವೈದಿಕ ಹಾಗೂ ಸಂಸ್ಕೃತ ಶಿಕ್ಷಣವನ್ನು ಕೊಡಿಸುವದರ ಕಡೆಗೆ ಹೊರಳಿತು. ಮೊದಲು ಇವನ ವೈದಿಕ ವಿದ್ಯಾಭ್ಯಾಸವು ಹೆಂಪಸಾಗರದ ಚರವರ್ಯರ ಅನುಜ್ಞೆಯ ಮೇರೆಗೆ ಕವಲೂರ-ಆಳವಂಡಿಯ ಸಿದ್ಧಪ್ಪಯ್ಯನವರಲ್ಲಿ ಸಾಂಗವಾಯಿತು. ಇಲ್ಲಿ ಕೆಲವು ಕಾಲ ವೈದಿಕ ಹಾಗೂ ಸಂಸ್ಕೃತ ಅಭ್ಯಾಸವು ಮುಂದರಿದ ಮೇಲೆ ಮೂಡಲಗೆರೆಯಲ್ಲಿ ಕಂದಗಲ್ಲಪರ್ವತ ಶಾಸ್ತ್ರಿಗಳ ಬಳಿಯಲ್ಲಿ ಪುರಾಣ ಕಾವ್ಯಗಳ ಅಭ್ಯಾಸವು ಜರುಗಿತು. ಈ ಸಮಯದಲ್ಲಿ ಇವನ ವಿದ್ಯಾಲಾಲಸವೂ ಮೇಧಾಶಕ್ತಿಯೂ ಶ್ರೀತೋಂಟದಾರ್ಯ ಸ್ವಾಮಿಗಳ ನಿದರ್ಶನಕ್ಕೆ ಬರಲು ಇವನ ಸಂಸ್ಕೃತ ಅಭ್ಯಾಸವು ತಮ್ಮ ಸಮಕ್ಷಮ ನಡೆಯಬೇಕೆಂದು ಆಲೋಚಿಸಿ ವೇ. ಮೂ. ನಾರಾಯಣಪುರದ ಕರವೀರಪ್ಪಶಾಸ್ತ್ರಿಗಳನ್ನು ಇವರ ಪಾಠಾಭ್ಯಾಸಕ್ಕಾಗಿ ಗದಗಿನಲ್ಲಿಯೇ ನಿಯಮಿಸಿದರು. ಆಗ ನಮ್ಮ ಚರಿತ್ರನಾಯಕರ ಮೇಧಾಶಕ್ತಿಯೂ ಪಾಂಡಿತ್ಯವೂ ಗದಗಿನ ಪ್ರಮುಖರನ್ನು ದಂಗುಗೊಳಿಸದೆ ಇರಲಿಲ್ಲ ಇಷ್ಟರಲ್ಲಿ ಗದಗಿನಲ್ಲಿಯೇ ಸ್ಥಾಪಿಸಲ್ಪಟ್ಟ ಸಂಸ್ಕೃತಪಾಠಶಾಲೆಗೆ ಕಾಶಿಯಲ್ಲಿ ಅಭ್ಯಾಸ ಮುಗಿಸಿ, ಪಂಡಿತರಾಗಿ ಬಂದ ವೇ. ಮೂ. ನಿಲಕಂಠಶಾಸ್ತ್ರಿಗಳು ಅಧ್ಯಾಪಕರಾಗಿ ಬರಲು, ಚೆನ್ನವೀರದೇವರ ಅಭ್ಯಾಸವು ೨-೩ ವರ್ಷ ಇವರ ಬಳಿಯಲ್ಲಿಯೇ ನಡೆಯಿತು. ನಮ್ಮ ಚರಿತ್ರನಾಯಕರಿಗೆ ಅಧ್ಯಾಪಕರಾಗಿ ಬಂದ ಈ ಶಾಸ್ತ್ರಿಗಳು ಸಕಲಶಿವಶಾಸ್ತ್ರ ಸಂಪನ್ನರೂ, ಶಿವಾಚಾರನಿರತರೂ, ಆದ ಮಹೇಶ್ವರರಿದ್ದು, ವೈದಿಕ,ಹಾಗೂ ಸಂಸ್ಕೃತವಿದ್ಯೆಯಲ್ಲಿ ಪಂಡಿತರೆಂದು ಖ್ಯಾತಿಯನ್ನು ಪಡೆದಿದ್ದರು. ಇವರ ಬಳಿಯಲ್ಲಿ ವಿದ್ಯಾರ್ಥಿಯಾಗಿ ಚೆನ್ನವೀರದೇವನು ಅಧ್ಯಯನವನ್ನು ಮಾಡತೊಡಗಿದನು. ಈ ವೇಳೆಯಲ್ಲಿ ದಿನಾಲು ಮಿತಮೀರಿ ಅಧ್ಯಯನವನ್ನು ಹೇಳಿದರೂ ನಮ್ಮ ಚರಿತ್ರನಾಯಕನ ವಿದ್ಯಾರ್ಜನೆಯ ಹಸಿವುಕಡಿಮೆಯಾಗುತ್ತಿದ್ದಿಲ್ಲ. ಹೆಚ್ಚೆಚ್ಚು ಪಾಠವನ್ನು

ಕಲಿಯುಲು ಇವನ ಲವಲವಿಕೆಯುಹೆಚ್ಚೆಚ್ಚು ಕಂಡು ಬರುತ್ತಿತ್ತು. ಎಷ್ಟೋ ಸಾರೆ ಇವನು ಗುರುಗಳು ಹೇಳಿದ್ದರ ಮುಂದಿನ ವೇದಾಧ್ಯಾಯದೊಳಗಿನ ಭಾಗಗಳನ್ನು ಸ್ವಹಸ್ತದಿಂದ ಬರೆದುಕೊಂಡು ಅಭ್ಯಾಸಿಸಿ ಗುರುಗಳಿಗೊಪ್ಪಿಸಿ ತನ್ನ ಅಪೇಕ್ಷೆಯನ್ನು ಪೂರೈಸಿಕೊಳ್ಳುತ್ತಿದ್ದನು.

ವಿದ್ಯಾರ್ಜನೆಗಾಗಿ ಗುರುಗಳ ಸನ್ನಿಧಿಯಲ್ಲಿದ್ದಾಗ ಶ್ರೀಚೆನ್ನವೀರದೇವನು ದಿನಾಲು ಬೆಳಗಿನ ಜಾವದಲ್ಲಿ ಎದ್ದು ಪ್ರಾತರ್ವಿಧಿಗಳನ್ನು ತೀರಿಸಿಕೊಂಡು ಭಸ್ಮಧಾರಿಯಾಗಿ ತನ್ನ ಪಾಠಾಭ್ಯಾಸವನ್ನು ಕೈಕೊಳ್ಳುತ್ತಿದ್ದನು. ಚುಮು ಚುಮು ನಸುಗಾದೊಡನೆ ತೋಟಕ್ಕೆ ಹೋಗಿ ಬಿಲ್ವಪುಷ್ಪಾದಿ ಪೂಜಾಸಾಮಗ್ರಿಗಳನ್ನು ತಂದು ಸರಿಪಡಿಸಿಕೊಂಡು, ಗುರುಗಳ ಸೇವೆಯನ್ನು ಪರಮ ಭಕ್ತಿಯಿಂದಮಾಡಿ ಅಧ್ಯಯನದಲ್ಲಿ ವೇಳೆಗಳೆಯುತ್ತಿದ್ದನು." ಪೂರ್ವಜನ್ಮಾರ್ಜಿತಾವಿದ್ಯಾ ಅಗ್ರೇಧಾವತಿಧಾವತಿ" ಎಂಬಗೀರ್ವಾಣೋಕ್ತಿಯಂತೆ ಪೂರ್ವಜನ್ಮದ ವಿದ್ಯಾದಾನದ ಸುಕೃತ ವಿಶೇಷದಿಂದ ಚೆನ್ನವೀರದೇವನು ವಿದ್ಯೆಯಲ್ಲಿ ಉತ್ತಮ ಪ್ರಗತಿಯನ್ನು ಹೊಂದುತ್ತ ನಡೆದನು." ಇವನಿಗೆ ಅಧ್ಯಯನ ಮಾಡಿಸಿದ ಗುರುಗಳೆಲ್ಲ "ಮಹಾಪುರುಷನಾಗುವ ಚೆನ್ನವೀರದೇವನಿಗೆ ಅಧ್ಯಯನ ಮಾಡಿಸಿದ್ದರಿಂದ ನಾವು ಕೃತಾರ್ಥರಾದೆವೆಂದು"ಧನ್ಯೋದ್ಗಾರಗಳನ್ನು ತೆಗೆಯುತ್ತಿದ್ದರು. ಹಾಗು ಮುಗಿಲಮರೆಯ ಸೂರ್ಯನಂತೆಯೂ, ನೆಲದ ಮರೆಯ ನಿಧಾನನಂತೆಯೂ, ಒರೆಯ ಮರೆಯ ಅಲಗಿನಂತೆಯೂ ಇರುವ ಇವನ ತೇಜಸ್ಸನ್ನೂ, ಪ್ರತಿಭೆಯನ್ನೂ, ಮೇಧಾಶಕ್ತಿಯನ್ನೂ, ವಾಗ್ವೈಖರಿ ವಿಶೇಷವನ್ನೂನೋಡಿ ಕೌತುಕಬಡುತ್ತಿದ್ದರು.

ಈ ಮೇರೆಗೆ ಚೆನ್ನವೀರದೇವನು ವಿದ್ಯಾರ್ಥಿದೆಶೆಯಲ್ಲಿ ವಿದ್ಯಾರ್ಜನೆಯಲ್ಲಿ ಅಗ್ರಗಣ್ಯನಾಗಿದ್ದಂತೆ ಬ್ರಹ್ಮಚರ್ಯೆಯಲ್ಲಿಯೂಸದಾಚಾರದಲ್ಲಿಯೂ ಇವನು ಬಹಳ ಜಾಗರೂಕನಾಗಿದ್ದನು. ಶಿವಯೋಗವು ಸದಾಚಾರದ ಆತ್ಮವೆಂದು ಇವನು ಚಿಕ್ಕಂದಿನಲ್ಲಿಯೇ ಅರಿತಿದ್ದನು. ಪರಸ್ತ್ರೀ ಅಥವಾ ಸ್ವಸ್ತ್ರೀಭೋಗವನ್ನು ಬಿಟ್ಟಮಾತ್ರಕ್ಕೆ ಅದು ನಿಜವಾದ ಬ್ರಹ್ಮಚರ್ಯೆಯಲ್ಲ; ತ್ರಿಕರಣಪೂರ್ವಕವಾಗಿ ಸ್ತ್ರೀಭೋಗದಕಲ್ಪನೆಯನ್ನು ತಾರದಿರುವದೂ, ಸದಾಶಿವಯೋಗಚಿಂತನದಲ್ಲಿರುವದೂ, ನಿಜವಾದ ಬ್ರಹ್ಮಚರ್ಯೆ

ಯೆಂಬಮರ್ಮವನ್ನು ಇವನುಅರಿತವನಾಗಿದ್ದನು. ಭಕ್ತಿಭಾಂಡಾರಿಯಾದಬ ಸವಣ್ಣನವರು ಬ್ರಹ್ಮಚರ್ಯದಬಗ್ಗೆ ಪ್ರಭುದೇವರವಿಷಯವಾಗಿ ತೆಗೆದ ಉದ್ಗಾರವೆಂದರೆ ಕೆಳಗಿನದು—

“ಶ್ರೋತ್ರದಲ್ಲಿ ಬ್ರಹ್ಮಚಾರಿಯಾಗಿರಬೇಕು ಶರಣನು. ತ್ವಕ್ಕಿಯುಬ್ರಹ್ಮ ಚಾರಿಯಾಗಿರಬೇಕು ಶರಣನು. ನಾಸಿಕದಲ್ಲಿಬ್ರಹ್ಮಚಾರಿಯಾಗಿರಬೇಕು ಶರಣನು. ನೇತ್ರದಲ್ಲಿ ಬ್ರಹ್ಮಚಾರಿಯಾಗಿರಬೇಕು ಶರಣನು. ಜಿಹ್ವೆಯಲ್ಲಿ ಬ್ರಹ್ಮಚಾರಿಯಾಗಿರಬೇಕು ಶರಣನು. ಇಂತೀ ಪಂಚೇಂದ್ರಿಯಗಳಲ್ಲಿ ಬ್ರಹ್ಮಚಾರಿಯಾಗಿ, ಕೂಡಲಸಂಗಮದೇವರಲ್ಲಿ ಎನ್ನನಾಗ ಮಾಡಲಿಕ್ಕೆ ಬ್ರಹ್ಮಚಾರಿಯಾದನು ಪ್ರಭುದೇವರು.”

ಶ್ರೀ ಬಸವಣ್ಣದೇವರ ಮೇಲಿನ ವಚನದಂತೆ ಶ್ರೀ ಚೆನ್ನವೀರದೇವನ ಬ್ರಹ್ಮಚರ್ಯೆಯು ಇತ್ತೆಂದು ವರ್ಣಿಸಿದರೆ ಅತಿಶಯೋಕ್ತಿಯೆನಿಸದು. ಇದೇ ಮೇರೆಗೆ ಹಿಂದೂಧರ್ಮದ ವೇದಾಂತ ಗ್ರಂಥದಲ್ಲಿ ಯಾವದು ಪೌರುಷೋಪ ದೇಶವೆಂದು ಹೇಳಲ್ಪಟ್ಟಿರುವದೋ ಆಉಪದೇಶದಗುಟ್ಟಾಗಿದ್ದ “* ಮಾಮೃ ತ್ಯೋಃ ಉದಗಾತ್ ವಶಮ್ । ಪುರುಷ ಅತಃ ಉತ್ತಮ್ । ಮಾ ಅವಪತ್ಥಾ ಮೃತ್ಯೋಃಪಡ್ವೀಶಂ, ಅವಮುಂಚಮಾನಃ” ಎಂಬ ವೇದವಚನದಂತೆ ಮೃತ್ಯುಪಾಶದ ಶಕ್ತಿಹ್ರಾಸಕ್ಕೆ ಬ್ರಹ್ಮಚರ್ಯೆಯೇ ಮೂಲಸಾಧನವೆಂಬ ಮರ್ಮವನ್ನು ಇವನು ಬಲ್ಲವನಾಗಿದ್ದನು.

ವಾಚಕರೇ ಬ್ರಹ್ಮಚರ್ಯೆಯ ಪ್ರಭಾವವೇ ಇಂತಹ ಬಲವತ್ತರವಾ ದದ್ದು. ಇದರ ತೇಜಸ್ಸೂ ಕಾರ್ಯವೂ, ಇದನ್ನು ಅಖಂಡವಾಗಿ ಆಚರಿಸಿದ ತಪೋಧನರ ದಿವ್ಯದರ್ಶನದಿಂದ ಮನವರಿಕೆಯಾಗುವದು. ಅಂತೇ ಭಗವಾ ನ್ ಶಂಕರನು,

ಸಿದ್ಧೇ ಬಿಂದೌ ಮಹಾಯತ್ನೇ ಕಿಂ ನಸಿಧ್ಯತಿ ಭೂತಲೇ।
ಯಸ್ಯಪ್ರಸಾದಾನ್ಮಹಿಮಾ ಮಮಾಪ್ಯೇತಾ ದೃಶೋಭ ವೇತ್ ॥

---

* ಅರ್ಥ ಎಲೈ ಪುರುಷನೇ, ಮೃತ್ಯುವಿನ ಅಧೀನನಾಗಬೇಡ, ಈ ಅವಸ್ಥೆಯಿಂದ ಎದ್ದೇಳು! ಅವನತನಾಗಬೇಡ. ಮೃತ್ಯು ಪಾಶವನ್ನು ಹರಿದೊಗೆ
ವೇದದಲ್ಲಿರುವ ಪೌರೋಷದೇಶ ಭಾಗ

(ಅರ್ಥ) “ ಬ್ರಹ್ಮಚರ್ಯೆಯನ್ನು ಮಹಾಪ್ರಯತ್ನದಿಂದ ಪಾಲಿಸುವವನಿಗೆ ಈ ಜಗತ್ತಿನಲ್ಲಿ ಯಾವದು ಸಿದ್ಧಿಸದು? ಈ ಬ್ರಹ್ಮಚರ್ಯೆ ಪ್ರಸಾದದಿಂದ ಮನುಷ್ಯನು ಈಶ್ವರಸಮಾನನಾಗುವನು. (ಕಡೆಗೆ) ನನ್ನನ್ನು ಹೊಂದುವನು.” ಎಂದು ವರ್ಣಿಸಿರುವನು. ಅಂದ ಮೇಲೆ ಈ ತಪಸ್ಸು ಮನುಷ್ಯನಿಗೆ ಪಾಪನಾಶಕವೂ, ಪುಣ್ಯಪ್ರದವೂ, ಆಯುರಾರೋಗ್ಯ ಪ್ರದಾಯಕವೂ ದಾರಿದ್ರನಾಶಕವೂ ಎಂದು ಯಾರು ಒಪ್ಪಲಿಕ್ಕಿಲ್ಲ? ಇದರ ಬಲದಿಂದ ಚೈತನ್ಯವೂ ಪಾವಿತ್ರವೂ ಬಲವೂ ಸ್ವಾವಲಂಬನವೂ ಮನುಷ್ಯನಲ್ಲಿ ಉದ್ಭವಿಸುವವು. ಚಿತ್ತಶುದ್ಧಿಯೂ ಆತ್ಮಬಲವೂ ಇದರ ಆಧಾರದಿಂದಲೇ ಮನುಷ್ಯನಲ್ಲಿ ಅಂಕುರಿಸಿ ಬೆಳೆಯ ತೊಡಗುವವು.

ಇದರಂತೆ ನಮ್ಮ ಚರಿತ್ರನಾಯಕನ ವೃತ್ತಿಯಲ್ಲಿಯೂ ಮೇಲ್ಕಾಣಿಸಿದ ಆತ್ಮಬಲ ಸಂವರ್ಧಕಗುಣಗಳು ಉದಯವಾಗಿ ಪುಷ್ಟಗೊಳ್ಳದೆ ಇರಲಿಲ್ಲ. ಬರಬರುತ್ತ ಈ ಬ್ರಹ್ಮಚರ್ಯೆಯ ಬಲದಿಂದ ಇವನ ತೇಜವು ಹೆಚ್ಚಾಗ ಹತ್ತಿತು. ಆತ್ಮತೇಜವು ಬಲಗೊಳ್ಳಹತ್ತಿತು. ಹೀಗೆ ಶ್ರೀಚೆನ್ನವೀರದೇವನು ಶುದ್ಧಸಾತ್ವಿಕ ಬ್ರಹ್ಮಚರ್ಯೆಯಿಂದ ವಿದ್ಯಾವ್ಯಾಸಂಗವನ್ನು ಮಾಡುತ್ತಿರುವಾಗ ಇವನಿಗೆ ಎಷ್ಟೇ ಶ್ರಮವೆನಿಸಿದರೂ ತ್ರಿಕಾಲಶಿವಲಿಂಗಾರ್ಚನೆಯನ್ನು ಇವನು ಅಲಕ್ಷ್ಯ ಮಾಡುತ್ತಿದ್ದಿಲ್ಲ. ಭಕ್ತಿಭಾಂಡಾರಿಯಾದ ಬಸವಣ್ಣನವರು ಒಂದು ಪ್ರಸಂಗದಲ್ಲಿ ನುಡಿದಂತೆ—

ವನದಕೋಗಿಲೆ ಮನೆಗೆ ಬಂದರೆ ತನ್ನ ವನವ ನೆನೆವುದ ಮಾಣ್ಬುಹೇ?
ಮಲೆಯ ಗಜವು ಮನೆಗೆ ಬಂದರೆ ತನ್ನ ಮಲೆಯ ನೆನೆವುದ ಮಾಣ್ಬುದೇ?
ಕೂಡಲ ಸಂಗಮನ ಶರಣರು ಮರೆದು ಮರ್ತ್ಯಕ್ಕೆ ಬಂದರೆ ತಮ್ಮ ಆದಿಮಧ್ಯಾಂತರಂಗವ ನೆನೆವುದ ಮಾಣ್ಬರೇ?

ಎಂಬಂತೆ ಚೆನ್ನವೀರದೇವನ ಶಿವಲಿಂಗಾರ್ಚನೆಯ ವಿಷಯವಿತ್ತೆಂದು ವಾಚಕರ ಅವಗಾಹನೆಗೆ ತಂದುಕೊಟ್ಟರೆ ಅಪ್ರಾಸಂಗಿಕವೆನಿಸದು. ಇವನು ಸಕಾಲಕ್ಕೆ ಲಿಂಗಾರ್ಚನೆಯನ್ನು ತೀರಿಸಿಕೊಂಡು ನಿತ್ಯದ ಅಭ್ಯಾಸವನ್ನು ಮುಗಿಸಿದೊಡನೆ ಸತ್ವಾಹಾರವನ್ನು ಭೋಜನ ಮಾಡುತ್ತಿದ್ದನು. ಉಪನಿಷತ್ತಿನಲ್ಲಿ ಹೇಳಿದಂತೆ [ ಆಹಾರಶುದ್ಧೌ ಸತ್ವಶುದ್ಧಿಃ । ಸತ್ವಶುದ್ಧೌ ಧ್ರುವಾ ಸ್ಮೃತಿಃ । ಸ್ಮೃತಿಲಂಭೇ ಸರ್ವಗ್ರಂಥೀನಾಂ ಮೋಕ್ಷಃ ॥ ] “ ಆಹಾರವು

ಶುದ್ಧವಾಗಿದ್ದರೆ ಸ್ವಭಾವವು ಶುದ್ಧಿಯಾಗುತ್ತದೆ. ಇದರಿಂದ ಸ್ಮರಣಶಕ್ತಿಯು ದೃಢವಾಗುತ್ತದೆ, ತನ್ಮೂಲಕ ಭವಬಂಧವು ದೂರಾಗುತ್ತದೆ." ಕಾರಣ ಶಿವ ಸಾಯುಜ್ಯ ಪದವಿಯ ಸಾಧಕನಿಗೆ ಶುದ್ಧಸಾತ್ವಿಕ ಆಹಾರವು ಅವಶ್ಯವೆಂಬುದನ್ನು ಇವನು ಅರಿತಿದ್ದನು. ಇದರಿಂದ ಇವನು ಶುದ್ಧಸಾತ್ವಿಕ ಆಹಾರವನ್ನು ಸೇವಿಸುತಿದ್ದನೇ ಹೊರತು ಉಳಿದ ತಾಮಸ ಆಹಾರವನ್ನು ಮುಟ್ಟುತ್ತಿದ್ದಿಲ್ಲ.

ಈ ಮೇರೆಗೆ ಚೆನ್ನವೀರದೇವನು ಗದಗಿನಲ್ಲಿ ವಿದ್ಯಾವ್ಯಾಸಂಗವನ್ನು ಮಾಡುತ್ತಿದ್ದಾಗ ಇವನ ಶಿವಲಿಂಗಾರ್ಚನೆ ಹಾಗು ಸಾತ್ವಿಕಆಹಾರದ ಅನುಕೂಲತೆಯನ್ನು ಶಿವಕೃಪೆಗೆ ಪಾತ್ರರಾಗಿದ್ದ ಬುಳ್ಳಾ ಮಡಿವಾಳಪ್ಪನವರ ಮನಿಯವರೇ ವಿಶೇಷವಾಗಿ ಮಾಡುತ್ತಿದ್ದರು. ಬುಳ್ಳಾ ಮಡಿವಾಳಪ್ಪನವರು ಸ್ವಸಂಪಾದಿತ ಲಕ್ಷಾಧಿಪತಿಗಳು, ಬಹಳ ಪರೋಪಕಾರಿಗಳು. ಗುರುಲಿಂಗಮರ ಸೇವೆಯನ್ನು ಭಕ್ತಿಯಿಂದ ಮಾಡುವದರಲ್ಲಿ ಹೆಸರಾದವರು, ಕಾಶಿಯಲ್ಲಿ ಇಬ್ಬರು ಮಾಹೇಶ್ವರರ ಬಿನ್ನಹವು ಅವಿಚ್ಛಿನವಾಗಿ ನಡೆಯುವಂತೆ ಸಾವಿರ ಗಟ್ಟಿ ದಾನಮಾಡಿ ವ್ಯವಸ್ಥೆಮಾಡಿ ಬಂದ ಪುಣ್ಯಪುರುಷರು, ಶಾಂತಿ, ಕ್ಷಮೆ, ದಮೆ, ಭೂತದಯೆ ಶಿವಭಕ್ತಿ ಇವುಗಳು ಇವರಲ್ಲಿ ಮನೆಮಾಡಿಕೊಂಡಿದ್ದವು. ಇವರು ಸ್ವಸಾಮರ್ಥ್ಯದಿಂದ ಲಕ್ಷಾಂತರ ರೂಪಾಯಿಗಳನ್ನು ಸಂಪಾದಿಸಿದ್ದರೂ ಮಹಾವೈರಾಗ್ಯಶಾಲಿಗಳಾಗಿದ್ದರು. ಮಾತಿನಲ್ಲಿ ಖಂಡಿತವಾದಿಗಳು, ವೀರಭಕ್ತರು. ದೇವರು ಅಪಾರಸಂಪತ್ತನ್ನು ಕೊಟ್ಟಿದ್ದರೂ ಅದನ್ನು ಇವರು—

" ಭೂಮಿ ನಿನ್ನದಲ್ಲ; ಹೇಮ ನಿನ್ನದಲ್ಲ; ಕಾಮಿನಿ ನಿನ್ನದಲ್ಲ; ಅದು ಜಗಕ್ಕಿಕ್ಕಿದ ವಿಧಿ, ನಿನ್ನೊಡವೆ ಎಂಬುದು ಜ್ಞಾನರತ್ನ; ಅಂತಪ್ಪದಿವ್ಯರತ್ನವ ಕೆಡಗುಡದೆ ಆರತ್ನವ ನೀನಲಂಕರಿಸಿಯಾದೊಡೆ ನಮ್ಮ ಗುಹೇಶ್ವರಲಿಂಗನಲ್ಲಿ ನಿನ್ನಿಂದ ಬಿಟ್ಟು ಸಿರಿವಂತರಿಲ್ಲ; ಕಣಾ, ಎಲೆ ಮನವೇ " ಎಂಬ ಅಲ್ಲಮಪ್ರಭುದೇವರ ವಚನವನ್ನು ಅರಿತು ವರ್ತಿಸುತ್ತಿದ್ದರು. ಇವರಿಗೆ ದೇವರು ಆಯುರಾರೋಗ್ಯ—ಸಂತಾನಸಂಪತ್ತುಗಳನ್ನು ಸರಿಯಾಗಿ ಕೊಟ್ಟಿದ್ದರೂ " ಯಥಾಪದ್ಮ ಪಲಾಶಸ್ಯ ನಸಂಗೋ ವಾರಿಣಾ ಭವೇತ್ " ಎಂಬ ಉಕ್ತಿ

ಯಂತೆ ಇವರು ನಿರ್ಲಿಪ್ತರಾಗಿಯೇ ಇರುತ್ತಿದ್ದರು. ಇವರು ಯಾವಾಗಲೂ ಪರಮೇಶ್ವರನನ್ನು ಕುರಿತು,

" ಸಂಸಾರವೆಂಬ ಮಹಾವ್ಯಾಧಿ ಬಾಧಿಸಿ, ನಡೆಸೆಣನ ಮಾಡಿ ಕಾಡುತ್ತಿದೆ ನೋಡಯ್ಯಾ. ಮುಂದೆ ಸತ್ಪಥದಲ್ಲಿ ಅಡಿ ಇಡಲು ಶಕ್ತಿ ಇಲ್ಲದೆ, ಅಧಮರ ಮಾಡಿ ಕಾಡುತ್ತಿದೆ ನೋಡಯ್ಯಾ. ಶಿವನೇ ನಾನು ನಿನ್ನ ಬೇಡಿಕೊಂಬೆನು; ನೀನೇ ಶ್ರೀಗುರುವೆಂಬ ವೈದ್ಯನಾಗಿ ಬಂದು ಕೃಪಾಪ್ರಸಾದವೆಂಬ ಮದ್ದು ಕೊಟ್ಟು ಪಂಚಾಕ್ಷರಿಯೆಂಬ ಪಥ್ಯವನೆರೆದು ಸಂಸಾರವ್ಯಾಧಿಯ ಮಾಡಿಸಯ್ಯಾ; ನಿಮ್ಮಧರ್ಮ. ನಿಜಗುರು ಸ್ವತಂತ್ರ ಸಿದ್ಧೇಶ್ವರಾ "

ಎಂಬ ಶರಣರ ವಚನವಾಣಿಯನ್ನು ನೆನೆದು ಪ್ರಾರ್ಥಿಸುತ್ತಿದ್ದರು. ಮಡಿವಾಳಪ್ಪನವರು ಲಕ್ಷ್ಮೀಯ ಕೃಪಾಕಟಾಕ್ಷಕ್ಕೆ ಪಾತ್ರರಾಗಿದ್ದರೂ ನಿಜಪಾದ ಶಿವಭಕ್ತರಾತ, ಶಿವಶರಣರ ಉದಾತ್ತ ವಿಚಾರಗಳಿಂದೊಡಗೂಡದ ಮಧುರವಚನಸುಮನಗಳ ಮಕರಂದವನ್ನು ಸೇವಿಸುತ್ತ ಶಿವಯೋಗಿ ಶಿವಶರಣರಸೇವೆಯಲ್ಲಿಯೇ ಆಯುಷ್ಯವನ್ನು ಕಳೆಯುತ್ತಿದ್ದರು. ಇವರಿಗೆನಮ್ಮ ಚರಿತ್ರನಾಯಕರು ೩-೪ ವರ್ಷಗಳ ತಮ್ಮ ಪಾಲನ ಪೋಷಣೆಯ ಪುಣ್ಯವು ದೊರೆಯುವಂತೆ ಮಾಡಿ ಕೃತಾರ್ಥರನ್ನಾಗಿ ಮಾಡಿದರು.

**ಪಾಠಕ ಮಹಾಶಯರೇ,**

" ಅಂತರಂಗದಲ್ಲಿ ಅರಿವು, ಬಹಿರಂಗದಲ್ಲಿ ಶಮೆ ದಮೆ, ಸರ್ವಶಾಂತಿಯ ಎಡೆಗೊಂಡು, ತನ್ನ ನಂಬಿದ ಭಕ್ತರ ಭಾವಕ್ಕೆ ಜಂಗಮನಾಗಿ, ಪ್ರಾಣಕ್ಕೆ ಲಿಂಗಿಯಾಗಿ, ಕಾಯಕ್ಕೆ ಗುರುವಾಗಿ ಪ್ರಾಣಕ್ಕೆ ಬಂದ ಪದಾರ್ಥವ ಲಿಂಗಾರ್ಪಿತ ಮಾಡುತ್ತ ಬಾರದ ಪದಾರ್ಥವ ಮನದಲ್ಲಿ ನೆನೆಯದೆ, ಮಾನವರ ಬೇಡದೆ, ಬಡಭಕ್ತರ ಕಾಣದೆ ಒಡನೆ ಇಹ ಘನವನರಿದು, ದೃಢಭಕ್ತರೊಳು ಲಿಂಗವಾಗಿ, ಏನು ನುಡಿದರೂ ನಿಕ್ಷೇಪಿಸಿ, ನಿರ್ಗಮನಿಯಾಗಿಸುಳಿಯಬಲ್ಲರೆ ಆತ ಲಿಂಗ-ಜಂಗಮ;..........." ಎಂಬ ಶರಣರ ವಚನಕ್ಕೆ ತದ್ರೂಪವಾಗಿ ಹೋಲುವ ಶ್ರೀ ಚೆನ್ನವೀರದೇವರ ಲಿಂಗಾರ್ಚನೆ, ಬಿನ್ನಹಗಳಿಗೆ ಅನುಕೂಲ ಮಾಡಿದ ಮಡಿವಾಳಪ್ಪನವರು ಪರಮಧನ್ಯರು; ಇಂತಹ ಶಿವಯೋಗಿ, ಗುರುಲಿಂಗ ಜಂಗಮರ ಸೇವೆಗೈದ ಇವರ ಮನೆತನವು ಆ

ಚಂದ್ರಾರ್ಕವಾಗಿ ಸುಖದಿಂದ ಬಾಳಲೆಂದು ಪರಮೇಶ್ವರನನ್ನು ಪ್ರಾರ್ಥಿಸಿ ಮುಂದಿನಚರಿತ್ರೆಗೆ ಸಾಗುವೆವು.

ಈ ಮೇರೆಗೆ ನಮ್ಮ ಚರಿತ್ರನಾಯಕರು ಬುಳ್ಳಾ ಮಡಿವಾಳಪ್ಪನವರಂಥ ವೀರಶಿವಭಕ್ತರ ಪುಣ್ಯಸಂಗ್ರಹಕ್ಕೆ ಕಾರಣೀಭೂತರಾಗುತ್ತ ಗದಗಿನ ಸಂಸ್ಕೃತ ಪಾಠಶಾಲೆಯಲ್ಲಿ ಅಭ್ಯಾಸ ಮಾಡುತ್ತಿರುವಾಗ ಕೆಲವು ವರ್ಷಗಳು ಗತಿಸಲು ಮಡಿವಾಳಪ್ಪನವರ ತಂಗಿಯೂ, ಮಾನವಿ ದಂಡಪ್ಪನವರ ಧರ್ಮಪತ್ನಿಯೂ ಆದ ಅವ್ವ ರುದ್ರವ್ವನವರಿಗೆ ನಮ್ಮ ಚರಿತ್ರನಾಯಕರ ಅನೇಕ ಮಹಿಮೆಗಳು ತೋರಿದವು. ಆಗ ರುದ್ರಮ್ಮನವರೂ ಶ್ರೀ ಚೆನ್ನವೀರದೇವರ ದಿವ್ಯ ತಪಸ್ತೇಜವನ್ನು ನೋಡಿ ಮರಿದೇವರ ಲಿಂಗಾರ್ಚನೆ ಹಾಗು ಬಿನ್ನಹಗಳಿಗೆ ತಾವೂ ಎಡೆಗೊಟ್ಟು ಕೃತಾರ್ಥರಾಗಬೇಕೆಂದು ಮನಸ್ಸು ಮಾಡಿದರು.

ಈ ಅವ್ವರುದ್ರಮ್ಮನವರೆಂದರೆ ಕರ್ನಾಟಕದ ವೀರಶೈವ ಮನೆತನದಲ್ಲಿ ಪ್ರಸಿದ್ಧಿಯನ್ನು ಹೊಂದಿದವರೂ, ದಾನಶೂರರೂ ರಾವಬಹಾದ್ದೂರರೂ ಆದ ಗದಗಿನ ಈಗಿರುವ ಮಾನವಿ ಶಿವಪ್ಪನವರ ಮಾತೋಶ್ರೀಯವರು. ಇವರು ಅತ್ಯಂತಧರ್ಮಿಷ್ಠರು. ಶಿವಾಚಾರಸಂಪನ್ನರು ಗುರುಲಿಂಗ ಜಂಗಮರಲ್ಲಿ ಅತ್ಯಂತ ಶ್ರದ್ಧೆಯುಳ್ಳವರು. ರಾ. ಬ. ಸಿವಪ್ಪನವರಾದರೂ ಜನ್ಮತಃ ಚಟುವಟಿಕೆಯ ಸ್ವಭಾವದವರು; ತೀಕ್ಷ್ಣಬುದ್ಧಿಯುಳ್ಳವರು; ಸಮಾಜಹಿತದ ಕೆಲಸಗಳಲ್ಲಾಗಲಿ ಧರ್ಮಕೃತ್ಯಗಳಲ್ಲಾಗಲೀ ಇವರು ಎಷ್ಟುಮಾತ್ರಕ್ಕೂ ದುರ್ಲಕ್ಷಿಸುವವರಲ್ಲ; ಗದಗಿನಲ್ಲಿಯ ಹೆರಿಗೆಯ ಆಸ್ಪತ್ರಿಗೆ ೧೦ ಸಾವಿರ ರೂಪಾಯಿಗಳನ್ನು ನಿಷ್ಕಾಮಬುದ್ಧಿಯಿಂದ ಇವರು ದಾನಮಾಡಿರುವದರನ್ನು ನೋಡಿದರೆ ಇವರ ಉದಾರ ವೃತ್ತಿಯ ಕಲ್ಪನೆಯು ಬರಬಹುದು. ಇವರ ಚರಿತ್ರ ವಿಷಯವು ಅತ್ಯಂತ ಮಾನನೀಯವಾಗಿದ್ದರೂ ವಿಸ್ತಾರ ಭಯದಿಂದ ಬಿಟ್ಟುಕೊಟ್ಟು ಪ್ರಸ್ತುತವಿಷಯಕಡೆಗೆ ಹೊರಳುವೆವು

ಅವ್ವರುದ್ರಮ್ಮನವರ ಕಣ್ಣಿಗೆ ಶ್ರೀ ಚೆನ್ನವೀರಮರಿದೇವರ ಹಲವುಮಹಿಮೆಗಳು ತವರುಮನೆಯಲ್ಲಿ ಅನೇಕಸಾರೆ ತೋರಿದ್ದರೂ, ಪರಿಪಕ್ವಕಾಲವು ಮುಂದೆ ಒದಗಿಬಂದದ್ದರಿಂದ ಮರಿದೇವರ ಗದಗಿನ ಸಂಸ್ಕೃತ ವಿದ್ಯಾಸಂಗವು

ಮುಗಿ-ಮುಗಿಯುವ ಸಂಧಿಯಲ್ಲಿ ಇವರ ಸೇವೆಯು ಒದಗಲನುವಾಯಿತು. ಇಷ್ಟೇಅವಧಿಯಲ್ಲಿಇವರುಮುರಿದೇವರನ್ನುಪರಮಭಕ್ತಿಯಿಂದ ಕಾಣುತ್ತಲೂ. ಅವರ ಶಿವಲಿಂಗಾರ್ಚನೆ ಬಿನ್ನಹ ಮೊದಲಾದವುಗಳಿಗೆ ಅನುಕೂಲಮಾಡುತ್ತಲೂ, ತಮ್ಮ ಜನ್ಮವನ್ನು ಸಾರ್ಥಕಮಾಡಿಕೊಂಡರು ಮುರಿದೇವರು ರುದ್ರಮ್ಮನ ನಿರ್ಮಲಭಕ್ತಿಯೆಂಬ ಸೂಕ್ಷ್ಮದಕ್ಷಿಣೆಯಿಂದ ಸಂತುಷ್ಟರಾಗಿ ಇವರ ಮನೆತನದಮೇಲೆ ಸಂಪೂರ್ಣ ಅನುಗ್ರಹಮಾಡಿದರು. ಅಂತೇ ಇವರ ಮನೆತನಕ್ಕೆ ಪರಮೇಶ್ವರನು ಐಶ್ವರ್ಯ-ಆಯುರಾರೋಗ್ಯ-ಸಂತಾನಾದಿಗಳನ್ನು ಸಮೃದ್ಧಿಯಾಗಿಕೊಟ್ಟು ಭಾರತದ ವೀರಶೈವಮನೆತನದರವಲ್ಲಿ ಪ್ರಸಿದ್ಧರನ್ನಾಗಿ ಮಾಡಿರುವನು.

ಈ ಮೇರೆಗೆ ಚೆನ್ನವೀರದೇವರು ೧೭-೧೮ ವಯಸ್ಸಾಗುವ ವರೆಗೆ ಗದಗಿನ ಸಂಸ್ಕೃತ ಪಾಠಶಾಲೆಯಲ್ಲಿ ಅಧ್ಯಯನವನ್ನು ಮಾಡುತ್ತ ಸಿದ್ಧಾಂತ ಕೌಮುದಿಯನ್ನು ಮುಗಿಸಿ, ವೈದಿಕ ಹಾಗೂ ಸಂಸ್ಕೃತವಿದ್ಯೆಯಲ್ಲಿ ನಿಷ್ಣಾತರೆಂದು ಖ್ಯಾತಿಯನ್ನು ಪಡೆದರು. ಇವರ ಬುದ್ಧಿಯು ಬಹಳೇ ಕುಶಲವಾದದ್ದು. ಸ್ಮರಣಶಕ್ತಿಯು ಜಾಗೃತವಾದದ್ದು. ವಿಚಾರಶಕ್ತಿಯು ತೀಕ್ಷ್ಣವಾದದ್ದು. ಇಂದ್ರಿಯದಮನ, ಗುರ್ವಾಜ್ಞಾ ಪಾಲನ, ಶಿವತತ್ವನಿಷ್ಠೆ ಇವಂತೂ ಇವರಲ್ಲಿ ಮನೆಮಾಡಿಕೊಂಡಿದ್ದವು. ಇದರಿಂದ ಇವರು ಗದಗಿನ ಪಾಠಶಾಲೆಯಲ್ಲಿ ಸಾಗುತ್ತಿದ್ದ ಅಧ್ಯಯನವನ್ನೆಲ್ಲ ನಿರಾಯಾಸವಾಗಿ ಮುಗಿಸಿ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಕಾಶಿಗೆ ಹೋಗಬೇಕೆನ್ನುವ ತಮ್ಮ ವಿದ್ಯಾರ್ಜನೆಯ ಕ್ರುಧೆಯನ್ನು ಶ್ರೀ ತೋಂಟದ ಸ್ವಾಮಿಗಳ ಹಾಗು ಅವ್ವ ರುದ್ರಮ್ಮನವರ ಮುಂದಿಟ್ಟರು ಕಾಶಿಗೆ ಹೋಗುವ ಮುಂದೆ ಇವರಲ್ಲಿ ಉದ್ಭವಿಸಿದ ವೈರಾಗ್ಯವು ಪ್ರತ್ಯಕ್ಷ ಇಂದ್ರನು ಬಂದು ಐಶ್ವರ್ಯವನ್ನು ಕೊಡುವೆನೆಂದು ಹೇಳಿದರೂ ತಿರುಗದಷ್ಟು ಪ್ರಖರವಾಗಿತ್ತು. ರುದ್ರಮ್ಮನವರು ಮುರಿದೇವರಿಗೆ ಕಾಶೀ ಪ್ರಯಾಣವನ್ನು ಶ್ರೀ ತೋಂಟದ ಸ್ವಾಮಿಗಳ ಅಪ್ಪಣೆಯಂತೆ ಮಾಡ ಬಹುದೆಂದು ಹೇಳಿ ಖರ್ಚಿನಬಗ್ಗೆ ಹಿಡಿದಷ್ಟು ಸಲ್ಲುವೆಂದು ಆಶ್ವಾಸನವನ್ನಿತ್ತರು. ಶ್ರೀ ತೋಂಟದಾರ್ಯ ಸಿದ್ಧಲಿಂಗಾರ್ಯ ಸ್ವಾಮಿಗಳು ಧೂರ್ತರೂ, ಚಾಣಾಕ್ಷರೂ, ಇದ್ದುದರಿಂದ ಮುರಿದೇ

ವರ ಬಯಕೆಯನ್ನು ಮನದಂದು ವೀರಶೈವ ಮತಕ್ಕೆ ಮುಕುಟ ಪ್ರಾಯ ನಾಗುವ ಈ ವಿಭೂತಿಯಲ್ಲಿ ವೀರ ಧರ್ಮಶಾಸ್ತ್ರದಲ್ಲಿ ಹೇಳಲ್ಪಟ್ಟ

ಆತ್ಮ ತತ್ವ ವಿಚಾರಜ್ಞಂ ವಿಮುಕ್ತಂ ವಿಷಯಭ್ರಮಂ|
ಶಿವಸಿದ್ಧಾಂತ ತತ್ವಜ್ಞಂ ಛಿನ್ನಸಂದೇಹ ವಿಭ್ರಮಂ||
ಸರ್ವತಂತ್ರ ಪ್ರಯೋಗಜ್ಞಂ ಧಾರ್ಮಿಕಂ ಸತ್ಯವಾದಿನಂ|
ಕುಲಕ್ರಮಾ ಗತಾಚಾರಂ ಕುಮಾರ್ಗಾಚಾರ ವರ್ಜಿತಂ||

ಈ ಶಿವಲಕ್ಷಣಗಳು ವಿರಾಜಿಸುತ್ತವೆ. ಕಾರಣ ವೀರಶೈವ ಮತಾಬ್ಧಿ ಚಂದ್ರನಂತಿರುವ ಈ ವಿಭೂತಿಗೆ ಉಚ್ಚತರಗತಿಯ ಸಂಸ್ಕೃತ ಶಿಕ್ಷಣ ಕೊಡಿ ಸುವದು ಅತ್ಯವಶ್ಯವೆಂದು ಮಾನವಿಯ ಅವ್ವ ರುದ್ರಮ್ಮನವರಿಗೂ ಇವರ ಮಗ ವಿರುಪಾಕ್ಷಪ್ಪನವರಿಗೂ ಇಂಗಳಹಳ್ಳಿ ರಾಚಪ್ಪನವರೇ ಮೊದಲಾದ ವೀರಶೈವ ಪ್ರಮುಖರಿಗೂ ತಿಳಿಸಿದರು. ಅವ್ವ ರುದ್ರಮ್ಮನವರಂತೂ ಶ್ರೀ ತೋಂಟದ ಸ್ವಾಮಿಗಳ ಅಪ್ಪಣೆಯಾದರೆ ಕಾಶಿಯಖರ್ಚನ್ನು ಶ್ರೀಚೆನ್ನವೀರ ದೇವರಿಗೆ ಸಲ್ಲಲು ಸಿದ್ಧರಾಗಿಯೇ ಇದ್ದರು. ಶ್ರೀ ತೋಂಟದ ಸ್ವಾಮಿಗಳ ಅ ಪ್ಪಣೆ ದೊರೆತೊಡನೆ ನಮ್ಮ ಚರಿತ್ರನಾಯಕರು ಡಂಬಳದಿಂದ ದೊರೆತಷ್ಟು ಹಣ ಸ್ವೀಕರಿಸಿದರು. ವಿಶ್ವೇಶ್ವರ ಅಭಿಷೇಕಕ್ಕಾಗಿ ಭಕ್ತರು ೨-೪-೫-೧೦ ರೂಪಾಯಿಗಳಂತೆ ಕೊಟ್ಟ ನೂರಾರು ರೂಪಾಯಿಗಳನ್ನು ಸಂಗ್ರಹ ಮಾಡಿ ಕೊಂಡರು. ರುದ್ರಮ್ಮನವರಿಗೆ ಕಾಶಿಗೆ ಹಣ ಕಳಿಸಲು ತಿಳಿಸಿ ಮುಂಡರಗಿ ಪಟ್ಟದ ದೇವರನ್ನೂ ಸೊಲ್ಲಾಪುರದಲ್ಲಿಯ ಮಹಾಲಿಂಗಯ್ಯರೆಂಬವರನ್ನೂ ಆಶ್ರಯಕೊಟ್ಟು ಸಂಗಡ ಕರಕೊಂಡು ಕಾಶಿಗೆ ಪ್ರಯಾಣ ಬೆಳೆಸಿದರು.

# ೫ನೇ ಅಧ್ಯಾಯ.

## ಕಾಶಿಯಲ್ಲಿಯ ವಿದ್ಯಾರ್ಜನೆಯೂ, ಲೋಕಮಾನ್ಯ ಟಿಳಕ ಪ್ರಭೃತಿಗಳೂ.

ಸ್ವಾಧ್ಯಾಯಾನ್ಮಾಪ್ರಪದ । ಆಚಾರ್ಯದೇವೋಭವಂ
(ತೈ. ಉ. ೧। ೧೦। ೩-೭)

ಸಂಸ್ಕೃತ ವಿದ್ಯೆಗೆ ಮಾತೃಸ್ಥಾನವೆನಿಸಿ ಅಖಿಲ ಭರತಖಂಡದಲ್ಲಿ ವಿಖ್ಯಾತವೆನಿಸಿದ ಪುಣ್ಯಕ್ಷೇತ್ರವೆಂದರೆ ಶ್ರೀಕಾಶಿಯೆಂದು ಹೇಳಬಹುದು. ಗದಗಿನ ವೀರಶೈವ ಮಹನೀಯರಿಂದ ಕಳಿಸಲ್ಪಟ್ಟ ಚೆನ್ನವೀರದೇಶಿಕರು ಕಾಶಿಯಲ್ಲಿದಶಾಶ್ವಮೇಧಘಾಟವೆಂಬ ಪುಣ್ಯಸ್ಥಳದಲ್ಲಿ ವಿರಾಜಿಸುವ ಜಗದ್ಗುರು ವಿಶ್ವಾರಾಧ್ಯ ಪೀಠಾಧೀಶರಾದ ಜಗದ್ಗುರು ಶ್ರೀರಾಜೇಶ್ವರ ಮಹಾಸ್ವಾಮಿಗಳ ಮಠದಲ್ಲಿದ್ದು ತಮ್ಮ ವಿದ್ಯಾಭ್ಯಾಸವನ್ನು ಮುಂದರಿಸತೊಡಗಿದರು.

ಶ್ರೀ ಕಾಶೀಕ್ಷೇತ್ರದಲ್ಲಿರುವ ಜಗದ್ಗುರು ವಿಶ್ವಾರಾಧ್ಯರ ಮಠವು ಬಹು ಪುರಾತನಕಾಲದ್ದು. ಈ ಪೀಠದ ಮೂಲಪುರುಷರಾದ ಜಗದ್ಗುರು ಶ್ರೀವಿಶ್ವಾರಾಧ್ಯರ ಅವತಾರವು ಕಾಶಿಯಲ್ಲಿಯ ವಿಶ್ವೇಶ್ವರಲಿಂಗದಿಂದ ಆಯಿತೆಂದು * ಸ್ವಯಂಭೂ ಆಗಮದಲ್ಲಿ ವರ್ಣಿತವಾಗಿದೆ. ಈ ಪವಿತ್ರ ಸ್ಥಾನದ ಮಹಿಮೆಯು ಕಾಶೀಖಂಡದಲ್ಲಿ ಅನೇಕರೀತಿಯಿಂದ ವರ್ಣಿಸಲ್ಪಟ್ಟಿರುವದು. ಈ ಸ್ಥಾನದಲ್ಲಿ ಅನೇಕ ಮಹಾತ್ಮರು ವಸತಿಯಾಗಿದ್ದುಕೊಂಡು ಶಿವಯೋಗ ತಪಾನುಷ್ಠಾನುಗಳನ್ನು ಆಚರಿಸಿ ಕೃತಾರ್ಥರಾಗಿರುವರು. ಇವರಲ್ಲಿ ಶ್ರೀಬಸವೇಶ್ವರರಕಾಲದ ಕಲಿಕೇತ ಬ್ರಹ್ಮಯ್ಯನೆಂಬವರೊಬ್ಬರು ಪ್ರಾಮುಖ್ಯರಾಗಿರುವರು. ಇವರುಶೂನ್ಯಸಿಂಹಾಸನಾಧೀಶರಾದ ಆದ್ಯಜಗದ್ಗುರು ಅಲ್ಲಮಪ್ರಭುದೇವರ ಮುಖ್ಯ ಶಿಷ್ಯರಲ್ಲಿ ಒಬ್ಬರು. ಪ್ರಭುದೇವರಿಂದ ಮತಪ್ರಸಾರ ಮಾಡಲು ಅನುಜ್ಞೆಯನ್ನು ಹೊಂದಿದ ಮೇಲೆ ಇವರು ಶ್ರೀಶೈಲಾದಿ ಕ್ಷೇತ್ರಗಳನ್ನು ಸಂಚರಿಸಿ ಕಾಶಿಗೆ ಆಗಮಿಸಿದರು. ÷ ಆಗ ಕಾಶಿಯನ್ನು ರಜಪೂತ

---

* ಕಾಶ್ಯಾಂ ವಿಶ್ವೇಶ್ವರೇಲಿಂಗೇ ವಿಶ್ವಾರಾಧ್ಯಸ್ಯಸಂಭವಃ ।
ಸ್ಥಾನಂ ಶ್ರೀ ಕಾಶಿಕಾಕ್ಷೇತ್ರೇ ಶೃಣುಪಾರ್ವತಿ ಸಾದರಂ ॥

÷ ಶ್ರೀ ಮರಿತೋಂಟದಾರ್ಯರಿಂದ ರಚಿತವಾದ ವೀರಶೈವಾನಂದ ಚಂದ್ರಿಕೆಯು ೧೦ನೇ ಪ್ರಕರಣ.

ಕುಲದ † ಜಯಚಂದನೆಂಬ ಅರಸನು ಆಳುತ್ತಿದ್ದನು. ಪ್ರಭುದೇವರ ಅನುಗ್ರಹಬಲದಿಂದ ಕಲಿಕೇತ ಬ್ರಹ್ಮಯ್ಯನವರು ಇವನನ್ನು ಮೆಚ್ಚಿಸಿ ಹರಿಕೇಶವಾನಂದವನವೆಂಬ ಸ್ಥಳವನ್ನು ಮೆಚ್ಚುಗೆ ಪಡೆದು ಶ್ರೀ ವಿಶ್ವಾರಾಧ್ಯರ ಪೀಠಕ್ಕಾಗಿ ಒಂದು ದೊಡ್ಡ ಮಠವನ್ನು ಕಟ್ಟಿಸಿದರು. ಮುಂದೆ ಅಲ್ಲಮಪ್ರಭುದೇವರನ್ನು ಪೂಜಿಸಿ ಅವರ ಕೃಪೆಯನ್ನು ಸಂಪಾದಿಸಿ ಸಂಗಡ ಬಂದಿದ್ದ ಮಲ್ಲಿಕಾರ್ಜುನದೇವರೆಂಬ ಮಾಹೇಶ್ವರರಿಗೆ ಈ ಪಟ್ಟವನ್ನು ಕಟ್ಟಿ ತಾವು ಆ ಮಠದ ನಡುವಿನ ಸ್ತಂಭದಲ್ಲಿ ಶಿವಯೋಗದಲ್ಲಿ ಕುಳಿತು ಅಂತರ್ಧಾನರಾದರು ‡ ಈ ಮಠಕ್ಕೆ ೨೬ ಗ್ರಾಮಗಳೂ ಜಂಗಮವಾಡಿ ಎಂಬ ಮೊಹಲ್ಲೆಯೂ, ಜಾಹಗೀರುಗಳಿರುತ್ತವೆ. ಇಂತಹ ಲೋಕಮಾನ್ಯವಾದ ಮಠದಲ್ಲಿದ್ದು ನಮ್ಮ ಚರಿತ್ರನಾಯಕರಾದ ಚೆನ್ನವೀರದೇಶಿಕರು ತಮ್ಮ ಸಂಸ್ಕೃತ ಪಾಠಾಭ್ಯಾಸವನ್ನು ಕೈಕೊಂಡರು. ಆಗ ಈ ಜಗದ್ಗುರು ಪೀಠವನ್ನು "ಕಾಶ್ಯಾಂ ವಿಸ್ತರಿತಂಯೇನ ವೀರಶೈವ ಮತಂಪರಂ | ದಯಾಳುಃ ಶಿವಯೋಗೀಚ ಸೋಯಂರಾಜೇಶ್ವರೋಯಮಿಃ ||" ಎಂದು ನುತಿಸಲ್ಪಟ್ಟ ಶ್ರೀ ೧೦೮ ಜಗದ್ಗುರುರಾಜೇಶ್ವರ ಶಿವಾಚಾರ್ಯರೆಂಬ ಮಹಾಸ್ವಾಮಿಗಳು ಅಲಂಕರಿಸಿದ್ದರು. ಈ ಅವಧಿಯಲ್ಲಿ ನಮ್ಮ ಚರಿತ್ರನಾಯಕರಕಾಶಿವಾಸಕ್ಕೂ ವಿದ್ಯಾವ್ಯಾಸಂಗಕ್ಕೂ ಅನೇಕತರದ ವಿಘ್ನಗಳು ಬಂದವು. ಅವನ್ನೆಲ್ಲ ಶ್ರೀ ೧೦೮ ಜಗದ್ಗುರು ಶ್ರೀ-ಶ್ರೀಗಳು ಲೆಕ್ಕಿಸದೆ ಶ್ರೀ ಚೆನ್ನವೀರ ದೇಶಿಕರ ಮೇಧಾಶಕ್ತಿಯನ್ನೂ ಸಂಸ್ಕೃತವಿದ್ಯೆಯಪ್ರಾವಿಣ್ಯತ್ವವನ್ನೂ ಮನದಂದು, ಅನಾಯಾಸವಾಗಿ ನಮ್ಮ ಮಠಕ್ಕೆ ಬಂದ ಈ ಮಹಾವಿಭೂತಿಗೆ ತಕ್ಕ ಅನುಕೂಲತೆಗಳನ್ನು ಮಾಡುವದು ನಮ್ಮ ಕರ್ತವ್ಯವೆಂದು ತಿಳಿದು ಇವರ ವಿದ್ಯಾರ್ಜನೆಗೆ ಸಹಾಯ ಮಾಡಿದರು.

ಶ್ರೀ ಚೆನ್ನವೀರದೇಶಿಕರು ತಮ್ಮ ಬುದ್ಧಿ ಪರಾಕ್ರಮದಿಂದಲೂ, ಶಿವಯೋಗ ಶಿವಲಿಂಗಾನುಷ್ಠಾನದ ಬಲದಿಂದಲೂ, ಶ್ರೀ—ಶ್ರೀ-ರಾಜೇಶ್ವರ ಮಹಾಸ್ವಾಮಿಗಳ ಹಾಗು ಕ್ವೀನ್ಸಕಾಲೇಜದೊಳಗಿನ ಪಾಠಾಧ್ಯಾಪಕರ ಪ್ರೇಮಾದರಗಳಿಗೆ ಪಾತ್ರರಾಗಿ ವಿದ್ಯೆಯಲ್ಲಿ ಅದ್ವಿತೀಯ ಪ್ರಾವೀಣ್ಯತೆಯನ್ನು

---

† ಕೆಳದಿಯ ನೃಪವಿಜಯ ಪುಟ ೫೯ ರಲ್ಲಿಯ ವಚನ.

‡ ವೀರಶೈವಮಾತಾಚಾರ್ಯರ ಕಾಲನಿರ್ಣಯ, ಪುಟ ೬೫.

ತೋರಿಸಹತ್ತಿದರು. ಕೆಲದಿನಗಳಲ್ಲಿ * ಚತುರ್ದಶ ವಿದ್ಯೆಗಳಲ್ಲಿ ಪಾಂಡಿತ್ಯ ವನ್ನು ಪಡೆದು "ಸರ್ವವೇದೇಷು ಯದೃಷ್ಟಂ ತತ್ಸರ್ವಂತು ಶಿವಾಗಮೇ" ಎಂದು ವೀರಾಗಮದಲ್ಲಿ ಹೇಳಿದಂಥ ಶಿವಾಗಮಗಳನ್ನು ಅಭ್ಯಾಸಿಸಿದರು. ಶಿವಾಗಮಗಳೆಂದರೆ ಶಿವನಿಂದ ಹೇಳಲ್ಪಟ್ಟ ಶಾಸ್ತ್ರವು. ಈ ಆಗಮಗಳಿಗೆ ತಂತ್ರಗಳೆಂಬ ಇನ್ನೊಂದು ಹೆಸರೂ ಉಂಟು. ಇದಕ್ಕೆ "ತನೋತಿ ವಿಪುಲಾನರ್ಥಾನ್ ತತ್ವಮಂತ್ರ ಸಮಾಶ್ರಿತಾನ್ ತ್ರಾಣಂಚ ಕುರುತೇ ಯಸ್ಮಾತ್ ತಂತ್ರ ಮಿತ್ಯಾಭಿಧೀಯತೇ ॥ ಎಂದು ನಿರ್ವಚನವಿದೆ ಅಂದರೆ ಶಿವನಿಂದ ಭೂಮಿಯವರೆಗಿನ ೩೬ ತತ್ವ ಹಾಗು ಮಂತ್ರಗಳಸಂಬಂಧವಾದ ವಿಷಯಗಳನ್ನು ಇವು ಬೋಧಿಸುವವು. ಇದಕ್ಕೂ ಹೆಚ್ಚಿನ ಮಹಿಮೆಯನ್ನು ಆಗಮದಲ್ಲಿ ಕಾಣಬಹುದು. ಇವು ಕಾಮಿಕಾದಿವಾತುಲಾಂತ ೨೮ ಉಂಟು. ಇವೆಲ್ಲವುಗಳನ್ನು ನಮ್ಮ ಚರಿತ್ರನಾಯಕರು ಅವಿಶ್ರಾಂತವಾಗಿ ಅಭ್ಯಾಸಿಸಿ ನೈಪುಣ್ಯವನ್ನು ಸಂಪಾದಿಸಿದರು. ಇದನ್ನೆಲ್ಲ ಪಾಠಶಾಲೆಯ ಅಧ್ಯಾಪಕರೂ, ಜಗದ್ಗುರು ರಾಜೇಶ್ವರಸ್ವಾಮಿಗಳೂ ಕಂಡು ಶ್ರೀಚೆನ್ನವೀರ ದೇಶಿಕರು ಲೋಕೋತ್ತರ ವಿಭೂತಿಯೆಂದು ತಲೆದೂಗಿದರು. ಹಾಗೂ ಈ ಮೂರ್ತಿಯು ಸಾಮಾನ್ಯ ಮನುಷ್ಯನಾಗಿರದೆ ಶಿವಾಂಶಸಂಭೂತನೆಂದು ಪರಿಗಣಿಸಿದರು. ಇವರ ಸಹಾಧ್ಯಾಯಿಗಳು ಸಹ ಇವರ ತಪಃಪ್ರಭಾವದಿಂದಲೂ ನಿಕಟಸಹವಾಸದಿಂದಲೂ ಶಿವಾಚಾರನಿಷ್ಠರೂ ವಿದ್ಯಾಸಂಪನ್ನರೂ ಆದರು.

ನಮ್ಮ ಚರಿತ್ರನಾಯಕರು ಹೀಗೆ ವಿದ್ಯಾಲಯದಲ್ಲಿದ್ದಾಗ ಸಹಾಧ್ಯಾಯಿಗಳಿಗೂ, ಅಧ್ಯಾಪಕರಿಗೂ ಪ್ರಿಯರಾಗಿದ್ದಂತೆ ವಿದ್ಯಾಲಯಕ್ಕೆ ಹೊರಗಿಂದ ಬಂದು ಭೆಟ್ಟಿಕೊಟ್ಟು ಹೋಗುವ ಮಹನೀಯರಿಗೂ ಇವರು ವಿದ್ಯೆಯ ವರ್ಚಸ್ಸಿನಿಂದಲೂ, ಪ್ರಸನ್ನಮುದ್ರೆಯಿಂದಲೂ, ಪ್ರಿಯರಾಗುತ್ತಿದ್ದರು. ಯಾಕಂದರೆ ಇವರಮೋರೆಯ ಮೇಲಿನ ಶಿವಕಳೆಯ ತೇಜಸ್ಸೇ ಅಷ್ಟೊಂದು ಪ್ರಖರವಾಗಿತ್ತು. "ಗುಣಾಃ ಪೂಜಾಸ್ಥಾನಂ ಗುಣಿಷು ಲಿಂಗಂ ನಚವಯಃ" ॥ ಎಂಬಂತೆ ಕಾಶಿಗೆ ಹೋದ ಲೋಕೋತ್ತರ ಪುರುಷರೆಲ್ಲ ನಮ್ಮ ಚರಿತ್ರನಾಯಕರ ವಿದ್ಯಾನಿಲಯಕ್ಕೆ ಬಂದು ಇವರನ್ನು ಕಂಡು ಧನ್ಯೋದ್ಗಾರಗಳನ್ನು

* ಚತುರ್ದಶವಿದ್ಯೆಗಳೆಂದರೆ– ಪುರಾಣನ್ಯಾಯ ಮೀಮಾಂಸಾ ಧರ್ಮಶಾಸ್ತ್ರಾಂಗ ಮಿಶ್ರಿತಾಃ। ವೇದಾಸ್ಥಾನಾನಿ ವಿದ್ಯಾನಾಂ ಧರ್ಮಸ್ಯಚ ಚತುರ್ದಶ ॥ (ಯಾಜ್ಞವಲ್ಕ್ಯ ಸ್ಮೃತಿ)

ತೆಗೆಯದೆ ಹೋಗುತ್ತಿದ್ದಿಲ್ಲ. ಇಂಥ ಪ್ರಸಂಗವು ಲೋಕಮಾನ್ಯ ಬಾಳ ಗಂಗಾಧರ ಟಿಳಕ ಪ್ರಭೃತಿಗಳಿಗೂ ಒಮ್ಮೆ ಉಂಟಾಯಿತೆಂದು ವಾಚಕರ ಮಾದರಿಸಲು ನಮಗೆ ಆನಂದವೆನಿಸುತ್ತದೆ.

ಯಾರಾದರೂ ಲೋಕೋತ್ತರ ಪುರುಷರು ಕಾಶಿಗೆ ಬಂದರೆ, ಅವರನ್ನು ತಮ್ಮ ಛಾತ್ರ ನಿಲಯಕ್ಕೆ ಬರಮಾಡಿಕೊಂಡು ಅವರ ಜ್ಞಾನದ ಲಾಭವನ್ನು ಸಹಾಧ್ಯಾಯಿಗಳಿಗೆ ಮಾಡಿಕೊಡುವದು ನಮ್ಮ ಚರಿತ್ರನಾಯಕರ ಕ್ರಮವಿತ್ತು. ತದನುಸಾರ ಒಮ್ಮೆ ಲೋಕಮಾನ್ಯ ಬಾ. ಗ. ಟಿಳಕ ಪ್ರಭೃತಿಗಳು ಕಾಶಿಗೆ ಆಗಮಿಸಿದಾಗ ನಮ್ಮ ಚರಿತ್ರನಾಯಕರ ಪ್ರೇರಣೆಯಿಂದ ಛಾತ್ರನಿಲಯದ ಬೆಟ್ಟಿಗೆ ಇವರಿಗೆ ಕರೆಬರಲು, ಲೋಕಮಾನ್ಯರ ಆಗಮನವಾಯಿತು. ಇವರು ಮೊದಲು ಛಾತ್ರನಿಲಯದಲ್ಲಿಯ ವ್ಯವಸ್ಥೆಯನ್ನು ನೋಡಿ ಆನಂದಬಟ್ಟರು. ಆಮೇಲೆ ಅಲ್ಲಿಯ ವಿದ್ಯಾರ್ಥಿಗಳಲ್ಲಿ ಅಗ್ರೇಸರರೆಂದೆನಿಸಿದವರೂ, ವಿದ್ಯಾ ನೀತಿಸೌಜನ್ಯದಿಂದ ಯುಕ್ತರಾದವರೂ, ಶಮದಮಾದಿ ಗುಣಸಂಪತ್ತಿನಿಂದ ಕೂಡಿದವರೂ ಆದ ಚೆನ್ನವೀರದೇಶಿಕರ ವಿದ್ಯಾವೈಭವವನ್ನೂ ಮುಖದ ಮೇಲಿನ ಅದ್ವಿತಿಯ ತೇಜಸ್ಸನ್ನೂ ಕಂಡು ಇವರು ಲೋಕೋತ್ತರ ಪುರುಷರೂ ವೀರಶೈವಸಮಾಜದ ಮುಕುಟಮಣಿಗಳೂ ಆಗುವರೆಂದು ಹರ್ಷೋದ್ಗಾರಗಳನ್ನು ತೆಗೆದರು. ಹಾಗು ವೀರಶೈವಾಚಾರ ಕೌಸ್ತುಭಮಣಿಯಲ್ಲಿ ಹೇಳಿದಂಥ

ಕುಲೀನಂ ಸತ್ಯ ಸಂಧಾನಂ ಸರ್ವಲಕ್ಷಣ ಸಂಯುತಂ ।
ಶಿವಸಿದ್ಧಾಂತ ತತ್ವಜ್ಞಂ ಗುರುಕ್ರಮ ಸಮನ್ವಿತಂ ॥
ಲಕ್ಷಣೈಸ್ತಂ ಪರೀಕ್ಷೇತ ಬಹುಶಾಸ್ತ್ರ ಕೋವಿದಃ ॥

ಎಂಬ ಈ ಲಕ್ಷಣಗಳುಳ್ಳ ಚರಿತ್ರನಾಯಕರನ್ನು ಕಂಡು ಲೋಕಮಾನ್ಯರು ಧನ್ಯವಾದಗಳನ್ನು ಅರ್ಪಿಸಿ, ಇವರ ಭಾವೀ ಕಲ್ಯಾಣವನ್ನು ಚಿಂತಿಸಿ ಅಂದಿನ ಸಭೆಯಲ್ಲಿ ವಿದ್ಯಾರ್ಥಿಗಳನ್ನು ಕುರಿತು ಉದ್ಬೋಧಕ ಭಾಷಣದಿಂದ ಶ್ರೋತೃಗಳಿಗೆ ಜ್ಞಾನಾಮೃತವನ್ನುಣಿಸಿದರು. ಇದು ಮಾನನೀಯವಾಗಿರುವದರಿಂದ ಇದರ ಸಾರಾಂಶವನ್ನು ಇಲ್ಲಿ ಕೊಡುತ್ತೇವೆ.

ಲೋಕಮಾನ್ಯರು ಆ ಛಾತ್ರನಿಲಯದ ಉತ್ತಮಸ್ಥಿತಿಯನ್ನು ಕುರಿತು



ಲೋಕಮಾನ್ಯ. ಬಾ. ಗ. ಟಿಳಕ.

PUBLISHED BY N. H. HOSUR MANAGER VIDYARANYA GRANTHMALA OFFICE MULGUND

ಮೊದಲು ಒಂದೆರಡು ಮಾತುಗಳನ್ನಾಡಿದ ಮೇಲೆ ಅಂದದ್ದೇನಂದರೆ— "ನಾನು ಇನ್ನು ವಿದ್ಯಾರ್ಥಿ-ಧರ್ಮದ ವಿಷಯವಾಗಿ ಕೆಲವು ಮಾತುಗಳನ್ನು ಹೇಳುತ್ತೇನೆ. ಈ ಧರ್ಮವು ಎಷ್ಟು ಕಠಿಣವಾಗಿರುವದೋ ಅಷ್ಟೇ ಸುಲಭವೂ ಇದೆ. ವೇದಧರ್ಮದಲ್ಲಿ ಹೇಳಿದಂತೆ ವಿದ್ಯಾರ್ಥಿಯು ಯಾವಾಗಲೂ ಬ್ರಹ್ಮಚರ್ಯದಿಂದಿರಬೇಕು. ಅಂದರೆ ವಿದ್ಯಾರ್ಥಿದೆಶೆಯೇ ಬ್ರಹ್ಮಚರ್ಯಾಶ್ರಮವು. ಕೇವಲ ಲಗ್ನವಾಗದಿರುವದು, ಬ್ರಹ್ಮಚರ್ಯೆಯಾಗಿರದೆ ಮನೋವಾಕ್ಕಾಯಗಳಿಂದ ಇಂದ್ರಿಯನಿಗ್ರಹವನ್ನು ಮಾಡುವದೇ ಬ್ರಹ್ಮಚರ್ಯೆಯು. ಈ ಆಶ್ರಮದಲ್ಲಿ ವಿದ್ಯಾರ್ಥಿಯು ಸಂಗ್ರಹ ಮಾಡಿಕೊಳ್ಳುವದೇ ಬಹಳವಿರುವದು, ಇವನು ಈ ಆಶ್ರಮದಲ್ಲಿ ತಂದೆ ತಾಯಿ ಗುರುಹಿರಿಯರಿಂದ ಶಕ್ಯವಿದ್ದಷ್ಟು ವಿಷಯಗಳನ್ನು ಗ್ರಹಣ ಮಾಡಬೇಕು. ವಿದ್ಯಾಭ್ಯಾಸವು ಮುಗಿದ ಬಳಿಕ ಗುರುಗಳಿಗೆ ದಕ್ಷಿಣೆಯನ್ನು ಅರ್ಪಿಸಿ ಅವರ ಅನುಗ್ರಹವನ್ನು ಸಂಪಾದಿಸಿಕೊಂಡು ಹೋಗಬೇಕು.

ಈಗ ಬ್ರಹ್ಮಚರ್ಯ, ಗ್ರಹಸ್ಥ, ವಾನಪ್ರಸ್ಥ, ಸಂನ್ಯಾಸ ಈ ಆಶ್ರಮಗಳು ಹೆಸರಿಗೆ ಮಾತ್ರ ಉಳಿದಿರುವವು ಇವುಗಳ ಪವಿತ್ರತೆಯಂತೂ ಗುಪ್ತವಾಗಿ ಹೋಗಿದೆ. ಇದಕ್ಕೆ ಕಾರಣವೆಂದರೆ ವಿದ್ಯಾರ್ಥಿಗಳಲ್ಲಿಯ ಬ್ರಹ್ಮಚರ್ಯೆಯ ಅಭಾವವೇ ಮೊದಲನೆಯದೆಂದು ಹೇಳಬಹುದು. ಪೂರ್ವಕಾಲದಲ್ಲಿಯ ಋಷ್ಯಾಶ್ರಮಗಳು ಈಗ ಕಾಣದಿದ್ದರೂ ಅವುಗಳ ಉಚ್ಚಧ್ಯೇಯವನ್ನು ಮುಂದಿಟ್ಟುಕೊಂಡು ನಾವು ಕಾರ್ಯವನ್ನು ಮಾಡತಕ್ಕದ್ದು. ಪೂರ್ವಜರ ಉಚ್ಚಧ್ಯೆಯವನ್ನು ನಾವು ತ್ಯಜಿಸಿದ್ದರಿಂದಲೇ ನಾವು ಬಹಳ ಅಧಃಪತನವನವನ್ನು ಹೊಂದಿರುವೆವು. ಇದರಿಂದ ವಿದ್ಯೆ ಜ್ಞಾನಗಳ ದುರುಪಯೋಗವಾಗಿ ವಿದ್ಯಾರ್ಥಿಗಳಲ್ಲಿ ಕಾಣಬರತಕ್ಕ ಶಾಂತಿ ಸಮಾಧಾನಗಳೂ ವಿವೇಕವೂ, ಈಗ ಕಾಣದಾಗಿವೆ ವಿದ್ಯಾರ್ಥಿದೆಶೆಯಲ್ಲಿ ಯಾವ ತೊಂದರೆಯೂ, ಚಿಂತೆಯು ಇರಕೂಡದು. ವಿಧ್ಯಾರ್ಥಿಗಳು ಕೇವಲ ಜ್ಞಾನಾರ್ಜನೆಯನ್ನು ಮಾಡಬೇಕು. ಸತ್ಯಾ-ಸತ್ಯ, ಯೋಗ್ಯಾ ಯೋಗ್ಯ, ವಿಚಾರಗಳನ್ನು ವಿಂಗಡಿಸಲಿಕ್ಕೆ ಕಲಿಯಬೇಕು. ಅಧ್ಯಾಪಕರು ವಿದ್ಯಾರ್ಥಿಗಳಿಗೆ ಯೋಗ್ಯ ವಿಚಾರಗಳನ್ನೇ ಮಾಡಲಿಕ್ಕೆ ಕಲಿಸಬೇಕು. ಕಂಡದ್ದನ್ನೆಲ್ಲ ಯಂತ್ರಗಳ ಹಾಗೆ ಗ್ರಹಿಸಬಾರದು.

ದೇವರು ನಮಗೆ ಬುದ್ಧಿಯನ್ನು ದಯಪಾಲಿಸಿರುವದರಿಂದ ನಾವು ಸಾರಾಸಾರ ವಿಚಾರಮಾಡಿ ಜ್ಞಾನವನ್ನೇ ಗ್ರಹಿಸಬೇಕು. ಈ ಆಶ್ರಮದಲ್ಲಿ ನೀವು ಸತ್ಯಾಸತ್ಯತೆಯನ್ನೂ ಪ್ರಿಯ ಅಪ್ರಿಯವಾದುದನ್ನೂ ಶುದ್ಧಾ—ಶುದ್ಧಗಳನ್ನೂ ವಿಂಗಡಿಸಿ ಗ್ರಹಿಸಲಿಕ್ಕೆ ಕಲಿಯಬೇಕು. ನಿಮ್ಮ ಮಾರ್ಗದಲ್ಲಿ ಅನೇಕ ಸಂಕಟಗಳಿವೆ. ಸುತ್ತು ಮುತ್ತು ನಮ್ಮ ಧರ್ಮಕ್ಕೆ ಅನನುಕೂಲವಾದ ಪರಿಸ್ಥಿತಿಯಿದೆ. ಇಂಥದರೊಳಗಿಂದಲೇ ನೀವು ಪಾರಾಗಬೇಕಾಗಿದೆ. ನಮ್ಮ ದೇಶದ ಪರಿಸ್ಥಿತಿಯನ್ನೂ ಅದಕ್ಕೊದಗಿದ ದುರ್ದೆಶೆಯನ್ನೂ ವಿಚಾರಿಸಿ ನಿಮ್ಮ ಕರ್ತವ್ಯವನ್ನು ಅರಿತುಕೊಳ್ಳಬೇಕು. ನಿಮ್ಮ ಸುತ್ತುಮುತ್ತಲಿನ ಪರಿಸ್ಥಿತಿಯು ಎಷ್ಟೇ ಪ್ರತಿಕೂಲವಿದ್ದರೂ ಅದರ ಕೂಡ ಹೋರಾಡಿ, ಅನಿತ್ಯ, ತಾತ್ಕಾಲಿಕ ಕ್ಷಣಿಕವಾದ ಸುಖಗಳನ್ನು ಬದಿಗಿಟ್ಟು ತ್ರಿಕಾಲಾಬಾಧಿತ ಸನಾತನ ತತ್ವಗಳನ್ನು ಗ್ರಹಿಸಿರಿ." ಎಂಬ ಉಪದೇಶಿಸಿದರು.

ಛಾತ್ರಾಲಯದೊಳಗಿನ ವಿದ್ಯಾರ್ಥಿಗಳು ಲೋಕಮಾನ್ಯರ ಇಂತಹ ಅಮೃತವಾಣಿಯನ್ನು ನಮ್ಮ ಚರಿತ್ರನಾಯಕ ಪ್ರತಿಭಾವಿಶೇಷದಿಂದ ಕೇಳಲು ದೊರೆತದ್ದಾಕ್ಕಾಗಿ ಧನ್ಯೋದ್ಗಾರಗಳನ್ನು ತೆಗೆದು ಚೆನ್ನವೀರದೇವರನ್ನು ಪ್ರಶಂಶಿಸಿದರು.

---

## ೬ನೇ ಅಧ್ಯಾಯ.

## ಅಥಣಿಯ ಶ್ರೀ. ಶ್ರೀ. ಶಿವಯೋಗಿಗಳ ಭವಿಷ್ಯ.

ಚೆನ್ನವೀರದೇಶಿಕರು ಈ ಮೇರೆಗೆ ಲೋಕಪ್ರಿಯರಾಗಿ ಕಾಶಿಯಲ್ಲಿರುತ್ತಿರುವಾಗ ಯಾವಾಗಲೂ ಹಸನ್ಮುಖರಾಗಿಯೇ ಇರುತ್ತಿದ್ದರು. ಇವರ ಸ್ವಭಾವದಲ್ಲಿ ಪವಿತ್ರತೆ, ಸರಳತನ ಇವೆರಡು ಗುಣಗಳು ಯಾವಾಗಲೂ ಗೋಚರವಾಗುತ್ತಿದ್ದವು. ಇವರು ತಮ್ಮ ಅತೃಪ್ತ ಜ್ಞಾನಲಾಲಸೆಯನ್ನು ಶಾಂತಪಡಿಸಿಕೊಳ್ಳಲು ಶಿತೋಷ್ಣ ಕ್ಷುಧಾ ತೃಷೆ ಮೊದಲಾದಯಾವಶಾರೀರಿಕ

ವೇದನೆಗಳನ್ನು ಲಕ್ಷ್ಯಕ್ಕೆ ತರುತ್ತಿದ್ದಿಲ್ಲ. ಈ ಚಿಗೀಚಿಗಂತೂ ಇವರು ವಿದ್ಯಾರ್ಜನೆಗೆಂದು ತಾವಾಗಿಯೇ ಯಾರ ಸಹಾಯವನ್ನೂ ಅಪೇಕ್ಷಿಸಲಿಲ್ಲ. ಇಷ್ಟೇ ಅಲ್ಲ ಇವರೊಡನೆ ಹತ್ತೆಂಟು ವಿದ್ಯಾರ್ಥಿಗಳಿಗೆ ಸಹ ಇವರಿಂದ ತಕ್ಕ ಅನುಕೂಲತೆ ಜರಗುತ್ತಿತ್ತು. ಸಹಾಧ್ಯಾಯಿಗಳಾಗಲೀ ಯಾರೊಬ್ಬರಾಗಲೀ ಇವರಿಗೆ- "ಮರಿದೇವರೇ ನಿಮಗೆ ಜನರಿಂದ ಅಯಾಚಿತವಾಗಿ ದೊರೆಯುವ ಸಹಾಯವು ಆಕಸ್ಮಾತ್ ಈಗ ನಿಂತರೆ ನೀವು ಕಾಶಿಯಲ್ಲಿ ಹೇಗೆ ಮಾಡುವಿರಿ?" ಎಂದು ಪ್ರಶ್ನೆಮಾಡಿದರೆ ಅದಕ್ಕೆ ಮರಿದೇವರು ಅವರಿಗೆ—"ಇಲ್ಲಿಯ ವಿಶ್ವೇಶ್ವರನನ್ನೂ ಪವಿತ್ರವಾದ ಗಂಗೆಯನ್ನು ಆಶ್ರಯಿಸಿದರೆ ಅನ್ನೋದಕಗಳಿಗೇನೂ ಕೊರತೆಯಿಲ್ಲ. ವಾಸ ಮಾಡಲಿಕ್ಕೆ ಅನೇಕ ದೇಗುಲಗಳಿವೆ. ವಿದ್ಯಾಭ್ಯಾಸ ಮಾಡಿಸಲಿಕ್ಕೆ ಅನೇಕ ಸಮರ್ಥ ಅಧ್ಯಾಪಕರಿರುವರು; ನಾನು ವಿದ್ಯಾರ್ಜನೆಗಾಗಿ ಅವಿಶ್ರಾಂತ ಪ್ರಯತ್ನಿಸಲು ಸಿದ್ಧನಿರುವೆನು. ದೇವರಗುಡಿಯಲ್ಲಿಯ ದೀಪದ ಬೆಳಕಿನಲ್ಲಿ ಅಭ್ಯಾಸ ಮಾಡಿ ಬೇಕಾದಷ್ಟು ದಿವಸ ಇಲ್ಲಿರಲು ನನಗೇನೂ ಅಸಾಧ್ಯವಿಲ್ಲ." ‡ ಎಂದು ಉತ್ತರ ಕೊಡುತ್ತಿದ್ದರು. ಇದರ ಮೇಲಿಂದ ಪರದೇಶವಾಸವಿದ್ದರೂ ಇವರ ಹೃದಯವು ಎಷ್ಟು ಗಟ್ಟಿಯಾಗಿದ್ದಿತೆಂಬದು ವ್ಯಕ್ತವಾಗುತ್ತದೆ. "ವಿದ್ಯಾರ್ಜನೆಯು ಉದರಂಭರಣದ ಸಾಧನವಾಗಿರದೆ, ಕೇವಲ ಜ್ಞಾನೋದಯಕ್ಕಾಗಿಯೇ ಜ್ಞಾನಾರ್ಜನೆ ಮಾಡುವದು. ವಿದ್ಯಾಭ್ಯಾಸದ ಉದ್ದೇಶವಿರಬೇಕೆಂದು" ಇವರು ಸಹಾಧ್ಯಾಯಿಗಳಿಗೆ ಹೇಳುತ್ತಿದ್ದರು. ಪ್ರತಿನಿತ್ಯದ ಅಭ್ಯಾಸವೆಂದರೆ ಹೋಮ ಕುಂಡದೊಳಗಿನ ಅಗ್ನಿಗೆ ಸಲ್ಲುವ ಪವಿತ್ರವಾದ ಆಹುತಿಯಂತಿರಬೇಕೆಂದು ಇವರು ಅನ್ನುತ್ತಿದ್ದರು. ಅಂದರೆ ದಿನದ ಅಭ್ಯಾಸವನ್ನು ದಿನಕ್ಕೆ ಮಾಡುವದು ವಿದ್ಯಾರ್ಥಿದಶೆಯೊಳಗಿನ ಇವರ ವ್ರತವು.

ಹೀಗೆ ಚೆನ್ನವೀರದೇಶಿಕರು ಕಾಶಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಗ ವಿದ್ಯಾಲಯದ ಸೂಟಿಯ ದಿವಸಗಳಲ್ಲಿ ಉಳಿದ ವಿದ್ಯಾರ್ಥಿಗಳಂತೆ ತಮ್ಮ ಊರಿಗೆಹೋಗಿಬರುವ ಪರಿಪಾಠವನ್ನು ಇಟ್ಟದ್ದಿಲ್ಲ. ಆದರೂ ಗದಗಿನಲ್ಲಿಯ ಶ್ರೀಶ್ರೀ ತೋಂಟದಾರ್ಯಮಠದ ಶ್ರೀ. ಶ್ರೀಮಹಾಸ್ವಾಮಿಗಳವರಿಗೆ ಕಾಯಿ

---

‡ ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರಘಾ ರಾಜೇಂದ್ರ ಮಹಾಸ್ವಾಮಿಗಳ ಶಿರಸಿಯಲ್ಲಿಯ ವ್ಯಾಖ್ಯಾನದಿಂದ ಸಂಗ್ರಹಿಸಿದ್ದು.

ಲೆ ಎಂದು ಸುದ್ದಿ ಬರಲು ಆಗ ಮಾತ್ರ ಗದಗಿಗೆ ಒಮ್ಮೆ ಆಗಮಿಸಿದರು. ಇವರ ಬಹಳ ದಿವಸದ ಆಗಮದಿಂದ ಅವ್ವರುದ್ರಮ್ಮನವರಿಗೂ ಗದಗಿನಲ್ಲಿಯ ಇವರ ಹಿತಚಿಂತಕರಿಗೂ ಹಿಡಿಸಲಾರದಷ್ಟು ಆನಂದವಾಯಿತು. ಶ್ರೀ ಚೆನ್ನವೀರದೇಶಿಕರ ಮೇಲೆ ಅನಿವಾರ ಪ್ರೇಮ ಮಾಡುತ್ತಿದ್ದ ಅವ್ವ ರುದ್ರಮ್ಮನವರಿಗಾದ ಈ ಆನಂದವನ್ನು ಪರಮಾತ್ಮನನ್ನು ಪ್ರಸನ್ನೀಕರಿಸಿಕೊಂಡು ಶಾಶ್ವತ ಸುಖಪದವಿಯನ್ನು ಪಡಕೊಂಡು ಬಂದ ಧ್ರುವನನ್ನು ನೋಡಿದೊಡನೆ ಸುನೀತಿಗಾದ ಆನಂದಕ್ಕೆ, ಅಥವಾ ಯಮುನಾನದಿಯ ಮಡುವಿನೊಳಗಿದ್ದ ಕಾಲಿಯಾಸರ್ಪವನ್ನು ಪರಂಧಾಮುಕ್ಕೆ ಕಳಿಸಿ ಜಗತ್ತಿಗೆ ಕ್ಷೇಮವನ್ನುಂಟು ಮಾಡಿಬಂದ ಶ್ರೀಕೃಷ್ಣನನ್ನು ನೋಡಿದೊಡನೆ ಯಶೋದೆಗಾದ ಆನಂದಕ್ಕೆ, ಇಲ್ಲವೆ ಶ್ರೀರಾಮನ ಅಜಸ್ರಸೈನ್ಯದೊಡನೆ ಯುದ್ಧಮಾಡಿ ವಿಜಯುವನ್ನು ಸಂಪಾದಿಸಿಕೊಂಡು ಬಂದಕುಶನನ್ನು ನೋಡಿದೊಡನೆ ಸೀತಾಮಾತೆಗಾದ ಆನಂದಕ್ಕೆ ಹೋಲಿಸಿದರೆ ಹೋಲುವಂತಿತ್ತು. ಇವರು ಕಾಶಿಯಿಂದ ಆಗಮಿಸಿ ಮನೆಗೆ ಬಂದದ್ದನ್ನು ಕಂಡೊಡನೆ ಅವ್ವರುದ್ರಮ್ಮನವರು ಅಕ್ಕಮಹಾದೇವಿಯವರು ಅಲ್ಲಮ ಪ್ರಭುವನ್ನು ಕಂಡು ಕೆಳಗಿನವಚನವನ್ನು ನುಡಿದೊಪಾದಿಯಲ್ಲಿ "......................ಕಾಂತಿಯಿಂ ಈರೇಳು ಭುವನಮಂ ಬೆಳಗುವ ದಿವ್ಯಸ್ವರೂಪವಂಕಂಡೆನಾನು ! ಕಂಡೆನ್ನಕಂಗಳ ಬರಹಿಂಗಿತ್ತಿಂದು !! ಗಂಡಗಂಡರೆಲ್ಲರ ಹೆಂಡರಾಗಿಆಳುವ ಗುರುವಕಂಡೆ ! ನಾನುಜಗದಾದಿ ಶಕ್ತಿಯೊಳು ಬೆರಿಸಿ ಮಾತನಾಡುವ ಪರಮಗುರು ಚೆನ್ನಮಲ್ಲಿಕಾರ್ಜುನನ ನಿಲವಕಂಡು ಬದುಕಿದೇನು "

ಎಂದು ಆನಂದ್ಗೋರಗಳನ್ನು ತೆಗೆಯುತ್ತಿದ್ದರು. ಹಾಗು ತಮ್ಮನನ್ನೆಯ ಚೆನ್ನವೀರದೇವರನ್ನುಕುರಿತು—

" ನೆನಹಿನ ನಿಧಿಯನೋಡಾ. ಎನ್ನಅರವಿನಘನವನೋಡಾ, ಅಹಾ! ಎನ್ನ ಪುಣ್ಯವೇ, ಆಹಾ! ಎನ್ನ ಕಂಗಳ ಮನೆಯ ಮಾಡಿಕೊಂಡಿಪ್ಪ ನಿತ್ಯದ ಬೆಳಗೇ, ಎನ್ನ ಧ್ಯಾನದೊಳಗಣ ಸುಗ್ಗಿಯೇ, ನಿಃಕಳಂಕ ಮಲ್ಲಿಕಾರ್ಜುನ, ನಿಮ್ಮ ಶರಣಪ್ರಭುವಿನ ಪಾದಕ್ಕೆ ನಮೋ ನಮೋ." ಎಂದು ಧನ್ಯೋದ್ಗಾರಗಳನ್ನುತೆಗೆಯುತ್ತಿದ್ದರು. ಹಾಗುಮರಿದೇವರಕುಶಲವಾರ್ತೆಯನ್ನು ವಿದ್ಯಾಭ್ಯಾಸದ ಪ್ರಗತಿಯನ್ನೂ ಕೇಳಿ ಇವರ ಆನಂದವು ದ್ವಿಗುಣಿತವಾಗುತ್ತಿತ್ತು.

ಆಗ ಅವರು ಸಮೀಚೀನವಾದ ಭೋಜನಾದಿಗಳನ್ನು ಶಿವಾರ್ಪಣಬುದ್ಧಿಯಿಂದ ಸಲ್ಲಿಸುತ್ತಿದ್ದರು ಮರಿದೇವರು ಅಮ್ಮನವರಿಗೆ ಕಾಶಿಯಲ್ಲಿಯ ತಮ್ಮ ವೃತ್ತಾಂತವನ್ನೆಲ್ಲ ಅರುಹಿ, ಕಟ್ಟಕಡೆಗೆ—

" ಭಕ್ತಿಯೇ ಓಗರವಾಗಿ, ಸತ್ಯವೇ ಮೇಲೋಗರವಾಗಿ, ನಿಜತತ್ವವೇ ಸ್ವಯಮಾಗಿ ಗುಹೇಶ್ವರಲಿಂಗಕ್ಕೆ ಇಕ್ಕಬಲ್ಲವಸಂಗನಬಸವಣ್ಣನಲ್ಲದಿಲ್ಲಾ. " ಎಂದು ಪ್ರಭುದೇವರ ವಚನರಹಸ್ಯವನ್ನು ಬೋಧಿಸುತ್ತನನ್ನಂತೆ ಸರ್ವ ಜಗತ್ತನ್ನು ಶಿವಮಯವಾಗಿ ತಿಳಿದು, ಶಿವಧ್ಯಾನ್ಯದಲ್ಲಿ ನಿರತರಾಗಿರಿ; ಇದರಿಂದ ನಿಜವಾದ ಕಲ್ಯಾಣವಾಗುವದು. " ಎಂದು ಹೇಳಿ ಆನಂದಬಡಿಸುತ್ತಿದ್ದರು.

ಈ ಮೇರೆಗೆ ಶ್ರೀ ತೋಂಟದಾರ್ಯಸ್ವಾಮಿಮಠದ ಶ್ರೀ.... ಶ್ರೀಮಹಾಸ್ವಾಮಿಗಳಿಗೆ ಕಾಯಿಲೆಯಾದಾಗ ದರ್ಶನಕ್ಕೆ ಬಂದನಮ್ಮ ಚರಿತ್ರನಾಯಕರು ಶ್ರೀ. ಶ್ರೀತೋಂಟದಾರ್ಯಮಹಾಸ್ವಾಮಿಗಳ ದರ್ಶನತಕ್ಕೊಂಡು, ಅವ್ವರುದ್ರಮ್ಮನವರಿಗೂ, ತಮ್ಮ ಹಿತಚಿಂತಕರಿಗೂ ತಮ್ಮ ಪ್ರಗತಿಪರ ವಿದ್ಯಾಭ್ಯಾಸದ ವೃತ್ತಾಂತವನ್ನು ಅರುಹಿ, ಆನಂದವನ್ನು ಬೀರಿ, ಮತ್ತೆ ಕಾಶಿಗೆ ಪ್ರಯಾಣ ಬೆಳಸಿದರು. ಈ ಸಮಯದಲ್ಲಿ ಸೊಲ್ಲಾಪುರದಲ್ಲಿ ಆಗ ವೀರಶೈವ ಸಮಾಜಕ್ಕೆ ಆಧಾರಸ್ತಂಭದಂತಿದ್ದ ರಾವಸಾಹೇಬ ವಾರದಮಲ್ಲಪ್ಪನವರನ್ನು ಕಾಣುವ ಯೋಗವು ಇವರಿಗೆ ಪ್ರಾಪ್ತವಾಯಿತು. ಸೊಲ್ಲಾಪುರವು ಶ್ರೀಸಿದ್ಧರಾಮರೇ ಮೊದಲಾದ ಶಿವಶರಣರ ಚರಣಧೂಳಿಯಿಂದ ಪವಿತ್ರವಾದ ಸ್ಥಾನವು. ಶ್ರೀ ಸಿದ್ಧರಾಮರ ಉದ್ಧಾರಕ್ಕಾಗಿ ಬಂದ ಶ್ರೀ ಶ್ರೀ ಪ್ರಭುದೇವರ ಪಾದಧೂಳಿಯಿಂದಲೂ ಪ್ರಮಥ ಪುಂಗವನಾದ ಸಿದ್ಧರಾಮನು ಕಟ್ಟಿಸಿದ ಸಿದ್ಧರಾಮೇಶ್ವರ ದೇವಾಲಯದಿಂದಲೂ, ಈ ನಗರದ ಪಾವಿತ್ರ್ಯವು ಹೆಚ್ಚೆಂದು ಹೇಳಿದರೆ ತಪ್ಪಾಗದು. ಶ್ರೀ ಚೆನ್ನವೀರದೇವರು ಗದಗಿನಿಂದ ಕಾಶಿಗೆ ಹೊರಟಾಗ ದಾರಿಯಲ್ಲಿ ಹತ್ತುವ ಈ ಸೊಲ್ಲಾಪುರದಲ್ಲಿಯ ಸಿದ್ಧರಾಮೇಶ್ವರನ ದರ್ಶನ ತಕ್ಕೊಳ್ಳಲಿಕ್ಕೆ ಇಳಿದಿರಲು, ಅಂದು ರಾವಸಾಹೇಬ ವಾರದಮಲ್ಲಪ್ಪನವರು ವೀರಶೈವ ಧರ್ಮಭಾನುವಿನಂತಿದ್ದ ಇವರನ್ನು ಅತಿಥಿಗಳನ್ನಾಗಿ ಮಾಡಿಕೊಂಡರು.

ರಾ. ಸಾ. ವಾರದ ಮಲ್ಲಪ್ಪನವರು ಕರ್ನಾಟಕ ಹಾಗೂ ಮಹಾರಾಷ್ಟ್ರದಲ್ಲಿ ಪ್ರಸಿದ್ಧಿಯನ್ನು ಪಡೆದ ಶಿವಾಚಾರ ಸಂಪನ್ನರಾದ ವೀರಶೈವ ಸದ್ಗೃ

ಹಸ್ಥರು; ಮಹಾರಾಷ್ಟ್ರಪ್ರಾಂತದ ವೀರಶೈವರಿಗೆ ವೀರಶೈವಧರ್ಮದ ನಿಜವಾದ ಕಲ್ಪನೆಯನ್ನು ತಂದುಕೊಟ್ಟ ಪುಣ್ಯಾತ್ಮರೆಂದರೆ ಇವರೇ ! ಇವರು ಆಗರ್ಭ ಶ್ರೀಮಂತರು; ಬಡವರ ಕಷ್ಟ ನಷ್ಟಗಳನ್ನು ಅರಿತವರು; ದೊಡ್ಡವ್ಯಾಪಾರಿಗಳು; ಸಮಾಜದ ಹಿತವನ್ನೇ ಜೀವನದ ಗುರಿಯನ್ನಾಗಿಟ್ಟುಕೊಂಡ ಮುಖಂಡರು. ವಾರಕ್ಕೊಮ್ಮೆ ತಮ್ಮ ಗಿರಣಿಯ ಎಲ್ಲ ಕೂಲಿಕಾರರಿಗೆ ಊಟ ಹಾಕುತ್ತಿದ್ದರೆಂದ ಮೇಲೆ ಇವರು ಎಷ್ಟು ಉದಾರರೂ ನಿರ್ಲೋಭಿಗಳೂ ಇದ್ದರೆಂಬುದು ವ್ಯಕ್ತವಾಗುತ್ತದೆ. ವೀರಶೈವಧರ್ಮಸಂಬಧವಾದ ವಾಙ್ಮಯವು ಮಹಾರಾಷ್ಟ್ರದಲ್ಲಿ ಏನು ಗೊತ್ತಿರದಿದ್ದ ಆ ಸಮಯದಲ್ಲಿ ಸ್ವಂತ ಖರ್ಚಿನಿಂದ ದೇವನಾಗರಿ ಲಿಪಿಯಲ್ಲಿ ಇದನ್ನು ಪ್ರಕಟಿಸಿ ವೀರಶೈವ ಸಮಾಜದ ಧಾರ್ಮಿಕ ಕೊರತೆಯನ್ನು ಈ ಮಹನೀಯರು ಹೋಗಲಾಡಿಸಿದರು. ಸೊಲ್ಲಾಪುರದಲ್ಲಿ ಸಂಸ್ಕೃತ ವಿದ್ಯಾನಿಲಯವನ್ನು ಏರ್ಪಡಿಸಿ ಅನೇಕವೀರಶೈವ ಪಂಡಿತರಿಗೆ ಆಶ್ರಯವನ್ನಿತ್ತು ವಿದ್ಯಾದಾನದ ಕಾರ್ಯವನ್ನು ಮಾಡಿರುವರು. ಅನೇಕ ವಿದ್ಯಾರ್ಥಿಗಳಿಗೆ ಸ್ವಂತವಾಗಿ ಶಿಷ್ಯವೃತ್ತಿಯನ್ನಿತ್ತು, ಪ್ರೋತ್ಸಾಹನವನ್ನಿತ್ತಿರುವರು. ಅಂದ ಮೇಲೆ ಇಂಥ ಉದಾರಸದ್ಗೃಹಸ್ಥರು ವೀರಶೈವಧರ್ಮಭಾನುವಿನಂತಿದ್ದ ನಮ್ಮ ಚರಿತ್ರನಾಯಕರು ತಮ್ಮ ಊರಿಗೆ ಬಂದದ್ದು ಕೇಳಿ ಸುಮ್ಮನಿರಲಿಕ್ಕಾದೀತೇ? ಇದಲ್ಲದೆ ಚೆನ್ನವೀರ ದೇಶಿಕರ ಅದ್ವಿತೀಯ ಪ್ರಗತಿಪರ ಪಾಂಡಿತ್ಯದ ವಾರ್ತೆಯನ್ನು ಕಾಶಿಯಲ್ಲಿ ಇವರ ಜೊತೆಗಿದ್ದ ತಮ್ಮೂರ ವಿದ್ಯಾರ್ಥಿಗಳಿಂದ ಕೇಳಿ ಬೆರಗಾಗಿದ್ದರು. ಕಾರಣ ಚೆನ್ನವೀರದೇಶಿಕರು ಸಿದ್ಧರಾಮೇಶ್ವರ ದೇವಾಲಯಕ್ಕೆ ಬಂದಿರುವ ಸುದ್ದಿಯು ಗೊತ್ತಾದೊಡನೆ ಅವರನ್ನು ತಮ್ಮ ಮಂದಿರಕ್ಕೆ ಬರಮಾಡಿಕೊಂಡು ಆದರ ಸತ್ಕಾರಗಳಿಂದ ಸಂತೋಷಪಡಿಸಿದರು. ಹಾಗು ಮರಿದೇವರಿಗೆ ಮುಂದೆ ಕಾಶಿಯಲ್ಲಿ ಅವಶ್ಯವೆನಿಸುವ ಅನುಕೂಲತೆಗಳನ್ನು ತಾವಾಗಿಯೇ ಮಾಡಿಕೊಟ್ಟರು. ಚೆನ್ನವೀರ ದೇಶಿಕರು ದರ್ಶನಾಶೀರ್ವಾದಗಳಿಂದ ರಾ. ಸಾ. ಮಲ್ಲಪ್ಪನವರನ್ನು ಸಂತೋಷಗೊಳಿಸಿ ಮುಂದೆ ಪ್ರಯಾಣ ಬೆಳಸಿವರು.

ಈ ಸಂದರ್ಭದಿಂದ ರಾ. ಸಾ. ಮಲ್ಲಪ್ಪನವರ ಮನಸ್ಸಿನಲ್ಲಿ ವೀರಶೈವಮತಾಬ್ಧಿ-ಚಂದ್ರನಂತಿರುವ ಶ್ರೀ ಚೆನ್ನವೀರ ದೇಶಿಕರನ್ನು ಯಾವದೊಂದು

ಜಗದ್ಗುರು ಮಠದ ಸಿಂಹಾಸನದ ಮೇಲೆ ವಿರಾಜಮಾನರಾಗುವಂತೆ ಮಾಡಬೇಕೆಂಬ ಭಾವನೆಯು ಅಂಕುರಿಸಿತು.

ಚೆನ್ನವೀರದೇಶಿಕರು ಹೀಗೆ ಸಕಲರ ಪ್ರೇಮಾದರಗಳಿಗೆಪಾತ್ರರಾಗಿ ಕಾಶಿಯ ವಿದ್ಯಾಭ್ಯಾಸದಲ್ಲಿ ಅದ್ವಿತೀಯ ಪಾಂಡಿತ್ಯವನ್ನು ಹೊಂದಿ, ಕುಸು ದಿವಸಗಳಲ್ಲಿ " ಜಯದೇವ"ಎಂಬ ಪದವಿಯನ್ನು ಪಡೆದರು. ವಾಚಕರೇ, ಈ ಮೇರೆಗೆ ಇವರಮೇಧಾಶಕ್ತಿಯು ಶ್ರೇಷ್ಠವಿದ್ದಂತೆ ಇವರಮಹಾತ್ಮೆಯೂ ಅಗಾಧವಿತ್ತೆಂದು ಧಾರಾಳವಾಗಿ ಹೇಳಬಹುದು. ಯಾಕೆಂದರೆ ಇವರು ಕಾಶಿಯಲ್ಲಿ ವಿದ್ಯಾಭ್ಯಾಸ ಮಾಡುತ್ತ ಬ್ರಹ್ಮಚರ್ಯಾಶ್ರಮದಲ್ಲಿರುವಾಗಲೇ ಮೈಸೂರ ಸಂಸ್ಥಾನದ ಹಿಂದಿನ ಮಹಾರಾಜರಾಗಿದ್ದ ಶ್ರೀಚಾಮರಾಜೇಂದ್ರ ಒಡೆಯರು ಪ್ರಯಾಗಾದಿ ಕ್ಷೇತ್ರಗಳನ್ನು ಸಂಚರಿಸಿ, ಕಾಶೀ ಕ್ಷೇತ್ರಕ್ಕ ಆಗಮಿಸಿದ್ದರು. ಆಗ ಜಗದ್ಗುರು ಶ್ರೀ....ಶ್ರೀ....ರಾಜೇಶ್ವರ ಶಿವಾಚಾರ್ಯರ ಸನ್ನಿಧಿಯಲ್ಲಿ ವಿಶ್ವಾಮಿತ್ರರ ಋಷಿಗಳಾಶ್ರಮದಲ್ಲಿರುತ್ತಿದ್ದ ಶ್ರೀರಾಮನಂತೆಯೂ, ಸಾಂದೀಪಮುನಿಗಳ ಬಳಿಯಲ್ಲಿದ್ದ ಶ್ರೀಕೃಷ್ಣನಂತೆಯೂ ಶೋಭಿಸುತ್ತಿದ್ದ ಚೆನ್ನವೀರದೇಶಿಕರನ್ನು ಕಂಡು ಮಹಾರಾಜರು ಅತ್ಯಾನಂದವನ್ನು ಪ್ರಕಟಿಸಿದರು. ಬಾಲಸೂರ್ಯನಂತಿದ್ದ ಇವರಿಗೆ ತಮ್ಮ ಧನ್ಯವಾದಗಳನ್ನು ಅರ್ಪಿಸಿದರು. ಚೆನ್ನವೀರದೇವರು ವೈಶಾಂಪಯನ ಋಷಿಗಳ ಬಳಿಯಲ್ಲಿದ್ದ ಯಾಜ್ಞವಲ್ಕ್ಯಯೋಗೀಶ್ವರರು ಜನಕರಾಜನ ಹೆಸರಿನಿಂದ ಫಲಮಂತ್ರಾಕ್ಷತೆಗಳನ್ನೀಡಿ ರಾಜಮಂದಿರದಲ್ಲಿಯ ಸ್ತಂಭಗಳನ್ನು ಚಿಗಿಸಿದಂತೆ ಶ್ರೀ ಚಾಮರಾಜ ಮಹಾಪ್ರಭುಗಳಿಗೆ ಫಲಮಂತ್ರಾಕ್ಷತೆಗಳನ್ನಿತ್ತು ಅವರ ಹೃದಯಮಂದಿರದಲ್ಲಿಯ ಆನಂದಲತೆಯನ್ನು ಪ್ರಫುಲ್ಲಿತಗೊಳಿಸಿದರು,

ಇದೇ ಮೇರೆಗೆ ಹರಿಶ್ಚಂದ್ರ, ನಳ, ಧರೀಚಿ, ಮೊದಲಾದ ಪುಣ್ಯಶ್ಲೋಕ ಮಹಾರಾಜರಂತೆ ಆಧುನಿಕ ಕಾಲದಲ್ಲಿ ರಾಜರ್ಷಿಯೆಂದು ಹೆಸರಾದವರೂ, ಸಕಲಸದ್ಗುಣೈಶ್ವರ್ಯ ಸಂಪನ್ನರೂ ಆದ ಶ್ರೀನಾಲ್ವಡಿ ಕೃಷ್ಣರಾಜ ಒಡೆಯರವರಿಗೂ ಚೆನ್ನವೀರ ದೇಶಿಕರು ಕಾಶಿಯಲ್ಲಿ ಬ್ರಹ್ಮಚರ್ಯಾಶ್ರಮದಲ್ಲಿರುವಾಗಲೇ ಫಲಮಂತ್ರಾಕ್ಷತೆಗಳನ್ನಿತ್ತು ಪುರೋಭಿವೃದ್ಧಿಯನ್ನು ಬಯಸಿರುವರು.

ಈ ಮೇರೆಗೆ ಶ್ರೀಜಯದೇವ ಜಯದೇವಚೆನ್ನವೀರದೇಶಿಕರು ಕಾಶೀ

ಯಲ್ಲಿ ಬ್ರಹ್ಮಚರ್ಯಾಶ್ರಮದಲ್ಲಿದ್ದಾಗ ರಾಜರಿಂದ ಸೇವಕರವರೆಗೆ ಪಂಡಿತರಿಂದ ಪಾಮರರವರೆಗೆ ಗುರುಗಳಿಂದ ವಿದ್ಯಾರ್ಥಿಗಳವರೆಗೆ ಸರ್ವರ ಪ್ರೇಮಕ್ಕೆ ಪಾತ್ರರಾಗಿ ವಿದ್ಯಾರ್ಜನೆಯನ್ನು ಮಾಡುತ್ತಿರುವಾಗ ಇ. ಸ. ೧೯೦೩ ರಲ್ಲಿ ಸವದತ್ತಿಗೆ ಅಲ್ಲಿ ನಡೆಯುವ ಪುರಾಣ ಸಮಾಪ್ತಿಯ ಮಂಗಳಕಾರ್ಯಕ್ಕೆ ಬಿಜಯಂಗೈಯುವ ಯೋಗವೊಂದು ಪ್ರಾಪ್ತವಾಯಿತು. ಈ ಮಹೋತ್ಸವಕ್ಕೆ ಅಥಣಿಯ ತಪೋನಿಷ್ಠರಾದ ಶ್ರೀ ಮುರುಘರಾಜೇಂದ್ರ ಸ್ವಾಮಿಗಳೂ ಬಿದರಿಯ ಶ್ರೀ ಕುಮಾರ ಸ್ವಾಮಿಗಳೂ ಹಾನಗಲ್ಲ ಶ್ರೀಮನ್ನಿರಂಜನ ಕುಮಾರಸ್ವಾಮಿಗಳೂ ಆಗಮಿಸಿದ್ದರು. ಇದಲ್ಲದೆ ಶ್ರೀಕಿತ್ತೂರ ರೇವಣಸಿದ್ಧಯ್ಯಸವರೇ ಮೊದಲಾದ ಪ್ರತಿಷ್ಠಿತ ಗೃಹಸ್ಥರೂ ಆಗಮಿಸಿದ್ದರು.

ಮೊದಲೇ ಶ್ರೀಬಸವೇಶ್ವರ ವಿಭೂತಿಯ ಪ್ರಾಸಾದಿಕ ಪುರಾಣ! ಇದರ ಮಂಗಲಕಾರ್ಯಕ್ಕೆ ಶಿವಯೋಗಿಶ್ರೇಷ್ಠರ ಹಾಗೂ ಪ್ರತಿಷ್ಠಿತ ವೀರಶೈವ ಗೃಹಸ್ಥರ ಆಗಮನ; ಇವರ ಜೊತೆಗೆ ಅನೇಕ ಚರಮೂರ್ತಿಗಳೂ, ಪಟ್ಟಾಧಿಕಾರಿಗಳೂ ಪಂಡಿತರೂ ಆದ ವೀರಶೈವೋತ್ತಮರ ಬರುವಿಕೆ; ಇದಲ್ಲದೆ ಅನೇಕ ಕವಿಗಳೂ ವಿದ್ವಾಂಸರೂ ಗಾಯಕರೂ, ಕಲಾನಿಪುಣರೂ, ಸಾವುಕಾರ-ಶ್ರೀಮಂತರೂ ಆದ ಮಹನೀಯರ ಸಮ್ಮೇಲನ. ಇದರಿಂದ ಆ ಸಮಾರಂಭಕ್ಕೆ ಮೇಲಾದ ಕಳೆ ಬಂದಿತ್ತು.

ಇಂತಹ ಶಿವಯೋಗಿ ಶ್ರೇಷ್ಠರಿಂದಲೂ ಮಹಾಜನರಿಂದಲೂ ನೆರೆದ ಮಹಾಸಭೆಯಲ್ಲಿ ಅಥಣಿಯ ಶ್ರೀಮನ್ನಿರಂಜನ ಶಿವಯೋಗಿಗಳು ಮುಖ್ಯಾಸನವನ್ನಲಂಕರಿಸಿ ಕುಳಿತಿರಲು, ಕಾಶಿಯಲ್ಲಿ ಸಕಲಶಾಸ್ತ್ರಗಳಲ್ಲಿ ಪ್ರಶಸ್ತಿಯನ್ನು ಹೊಂದಿ, ಜಯದೇವ ಪಂಡಿತರೆಂಬ ಅಭಿದಾನವನ್ನು ಪಡೆದ ನಮ್ಮ ಚರಿತ್ರನಾಯಕರು ತಮಗೆ ಬಂದ ಆಮಂತ್ರಣದ ಮೇರೆಗೆ ಬಿಜಯಂಗೈದರು. ಆಗ ನಕ್ಷತ್ರಗಳಿಂದೊಡಗೂಡಿದ ಆಕಾಶದಲ್ಲಿ ಚಂದ್ರನು ಉದಯಿಸಿದಂತೆ ಆ ಸಭೆಗೆ ಹೊಸ ಕಳೆ ಬಂದಿತು. ಚೆನ್ನವೀರದೇಶಿಕರು ಸಭೆಗೆ ಬಂದೊಡನೆ ಪ್ರಣವಸ್ವರೂಪಿಗಳಾದ ಶ್ರೀ ಶಿವಯೋಗಿಗಳಿಗೆ ಸಾಷ್ಟಾಂಗಪ್ರಣಾಮವನ್ನು ಮಾಡಿ ಎದ್ದುನಿಂತರು. ಆಗ ಶಿವಯೋಗಿಗಳು ಇವರ ತೇಜಃಪುಂಜ ಮುಖವನ್ನೂ ವಿದ್ಯೆಯ ವರ್ಚಸ್ಸನ್ನೂ ಶಿವಪ್ರಭೆಯನ್ನೂ ಕಂಡು ಆನಂದಬಟ್ಟು " ಚೆನ್ನವೀರ ದೇಶಿಕರೇ, ಕಲ್ಯಾಣವಾಗಲಿ; ನೀವು ಇನ್ನು ಸ್ವಲ್ಪ ದಿವಸಗಳಲ್ಲಿ ವೀರ



ಶ್ರೀ ಅಥಣಿಯ ಶಿವಯೋಗೀಂದ್ರರು.

PUBLISHED BY N. H. HOSUR MANAGER VIDYARANYA GRANTHMALA OFFICE MULGUND.

ಶೈವ ಧರ್ಮ ಸಾಮ್ರಾಜ್ಯದ ಚಕ್ರವರ್ತಿಗಳಾಗುವಿರಿ; ಬನ್ನಿರಿ. ಈ ಉಚ್ಚಾಸನವನ್ನು ಅಲಂಕರಿಸಿರಿ. ನೀವು ಜಗದ್ಗುರುಗಳೆನಿಸಿ, ದೇಶದಲ್ಲಿರುವ ದುರ್ವಾದಿಗಳನ್ನು ಜಯಿಸಿ, ವೀರಶೈವಧರ್ಮದೇವತೆಯ ಕೀರ್ತಿಯನ್ನು ಹೆಚ್ಚಿಸುವಿರಿ. ನಿಮ್ಮ ಶಿವಾದ್ವೈತ ಜ್ಞಾನವೂ, ಶಿವಾಚಾರನಿಷ್ಠೆಯೂ, ಹೊಗಳತಕ್ಕಂಥವುಗಳು; ನಿಮ್ಮಂಥವಿಭೂತಿಯು ನಮ್ಮ ವೀರಶೈವ ಸಮಾಜದಲ್ಲಿ ಜನಿಸಿದ್ದು ನಮ್ಮೆಲ್ಲರ ಭಾಗ್ಯವು." ಎಂದು ಆಶೀರ್ವದಿಸಿ ತಮ್ಮ ಹತ್ತರ ಕುಳ್ಳರಿಸಿಕೊಂಡರು.

ಸಭೆಯಲ್ಲಿ ನೆರೆದ ಜನರು ತಪೋನಿಷ್ಠರಾದ ಶ್ರೀಮನ್ನಿರಂಜನಶಿವಯೋಗಿಗಳಿಂದ ಶ್ರೀಜಯದೇವ ಚೆನ್ನವೀರದೇಶಿಕರ ವಿಷಯವಾಗಿ ಆದ ಭವಿಷ್ಯವಾಣಿಯನ್ನು ಕೇಳಿ ಆನಂದಪಟ್ಟರು. ಸಭೆ ಮುಗಿಯುವವರೆಗೆ ಚೆನ್ನವೀರ ದೇಶಿಕರ ದರ್ಶನವನ್ನು ಕಣ್ತುಂಬ ತಕ್ಕೊಂಡು ತಮ್ಮ ನೇತ್ರಗಳ ಸಾಫಲ್ಯವನ್ನು ಮಾಡಿಕೊಂಡರು. ಕೊನೆಗೆ ದೇವರೇ, ಜಗದ್ಗುರುಗಳಾಗಿ ತಮ್ಮ ಮಹಿಮೆಯಿಂದ ಲೋಕಪಾವನ ಮಾಡುವ ಈ ಮಹಾತ್ಮರ ಲೀಲೆಗಳನ್ನು ನೋಡಲು ನಮಗೆ ಆಯುಷ್ಯವನ್ನು ಕೊಡು; ಈ ಮಹಾತ್ಮರನ್ನು ಸೇವಿಸಿ ಸುಖವನ್ನು ಹೊಂದಿ, ಅಂತ್ಯದಲ್ಲಿ ಕೈಲಾಸವನ್ನು ಪಡೆಯುವೆವು. ಎಂದು ನೆನೆಯುತ್ತ ಮನೆಗೆ ನಡೆದರು.

ಹೀಗೆ ಪುರಾಣ ಸಮಾಪ್ತಿಯ ಮಂಗಳವು ಮುಗಿದ ಮೇಲೆ ಪ್ರಣವ ಸ್ವರೂಪಿಗಳಾದ ಹಾನಗಲ್ಲ ಕುಮಾರಸ್ವಾಮಿಗಳು, ಶ್ರೀ.ಕಿತ್ತೂರ ರೇವಣಸಿದ್ಧಯ್ಯನವರು, ಕೊಂಗವಾಡದ ಚನ್ನಪ್ಪನವರು, ಮರೇವಾಡದ ಸಿದ್ಧಲಿಂಗಯ್ಯನವರೇ ಮೊದಲಾದ ವೀರಶೈವ ಪ್ರಮುಖರೆದುರಿಗೆ ವೀರಶೈವ ಮಹಾಸಭೆಯನ್ನು ಸ್ಥಾಪಿಸಿ, ತನ್ಮೂಲಕ ವೀರಶೈವಸಮಾಜದ ಸುಧಾರಣೆಯ ಕಾರ್ಯವನ್ನು ಕೈಕೊಳ್ಳಬೇಕೆಂದು ಪ್ರಸ್ತಾಪಿಸಿದರು. ಆಗ ಕೂಡಿದ ಪ್ರಮುಖರೆಲ್ಲ ಈ ಕೆಲಸಕ್ಕೆ ಇಂದಿನ ದಿನವೇ ಮಂಗಲಕರವಾದುದೆಂದು ಅಭಿಪ್ರಾಯಪಟ್ಟು ನಮ್ಮ ಚರಿತ್ರನಾಯಕರ * ಅಧ್ಯಕ್ಷತೆಯಲ್ಲಿ ಒಂದು ಸಭೆಯನ್ನು ಏರ್ಪಡಿಸಿದರು. ಇವರ ಸಲಹೆಯೊಂದಿಗೆ ವೀರಶೈವ ಮಹಾಸಭೆ

---

* ಆಧಾರಃ- ಹುಬ್ಬಳ್ಳಿಯ ಲೋಕಮತಕಾರರು ಪ್ರಕಟಿಸಿರುವ ಹಾನಗಲ್ಲ ಶ್ರೀಕುಮಾರ ಸ್ವಾಮಿಗಳ ಸ್ಮಾರಕ ಚಂದ್ರಿಕೆಯಲ್ಲಿ ಬಂದ ಶ್ರೀ—ಶ್ರೀಗಳವರ ಸಂದೇಶದ ಮೇರೆಗೆ—

ಯನ್ನು ರಚಿಸಬೇಕೆಂದು ನಿರ್ಣಯಿಸಿದರು. ಮುಂದೆ ಧಾರವಾಡದಲ್ಲಿ ಈ ಮಹನೀಯರ ಕೃಪಾವಿಶೇಷದಿಂದ ಆ ಮಹಾಸಭೆಯೂ ಸ್ಥಾಪಿತವಾಯಿತು. ಒಟ್ಟಿನ ಮೇಲೆ ಹೇಳಬೇಕಂದರೆ, ವಿಜಯನಗರದ ರಾಜ್ಯಸ್ಥಾಪನೆಯ ಕಾಲಕ್ಕೆ ವಿದ್ಯಾರಣ್ಯರಿಗೂ ಹುಕ್ಕ ಬುಕ್ಕರಿಗೂ ಯಾವ ನಿಕಟಸಂಬಂಧವಿತ್ತೋ, ಅಂಥ ನಿಕಟ ಸಂಬಂಧವೂ, ವಾತ್ಸಲ್ಯವೂ, ಅಭಿಮಾನವೂ ವೀರಶೈವ ಮಹಾಸಭೆಯು ಸ್ಥಾಪನವಾಗುವ ಕಾಲಕ್ಕೆ ನಮ್ಮ ಚರಿತ್ರನಾಯಕರ ಹಾಗು ವೀರಶೈವ ಮಹಾ-ಸಭಾ-ಸ್ಥಾಪಕರ ನಡುವೆ ಇತ್ತೆಂದು ಹೇಳಿದರೆ ಅಸಮಂಜಸವೆನಿಸಲಿಕ್ಕಿಲ್ಲ. ಸಾರಾಂಶ, ವೀರಶೈವಸಮಾಜಕ್ಕೆ ಆಧಾರಸ್ತಂಭರಾಗಿ, ವೀರಶೈವರಲ್ಲಿ ನೂತನ ಚೈತನ್ಯವನ್ನು ಹುಟ್ಟಿಸಿ, ವೀರಶೈವ ಸಮಾಜದ ಸುಧಾರಣೆ ಮಾಡಿದವರಲ್ಲಿ ನಮ್ಮ ಚರಿತ್ರನಾಯಕರೊಬ್ಬರು ಐತಿಹಾಸಿಕ ಪ್ರಮುಖ ಪುರುಷರೆಂದು ಧಾರಾಳವಾಗಿ ಹೇಳಬಹುದು.

ಈ ಮೇರೆಗೆ ಶ್ರೀ ಜಯದೇವ ಚೆನ್ನವೀರದೇಶಿಕರು ಸವದತ್ತಿಯ ಪುರಾಣ ಸಮಾಪ್ತಿಯ ಉತ್ಸವವನ್ನು ತೀರಿಸಿಕೊಂಡು ವೀರಶೈವ ಮಹಾಸಭೆಯ ರಚನೆಗೆ ಸಲಹೆ ಕೊಟ್ಟು ಕಾಶಿಗೆ ತೆರಳಿದರು. ಅಲ್ಲಿ “ ಸ್ವಶಾಖಾಧ್ಯಯನಪೂರ್ವಕಂ ಸರ್ವವಿದ್ಯಾಭ್ಯಾಸಂಕೃತ್ವಾ ದ್ವಾದಶವರ್ಷಶುಶ್ರೂಷಾಪೂರ್ವಕಂ ಬ್ರಹ್ಮಚರ್ಯಂ ನಿವೃತ್ಯ ॥ ” ಎಂಬ ಶ್ರುತಿವಾಕ್ಯದಂತೆ ಎಲ್ಲವಿದ್ಯಾಭ್ಯಾಸವನ್ನು ಮುಗಿಸಿ ದಿಗಂತರ ಕೀರ್ತಿಯುತರಾದರು.

ಈ ಮೇರೆಗೆ ಶ್ರೀಜಯದೇವ ಚೆನ್ನವೀರದೇಶಿಕರ ಕಾಶಿಯವಿದ್ಯಾಭ್ಯಾಸವು ಮುಗಿಯಲು ಇವರನ್ನು ವೀರಶೈವಮತದಲ್ಲಿ ಯಾವದೊಂದು ಜಗದ್ಗುರು ಪೀಠಕ್ಕೆ ಒಡೆಯರನ್ನು ಮಾಡಬೇಕೆಂದು ವೀರಶೈವ ಮುಖಂಡರು ಆಲೋಚಿಸಹತ್ತಿದರು. ಕಾಶಿಯಲ್ಲಿಯ ಜಗದ್ಗುರು ಶ್ರೀ. ಶ್ರೀ.ರಾಜರಾಜೇಶ್ವರ ಶಿವಾಚಾರ್ಯಸ್ವಾಮಿಗಳವರು ಇವರ ಅದ್ವಿತೀಯ ಪಾಂಡಿತ್ಯವನ್ನೂ ಅಲೌಕಿಕ ಬುದ್ಧಿ ಚಾತುರ್ಯವನ್ನೂ ನೋಡಿ, ತಮ್ಮ ತರುವಾಯ ಕಾಶೀ ಪೀಠಕ್ಕೆ ಇವರನ್ನೇ ಕೂಡಿಸಬೇಕೆಂದು ಯೋಚಿಸಿದರು. ಶ್ರೀಮಂತ ಶಿರಸಂಗಿ ದೇಸಾಯಿಯವರೂ, ರಾವಸಾಹೇಬ ವಾರದಮಲ್ಲಪ್ಪನವರೂ ಇವರನ್ನು ಮೊದಲು ರಂಭಾಪುರಿಯ ಜಗದ್ಗುರುಪೀಠಕ್ಕೆ ನಿಯೋಜಿಸಬೇಕೆಂದು ಆಲೋಚಿಸಹತ್ತಿದ್ದರು. ಆದರೆ ಈಶಸಂಕಲ್ಪವು ಬೇರೆ ಇದ್ದಮೂಲಕ ಇದ

ರಲ್ಲಾವ ವಿಚಾರವೂ ಫಲದ್ರೂಪವಾಗಲಿಲ್ಲ ಇದೇ ಸಮಯದಲ್ಲಿ ಚಿನ್ಮೂಲಾದ್ರಿಯಲ್ಲಿಯ ಶ್ರೀಮದಲ್ಲಮ ಪ್ರಭುಪರಂಪರಾಗತವಾದ ಶ್ರೀಮನ್ಮಹಾರಾಜ ನಿರಂಜನಜಗದ್ಗುರು ಮುರಘರಾಜೇಂದ್ರಮಠದ ೨೩ನೇ ಸಿಂಹಾಸನಾಧೀಶರಾದ ಶ್ರೀಮುಪ್ಪೇಂದ್ರ ಸ್ವಾಮಿಗಳು ಶಿವಯೋಗಸಾಮ್ರಾಜ್ಯವನ್ನೈದಿದ್ದರು. ಕಾರಣ ಈ ಪೀಠದ ಚುನಾವಣೆಗೆ ಪ್ರಾರಂಭವಾಗಿ ಇದನ್ನು ಅಲಂಕರಿಸುವ ಯೋಗವು ನಮ್ಮ ಚರಿತ್ರನಾಯಕರಿಗೆ ಪ್ರಾಪ್ತವಾಯಿತು. ಇದನ್ನು ಮುಂದಿನ ಅಧ್ಯಾಯದಲ್ಲಿ ಈ ಪೀಠದ ಪ್ರಭಾವವನ್ನೂ ಪೂರ್ವವೃತ್ತವನ್ನೂ ಪರಿಚಯ ಮಾಡಿಕೊಟ್ಟ ನಂತರ ಸವಿಸ್ತಾರವಾಗಿ ವಾಚಕರ ಮುಂದಿಡುವೆವು.

# ೭ನೇ ಅಧ್ಯಾಯ.

## ಚಿನ್ಮೂಲಾದ್ರಿಯ ಬೃಹನ್ಮಠದ ಪೀಠಪ್ರಭಾವವು.

ಈ ಚಿನ್ಮೂಲಾದ್ರಿಯ ಬೃಹನ್ಮಠವೆಂದರೆ, ವೀರಶೈವಸಮಾಜದಲ್ಲಿಯ ಪುರಾತನಕಾಲದ ಶ್ರೇಷ್ಠವೂ ಪರಮಪೂಜ್ಯವೂ ಆದ ಜಗದ್ಗುರು ಮಠವು. ಇದು ಶ್ರೀಮದನಾದಿ ಪರಶಿವ ಪರಂಜ್ಯೋತಿ ಪ್ರಭುಪರಂಪರಂಪರಾಗತವಾಗಿ ಬಂದದ್ದು. ಷಣ್ಮುಖಾವತಾರರೆಂದು ಪ್ರಖ್ಯಾತರಾದ ಶ್ರೀಚನ್ನಬಸವೇಶ್ವರರು ಅಲಂಕರಿಸಿದ್ದು. ಈ ಶೂನ್ಯ ಸಿಂಹಾಸನದ ಆದ್ಯ ಜಗದ್ಗುರುಗಳೆಂದರೆ, ಶ್ರೀ. ಶ್ರೀ. ಅಲ್ಲಮಪ್ರಭುದೇವರು. ಪರಮೇಶ್ವರನ ಮಸ್ತಕದ ಮಧ್ಯದಿಂದ ಮೋಕ್ಷದಾಯಕವೂ ನಿಷ್ಕಲಂಕವೂ ತೇಜೋಮಯವೂ ಆದ ಚರಲಿಂಗದ ಕಲಿಯುಗದಲ್ಲಿಯ ಅವತಾರವೇ * ಪ್ರಭುದೇವರದು. ಇಂಥ ಚರಲಿಂಗದವತಾರದ ಪರಂಪರೆಯನ್ನೂ ಶೂನ್ಯಪೀಠವನ್ನೂ ಕುರಿತು ಶಿವಗಣಗಳು ಪರಮೇಶ್ವರನನ್ನು ಪ್ರಶ್ನೆಮಾಡಲು ಸಾಕ್ಷಾತ್ ಪರಮೇಶ್ವರನು

---

* ಆಧಾರ ೧. ಮಚ್ಛಿಖಾ ಚಕ್ರಮಧ್ಯಸ್ಥಂ ಚರಲಿಂಗಂ ನಿರಂಜನಂ | ಕೃತ್ವಾಬಹಿರ್ಗತಂ ತೇಭ್ಯೋ ! ಮಯಾಪ್ರೋಕ್ತ ಮಿದಂವಚಃ || (ಸಯಂಭೂಆಗಮ ಪಟಲ ೮)

ಅರ್ಥ:— ಹೇ ಪಾರ್ವತೀ, ನನ್ನ ಶಿಖಾಚಕ್ರದಿಂದ ಚರಲಿಂಗ ನಿರಂಜನವೆಂಬ(ವಿರಕ್ತ) ಮೂರ್ತಿಯನ್ನು ಅಂತರಂಗದಿಂದ ಬಹಿರಂಗಕ್ಕೆ ತಂದಿದ್ದೇನೆ.

೨ ಆದೌತಚ್ಚರಲಿಂಗಂತು ನಿರಂಜನ ಇತಿಶ್ರುತಂ || ಭೂಮ್ಯಾಂತದೇವ ತ್ರೇತಾಯಾಂ| ನಿರ್ವಾಣಯ ಇತಿ ಕೀರ್ತಿತಂ ||೧|| ದ್ವಾಪರೇ ನಿಷ್ಕಲಶ್ಚೇತಿ | ವಿಶ್ರುತಂಚ ತದೇವಹಿ || ಕಲೌ ಪ್ರಭುರಿತಿಖ್ಯಾತಂ ನಾಮಾನ್ಯೇತಾನಿ ಮೈಕ್ರಮಾತ್ ||೨|| ಭವಿತತ್ ಪ್ರಭುದೇವಸ್ಯ ಪೀಠಕಲ್ಯಾಣ ಪತ್ತನೇ || ಶೂನ್ಯ ಸಿಂಹಾಸನಂಚೇತಿ ತ ದೇವ ಪ್ರಥಿತಂಕಲೌ ||೩||

—ಅಚಿಂತ್ಯಾಗಮ ದಶಮಪಟಲ.



ಶ್ರೀ ಮುದಲ್ಲಸು ಪ್ರಭುಸ್ವಾಮಿಗಳು.

PBULISHED BY N. H. HOSUR MANAGER VIDYARANYA GRANTHMALA OFFICE MULGUND.



✲ ಶ್ರೀ ಬಸವೇಶ್ವರ ✲

PUBLISHED BY N. H. HOSUR MANAGER VIDYARANYA GRANTHMALA OFFICE MULGUND.

ಅಪ್ಪಣೆ ಕೊಡಿಸಿದ್ದು ವೀರಶೈವರಿಗೆ ಅತಿಮಾನ್ಯವಾದ ‡ ಉತ್ತರವಾತುಲಾಗಮದಲ್ಲಿ ವರ್ಣಿಸಿರುವದನ್ನು ಕೆಳಗೆ ಕೊಡುವೆವು

---

## ಉತ್ತರವಾತುಲಾಗಮದಲ್ಲಿ ಬಂದ ಶಿವಪ್ರಮಥರ ಸಂವಾದ

‡ಮಂದರಾದ್ರೌ ಗಣಾಸ್ಸರ್ವೇ ಸಮೇತಾ: ಪರಮೇಶ್ವರಂ । ನಿರಂಜನವಿಭೋರ್ಲೀಲಾಂ ಭಾವಿನೀಂ ಭವನಾಶಿನೀಂ ॥೧॥ ಜಿಜ್ಞಾಸವ: ಪರಶಿವಂ ಪ್ರಾರ್ಥಯಾಮಾಸುರಾದರಾತ್ । ಏವಂ ಗಣೈ: ಪ್ರಾರ್ಥ್ಯಮಾನ: ಶಿವ: ಪ್ರೋವಾಚ ಲೀಲಯಾ ॥ ೨ ॥ ಮಟ್ಟಿಖಾಚಕ್ರಮಧ್ಯಸ್ಥಂ ಚರಲಿಂಗಂ ನಿರಂಜನಂ । ದೀಪ್ತಮಾವಿರಭೂತ್ಸಾಕ್ಷಾನ್ಮೋಕ್ಷಸಾಮ್ರಾಜ್ಯದಾಯಕಂ ॥ ೩ ॥ ಮನ್ಯೈತಚ್ಚರಲಿಂಗಂ ತು ಪತ್ತ: ಶತಗುಣಾಧಿಕಂ। ಯುಕ್ತೋಽಹಂ ಪರಯಾ ಶಕ್ತ್ಯಾ ಶಕ್ತ್ಯತೀತಮಿದಂ ಗಣಾ: ॥೪॥ ಇದಂ ತು ನಿಷ್ಕಲಂ ಜ್ಞೇಯಂ ಸಕಲೋಽಹಂ ಗಣೇಶ್ವರಾ: । ವರ್ಣೇನಾಹಂ ಸಮಾಯುಕ್ತೋ ವರ್ಣಾತೀತಮಿದಂ ಗಣಾ: ॥೫॥ ಆದೌ ತಚ್ಚರಲಿಂಗಂ ತು ನಿರಂಜನ ಇತಿ ಸ್ಮೃತಂ । ತ್ರೇತಾಯಾಂ ದ್ವೈತಂ ಚೈತನ್ಯನಾಮಾಯ ಇತಿ ಕೀರ್ತಿತಂ ॥೬॥ ದ್ವಾಪರೇ ನಿಷ್ಕಲಶ್ಚೇತಿ ವಿಶ್ರುತಂ ಚ ತದೇವಹಿ। ಕಲೌ ಪ್ರಭುರಿತಿ ಖ್ಯಾತಂ ತಸ್ಯ ನಾಮಾನಿ ವೈ ಕ್ರಮಾತ್ ॥೭॥ ಕಲೌ ತತ್ಪ್ರಭುದೇವಸ್ಯ ಶೈಪೀಠಂ ಕಲ್ಯಾಣಪತ್ತನೇ। ಬಸವೇಶಾದಿಪ್ರಮಥಸಂದೋಹಪರಿಕಲ್ಪಿತಂ ॥೮॥ ತ್ರಿಚೈತನ್ಯಂ ತ್ರಿಕಂ ಶೂನ್ಯಂ ನಾದಬಿಂದುಕಲಾತ್ಮಕಂ । ಪ್ರಣವಂ ನಿರ್ಗುಣಂ ತತ್ತು ಸರ್ವಶೂನ್ಯಂ ತ್ರಿಧಾ ಸ್ಥಿತಂ ॥೯॥ ತ್ರಿವೃತ್ಪ್ರಣವಗರ್ಭತ್ವಾತ್ತತ್ಪೀಠತ್ವಾತ್ತಥಾ ಮತಂ । ಶೂನ್ಯಸಿಂಹಾಸನಂ ಚೇತಿ ಸರ್ವತ: ಪ್ರಥಿತಂ ಭುವಿ ॥೧೦॥ ಭಕ್ತಾಧೀನತಯಾ ಗತ್ವಾ ಶ್ರೀಮದ್ಬಸವಮಂದಿರಂ । ಪೀಠಮಾರುಹ್ಯ ಭಗವಾನ್ ಪ್ರಭು: ಪ್ರಮಥರಾಟ್ ತದಾ ॥೧೧॥ ಬಸವೇಶ್ವರಮುಖ್ಯಾನಾಂ ಜ್ಞಾನದೀಕ್ಷಾಮನುಗ್ರಹಾತ್ । ವಿಧಾಯ ಸರ್ವವೇದಾಂತಸಾರಸಂಗ್ರಹರೂಪಕಂ ॥೧೨॥ ಲಿಂಗಾಂಗಸಾಮರಸ್ಯಂಹಿ ಬೋಧಯಿತ್ವಾ ತು ಸಂಸ್ಫುಟಂ। ತತಸ್ತೇಭ್ಯ: ಪ್ರಸಾದಾದಿ ದತ್ವಾ ಸರ್ವಮಲಾಪಹಂ ॥೧೩॥ ಪಾವಯಿತ್ವಾಖಿಲಾಂಸ್ತತ್ರಶ್ರೀಚೆನ್ನಬಸವಾಂಕಿತಂ। ಸ್ಥಲಷಟ್ಕೇಯಸಂಪತ್ತಿಗರಿಷ್ಠಂಬ್ರಹ್ಮಚಾರಿಣಂ ॥ ೧೪ ॥ ವಿಲೋಕ್ಯ ಕೃಪಯಾ ದೃಷ್ಟ್ಯಾ ತಮಾಹೂಯಾಂತಿಕೇವಿಭು: । ಸ್ವಮುದ್ರಾಂ ಸ್ವಾಶ್ರಮಂ ಚ ಪೀಠಮಾಚಾರಪುಸ್ತಕಂ ॥೧೫॥ ಸಂಪ್ರದಾಯೈವಮೇವೈತನ್ಮತಸ್ಯ ಪರಿಪಾಲನಂ । ಕುರುಷ್ವ ಲೋಕೋದ್ಧರಣಾರ್ಥಂ ಶಿಷ್ಯಸಂಕ್ತಿಂ ಪ್ರವರ್ಧಯ ॥೧೬ ॥ ಇತ್ಥಂ ಪ್ರಶಾಸ್ಯ ಭಗವಾನ್ನಿರಂಜನವಿಭುಸ್ತದಾ । ಗಣಾಧ್ಯಕ್ಷೈಸ್ಸಮಂ ಲೋಕಹಿತಾರ್ಥಂ ಸಂಚರನ್‌ಭುವಿ ॥೧೭॥ ಭಕ್ತೌಘಾಘವಿನಾಶಾರ್ಥಂ ದೀಕ್ಷಾಶಿಕ್ಷಾದಿಕಂ ತಥಾ । ವಿಧಾಯಾಥ ಸಮಸ್ತೇಷು ದೇಶೇಷ್ವಪಿ ಹಿತೇಚ್ಛಯಾ ॥೧೮॥ ವಿಸ್ತಾರ್ಯ ಮಾಮಕಂ ಧರ್ಮಂ ಪುನರ್ಮಾಂ ಸಮುಪೇಷ್ಯತಿ। ತತಸ್ತದ್ವಂಶಜಾ ಭೂಮೌ ತದಾಚರಣಸಂಯುತಾ: ॥೧೯॥ ಸರ್ವಭಕ್ತಾನುಗ್ರಹಾರ್ಥಮಟಿತ್ವಾ ಭೂತಲೇಽಖಿಲೇ। ತತ್ರ ತತ್ರ ಮಠಾನ್‌ಸ್ಥಾಪಯಿತ್ವಾ ದೀಕ್ಷಾದಿಕಾನಪಿ ॥೨೦॥ ಸಂಸ್ಕಾರಾನ್ ಬಹುಧಾ ಕೃತ್ವೈವೋದ್ಧರಿಷ್ಯಂತಿ ಮನ್ಮತಂ ।

ಮಂದರಾದ್ರಿಯಲ್ಲಿ ಶಿವಗಣಗಳೆಲ್ಲ ಕೂಡಿ ನಿಷ್ಕಲಂಕನಾದಪರಮೇಶ್ವರನನ್ನು ಕುರಿತು, ಸಂಸಾರಬಂಧನದಿಂದ ಪಾರಾಗುವ ಹಾಗು ಮುಂದೆ ಸಂಭವಿಸತಕ್ಕಂಥ ಶಿವಲೀಲೆಯನ್ನು ತಿಳಕೊಳ್ಳುವ ಇಚ್ಛೆಯಿಂದ ಪರಮೇಶ್ವರನನ್ನು ಪ್ರಾರ್ಥಿಸಿಕೊಳ್ಳಲು ಅವನು ಲೀಲೆಯಿಂದ ನುಡಿದದ್ದೇನಂದರೆ—

" ನನ್ನ ಮಸ್ತಕದೊಳಗಿನ ಚಕ್ರಮಧ್ಯದಿಂದ ಮೋಕ್ಷದಾಯಕವೂ, ನಿಷ್ಕಲಂಕವೂ ತೇಜೋಮಯವೂ ಆದ ಸಾಕ್ಷಾತ್ ಚರಲಿಂಗವು ಅವತರಿಸಿತು. ಇದು ನನಗಿಂತ ನೂರುಪಾಲು ದೊಡ್ಡದು. ನಾನು ಶ್ರೇಷ್ಠವಾದ ಶಕ್ತಿಯಿಂದ ಕೂಡಿದವನು. ಇದು ಶಕ್ತಿಯನ್ನು ಮೀರಿದ್ದು; ನಾನು ಕಲಾಯುಕ್ತನು, ಅದು ಕಲೆಗಳಿಂದ ಅಲಿಪ್ತವಾದದ್ದು; ನಾನು ವರ್ಣವುಳ್ಳವನು ಅದು ವರ್ಣಾತೀತವಾದದ್ದು. ಈ ಚರಲಿಂಗಕ್ಕೆ ಕೃತಯುಗದಲ್ಲಿ ನಿರಂಜನವೆಂತಲೂ, ದ್ವಾಪರಯುಗದಲ್ಲಿ ನಿಷ್ಕಲಂಕವೆಂತಲೂ, ಕಲಿಯುಗದಲ್ಲಿ ಪ್ರಭುವೆಂತಲೂ, ಹೆಸರು. ಕಲಿಯುಗದಲ್ಲಿ ಈ ಪ್ರಭುದೇವರ ಪೀಠವು ಬಸವೇಶಾದಿ ಪ್ರಮಥರಿಂದ ಕಲ್ಯಾಣಪಟ್ಟಣದಲ್ಲಿ ಸ್ಥಾಪಿಸಲ್ಪಡುವದು. ಅದು ತ್ರಿಚೈತನ್ಯವುಳ್ಳದ್ದೂ, ಒಂದರಲ್ಲಿಯೇ ಮೂರು ರೂಪಗಳುಳ್ಳದ್ದೂ, ನಾದ-ಬಿಂದು ಕಲಾಮಯವಾದದ್ದೂ, ಶೂನ್ಯರೂಪವಾದದ್ದೂ, ಓಂಕಾರ, ನಿರ್ಗುಣ, ಸರ್ವಶೂನ್ಯತ್ವದಿಂದ ಯುಕ್ತವಾದದ್ದೂ, ಮೂರು ಭೇದಗಳಿಂದ ಕೂಡಿದ್ದೂ ಇರುತ್ತದೆ. ಮೂರು ಭಾಗ ಓಂಕಾರವು ಈ ಪೀಠದಲ್ಲಿರುವದರಿಂದ ಇದು ಮೂರು ಭೇದದಿಂದ ಕೂಡಿರುವದೆಂದು ಎಣಿಸುವರು. ಇದೇ ಕಾರಣದಿಂದ ಇದು ಜಗತ್ತಿನಲ್ಲಿ ಶೂನ್ಯ ಸಿಂಹಾಸನವೆಂದು ಪ್ರಸಿದ್ಧಿಯನ್ನು ಪಡೆಯುವದು; ಪ್ರಮಥಗಣಗಳಿಗೆ ಅಧಿಪತಿಯಾದ ಭಗವಾನ್ ಪ್ರಭುವು ಭಕ್ತಾಧೀನನಾದ್ದರಿಂದ ಅವನು ಬಸವೇಶನ ಮಂದಿರಕ್ಕೆ ಹೋಗಿ ಅಲ್ಲಿಯ ಶೂನ್ಯಪೀಠವನ್ನು ಆರೋಹಣ ಮಾಡುವನು. ಬಸವೇಶಾದಿ ಪ್ರಮಥರಿಗೆ ಅನುಗ್ರಹಮಾಡಿ ಜ್ಞಾನದೀಕ್ಷೆಯನ್ನು ಈಯುವನು; ಹಾಗು ಸಕಲ ವೇದಾಂತ ಸಾರಸಂಗ್ರಹ ಸ್ವರೂಪವಾದ ಲಿಂಗಧಾರಣ ರಹಸ್ಯವನ್ನು ಬೋಧಿಸಿ, ಎಲ್ಲರ ದೋಷವನ್ನು ಪರಿಹರಿಸಿ ಪ್ರಸಾದವನ್ನಿತ್ತು,

ಪವಿತ್ರಗೊಳಿಸುವನು. ಅನಂತರ ಷಟ್‌ಸ್ಥಲ ಬ್ರಹ್ಮಿಯೂ, ಬ್ರಹ್ಮಚಾರಿಯೂ ಆದ ಶ್ರೀ ಚೆನ್ನಬಸವೇಶ್ವರಸ್ವಾಮಿಯನ್ನು ಕೃಪೆ ಮಾಡಿ ಮುಂದಕ್ಕೆ ಕರೆದು ನಿರಾಭಾರೀ ವಿರಕ್ತಾಶ್ರಮವನ್ನಿತ್ತು, ತನ್ನ ಶಿಖಾ, ಮುದ್ರೆ ಆಚಾರ ಗ್ರಂಥಗಳನ್ನು ಕೊಟ್ಟು ಶೂನ್ಯಪೀಠದ ಮೇಲೆ ಕುಳ್ಳಿರಿಸುವನು. ಮತ್ತು ಇದೇ ಸಾಂಪ್ರದಾಯದ ಮೇರೆಗೆ ಈ ಮತವನ್ನು ಪರಿಪಾಲಿಸುತ್ತ ಲೋಕೋದ್ಧಾರಕ್ಕಾಗಿ ಶಿಷ್ಯಸಮೂಹವನ್ನು ಬೆಳಿಸು. ಎಂದು ಆಜ್ಞಾಪಿಸುವನು. ಆ ಮೇಲೆ ಚಿಸ್ವತ್‌ರೂಪನಾದ ಆ ನಿರಂಜನಪ್ರಭುವು ಗಣಶ್ರೇಷ್ಠರಿಂದ ಕೂಡಿಕೊಂಡು, ಲೋಕಕಲ್ಯಾಣಕ್ಕಾಗಿ ದೇಶ ಸಂಚಾರ ಮಾಡುತ್ತ ಭಕ್ತರ ಪಾಪ ಪರಿಹಾರಾರ್ಥವಾಗಿ ದೀಕ್ಷೆಯನ್ನೂ ಜ್ಞಾನೋಪದೇಶವನ್ನೂ ಮಾಡಿ ದೇಶಾಂತರದಲ್ಲಿ ನನ್ನ ಧರ್ಮವನ್ನು ಪ್ರಸಾರ ಮಾಡಿ ಪುನಃ ನನ್ನ ಸನ್ನಿಧಿಗೆ ಬರುವನು. ಆ ಮೇಲೆ ಜಗತ್ತಿನಲ್ಲಿ ಆತನ ವಂಶದವರು ಆತನು ತೋರಿಸಿಕೊಟ್ಟ ಆಚರಣೆಯಿಂದ ಕೂಡಿದವರಾಗಿ ಭಕ್ತೋದ್ಧಾರಕ್ಕಾಗಿ ಭೂಮಿಯನ್ನು ಸಂಚರಿಸಿ, ವಿರಕ್ತರ ಮಠಗಳನ್ನು ಸ್ಥಾಪಿಸಿ, ದೀಕ್ಷಾಸಂಸ್ಕಾರ ಮಾಡಿ ನನ್ನ ವೀರಶೈವ ಮತವನ್ನು ಪೋಷಿಸುವರು. ”

ವಾಚಕರೇ, ಮೇಲಿನ ಪರಶಿವನ ಉಕ್ತಿಯಂತೆ ಕಲಿಯುಗದಲ್ಲಿ ಶ್ರೀಮದಲ್ಲಮ ಪ್ರಭುದೇವರು ಜಗದ್ಗುರು ಶೂನ್ಯಸಿಂಹಾಸನವನ್ನು ಮೊದಲು ಏರಿದವರು. ಇವರ ತರುವಾಯ ಷಣ್ಮುಖಾವತಾರಿಯಾದ ಶ್ರೀಚನ್ನಬಸವಣ್ಣನವರು ಈ ಶೂನ್ಯಸಿಂಹಾಸನದ ಮೊದಲನೇ ಅಧಿಪತಿಗಳಾದರು. ಇವರಿಂದ ಮುಂದೆ ನಾವು ಹಿಂದೆ ೧ನೇ ಅಧ್ಯಾಯದ ಆರಂಭದಲ್ಲಿ ಹೇಳಿದಂತೆ ಎಲ್ಲ ಶಾಖೋಪಶಾಖ ಮಠಗಳಿಗೆ ಬೊಡ್ಡೆಯಂತಿದ್ದದ್ದೂ ಮೂಲ ಮಠವೂ ಆದ ಚಿನ್ಮೂಲಾದ್ರಿಯಲ್ಲಿಯ ಬ್ರಹನ್ಮಠಕ್ಕೆ ಅನಾದಿಜಂಗಮನವತಾರವಾಗಿದ್ದ ಶ್ರೀ.ಶ್ರೀ. ತೋಂಟದ ಸಿದ್ಧೇಶ್ವರಸ್ವಾಮಿಗಳು ಅಧಿಪತಿಗಳಾದರು. ಇವರಿಂದ ಇಲ್ಲಿಯವರೆಗೆ ಈ ಜಗದ್ಗುರುಪೀಠದಮೇಲೆ ಕುಳಿತ ೨೩ ಮಹಾಸ್ವಾಮಿಗಳ ಸಂಕ್ಷಿಪ್ತ ಮಾಹಿತಿಯನ್ನು ಇಲ್ಲಿ ಕೊಟ್ಟು ಪ್ರಸ್ತುತ ಚರಿತ್ರೆಯಕಡೆಗೆ ಹೊರಳುವೆವು.

೨. ಶ್ರೀತೋಟದ ಸಿದ್ಧೇಶ್ವರಸ್ವಾಮಿಗಳು ಈ ಪೀಠವನ್ನು ಅಲಂಕರಿಸಿದ ಮೇಲೆ ಇವರು ವೀರಶೈವ ಮತೋದ್ಧಾರ ಮಾಡುತ್ತ ದೇಶಸಂಚಾರ ಮಾಡಿ,

ಕಗ್ಗೇರೀತೋಟದಲ್ಲಿ ವಾಯುವನ್ನು ಸವೆದು ಘನಘೋರ ತಪಸ್ಸನ್ನು ಕೈಕೊಂಡರು. ಇವರು ಅನೇಕ ಮಹತ್ವಗಳನ್ನು ತೋರಿಸಿ ೧೦೦ ವರ್ಷ ಕಳೆದು ಎಡೆಯೂರಲ್ಲಿ ಶಿವೈಕ್ಯರಾದರು. ಇವರ ಗದ್ದುಗೆಯು ಅಲ್ಲಿಯೇ ಅದೆ. (೩) ಇವರ ತರುವಾಯ ಶ್ರೀ ನಿರಕ್ಷರ ಬೋಳಬಸವೇಶ್ವರ ಸ್ವಾಮಿಗಳು ಪಟ್ಟಕ್ಕೆ ಬಂದರು. ಇವರು ಘನವಿದ್ವಾಂಸರು; ಇವರು ಅನೇಕ ಮಹಾತ್ಮ್ಯಗಳನ್ನು ತೋರಿಸಿ ೯೬ ವರ್ಷಗಳನ್ನು ಕಳೆದು ಮಧುಗಿರಿಯಲ್ಲಿ ಶಿವೈಕ್ಯರಾದರು ಇವರ ಗದ್ದಿಗೆಯು ಅಲ್ಲಿಯೇ ಅದೆ. ೪ನೇಪಟ್ಟವು ಶ್ರೀ ಸಿದ್ಧವೀರ ಸ್ವಾಮಿ ಎಂಬವರಿಗಾಯಿತು. ಸಕಲಶಾಸ್ತ್ರ ಕೋವಿದರಾದ ಇವರು ವೀರಶೈವ ಧರ್ಮಪಾಲನೆಮಾಡಿ ೯೮ವರ್ಷ ಕಳೆದು ಗುಮ್ಮಾಳಪುರದಲ್ಲಿಅಂತರ್ಧಾನರಾದರು. ಇವರ ಗದ್ದಿಗೆಯು ಅಲ್ಲಿಯೇ ಅದೆ ಮುಂದೆ ೫ನೇಪಟ್ಟಕ್ಕೆ ಶ್ರೀ ಸಿದ್ಧವೀರ ದೇಶಿಕೇಂದ್ರಸ್ವಾಮಿಗಳೆಂಬವರು, (ಗುಳೂರಲ್ಲಿ ಗದ್ದಿಗೆ) ೬ನೇ ಪಟ್ಟಕ್ಕೆ ಗಗನಸ್ವಾಮಿಗಳೆಂಬವರು, (ಭೈರವದುರ್ಗದಲ್ಲಿ ಗದ್ದಿಗೆ) ೭ನೇ ಪಟ್ಟಕ್ಕೆ ಕಟ್ಟಿಗೇ ಹಳ್ಳಿ ಸ್ವಾಮಿಗಳೆಂಬವರು, (ತಿಳವಳ್ಳಿಯಲ್ಲಿ ಗದ್ದಿಗೆ)ಬಂದು ವೀರಶೈವ ಧರ್ಮ ಪರಿಪಾಲನೆ ಮಾಡಿದರು. ಮುಂದೆ ೮ನೇ ಪಟ್ಟಕ್ಕೆ ಸಾಕ್ಷಾತ್ ಶಿವನೇ ಮುರಘರಾಜೇಂದ್ರ ಸ್ವಾಮಿಗಳ ರೂಪದಿಂದ ವೀರಶೈವ ಮತೋದ್ಧಾರಕ್ಕಾಗಿ ಅವತರಿಸಿದನು. ಇವರು ಅನೇಕ ಮಹಾತ್ಮ್ಯಗಳನ್ನು ತೋರಿಸುತ್ತಲೂ, ಭಕ್ತೋದ್ಧಾರ ಮಾಡುತ್ತಲೂ, ಚಿನ್ಮೂಲಾದ್ರಿಗೆ ಆಗಮಿಸಿದರು. ಇಲ್ಲಿ ಭರಮನಾಯಕನೆಂಬ ಬೇಡರಹುಡುಗನ ತಲೆಯ ಮೇಲೆ ಮಲಗಿದಾಗ ಸರ್ಪವು ಹೆಡೆಯಾಡಿಸುತ್ತಿರುವದು ಇವರ ದೃಷ್ಟಿಗೆ ಬಿದ್ದಿತು. ಆಗ ರಾಜಾಂಶನಾದ ಆ ಹುಡುಗನ ಮೇಲೆ ಮಹಾಸ್ವಾಮಿಗಳ ಅನುಗ್ರಹವಾಗಲು ದುರ್ಗದ ಚಂದ್ರಮೌಳೀರಾಜನ ಅರಸೊತ್ತಿಗೆಯು ಭರಮನಾಯಕನಿಗೆ ಪ್ರಾಪ್ತವಾಯಿತು. ತದನಂತರ ಶ್ರೀ—ಶ್ರೀಗಳು ಮೈಸೂರಿಗೆ ಹೋಗಿ ತ್ರಿಮತಸ್ಥರನ್ನು ವಾದದಲ್ಲಿ ಜಯಿಸಿ, ಲಿಂಗಸೂತ್ರನಿರ್ಣಯವನ್ನು ಕೊಟ್ಟರು. ಆಗ ಮೈಸೂರಧೊರೆಗಳು ಸಕಲ ಬಿರುದಾವಳಿಗಳಿಂದ ಇವರನ್ನು ಗೌರವಿಸಿದರು. ಮುಂದೆ ಇವರು ದಿಗ್ವಿಜಯಾರ್ಥವಾಗಿ ದಿಲ್ಲಿಗೆ ಪ್ರಯಾಣ ಬೆಳೆಸಿದರು. ಇಲ್ಲಿ ಇವರ ಅನುಗ್ರಹಬಲದಿಂದ ಮೃತಪಟ್ಟ ಪಟ್ಟದಾನೆಯು ಸಜೀವವಾಯಿತು. ಇದರಿಂದ ಬಾದಶಹನಿಗೆ ಪೂಜ್ಯಬುದ್ಧಿ

ಯು ಹುಟ್ಟಲು ಸಕಲ ಮರ್ಯಾದೆಗಳಿಂದ ಅರಮನೆಗೆ ಕರೆದೊಯ್ದು ಪೂಜಿಸಿದನು. ಆಗ ಶ್ರೀ—ಶ್ರೀಗಳವರಿಂದ ಶ್ರೀ ಚನ್ನಬಸವೇಶ್ವರರಕಾಲದಲ್ಲಿ ವಜೀರ ಮಲ್ಲೂಖಾನನಿಂದ ಕಳಿಸಲ್ಪಟ್ಟ ಶೂನ್ಯಸಿಂಹಾಸನದ ಶಿಖಾ, ಶೈಲ, ಸುವರ್ಣ ಸಿಂಹಾಸನಗಳನ್ನು ಸಮರ್ಪಿಸಲು ಅಪ್ಪಣೆಯಾಯಿತು. ಬಾದಶಹನು ಈ ಬಗ್ಗೆ ತನ್ನಲ್ಲಿಯೂ ದಾಖಲೆಗಳಿರುವದನ್ನು ಕಂಡು ಚಕಿತನಾಗಿ ಇವುಗಳನ್ನೂ ತನ್ನ ಸ್ವಂತಾದ ಲಾಲಶಿಖೆ, ಹಸರುಜುಂಟ್ಟಿ ಸದರಗುಂಡಗಳನ್ನೂ ಸ್ವಾಮಿಗಳಿಗೆ ಸಮರ್ಪಿಸಿ, "ಜಂಗಮ ಜಿತಾಪೀರ" ಎಂಬ ಪದವಿಯನ್ನು ಸಮರ್ಪಿಸಿ, ಗೌರವಿಸಿದನು. ಮುಂದೆ ಶ್ರೀ—ಶ್ರೀಗಳು ಬಾದಶಹನಿಗೆ ಅನುಗ್ರಹ ಮಾಡಿ ಸಂಚಾರಮಾಡುತ್ತ ಹೈದರಾಬಾದಿಗೆ ಬಿಜಯಂಗೈದರು. ಇಲ್ಲಿಯು ಬಾದಶಹನೂ ರಾಜಮರ್ಯಾದೆಯಿಂದ ಇವರನ್ನು ಕರತಂದು ಪೂಜಿಸಿದನು. ಇಲ್ಲಿಯೂ ಮೃತಪಟ್ಟಪಟ್ಟದಾನೆಯು ಶ್ರೀಗಳವರ ಕೃಪಾಪ್ರಸಾದದಿಂದ ಸಜೀವವಾಗಲು ಬಾದಶಹನ ಭಕ್ತಿವಿಶ್ವಾಸಗಳು ದ್ವಿಗುಣಿತವಾದವು. ಆಗ ಅವನು ೪ ಶ್ವೇತಛತ್ರ, ೨ ಪಲ್ಲಕ್ಕಿ, ಅನೇಕ ಭೂದಾನಗಳನ್ನು ಸಮರ್ಪಿಸಿದನು. ತರುವಾಯ ಶ್ರೀ. ಶ್ರೀಗಳು ಚಿನ್ಮೂಲಾದ್ರಿಗೆ ಬಿಜಯಂಗೈದು ಭರಮನಾಯಕನಿಗೆ ದರ್ಶನಕೊಟ್ಟು ಸಂತೋಷಗೊಳಿಸಿದರು. ಹಾಗೂ ಅವನಿಂದ ೩೬೦ ಅಂಕಣಗಳುಳ್ಳ ಕಲ್ಲಿನಮಠವನ್ನು ಕಟ್ಟಿಸಿ ಲಿಂಗಾರ್ಚನೆ ದಾಸೋಹಾದಿ ಕಾರ್ಯಗಳು ಅವಿಚ್ಛಿನ್ನವಾಗಿ ನಡೆಯುವಂತೆ ಏರ್ಪಾಟು ಮಾಡಿದರು. ಅನಂತರ ಬೆಟ್ಟದ ಸಮೀಪದಲ್ಲಿ ಮತ್ತೊಂದು ಮಠವನ್ನೂ ತಯಾರಿಸಿ ಅದರಲ್ಲೊಂದು ಯೋಗಸಮಾಧಿಯನ್ನು ಸಿದ್ಧಪಡಿಸಿ ತಮ್ಮ ತರುವಾಯ ಇಮ್ಮಡಿ ಗುರುಸಿದ್ಧಸ್ವಾಮಿಗಳನ್ನು ಶೂನ್ಯಪೀಠದ ಮೇಲೆ ಕೂಡ್ರಿಸಿ ಈ ಸಮಾಧಿಯಲ್ಲಿ ಸಶರೀರ ಶಿವೈಕ್ಯರಾದರು. ಇದೇ ಬೃಹನ್ಮಠದಲ್ಲಿಯ ಕರ್ತೃಗದ್ದಿಗೆಯು. ಈ ಗದ್ದಿಗೆಗೆ ಸದ್ಭಾವನೆಯಿಂದ ನಡಕೊಳ್ಳುವವರ ಇಚ್ಛೆಗಳು ಈಗಲೂ ಈಡೇರುತ್ತಿರುವವು.

ಮುಂದೆ ೯ನೇಪಟ್ಟವನ್ನು ಇಮ್ಮಡಿ ಗುರುಸಿದ್ಧಸ್ವಾಮಿಗಳು ಆಳಿದರು. ಇವರ ತೋರಗದ್ದಿಗೆಯು ಅನಂತಪುರದಲ್ಲಿದೆ. ಇವರಿಂದ ಮುಂದೆ ೧೦ನೇ ಪಟ್ಟವನ್ನು ಸ್ವಾದಿಯ ಚನ್ನಬಸವಸ್ವಾಮಿಗಳು, (ಮಾಗಡಿಯಲ್ಲಿ ಗದ್ದಿಗೆ) ೧೧ನೇಪಟ್ಟವನ್ನು ಶಿರಹಟ್ಟಿಯ ಸಿದ್ಧಲಿಂಗಸ್ವಾಮಿಗಳು, (ಚಂಗಡಿಯಲ್ಲಿ

ಗದ್ದಿಗೆ) ೧೨ನೇಪಟ್ಟವನ್ನು ಗುರುಪಾದಸ್ವಾಮಿಗಳು(ಗುಮುಟಕಲ್ಲಿನಲ್ಲಿಗದ್ದಿಗೆ) ೧೩ನೇಪಟ್ಟವನ್ನು ಮೂರುಸಾವಿರಗುರುಪಾದಸ್ವಾಮಿಗಳು (ಚಿತ್ರದುರ್ಗದಲ್ಲಿ ಗದ್ದಿಗೆ) ೧೪ನೇಪಟ್ಟವನ್ನು ಮೂರುಸಾವಿರ ಶಿವಲಿಂಗಸ್ವಾಮಿಗಳು (ಮಾಗಡಿಯಲ್ಲಿ ಗದ್ದಿಗೆ) ೧೫ನೇಪಟ್ಟವನ್ನು ಒಪ್ಪತ್ತಿನ ಚನ್ನವೀರಸ್ವಾಮಿಗಳು [ತಿಳುವಳ್ಳಿಯಲ್ಲಿ ಗದ್ದಿಗೆ] ೧೬ನೇಪಟ್ಟವನ್ನು ವ್ಯಾಕರಣ ಸಿದ್ಧಲಿಂಗಸ್ವಾಮಿಗಳು [ಮಾಗಡಿಯಲ್ಲಿ ಗದ್ದಿಗೆ] ೧೭ನೇಪಟ್ಟವನ್ನು ನೈಘಂಟಿನ ಸಿದ್ಧಬಸವಸ್ವಾಮಿಗಳು [ಹಾವೇರಿಯಲ್ಲಿ ಗದ್ದಿಗೆ] ೧೮ನೇಪಟ್ಟವನ್ನು ಸಣ್ಣಬರಹದ ರಾಚೋಟಿಸ್ವಾಮಿಗಳು [ಚಿತ್ರದುರ್ಗದಲ್ಲಿ ಗದ್ದಿಗೆ] ೧೯ನೇಪಟ್ಟವನ್ನು ಸಾವಳಗಿಗುರುಸಾಂತಸ್ವಾಮಿಗಳು [ಚಿತ್ರದುರ್ಗದಲ್ಲಿ ಗದ್ದಿಗೆ] ೨೦ ನೇ ಪಟ್ಟವನ್ನು ಸಣ್ಣಸಾದ ಚನ್ನವೀರಸ್ವಾಮಿಗಳು [ಚಿತ್ರದುರ್ಗದಲ್ಲಿ ಗದ್ದಿಗೆ] ಅಲಂಕರಿಸಿ ವೀರಶೈವಧರ್ಮ ಪರಿಪಾಲನೆ ಮಾಡಿ ಶಿವಲೋಕವನ್ನೈದಿದರು. ಮುಂದೆ ೨೧ನೇಪಟ್ಟಕ್ಕೆ ಷಣ್ಮುಖಾಂಶರೆಂದು ಪ್ರಖ್ಯಾತರಾದ ಶ್ರೀಮಹಾಲಿಂಗಸ್ವಾಮಿಗಳು ಶಾ. ಶ. ೧೭೮೪ರಲ್ಲಿ ಅಲಂಕರಿಸಿ ಅನೇಕ ಲೀಲೆಗಳನ್ನು ತೋರಿಸಿ ಶಿರಸಂಗಿಯಲ್ಲಿ ಶಿವೈಕ್ಯರಾದರು. ಇವರ ತೋರಗದ್ದಿಗೆಯು ಅಲ್ಲಿಯೇ ಅದೆ. ಇವರಿಂದ ಮುಂದೆ ೨೨ನೇಪಟ್ಟವು ರುದ್ರಸ್ವಾಮಿಗಳೆಂಬವರಿಗಾಯಿತು. ಇವರಕಾಲದಲ್ಲಿ ಬ್ರಹನ್ಮಠವು ಬಹಳ ಘನತೆಯನ್ನು ಹೊಂದಿ ಮೈಸೂರಧೊರೆಗಳಿಂದ ಜಹಾಗೀರನ್ನೂ ಘನತೆಯನ್ನೂ ಪಡೆಯಿತು. ಇವರು ೧೩ವರ್ಷ ವೀರಶೈವಧರ್ಮಪಾಲನೆ ಮಾಡಿ ಶಾ. ಶ. ೧೮೦೩ ರಲ್ಲಿ ಬ್ರಹನ್ಮಠದಲ್ಲಿ ಶಿವೈಕ್ಯರಾದರು. ಇವರ ಗದ್ದಿಗೆ ಇಲ್ಲಿಯೇ ಅದೆ. ಅನಂತರ ಮುಂದಿನ ೨೩ನೇಪಟ್ಟವು ಬ್ಯಾಡಿಗಿಯ ಮುಪ್ಪೇಂದ್ರಸ್ವಾಮಿಗಳೆಂಬವರಿಗಾಯಿತು. ಇವರು ಮಹಾತಪಸ್ವಿಗಳು; ಇವರು ಅನೇಕ ಮಹಾತ್ಮ್ಯೆಗಳನ್ನು ತೋರಿಸಿ, ಶಾ. ಶ. ೧೮೨೪ರಲ್ಲಿ ಬ್ಯಾಡಿಗಿಯಲ್ಲಿ ಶಿವೈಕ್ಯರಾದರು. ಇವರ ಗದ್ದಿಗೆಯು ಅಲ್ಲಿಯೇ ಅದೆ.

ಅನಂತರ ಮುಂದಿನ ೨೪ ನೇಪಟ್ಟವು ಈಗ ಸದ್ಯಕ್ಕೆ ವೀರಶೈವಮತಾಬ್ಧಿಚಂದ್ರನೋಪಾದಿಯಲ್ಲಿರುವ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರಘರಾಜೇಂದ್ರಮಹಾಸ್ವಾಮಿಗಳಿಗಾಯಿತು. ಇವರ ಕಾಲದಲ್ಲಿ ಸಂಭವಿಸಿದ ನಮ್ಮ ಪ್ರಸ್ತುತ ಚರಿತ್ರೆಗೆ ಸಂಬಂಧಿಸಿದ ಈವಿಷಯವನ್ನು ಕುರಿತು ಮುಂದೆ ವಿಸ್ತರಿಸುವೆವು.

# ೮ನೇ ಅಧ್ಯಾಯ.

## ಸಿಂಹಾಸನಾರೋಹಣ.

ಹಿಂದಿನ ಅಧ್ಯಾಯದ ಕೊನೆಗೆ ಹೇಳಿದಂತೆ ಈ ಜಗದ್ಗುರು ಪೀಠದ ೨೩ನೇ ಮಹಾಸ್ವಾಮಿಗಳಾದ ಮುಪ್ಪೇಂದ್ರಸ್ವಾಮಿಗಳು ಅಂತರ್ಧಾನರಾಗಲು ಈ ಪೀಠಕ್ಕೆ ಹೊಸ ಅಧಿಪತಿಗಳನ್ನಾರಿಸುವ ಪ್ರಸಂಗವು ವೀರಶೈವ ಸಮಾಜಕ್ಕೆ ಪ್ರಾಪ್ತವಾಯಿತು. ಇದನ್ನು ಹಿಂದೆ ಹೇಳಿದಂತೆ ತಪೋನಿಷ್ಠರೂ, ವೈರಾಗ್ಯಶಾಲಿಗಳೂ, ವಿದ್ವಾಂಸರೂ, ಆದ ವಿಭೂತಿಗಳೇ ಅಲಂಕರಿಸುತ್ತ ಬಂದಿದ್ದರು. ಈ ಪೀಠದ ಅನ್ನದಾನ ವಿದ್ಯಾದಾನಗಳ ಕೀರ್ತಿಯು ಅಖಿಲ ಭರತಖಂಡದಲ್ಲಿ ಖ್ಯಾತಿಗೊಂಡಿತ್ತು. ಕಾರಣ ಈಪೀಠಕ್ಕೆಸರ್ವಸದ್ಗುಣಗಳಿಂದ ಅಲಂಕೃತರೂ, ಶಿವಲಕ್ಷಣಗಳಿಂದ ಕೂಡಿದವರೂ ಆದವರನ್ನೇ ಆರಿಸಬೇಕೆಂಬ ಆಂದೋಲನವು ವೀರಶೈವ ಸಮಾಜದಲ್ಲಿ ಪ್ರಾರಂಭವಾಗಿತ್ತು.

ಈ ಜಗದ್ಗುರುತ್ವವನ್ನು ಹೊಂದುವ ವಿಭೂತಿಯು ಸತ್ಕುಲ ಪ್ರಸೂತರಾಗಿರಬೇಕು. ಶಿವದೀಕ್ಷೋಪನಯನವೆಂಬ ಮಹಾ ಸಂಸ್ಕಾರವನ್ನು ಪಡೆದು ಗುರುಗಳ ಸನ್ನಿಧಿಯಲ್ಲಿ ಶಾಸ್ತ್ರಾಧ್ಯಯನವನ್ನು ಮಾಡಿದವರಿರಬೇಕು. ಲಿಂಗರೂಪಿಯಾದ ಶಿವನನ್ನು ಭಕ್ತಿಯಿಂದ ಆರಾಧಿಸುವರಿರಬೇಕು; ವಿದ್ಯಾವಿನಯನೀತಿಗಳಿಂದ ಕೂಡಿದವರಾಗಿರಬೇಕು; ಶಮದಮಾದಿ ಸದ್ಗುಣಗಳುಳ್ಳವರಾಗಿರಬೇಕು; ವೇದ ವೇದಾಂಗಶಾಸ್ತ್ರಗಳನ್ನು ಅಧ್ಯಯನ ಮಾಡಿ ಶಿವಸರ್ವೋತ್ತಮತ್ವವನ್ನೂ ಸದಾಚಾರವನ್ನೂ ಬಲ್ಲವರಾಗಿರಬೇಕು. ಸಾರಾಂಶ ವೀರಶೈವ ಕ್ರಿಯಾಸಾರ ಗ್ರಂಥದಲ್ಲಿ ಹೇಳಲ್ಪಟ್ಟ ಕೆಳಗೆ ಕಾಣಿಸಿದ ಗುಣಗಳು ಅವರಲ್ಲಿರಬೇಕು. ಅಂದರೆ—

K 1187

ಮಠಸ್ಥಲ ಸಮುತ್ಪನ್ನಶ್ಯಾಂತಶ್ಶೈವಾಗಮಾರ್ಥ ವಿತ್ ।
ಅನೂಚಾನಃ ಪ್ರಸನ್ನಾತ್ಮಾ ಶಿವದೀಕ್ಷಾಭಿಷೇಚಿತಃ ॥
ಶಿವಾಗಮಜ್ಞೋ ಮತಿಮಾಂ ಚ್ಛಿವಪೂಜಾಪರಾಯಣಃ ।
ರುದ್ರಾಕ್ಷಮಾಲಾಂ ಬಿಭ್ರಾಣ ಸ್ತ್ರಿಪುಂಡಾಂಕಿತ ಮಸ್ತಕಃ ॥
ವಿಶುದ್ಧ ದೇಹಃ ಕುಲಜ ಶ್ಶಿವಾಚಾರ ಸಮನ್ವಿತಃ ।
ಭಸ್ಮೋದ್ಧೂಲನ ಸಿಷ್ಣಾತೋ ಧರ್ಮವಿಚ್ಛಾಸ್ತ್ರಕೋವಿದಃ ॥
ಮಿತಾಶೀ ಮಿತ ನಿದ್ರಶ್ಚ ಯಮವಾನ್ಯೋಗತತ್ಪರಃ
ಜಿತೇಂದ್ರಿಯೋ ಜಿತದ್ವಂದ್ವಸ್ತತಶ್ಶೀಲೋ ದಯಾಪರ ಃ ॥
ಸ್ಥಿರಬುದ್ಧಿ ಸ್ಥಿರಾರಂಭ ಶಿವಪೂಜಾದಿ ಕರ್ಮವಿತ್ ।
ಸತ್ಯವಾಗೂರ್ಜಿತಃ ಪ್ರಾಜ್ಞೋ ಮೇಧಾವೀನಿಯತಃ ಶುಚೀ ।
ಲಿಂಗಾಂಗಸ್ಥಲಬೇಧಜ್ಞಃ ಷಟ್‌ಸ್ಥಲಜ್ಞಾನತತ್ಪರಃ ॥

ಈ ಗುರುಲಕ್ಷಣಗಳುಳ್ಳವರೇ ಈ ಪೀಠಕ್ಕೆ ಕೂಡ್ರಲು ಯೋಗ್ಯರು. ಯಾಕಂದರೆ ಇಂಥ ಜಗದ್ಗುರುಗಳೇ ಶಿಷ್ಯರಿಗೆ ಸುಜ್ಞಾನವನ್ನುಂಟು ಮಾಡಿ ಕೊಡಲು ಸಮರ್ಥರು! ಇವರೇ ಶರಣಾಗತನಾದ ಭಕ್ತನಿಗೆ ಮುಕ್ತಿಯನ್ನು ಕೊಡಲು ಶಕ್ತರು! ಇವರೇ ಭವರೋಗವನ್ನು ಚಿಕಿತ್ಸೆಮಾಡುವ ವೈದ್ಯರು! ಕಾರಣ ವೀರಶೈವ ಕೌಸ್ತುಭಮಣಿ, ಕ್ರಿಯಾಸಾರಾದಿ ಗ್ರಂಥಗಳಲ್ಲಿ ಹೇಳಿದ ಮೇಲಿನ ಸುಲಕ್ಷಣಗಳುಳ್ಳ ಜಗದ್ಗುರುಗಳನ್ನೇ ಈಪೀಠಕ್ಕೆ ತರಬೇಕೆಂದು ಆಗಿನಕಾಲದ ವೀರಶೈವ ಪ್ರಮುಖರಾದ ಕೈ. ವಾ. ರಾ. ಸಾ-ವಾರದ ಮಲ್ಲಪ್ಪನವರೂ, ಡಾ॥ ಸರ್, ಕೆ. ಪಿ. ಪುಟ್ಟಣಸೆಟ್ಟರೂ, ಶ್ರೀಮಂತ ಶಿರಸಂಗೀ ದೇಸಾಯರೂ, ಚಿತ್ರದುರ್ಗದ ಸಾವಕಾರ ಶ್ರೀ. ಕಾಡಪ್ಪನವರೂ, ಬ್ಯಾಡಿಗಿಯ ಚನ್ನಪ್ಪಶೆಟ್ಟರೂ ಆಲೋಚನೆಮಾಡತೊಡಗಿದ್ದರು. ಯಾಕಂದರೆ, ಮೇಲೆ ಹೇಳಿದ ಲಕ್ಷಣಗಳುಳ್ಳ ಜಗದ್ಗುರುಗಳನ್ನು ಹುಡುಕದೆ ನಾಮಧಾರೀ ಜಗದ್ಗುರುಗಳನ್ನು ಯಾರೊಬ್ಬರ ಭಿಡೆಗೆ ಬಿದ್ದು ಚುನಾಯಿಸಿದರೆ ಇಂಥ ಜಗದ್ಗುರುಗಳಿಂದ ಶಿಷ್ಯರ ಭವಪಾಶವು ದೂರಾಗದೆಂದೂ, ಪರದೇಶಸ್ಥರ ಸಂಸ್ಕೃತಿಯಿಂದ ಮಲಿನವಾಗತೊಡಗಿದ್ದ ವೀರಶೈವ ಧರ್ಮದ ಉದ್ಧಾರವಾಗ

ಲೆಂದೂ ಇವರು ಅರಿತವರಾಗಿದ್ದರು. ಬಸವೇಶ್ವರರ ಅವತಾರವಾಗಿ ಬಹಳ ಶತಮಾನಗಳಾಗಿ ಹೋದದ್ದರಿಂದ ವೀರಶೈವಸಮಾಜದಲ್ಲಿ ಹಾಕಿದ ಕಟ್ಟಳೆಗಳು ಸಡಿಲಾಗತೊಡಗಿದ್ದವು. ಈ ಸಮಾಜದಲ್ಲಿ ವಿದ್ಯಾಪ್ರಸಾರವು ಕಡಿಮೆ ಇದ್ದದರಿಂದ ಈ ಮತವು ಕೃಷ್ಣಪಕ್ಷದ ಚಂದ್ರಮನಂತೆ ಕಳೆಗುಂದತೊಡಗಿತ್ತು. ಪಾಶ್ಚಾತ್ಯರ ಸಂಸರ್ಗವಿಶೇಷದಿಂದ ವೀರಶೈವಧರ್ಮವು ವಿಕೃತರೂಪವನ್ನು ಹೊಂದತೊಡಗಿತ್ತು. ಕಾರಣ ವೀರಶೈವರಲ್ಲಿಯ ಇದೆಲ್ಲ ಮಾಲಿನ್ಯವನ್ನು ಹೋಗಲಾಡಿಸಿ, ವೀರಶೈವಮತವನ್ನು ಉದ್ಧರಿಸುವಂಥವರೂ, ಪ್ರತಿಮುರಘಾರಾಜೇಂದ್ರ ಮಹಾಸ್ವಾಮಿಗಳಂತೆ ಪ್ರಕಾಶಿಸುವಂಥವರೂ, ನಿಗ್ರಹಾನುಗ್ರಹಶಕ್ತಿಯುಳ್ಳವರೂ, ಆದ ಮಹಾನುಭಾವರೆಂಬ ಸೂರ್ಯನೇ ಈ ಜಗದ್ಗುರು ಶೂನ್ಯಸಿಂಹಾಸನವೆಂಬ ಗಗನಮಂಡಲವನ್ನೇರಿ ಪ್ರಕಾಶಿಸಬೇಕಾಗಿತ್ತು.

ಕಾರಣ ಕಾಶಿಯ ವಿದ್ಯಾಪೀಠದಿಂದ ಶ್ರೀಜಯದೇವ ಚೆನ್ನವೀರದೇಶಿಕರ ವಿದ್ಯಾವಿವೇಕತೆ, ಶಿವಾಚಾರ-ಶಿವನಿಷ್ಠೆ, ಪ್ರವಚನ-ಪಾಂಡಿತ್ಯ ಮೊದಲಾದ ಸಕಲ ಸದ್ಗುಣಗಳ ಹಾಗೂ ಗುರುಲಕ್ಷಣಗಳ ಕೀರ್ತಿಯನ್ನು ಕೇಳಿದ ಮೇಲಿನ ವೀರಶೈವಪ್ರಮುಖರೆಲ್ಲ ಇವರನ್ನೇ ಚಿನ್ಮೂಲಾದ್ರಿಯ ಬೃಹನ್ಮಠದ ಪಟ್ಟಕ್ಕೆ ಕೂಡ್ರಿಸಬೇಕೆಂದು ನಿರ್ಧರಿಸಿದರು. ಆದರೆ ಮಾಡಬೇಕೇನು? ಈ ಜಗದ್ಗುರುಮಠದ ಚುನಾವಣೆಯು ೪-೬ ವೀರಶೈವ ಪ್ರಮುಖ ಜನರ ಕೈಯ್ಯಲ್ಲಿಯೇ ಇರದೆ, ಬೃಹನ್ಮಠದಲ್ಲಿ ಕೂಡಿದ ಸಮಸ್ತ ಭಕ್ತಮಹೇಶ್ವರರ ಒಪ್ಪಿಗೆಯಪ್ರಕಾರ ಆಗಬೇಕೆಂದು ಮೈಸೂರ ಸರಕಾರದನಿರ್ಣಯವಾಗಿತ್ತು. ಕಡೆಗೆ ರಾ. ಸಾ. ವಾರದಮಲ್ಲಪ್ಪನವರೇ ಮೊದಲಾದ ಪ್ರಮುಖರು "ವೀರಶೈವಮತದ ಉದ್ಧಾರದಕಾಲವು ಬಂದಿದ್ದರೆ ಶ್ರೀಜಯದೇವ ಚೆನ್ನವೀರ ದೇಶಿಕರು ಜಗದ್ಗುರುಗಳಾಗುವರು. ನಾವು ಮಾಡತಕ್ಕ ಪ್ರಯತ್ನವನ್ನು ಮಾಡೋಣ;" ಎಂದು ಗಟ್ಟಿಮನಸ್ಸು ಮಾಡಿ, ಶ್ರೀ ಜಯದೇವ ಚೆನ್ನವೀರ ದೇಶಿಕರನ್ನು ಬೃಹನ್ಮಠದ ಚುನಾವಣೆಗೆ ನಿಲ್ಲಿಸಿದರು. ಶಾ. ಶ. ೧೮೩೫ನೇಶೋಭನಕೃತುನಾಮಸಂವತ್ಸರದಲ್ಲಿ ಬೃಹನ್ಮಠದಲ್ಲಿ ಈ ಚುನಾವಣೆಯು ನಡೆಯಿತು. ಸಮಸ್ತದೇಶದ ಭಕ್ತಮಾಹೇಶ್ವರರಿಗೆ ಈ ಸಂಗತಿಯನ್ನು ಲೇಖನದ್ವಾರ ತಿಳಿಸಿದ್ದರಿಂದ ಚಿತ್ರದುರ್ಗ, ದಾವಣಗೇರಿ, ಹರಿಹರ, ರಾಣೆಬೆ

ನ್ನೂರ, ಬ್ಯಾಡಿಗಿ, ಹಾವೇರಿ; ಬಂಕಾಪೂರ, ಶಿರ್ಶಿ, ಸಿದ್ದಾಪೂರ, ಮೈಸೂರ ಬೆಂಗಳೂರ, ಅರಸಿಕೇರಿ, ತಿಪಟೂರ, ತುಮಕೂರ, ಸೊಲ್ಲಾಪೂರ ಮೊದಲಾದ ಕರ್ನಾಟಕದ ಎಲ್ಲ ಭಾಗಗಳಲ್ಲಿಯ ಚರಮೂರ್ತಿಗಳೂ ಭಕ್ತಮಹೇಶ್ವರರೂ, ಶೆಟ್ಟರೂ ಈ ಸಭೆಗೆ ಆಗಮಿಸಿದ್ದರು. ಕೂಡಿದಸಭೆಯಲ್ಲಿ ಕೆಲವು ಜನರು ಒಂದಾನೊಂದು ಅಭಿಮಾನದಿಂದ ಅಂಟಿಕೊಂಡು ಈ ಚುನಾವಣಿಯಲ್ಲಿ ವಿವಿಧರೀತಿಯಿಂದ ಹೋರಾಡಿದರು. ಆದರೂ ವಿಜಯಶ್ರೀಯು ವೀರಶೈವಮತಾಬ್ಧಿ ಚಂದ್ರನಂತಿದ್ದ ಶ್ರೀಜಯದೇವ ಚೆನ್ನವೀರದೇಶಿಕರಕೊರಳಲ್ಲಿಯೇ ಮಾಲೆಯನ್ನುಹಾಕಿತು. ಕೂಡಲೇ ರಾ. ಸಾ. ವಾರದಮಲ್ಲಪ್ಪನವರೇ ಮೊದಲಾದ ವೀರಶೈವ ಪ್ರಮುಖರಿಗೆ ಹಿಡಿಸಲಾರದಷ್ಟು ಆನಂದವಾಯಿತು. ಆಗ ಶ್ರೀಜಯದೇವ ಚೆನ್ನವೀರದೇಶಿಕರನ್ನು ತಾರುಮಾಡಿ ಕರಿಸಿಕೊಂಡು ಜಗದ್ಗುರುಪೀಠಾರೋಹಣದ ಸಮಾರಂಭವನ್ನು ಹಮ್ಮಿದರು. ಅಲ್ಪಾವಧಿಯಲ್ಲಿ ಈ ಶುಭಸಂಗತಿಯು ವಾಯುವೇಗದಂತೆ ಎಲ್ಲಕಡೆಯಲ್ಲಿ ಹಬ್ಬಿತು. ಜಗದ್ಗುರು ಪೀಠಕ್ಕೆ ಬ್ರಹ್ಮಚರ್ಯೆಯಿಂದ ಒಪ್ಪುತ್ತಿರುವವರೂ ಸರ್ವಶುಭಲಕ್ಷಣಸಂಪನ್ನರೂ. ಶಿವಸ್ವರೂಪರೂ, ಆದ ಮಹಾನುಭವರು ದೊರೆತರೆಂದು ಆಬಾಲವೃದ್ಧರೂ, ಪಾಮರಪಂಡಿತರೂ, ಆನಂದಭರಿತರಾದರು. ವೀರಶೈವಸಮಾಜದೊಳಗಿನ ಭಾವಿಕರು ಶಿವಶರಣಳಾದ ಅಕ್ಕಮಹಾದೇವಿಯರು ೫೨ ಆಚಾರಗಳಿಂದಕೂಡಿದ, ಶ್ರೀಬಸವೇಶ್ವರರನ್ನು ವರ್ಣಿಸಿದ ವಚನದಂತೆ ಶ್ರೀ ಜಯದೇವ ಚೆನ್ನವೀರ ದೇಶಿಕರನ್ನು ವರ್ಣಿಸಿ ತಮ್ಮ ಆನಂದವನ್ನು ಪ್ರಕಟಗೊಳಿಸಿದರು; ಅವರು ವರ್ಣಿಸಿದ್ದು ಹೇಗೆಂದರೆ

"ನಮ್ಮ ಶ್ರೀ ಜಯದೇವ ಚೆನ್ನವೀರದೇಶಿಕ ಸ್ವಾಮಿಗಳವರು ವೀರಶೈವ ಸಮಾಜಹಿತಕ್ಕಾಗಿ ಮರ್ತ್ಯಕ್ಕವತರಿಸಿ, ವೀರಶೈವರಿಗೆ ಸದಾಚಾರ ಮಾರ್ಗವನ್ನರುಹುವದಕ್ಕೆ ಬಂದ ಪ್ರಭುದೇವರ ಅವತಾರವು. ಗುರುಕಾರುಣ್ಯವೇದ್ಯರು. ವಿಭೂತಿ ಲಸಿತಲಾಟರು. ರುದ್ರಾಕ್ಷಿಧಾರಕರು. ಪಂಚಾಕ್ಷರೀ ಮಂತ್ರಸಮೇತರು. ಲಿಂಗಾಂಗಸಂಬಂಧಿಗಳು; ನಿತ್ಯಲಿಂಗಾರ್ಚಕರು ಅರ್ಪಿತದಲ್ಲಿ ಅವಧಾನಿಗಳು, ಪಾದೋದಕ ಪ್ರಸಾದದಿಂದ ಭಕ್ತರನ್ನು ಪುನೀತ ಗೊಳಿಸುವವರು. ತನ್ನಗುರುಪುಂಗವರಲ್ಲಿ ಭಕ್ತಿಯುತರು. ಏಕಲಿಂಗ ನಿಷ್ಠಾಪರರು, ಚರಲಿಂಗಲೋಲುಪ್ತರು; ಶರಣಸಂಗಮಸ್ವರೂಪರು..

ತ್ರಿವಿಧಕ್ಕಾಯುತರು. ತ್ರಿಕರಣಶುದ್ಧರು. ತ್ರಿವಿಧಲಿಂಲಾಂಗಸಂಭಂಧಿಗಳು. ಅನ್ಯದೈವಸ್ಮರಣೆಯಹೊದ್ದರು. ಭವಿಸಂಗವಮಾಡರು. ಭವಿಪಾಕವ ಮುಟ್ಟರು, ಪರಸ್ತ್ರೀಯುಬೆರಸರು. ಪರಧನವನೊಲ್ಲರು. ಪರನಿಂದೆಯನಾಡರು. ಅನೃತವನುಡಿಯರು. ತಾಮಸಭಕ್ತರಸಂಗಮಾಡರು. ಜಂಗಮ ನಿಂದೆಯಸೈರಿಸರು. ಪ್ರಸಾದನಿಂದೆಯುಕೇಳರು. ಅನ್ಯರನಾಶೆಯ ಗೈಯರು. ಪಾತ್ರಾಪಾತ್ರವನರಿವವರು. ಚತುರ್ವಿಧಪದವಿಯುಹಾರರು. ಅರಿಷಡ್ವರ್ಗಕ್ಕೆ ಅಳುಕರು. ಕುಲಾದಿಮದಂಗಳಬಗೆಗೊಳ್ಳರು. ದ್ವೈತಾದ್ವೈತವನುಡಿವರಲ್ಲ. ಸಂಕಲ್ಪವಿಕಲ್ಪವಮಾಡುವವರಲ್ಲ. ಕಾಲೋಚಿತಬಲ್ಲವರು. ಷಟ್‌ಸ್ಥಲಜ್ಞಾನಸಂಪನ್ನರು. ಸರ್ವಾಂಗಲಿಂಗಿಗಳು ದಾಸೋಹಸಂಪನ್ನರು. ಆದುದರಿಂದ ಈ ಮಹಾನುಭಾವರರ ಪಾದಕ್ಕೆ ನಮೋ ನಮೋ."

ಎಂದು ಹೊಗಳುತ್ತ ಇವರ ಯಶಶ್ಚಂದ್ರಿಕೆಯು ದಶದಿಶೆಗಳಲ್ಲಿ ಹಬ್ಬಿ ವೀರಶೈವ ಸಮಾಜ ಮಂದಿರವನ್ನು ಬೆಳಗುವಂತೆಮಾಡಲೆಂದು ನುಡಿಯುತ್ತಿದ್ದರು. ವಾಚಕರೇ ಶ್ರೀ ಜಯದೇವ ಚನ್ನವೀರದೇಶಿಕರು ಸ್ವತಃ ಷಟ್‌ಸ್ಥಲಜ್ಞಾನಿಗಳೂ ವೈರಾಗ್ಯಶೀಲರೂ ತಪಸ್ವಿಗಳೂ ಶಾಪಾನುಗ್ರಹಸಾಮರ್ಥ್ಯವುಳ್ಳವರೂಆಗಿದ್ದರು. ಹಾಗು ಮುಂದೆ ವೀರಶೈವರಲ್ಲಿಯ ಸಮಸ್ತ ಕೊರತೆಯನ್ನು ಹೋಗಲಾಡಿಸಿ, ಭಕ್ತರನ್ನು ಉದ್ಧಾರಮಾಡುವವರಾದರು. ಅಂದ ಮೇಲೆ ಇಂಥ ಮಹನೀಯರನ್ನು ಭಕ್ತರು ಹೀಗೆ ವರ್ಣಿಸಿಕೊಂಡಾಡಿದ್ದರಲ್ಲಿ ಅತಿಶಯೋಕ್ತಿಯೇನು ?

ಈ ಮೇರೆಗೆ ವೀರಶೈವಮತೀಯರೂ, ಪರಮತೀಯರೂ, ಜಯದೇವಚೆನ್ನವೀರದೇಶಿಕೇಂದ್ರರ ಜಗದ್ಗುರುಪದವಿಯ ವಿಜಯವನ್ನುಕುರಿತು ಕೊಂಡಾಡುತ್ತಿರಲು ಸಿಂಹಾಸನಾರೋಹಣದ ಸಮಾರಂಭವು ಚಿನ್ಮೂಲಾದ್ರಿಯ ಬೃಹನ್ಮಠದಲ್ಲಿ ಜರುಗಲಿಕ್ಕೆ ಪ್ರಾರಂಭವಾಯಿತು. ಈ ಸಮಾರಂಭಕ್ಕೆ ವೀರಶೈವಸಮಾಜದೊಳಗಿದ ಹರಗುರುಚರಮೂರ್ತಿಗಳೂ, ಪಂಡಿತರೂ, ಲೌಕಿಕಶ್ರೇಷ್ಠರೂ, ಶ್ರೀಮಂತರೂ, ಸಕಲಜನರೂ, ಬೃಹನ್ಮಠದಲ್ಲಿ ಮಿಲಿತರಾದರು. ರಾ ಸಾ. ವಾರದಮಲ್ಲಪ್ಪನವರು ಈಸಮಾರಂಭದ ಸಕಲ ಸಿದ್ಧತೆಯನ್ನು ಮಾಡಿದರು.

ಶಾ. ಶ. ೧೮೨೫ನೇ ಶೋಭನಕೃತುನಾಮಸಂವತ್ಸರ ಕಾರ್ತಿಕ ಶುದ್ಧ ೧೩ನೇದಿವಸದ (ತಾ. ೩—೧೧—೧೯೦೩) ಶುಭಮುಹೂರ್ತದಲ್ಲಿ ಈ ಸಮಾರಂಭವು ಅತ್ಯಂತ ವೈಭವದೊಂದಿಗೆ ನೇರವೇರಿಸಲ್ಪಟ್ಟಿತು. ಈ ಮಹೋತ್ಸವಕ್ಕೆ ಭರತಖಂಡದ ಬೇರೆ ಬೇರೆ ಪ್ರಾಂತಗಳಿಂದ ಲಕ್ಷಾವಧಿ ಭಕ್ತಜನರು ಸಮ್ಮಿಲಿತರಾಗಿದ್ದರು. ಈ ಸಮಾರಂಭವು ಅಭೂತಪೂರ್ವವಾಗಿ ನೇರವೇರಿತು. ಇಂತಹ ಪಟ್ಟಾಭಿಷೇಕಮಹೋತ್ಸವವು ಎಲ್ಲಿಯೂ ಯಾವಕಾಲದಲ್ಲಿಯೂ ನೆರವೇರಿದ್ದಿಲ್ಲವೆಂದು ಸಕಲಜನರು ಉದ್ಗಾರವನ್ನು ತೆಗೆಯುತ್ತಿದ್ದರು. ನೂತನ ಜಗದ್ಗುರುಗಳು ಈ ಪೀಠದ ಮಹಿಮಾಶಾಲಿಗಳಾದ ಸಾಕ್ಷಾತ್ ಶ್ರೀ ಮುರಘಾರಾಜೇಂದ್ರ ಸ್ವಾಮಿಗಳಂತೆ ಜಗದ್ಗುರು ಲಕ್ಷಣಗಳುಳ್ಳವರೂ, ಜ್ಞಾನವೈರಾಗ್ಯಾದಿ ಸಕಲ ಗುಣಗಳಿಂದ ಕೂಡಿದವರೂ ಇದ್ದರಿಂದ ಆ ಜಗದ್ಗುರುಗಳೇ ಜಯದೇವ ಮುರಘಾರಾಜೇಂದ್ರ ಮಹಾಸ್ವಾಮಿಗಳ ಅಭಿದಾನದಿಂದ ಅವತರಿಸಿ ಬಂದಿರುವರೆಂಬ ಆನಂದೋದ್ಗಾರವನ್ನು ಪ್ರತಿಯೊಬ್ಬರು ತೆಗೆಯುತ್ತಿದ್ದರು. ಈ ಮಹೋತ್ಸವಕ್ಕೆ ಅನೇಕ ಪರಮಪೂಜ್ಯ ಹರ-ಗುರು ಚರಮೂರ್ತಿಗಳಲ್ಲದೆ, ದೇವಿಹೊಸೂರ ಶೆಟ್ಟರಾದ ಶ್ರೀ ಚನಬಸಪ್ಪನವರು, ಕೈ. ವಾ. ಗಿಲಗಂಚಿ ಗುರಸಿದ್ದಪ್ಪನವರು, ದಿ. ಬ. ಅರಟಾಳ ರುದ್ರಗೌಡರು, ಶ್ರೀ ಕಿತ್ತೂರ ರೇವಣಸಿದ್ದಪ್ಪಯ್ಯನವರು, ಶ್ರೀ. ರಾ. ಬ. ವಾರದಮಲ್ಲಪ್ಪನವರು ಸರ್. ಕೆ. ಪಿ. ಪುಟ್ಟಣಶೆಟ್ಟರು. ಚಿತ್ರದುರ್ಗದ ಸಾವಕಾರ ಶ್ರೀ ಕಾಡಪ್ಪನವರು, ಮಾನವಿ ಶ್ರೀ ವಿರುಪಾಕ್ಷಪ್ಪನವರು, ಬುಳ್ಳಾ ಮಡಿವಾಳಪ್ಪನವರು ಶ್ರೀ ಟಿಂಗಿನಕಾಯಿ ಚನ್ನಮಲ್ಲಪ್ಪನವರು, ದಿ. ಬ. ಮೆಣಸಿನಕಾಯಿಯವರು ಶ್ರೀಮಂತ ಶಿರಸಂಗೀ ದೇಸಾಯಿಯವರು, ಮೊದಲಾದ ವೀರಶೈವ ಪ್ರಮುಖರು ಮಿಲಿತರಾಗಿದ್ದರು. ಸಾಮಾನ್ಯಜನಸ್ತೋಮವಂತೂ ಸಮುದ್ರದಂತೆ ತೋರುತ್ತಿದ್ದಿತು.

ಮೊದಲು ಶಿವಕಲೆಗಳಿಂದ ಪ್ರಜ್ವಲಿಸುವ ನೈಷ್ಠಿಕ ಬ್ರಹ್ಮಚಾರಿಗಳಾದ ಶ್ರೀ ಜಯದೇವಚೆನ್ನವೀರದೇಶಿಕೇಂದ್ರರಿಗೆ ಸ್ವಂತದವಿಷಯದಲ್ಲಿ ನಡೆಯಬೇಕಾದ ವಿರಕ್ತಾಶ್ರಮದ ವಿಧಿಗಳೆಲ್ಲ ಮುಗಿದಮೇಲೆ ವಿದ್ಯುಕ್ತವಾಗಿ ನಿರಾಭಾರಿದೇಶಿಕ ದೀಕ್ಷೆಯು ಕೊಡಲ್ಪಟ್ಟಿತು. ಆ ಮೇಲೆ ಶ್ರೀ ಮನ್ಮಹಾರಾಜ ನಿರಂಜನ ಜಯದೇವ ಮುರಘರಾಜೇಂದ್ರ ಸ್ವಾಮಿಗಳೆಂಬ ನಾಮಧೇಯವನ್ನಿಟ್ಟರು.

ಜಗದ್ಗುರುತ್ವದ ಸಕಲರಾಜಚಿನ್ಹಗಳನ್ನೂ ಬಿರುದಾವಳಿಗಳನ್ನೂ ಒಪ್ಪಿಸಿದರು ಆ ಮೇಲೆ ಹರ-ಗುರು-ಚರಮೂರ್ತಿಗಳು ವೈದಿಕ ಮಂತ್ರಘೋಷವನ್ನು ಮಾಡತೊಡಗಿದರು, ಶಿಷ್ಯರು ಜಗದ್ಗುರುಗಳ ಜಯಘೋಷಕ್ಕೆ ಪ್ರಾರಂಭಿಸಿದರು. ಭಟ್ಟಂಗಿಗಳು ಸಕಲ ಬಿರುದಾವಳಿಗಳಿಂದ ಶ್ರೀ....ಶ್ರೀ....ಗಳನ್ನು ಹೊಗಳತೊಡಗಿದರು. ನಗಾರಿ, ನೌಬತ್ತು ಕಹಳೆ, ತುತೂರಿ ಮೊದಲಾದ ಮಂಗಲವಾದ್ಯಗಳು ಮೊಳಗತೊಡಗಿದವು. ಭಕ್ತರು ಪುಷ್ಪವೃಷ್ಟಿಯನ್ನು ಮಾಡಹತ್ತಿದರು. ಗಾಯಕರು ಗಾಯನವನ್ನು ಮಾಡಹತ್ತಿದರು. ಶಿವಕೀರ್ತನೆಗಳೂ ಶಿವಭಜನೆಗಳೂ ನಭೋಮಂಡಲವನ್ನು ವ್ಯಾಪಿಸತೊಡಗಿದವು. ಇಂಥ ಶುಭಸಮಯದಲ್ಲಿ “ ಆಧಾರಭೂತಮಿದಮೇವಹಿ ಷಟ್‌ಸ್ಥಲಾನಾಮಿತ್ಯಭಿಪೀಠ ಮುಪದರ್ಶ್ಯ ಗುರುಸ್ತದೀಯಂ। ಸತ್ಕೀಲಕಂ ಸಮುಪದಿಶ್ಯ ಗಣಾಧಿಪೇಭ್ಯಸ್ತನ್ಮೂಲಪೀಠ ಮವಲಂಬ್ಯಸಮಾರುರೋಹ ” ಅಂದರೆ ಶ್ರೀಮದಲ್ಲಮಪ್ರಭುವು ಷಟ್‌ಸ್ಥಲಕ್ಕೆ ಈ ಶೂನ್ಯಸಿಂಹಾಸನವು ಆಧಾರಭೂತವಾದುವಾದುದೆಂದು ಹೇಳಿ, ಅದರ ಪರಿಚಯವನ್ನು ಪ್ರಮಥರಿಗೆ ಮಾಡಿಕೊಟ್ಟು ಸಿಂಹಾಸನವನ್ನೇರಿದಂತೆ, ಶ್ರೀಅಲ್ಲಮಪ್ರಭುಗಳೇರಿದ ಸಿಂಹಾಸನವನ್ನು ಶ್ರೀ ಮನ್ಮಹಾರಾಜ ನಿರಂಜನ ಜಯದೇವ ಮುರಘರಾಜೇಂದ್ರ ಮಹಾಸ್ವಾಮಿಗಳು ಆರೋಹಣ ಮಾಡಿದರು. ನೆರೆದ ಭಕ್ತರೆಲ್ಲ ಜಗದ್ಗುರುಗಳ ಜಯಘೋಷ ಮಾಡುತ್ತ ಸಾಷ್ಟಾಂಗ ನಮಸ್ಕಾರಗೈದರು. ಮುಂದೆ ಮಹಾಸಭೆಯು ನೆರವೇರಲ್ಪಟ್ಟು ಪೀಠಪದ್ಧತಿಗನುಸಾರವಾಗಿ ಹರ-ಗುರು-ಚರಮೂರ್ತಿಗಳಿಂದಲೂ, ಭಕ್ತಶ್ರೇಷ್ಠರಿಂದಲೂ ಮಹಾಬೆಲೆಯುಳ್ಳ ವಸ್ತ್ರಾಭರಣಾದಿಗಳೂ ಭಂಗಾರ ಬೆಳ್ಳಿ ಮುತ್ತು ರತ್ನಗಳೂ ಕಾಣಿಕೆಯಾಗಿ ಸಮರ್ಪಿಸಲ್ಪಟ್ಟವು. ಅನಂತರ ವಾಗ್ಮಿಗಳು ನೂತನ ಜಗದ್ಗುರುಗಳ ಗುಣಗೌರವವನ್ನೂ, ಬೃಹನ್ಮೂಲ ಜಗದ್ಗುರುಪೀಠದ ಮಹತ್ವವನ್ನೂ, ಭಕ್ತರು ತೋರಿಸುತ್ತಿರುವ ಭಕ್ತಿವೈಭವವನ್ನೂ ಕುರಿತುಬಣ್ಣಿಸಿದರು. ಪಟ್ಟಾಭಿಷಿಕ್ತರಾದ ಜಗದ್ಗುರುಗಳು ತಾವು ಮಾಡಬೇಕಾದವೀರಶೈವಸಮಾಜೋದ್ಧಾರದ ವಿಷಯದಲ್ಲಿ ಮಂಜುಲಸ್ವರದಿಂದ ಭಾವಗರ್ಭಿತವಾದ ಭಾಷಣದ್ವಾರ ಅಪ್ಪಣೆಕೊಡಿಸಿ ಶಿಷ್ಯವೃಂದವನ್ನು ಸಂತೋಷಗೊಳಿಸಿದರು. ನೂತನ ಜಗದ್ಗುರುಗಳ ಮುಖಕಮಲದಿಂದ ಹೊರಸೂಸುತ್ತಿರುವ ದೈವೀತೇಜಸ್ಸನ್ನು ಕಂಡು

ಜನಸ್ತೋಮವು ಇವರ ಜಯಜಯಕಾರ ರೂಪದಿಂದ ತಮ್ಮ ಆನಂದವನ್ನು ವ್ಯಕ್ತಮಾಡುತ್ತಿದ್ದರು. ಈ ಜಗದ್ಗುರುಮೂರ್ತಿಯು ಸಾಕ್ಷಾತ್ ಪ್ರಭುದೇವರ ಪ್ರತಿಬಿಂಬವೆಂದೂ ಅಭಿನವ ಮುರಗೇಶರೆಂದೂ ಎಲ್ಲರೂ ಉದ್ಘೋಷಿಸುತ್ತಿದ್ದರು. ತರುವಾಯ ಸಭಾಕಾರ್ಯವು ವಿರಮಿಸಲ್ಪಟ್ಟು ಬಡಬಗ್ಗರಿಗೂ, ಅನಾಥರಿಗೂ, ದಕ್ಷಿಣೆದಾನಗಳು ಕೊಡಲ್ಪಟ್ಟವು. ಅನ್ನವಸ್ತ್ರಾದಿ ದಾನಗಳು ಯಥೇಚ್ಛವಾಗಿ ನಡೆದವು.

ಸಮಾರಂಭಕ್ಕೆ ಬಂದ ಭಕ್ತರೆಲ್ಲರ ಭೋಜನಾದಿಗಳು ಮುಗಿದ ಮೇಲೆ ನೂತನ ಜಗದ್ಗುರುಗಳ ಆಂದೋಲಿಕೋತ್ಸವು ಸಾಯಂಕಾಲದಲ್ಲಿ ವೈಭವದಿಂದ ನೆರವೇರಿತು. ಇದರಲ್ಲಿ ಚಿತ್ರದುರ್ಗ, ಹೊಳಲಕೆರೆ, ಚಳ್ಳಕೆರೆ, ದಾವಣಗೇರಿ, ಹಾವೇರಿ, ಬ್ಯಾಡಿಗಿ, ಜಗಳೂರ, ಹಿರಿಯೂರು, ಹರಿಹರ, ಮೊದಲಾದ ಅನೇಕ ಗ್ರಾಮಗಳ ಭಜನೆಯ ಸಂಘಗಳು ಆಗಮಿಸಿ ತಮ್ಮ ಇಂಪಾದ ಧ್ವನಿಯಿಂದ ಭಜನೆಗೈಯುತ್ತ ಮಹೋತ್ಸವಕ್ಕೆ ವಿಶೇಷಶೋಭೆಯನ್ನುಂಟು ಮಾಡಿದವು. ಶ್ರೀಮನ್ಮಹಾರಾಜನಿರಂಜನಜಗದ್ಗುರುಮುರಘರಾಜೇಂದ್ರ ಸ್ವಾಮಿಗಳ ಜಯಘೋಷವು ದಶದಿಶೆಗಳಲ್ಲಿ ವ್ಯಾಪಿಸಿತ್ತು. ಭಕ್ತರೆಲ್ಲ ಮಂಗಲತೂರ್ಯರವದಿಂದ ಇಂದು ಚಿನ್ಮೂಲಾದ್ರಿಯು ಕಲ್ಯಾಣವಾಯ್ತು. ಈ ಪಟ್ಟಾಭಿಷೇಕ ಸಮಾರಂಭವು ನೋಡಲಿಕ್ಕೆ ದೊರೆತದ್ದು ನಮ್ಮ ಅನಂತ ಜನ್ಮಗಳ ಪುಣ್ಯದಫಲವು!! ಎಂದು ಧನ್ಯೋದ್ಗಾರಗಳನ್ನು ತೆಗೆಯುತ್ತಿದ್ದರು. ಪೌರ್ಣಿಮೆಯ ಚಂದ್ರೋದಯ ಕಾಲದಲ್ಲಿ ಸಮುದ್ರವು ಉಕ್ಕೇರಿ ಭೋರ್ಗರೆಯುವಂತೆ ವೀರಶೈವಮತಾಬ್ಧಿ ಚಂದ್ರನಂತಿರುವ ಈ ಜಗದ್ಗುರುಗಳ ಉದಯದ ಸಮಯದಲ್ಲಿ ಸಾಗರೋಪಾದಿಯಲ್ಲಿ ಕೂಡಿದ ಜನರ ಆನಂದವು ಉಕ್ಕೇರುತಲೇ ಇತ್ತು. ಈ ಸಮಾರಂಭದಲ್ಲಿ ಮೊಳಗುವ ನೃತ್ಯ, ಗೀತ, ನಗಾರಿ, ಸೌಜತ್ತು ಕಹಳೆಗಳ ಧ್ವನಿಯು ಎಂಟು ದಿಕ್ಕಿನಲ್ಲಿ ವ್ಯಾಪಿಸಿ ಪ್ರತಿಧ್ವನಿಯನ್ನು ಹೊಂದಿ, ಅಷ್ಟದಿಗ್ಗಜಗಳು ಭೂರಿನಾದದಿಂದ ಜಗದ್ಗುರುಗಳ ಯಶಸ್ಸನ್ನು ಪಾಡುತ್ತವೆಂಬಂತೆ ಭಾಸವಾಗುತ್ತಿತ್ತು. ಮಕರತೋರಣ ನಂದೀಧ್ವಜ ಬಾದರಾಯಣ ಬಾಹು, ಪಂಚದೀವಟಿಗೆ, ಮೊದಲಾದ ೭೨ ಬಿರುದುಗಳಿಂದಲೂ ಚತುರಂಗ ಬಲದಿಂದಲೂ ಈ ಆಂದೋಲಿಕೋ

ತ್ಸವವು "ನಭೂತೋ ನಭವಿಷ್ಯತಿ" ಎಂಬಂತೆ ಆಗಿಹೋಯಿತು. ಹೀಗೆ ಈ ಉತ್ಸವವು ಅಸಾಧಾರಣ ವೈಭವದಿಂದ ನೆರವೇರಿ ರಾತ್ರಿ ೭—೮ ಗಂಟೆಯು ಸಮಾರಂಭಕ್ಕೆ ಬೃಹನ್ಮಠಕ್ಕೆ ಬಂದು ತಲ್ಪಿತು.

ಆಗ ಹುಣ್ಣಿವೆಯು ಸಮೀಪಿಸಿದ ಆ ದಿನದ ಬೆಳದಿಂಗಳು ಶ್ರೀ....ಶ್ರೀಗಳವರ ಯಶಶ್ಚಂದ್ರಿಕೆಯಂತೆ ನಾಲ್ಕೂ ಕಡೆಗೆ ಹಬ್ಬಿತು. ರಂಭಾ ಮೇನಕಾದಿ ಅಪ್ಸರಾಸ್ತ್ರೀಯರು ನಭೋ-ಮಂಡಲದ ಮೇಲೆ ಬಂದು ನೃತ್ಯ ಮಾಡಿ, ಪೂಬೊಗಸೆಯಿಂದ ಚಲ್ಲಿದ ಹೂಗಳೆಂಬಂತೆ ನಕ್ಷತ್ರಗಳು ನಾಲ್ಕೂ ಕಡೆಗೆ ಹೊಳೆಯುತೊಡಗಿದವು. ನೂತನ ಜಗದ್ಗುರುಗಳ ಜ್ಞಾನೋಪದೇಶದಿಂದ ಭಕ್ತರ ಮನೋವಲಯದೊಳಗಿನ ಅಜ್ಞಾನರೂಪ ಮೇಘಗಳು ಬಯಲಾಗುವದನ್ನು ಸೂಚಿಸುವಂತೆ ಅಂದಿನ ಚಂದ್ರೋದಯದಿಂದ ಆಕಾಶದಲ್ಲಿ ಪಸರಿಸಿದ ಮೋಡಗಳು ಬಯಲಾಗತೊಡಗಿದವು. ಕ್ಷೀರಾಬ್ಧಿಯಲ್ಲಿದ್ದ ಲಕ್ಷ್ಮಿಯು ಆಕಾಶಮಾರ್ಗದಿಂದ ನೂತನ ಜಗದ್ಗುರುಗಳಿಗೆ ಕಾಣಿಕೆ ಕಳಿಸಿದ ಮುತ್ತಿನ ತಾಟೆಂಬಂತೆ ಚಂದ್ರಮಂಡಲವು ಶೋಭಿಸತೊಡಗಿತು. ಇಂಥ ಸುರಮ್ಯ ಸಮಯದಲ್ಲಿ ಬೃಹನ್ಮಠದಲ್ಲಿಯ ಭವ್ಯಮಂಟಪದಲ್ಲಿ ಸಭೆಗೂಡಿತು. ಶಿವಕೀರ್ತನಕಾರರು ಶಿವಭಜನೆ ಮಾಡಿ ಕೃತಾರ್ಥರಾದರು. ಭಜಕರು ಶಿವಭಜನೆ ಗುರುಭಜನೆ ಮಾಡಿ ಸಂತೋಷವನ್ನು ಹೊಂದಿದರು. ವಿದ್ವನ್ಮಣಿಗಳೂ, ಕವಿಗಳೂ ನೂತನ ಜಗದ್ಗುರುಗಳಲ್ಲಿ ಭಕ್ತಿಪರವಶರಾಗಿ ಇವರ ಗುಣಗಾನವನ್ನು ಮಾಡುತ್ತ ತಮ್ಮ ವಾಣಿಯನ್ನು ಸಾರ್ಥಕ ಮಾಡಿಕೊಂಡರು. ಪಂಡಿತವರ್ಯರು ಶ್ರೀಮದಲ್ಲಮ ಪ್ರಭುಗಳಿಂದ ಅಲಂಕರಿಸಲ್ಪಟ್ಟ ಈ ಪೀಠದ ಪ್ರಭಾವವನ್ನೂ ಶ್ರೀ ಮ. ನಿ. ಜ. ಮುರಘಾರಾಜೇಂದ್ರಸ್ವಾಮಿಗಳ ಅದ್ಭುತ ಸಾಮರ್ಥ್ಯವನ್ನೂ ಕುರಿತುಮನೋಹರವಾಗಿ ಬಣ್ಣಿಸಿದರು.

ಅನಂತರ, ಶ್ರೀ....ಶ್ರೀಗಳು ವಿದ್ವನ್ಮಣಿಗಳಿಗೂ ಕವಿಗಳಿಗೂ, ಶಿವಗಣಗಳಿಗೂ ಯಥೇಚ್ಛವಾಗಿ ಸಂಭಾವನೆಯನ್ನಿತ್ತು ಆನಂದವನ್ನುಂಟು ಮಾಡಿದರು. ಬಡಬಗ್ಗರಿಗೆ ಬೇಡಿದಿಷ್ಟಾರ್ಥವನ್ನಿತ್ತರು. ಒಟ್ಟಿಗೆ ಕೈಲಾಸದಲ್ಲಿಯ ಪರಮೇಶ್ವರನು ಪ್ರಮಥರಿಗೆ ಬೇಡಿದ ವರಗಳನ್ನು ಕೊಟ್ಟು ಸಂತೋಷ

ಪಡಿಸಿದಂತೆ "ದೇಹಿ" ಎಂದವರಿಗೆ ಅವರ ಕೋರಿಕೆಯಂತೆ ದಾನ ಕೊಟ್ಟು ಆನಂದವನ್ನು ಬೀರಿದರು. ಈ ಮೇರೆಗೆ ಅಂದಿನ ಸಿಂಹಾಸನಾರೋಹಣ ಸಮಾರಂಭವು ಅಭೂತಪೂರ್ವವಾಗಿ ಸಮಾಪ್ತಿಯಾಯಿತು.

ಕೈಕೊಂಡ ಕೆಲಸವು ಯಥಾಸಾಂಗವಾಗಿಯೂ, ನಿರ್ವಿಘ್ನವಾಗಿಯೂ ಕೊನೆಗಂಡದ್ದಕ್ಕಾಗಿ, ರಾ. ಸಾ. ವಾರದಮಲ್ಲಪ್ಪನವರು ಸರ್ ಕೆ. ಪಿ. ಪುಟ್ಟಣಶೆಟ್ಟರು ಮೊದಲಾದ ವೀರಶೈವ ಪ್ರಮುಖರಿಗೆ ಮಿತಿ ಇಲ್ಲದಷ್ಟು ಆನಂದವಾಯಿತು. ಇದಕ್ಕಾಗಿ ಅವರು ಜಗದ್ಗುರುಗಳಿಗೆ ಧನ್ಯವಾದಗಳನ್ನೂ ವಂದನೆಗಳನ್ನೂ ಸಮರ್ಪಿಸಿದರು. ಈ ಪುಣ್ಯಕ್ಷೇತ್ರವನ್ನೂ ಜಗದ್ಗುರುಗಳ ಸಾನ್ನಿಧ್ಯವನ್ನೂ ಬಿಟ್ಟುಹೋಗಲಿಕ್ಕೆ ಬಂದಭಕ್ತರಿಗೆಲ್ಲ ಮನಸ್ಸಾಗದಿದ್ದರೂ, ಪ್ರಂಪಚಮಾಯೆಯಿಂದ ಪರಿವೇಷ್ಟಿತರಾದ ಆವರುಜಗದ್ಗುರುಗಳ ಆಶೀರ್ವಾದವನ್ನು ಪಡೆದು ಸ್ವಸ್ಥಳಕ್ಕೆ ಪ್ರಯಾಣ ಬೆಳಿಸಿದರು. ಶ್ರೀ-ಶ್ರೀ-ಗಳು ಶಿವಧ್ಯಾನತತ್ಪರರಾಗಿ ವೀರಶೈವಧರ್ಮ ಪರಿಪಾಲನೆಗೊಳಗಾದರು.

---

## ೯ನೇ ಅಧ್ಯಾಯ.

## ದಿಗ್ವಿಜಯ.

---

ಮಹತಾಂ ನಿರಂಜನ ಪದಾನುಷಂಗಿನಾಂ ಮಹಿಮಾ ತಥೈವಖಲುಮೌನಿ ಸತ್ತಮಾಃ | ಭುವನಾವನಾಯ ಪುರಮಾಶ್ರಯಂತಿಶೇ ಸ್ವಯಮಂಬ ರಾಂಗಣ ನಿರಂಗಸಂಗಿನ || — ಪ್ರಭುಲಿಂಗಲೀಲೆ ಅ. ೭ ಶ್ಲೋ. ೧೧೭

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರಘರಾಜೇಂದ್ರಸ್ವಾಮಿಗಳು ಪಟ್ಟಾಭಿಷಿಕ್ತರಾದ ಮೇಲೆಇವರ ಯಶೋದುಂದುಭಿಯುದಿಕ್ತಟಗಳಲ್ಲಿ ಮೊಳಗಹತ್ತಿತು. ಸೌಗಂಧಯುಕ್ತ ಕುಸುಮಗಳಿಗೆ

ಭ್ರಮರಗಳು ಎಡೆಬಿಡದೆ ಬಂದು ಮುತ್ತುವಂತೆ ಈ ಮಹಾಸ್ವಾಮಿಗಳ ನಿರ್ಮಲವೃತ್ತಿಯ ಪ್ರಭಾವಕ್ಕೆ ಮನಸೋತು ವೀರಶೈವರಲ್ಲದೆ ಬೇರೆ ಜಾತಿಯವರೂ ಇವರ ಭಕ್ತರಾದರು. ಇವರ ಅಗಾಧ ತಪಸ್ಸಾಮರ್ಥ್ಯವು ಎಲ್ಲ ಜನರನ್ನು ಆಕರ್ಷಿಸಿದ್ದರಿಂದ ಇವರ ಹಾಗು ಚಿನ್ಮೂಲಾದ್ರಿಯ ಬ್ರಹನ್ಮಠದ ಬಗ್ಗೆ ಭಕ್ತಿ ವಿಶ್ವಾಸಗಳು ಬೆಳೆದವು. ಆಯುಧಪಾಣಿಯಾದ ಶೂರಯೋದ್ಧನಿಗೆ ಶತ್ರುಗಳು ಸಹಜವಾಗಿ ಶರಣಾಗತರಾಗುವಂತೆ ದೃಢವೈರಾಗ್ಯವೆಂಬ ಆಯುಧವನ್ನು ಧರಿಸಿ ವೀರಶೈವಧರ್ಮಸೂತ್ರಗಳನ್ನು ಕೈಕೊಂಡ ಈ ಧರ್ಮಮೂರ್ತಿಗೆ ಎಲ್ಲರೂ ಶಿರಬಾಗಿ ನಡೆಯುತ್ತಿದ್ದರು.

ಮಹಾ||                    || ಸ್ವಾಮಿಗಳವರು ದಿನಾಲು ಅರುಣೋದಯ ಕಾಲದಲ್ಲೆದ್ದು ಪ್ರಾತರ್ವಿಧಿಗಳನ್ನೂ ಸ್ನಾನಾಹ್ನಿಕಗಳನ್ನೂ ತೀರಿಸಿಕೊಂಡು ಬ್ರಹನ್ಮಠದಲ್ಲಿಯ ಛಾತ್ರವರ್ಗದ ವಿದ್ಯಾಭ್ಯಾಸದ ಮೇಲ್ವಿಚಾರವನ್ನು ನಡೆಸುತ್ತಿದ್ದರು. ಆ ಮೇಲೆ ಮಧ್ಯಾಹ್ನವಾದೊಡನೆ ಸ್ನಾನ ಮಾಡಿ ಲಿಂಗಾರ್ಚನೆಯಲ್ಲಿ ಮಗ್ನರಾಗುತ್ತಿದ್ದರು. ಧರ್ಮಪದ್ಧತಿಯಂತೆ ತ್ರಿಕಾಲದಲ್ಲಿ ಇವರು ಲಿಂಗಾರ್ಚನೆಯಲ್ಲಿ ಆಸಕ್ತರಾಗಿರುತ್ತಿದ್ದರೂ ಇವರಲಿಂಗಾರ್ಚನೆಯೆಂದರೆ ಪರಮಾತ್ಮನ ವಿಶ್ವಲೀಲೆಯಲ್ಲಿ ಸದಾ ಸಮರಸದಿಂದ ವಿಹಾರ ಮಾಡುವದೇ ಎಂದು ಪರಿಗಣಿಸಿದರೆ ತಪ್ಪಾಗಲಾರದು. ಅಷ್ಟವಿಧಾರ್ಚನೆ, ಷೋಡಶೋಪಚಾರ ಮೊದಲಾದ ಪೂಜಾವಿಧಿಗಳಿಗೆ ಇವರು ಮಹತ್ವ ಕೊಡುತ್ತಿದ್ದಿಲ್ಲ; ಸದ್ಗುಣ, ಸದಾಚಾರ, ಸರ್ವಭೂತದಯೆ, ಇವೇ ಪರಸಾಧನೆಯ ಮುಖ್ಯಮಾರ್ಗಗಳೆಂದು ಇವರಅಭಿಮತವು. ಯಾವ ಮಾರ್ಗದಿಂದ ಭೂತಹಿತವಾಗುವದೋ ಅದನ್ನೇ ಸಾಧಿಸಬೇಕೆಂದು ಇವರ ಗುರಿಯು. ಹೀಗೆ ವಿಶ್ವರೂಪಿ ಶಿವಲಿಂಗಾರ್ಚನೆಯಲ್ಲಿ ತೊಡಗಿದಾಗ ಇವರು ಶಿವನಿಗೆ ಅರ್ಪಿಸುತ್ತಿದ್ದ ಪುಷ್ಪಗಳೆಂದರೆ, ಮಹಾನುಭಾವರಾದ ಶ್ರೀ ಬಸವಣ್ಣನವರು ಹೇಳಿದಂತೆ—

"............ಸರ್ವ ಜೀವಿಗಳಲ್ಲಿ ಹಿಂಸೆ ಮಾಡದಿಪ್ಪುದೇ ಪ್ರಥಮಪುಷ್ಪ. ಸರ್ವೇಂದ್ರಿಯ ನಿಗ್ರಹಿಸಿಕೊಂಡಿರಬಲ್ಲಡೆ ದ್ವಿತೀಯಪುಷ್ಪ. ಸರ್ವಾಹಂಕಾರವ ಮರತು ಶಾಂತನಾಗಿರಬಲ್ಲಡೆ ತೃತೀಯಪುಷ್ಪ. ಸರ್ವವ್ಯಾಪಾರವಳಿದು, ನಿರ್ವ್ಯಾಪಾರಿಯಾಗಬಲ್ಲಡೆ ಚತುರ್ಥಪುಷ್ಪ, ದುರ್ಭಾವ ಪ್ರಕೃತಿಯಳಿದು, ಸದ್ಭಾವ ಎಡೆಗೊಂಡಿರಬಲ್ಲಡೆ, ಪಂಚಮಪುಷ್ಪ, ಉಂಡು ಉಪವಾಸಿ ಬ್ರಹ್ಮಚಾರಿ

ಇರಬಲ್ಲಡೆ ಷಷ್ಠಮಪುಷ್ಪ. ಅನೃತವ ಮರೆದು ಸತ್ಯವ ನುಡಿಯಬಲ್ಲಡೆ ಸಪ್ತಮಪುಷ್ಪ. ಸಕಲಪ್ರಪಂಚವಳಿದು ಶಿವಜ್ಞಾನಸಂಪನ್ನನಾಗಿರಬಲ್ಲಡೆ ಅಷ್ಟಮಪುಷ್ಪ. ಇಂತೀಅಷ್ಟದಳಕುಸುಮದಲ್ಲಿ ಸಹಸ್ರಪೂಜೆಯ ಮಾಡಬಲ್ಲ ಶರಣರು ನಿಮ್ಮ ಪ್ರತಿಬಿಂಬದಂತಿಪ್ಪರು ಕಣಾ ! ಕೂಡಲಸಂಗಮದೇವಾ"

ಎಂಬ ಮೇಲಿನ ವಚನದಲ್ಲಿ ಹೇಳಿದಕ್ರಮದಲ್ಲಿ ಇವರ ಲಿಂಗಪೂಜೆಯ ಕ್ರಮವಿತ್ತು. ಮಧ್ಯಾಹ್ನದ ಆಹ್ನಿಕವಾದೊಡನೆ ಇವರು ಸತ್ವಾಹಾರವನ್ನು ಸೇವಿಸುವರು. ಆ ಮೇಲೆ ಮಠದ ಪರಿವಾರಕ್ಕೂ ಪ್ರಸನ್ನತಕ್ಕೆ ಬಂದ ಸಕಳ ಭಕ್ತರಿಗೂ ಕೈಲಾಸದ ಶಿವಗಣಗಳಿಗೆ ದೊರೆಯಲು ದುರ್ಲಭವಾದ ಗುರುಪ್ರಸಾದದ ಭೋಜನವು ದೊರಕುತ್ತಿತ್ತು. ಅನಂತರ ಗಂಟೆ ಎರಡುಗಂಟೆಗಳವರೆಗೆ ಎಲ್ಲರಿಗೂ ವಿರಾಮವು ಸಿಗುವದು; ಇಳಿಹೊತ್ತಾಗುತ್ತ ಬರಲು ಮಹಾ|| || ಸ್ವಾಮಿಗಳು ಭಕ್ತರಿಗೆಲ್ಲ ವೀರಶೈವಧರ್ಮದಲ್ಲಿಯ ಭಕ್ತಿರಹಸ್ಯವನ್ನು ಕುರಿತು ಭಕ್ತಿಭಾಂಡಾರಿಯಾದ ಶ್ರೀ ಬಸವಣ್ಣನವರ ವಚನ ಸಾಕ್ಷಿಯಾಗಿ ಬೋಧಿಸುತ್ತಿದ್ದರು.

ಮಹಾಸ್ವಾಮಿಗಳು ಪಟ್ಟಾಧಿಕಾರಿಗಳಾದ ಮೇಲೆ ಇವರ ಮಹಿಮೆಯು ಬೆಳೆಯಿತು. ಸೂಕ್ಷ್ಮಾಗಮದಲ್ಲಿ ಹೇಳಿದಂತೆ "ವೈರಾಗ್ಯಜ್ಞಾನಸಂಪತ್ತಿ ಬ್ರಹ್ಮಚರ್ಯ ತಪೋಜ್ವಲಂ| ಕಾರುಣ್ಯಂಚ ಸದಾಚಾರ ಮೇತತ್ ಷಟ್ ಸಂಪ್ರಕೀರ್ತಿತಂ" ಅಂದರೆ ವೈರಾಗ್ಯ, ಜ್ಞಾನ, ಬ್ರಹ್ಮಚರ್ಯ, ತಪಸ್ಸು ಕಾರುಣ್ಯ, ಸದಾಚಾರ, ಈ ಸದ್ಗುಣಗಳು ಇವರಲ್ಲಿ ಮನೆ ಮಾಡಿಕೊಂಡಿದ್ದರಿಂದ ಇವರು ಲೋಕೋತ್ತರ ಪುರುಷರೆನಿಸಿಕೊಂಡರು. ಶಂಕರಸಂಹಿತೆಕಾರರು ಒಂದೆಡೆಯಲ್ಲಿ ಅಭಿಪ್ರಾಯಪಟ್ಟಂತೆ ಇವರಿಗೆ—

ವಿದ್ಯಾಭಾರ್ಯಾ ಸುತಸ್ತ್ರೋಷಃ ಕ್ಷಮಾಹಿ ಪರಿಚಾರಿಕಾಃ |<br>
ಮಾತಾಭಕ್ತಿಃ ಪಿತಾಚಾರಸ್ಸತ್ಯಂ ನಪ್ತಾ ಶಮಃ ಸಖಾ ||<br>
ವೈರಾಗ್ಯಂ ಸುಹೃದಾಚಾರ್ಯೋ ದಮಃಶ್ರದ್ಧಾ ಸ್ವಸಾಮತಾ ||<br>
ದಾಸೀತ್ವಹಿಂಸಾದಾಸಃ ಸ್ಯಾದಸ್ತೇಯಂ ಪರಿಕೀರ್ತಿತಃ |<br>
ಮೈತ್ರಾದ್ಯಾಸ್ತನಯಾಃ ಪ್ರೋಕ್ತಾ ಧರ್ಮೋಸಾ ವಾಹನಂಮತಂ ||<br>
ಜ್ಞಾನಂದೇಹಸ್ತಥಾ ಕ್ಷೇತ್ರಂ ವಿಚಾರಃ ಸರ್ವಗೋಚರ: |<br>
ದೇಶೋಮೋಕ್ಷ........ ||

(ಅರ್ಥ) ಅಂದರೆ ವೇದಾಂತ ವಿದ್ಯೆಯೇ ಹೆಂಡತಿಯು. ಸಂತೋಷವೇ ಪುತ್ರನು. ಕ್ಷಮೆಯೇ ದಾಸಿಯು. ಭಕ್ತಿಯೇ ಜನನಿಯು. ಸದಾಚಾರವೇ ಜನಕನು. ಸತ್ಯವೇ ಮೊಮ್ಮಗನು. ಶಮವು ಗೆಳೆಯನು, ವೈರಾಗ್ಯವು ಸುಹೃದಯನಾದ ಮಿತ್ರನು. ದಮವು ಆಚಾರ್ಯನು. ಶ್ರದ್ಧೆಯು ತಂಗಿಯು. ಅಹಿಂಸೆಯು ತೊತ್ತು; ಆಸ್ತೇಯಗುಣವೇ ಆಳು. ಸ್ನೇಹತ್ವ ಮೊದಲಾದ ಗುಣಗಳು ಮಕ್ಕಳು ಧರ್ಮ-ಪ್ರವಾಹನವು. ಜ್ಞಾನವೇ ದೇಹವು ಸದ್ವಿಚಾರವೇ ಭೂಮಿಯು. ಮೋಕ್ಷವೇ ಸ್ಥಾನವು. ಹೀಗೆ ಪರಿಣಮಿಸಿ ಶೋಭಿಯಿತು. ಇವರು ಪಾರಮಾರ್ಥಿಕ ಬಳಗದಿಂದೊಡಗೂಡಿ ಭವದುಃಖಸ್ಪರ್ಶವಿಲ್ಲದೆ ಶಿವಯೋಗಾನಂದ ಸುಖವನ್ನು ಅನುಭವಿಸತೊಡಗಿದರು.

ಈ ಮೇರೆಗೆ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರಘರಾಜೇಂದ್ರಸ್ವಾಮಿಗಳು ವೀರಶೈವ ಧರ್ಮ ಸಾಮ್ರಾಜ್ಯ ಚಕ್ರವರ್ತಿಗಳಾಗಿ ಭಕ್ತರಿಗೆ ಕಾಮಧೇನುವೆನಿಸಿ ವೀರಶೈವಧರ್ಮವನ್ನು ಪರಿಪಾಲಿಸುತ್ತಿದ್ದರು. ಈ ಸಮಯದಲ್ಲಿ ಇವರು ಪೀಠಾರೋಹಣರಾಗಿ ಸುಮ್ಮನೆ ಕೂಡ್ರದೆ, ತಮ್ಮ ಜಗದ್ಗುರು ಪೀಠದ ಹೊಣೆಗಾರಿಕೆಯನ್ನು ಪರ್ಯಾಯ ಲೋಚಿಸಿ, ಮಹಾಸಂಸ್ಥಾನದ ಆಡಳಿತದ ಸರ್ವಾಂಗವನ್ನೆಲ್ಲ ಸುಧಾರಿಸತೊಡಗಿದರು.

ಇಷ್ಟರಲ್ಲಿ ವರ್ಷಾವಧಿಯು ಗತಿಸಲು, ಮರುವರ್ಷದ ಆಶ್ವೀಜ ಮಾಸದ ವಿಜಯದಶಮಿಯ ಉತ್ಸವವು ಪೀಠಪದ್ಧತಿಯಂತೆ ಬೃಹನ್ಮಠದಲ್ಲಿ ವಿಜೃಂಭಣೆಯಿಂದ ಜರಗುವ ದಾರಿಯನ್ನು ಭಕ್ತಜನರೆಲ್ಲ ನೋಡಹತ್ತಿದರು. ಮಹಾ॥ ॥ ಸ್ವಾಮಿಗಳು ಮರುವರ್ಷದ ವಿಜಯದಶಮಿಯ ಉತ್ಸವವನ್ನು ಮಹಾಸಂಸ್ಥಾನದ ಪದ್ಧತಿಯಂತೆ ಅತಿ ವಿಜೃಂಭಣೆಯಿಂದ ಸಾಂಗಗೊಳಿಸಿದರು. ಈ ಉತ್ಸವಕ್ಕೆ ಲಕ್ಷಾವಧಿ ಜನರು ಮಿಲಿತರಾಗಿದ್ದರು. ಈ ಸಾರೆಯ ಉತ್ಸವಕಾಲದಲ್ಲಿಯ ಸಭಾಸಮಾರಂಭಗಳು ಕೈಲಾಸದೊಳಗಿನ ಪರಶಿವನ ಸಭಾಸಮಾರಂಭಗಳಂತೆ ಮಂಗಲಕರವಾಗಿ ಕಂಡುಬಂದವು.

ಮಹಾಸ್ವಾಮಿಗಳು ಪೀಠಾರೋಹಣರಾದ ಮೇಲೆ ಹೀಗೆ ಶಿವಯೋಗಾನಂದದಲ್ಲಿ ಮಗ್ನರಾಗಿದ್ದರೂ ಭಕ್ತಕೋಟಿಯ ಉದ್ಧಾರವೇ ತಮ್ಮ ಅವತಾರದ ಮುಖ್ಯ ಉದ್ದೇಶವೆಂಬುದನ್ನು ಇವರು ಬಲ್ಲವರಾಗಿದ್ದರು. ಕಾರಣ

ದೇಶದೇಶದಲ್ಲಿ ವೀರಶೈವ ಭಕ್ತರಿದ್ದ ಸ್ಥಳಗಳಿಗೆ ಬಿಜಯಂಗೈದು, ದರ್ಶನ ಪಾದೋದಕ ಪ್ರಸಾದಗಳಿಂದ ಅವರನ್ನು ಅನುಗ್ರಹಿಸಬೇಕು; ಸಂಸ್ಥಾನದ ಆಸ್ಥಾನಪಂಡಿತರಿಂದಲೂ, ವಿದ್ವಾಂಸರಿಂದಲೂ ಉಪನ್ಯಾಸಮಾಡಿಸಿ ತಾವೂ ಬೋಧಗೈದು ವೀರಶೈವರಲ್ಲಿಯ ಧರ್ಮಗ್ಲಾನಿಯನ್ನು ಹೋಗಲಾಡಿಸಬೇಕು; ಭಕ್ತರಲ್ಲಿ ಸಮತೆ, ಬಂಧುಭಾವ, ಸುನೀತಿ, ಈಶಭಕ್ತಿ ಇವು ನೆಲೆಗೊಳ್ಳು ವಂತೆ ಮಾಡಬೇಕು; ಸಮಾಜದಲ್ಲಿಯ ಮೇಲು ಕೀಳುಗಳೆಂಬ ವಿಷಮತೆ ಯನ್ನು ಹೋಗಲಾಡಿಸಬೇಕು; ಎಂದು ಮನಸ್ಸು ಮಾಡಿದರು. ದೊಡ್ಡ ದೊಡ್ಡ ಪೀಠಸ್ಥರೆನಿಸಿಕೊಳ್ಳುವ ಸ್ವಾಮಿಗಳು ತಮ್ಮ ಸಂಸ್ಥಾನಮಠದಲ್ಲಿ ಸುಮ್ಮನೆ ಕುಳಿತುಕೊಂಡು ಭಕ್ತರಿಂದ ಬರುವ ಕಾಣಿಕೆಯನ್ನು ಸ್ವೀಕರಿಸಿ ತಮ್ಮ ಪರಿವಾರದೊಂದಿಗೆ ತಿಂದುಂಡು ಕಾಲ ಕಳೆಯುವದು ಇವರಿಗೆ ಸರಿ ಯೆನಿಸುತ್ತಿದ್ದಿಲ್ಲ; ಆದ್ದರಿಂದ ಇವರು ಭಕ್ತೋದ್ಧಾರಕಾಗಿ ಸಂಚಾರ ಹೊರ ಟು, ಮುಂಬೈಕರ್ನಾಟಕ, ಮದ್ರಾಸ ಕರ್ನಾಟಕ, ಮೈಸೂರಪ್ರಾಂತ, ನೈಝಾಮಭಾಗಗಳನ್ನೂ ಪುಣೆ, ಕೊಲ್ಹಾಪೂರ, ಸಾಂಗಲಿ, ಜತ್ತ, ಔಂಧ, ಮೊದಲಾದ ರಾಜಧಾನಿಗಳನ್ನೂ ಸಂದರ್ಶಿಸಿದರು. ಈ ಪ್ರಸಂಗದಲ್ಲಿ ಇವರು ಮಹಾ ಸಂಸ್ಥಾನದ ರಾಜಮರ್ಯಾದೆಯಿಂದಲೂ-ಸಕಲ ಬಿರುದಾವಳಿ ಗಳಿಂದಲೂಮಹೋತ್ಸಾಹದಿಂದಲೂ ದಿಗ್ಯಾತ್ರೆಬೆಳಿಸಿದರು.

ಈಸಮಯದಲ್ಲಿ ವೀರಶೈವ ಸಮಾಜವು ಈಗಿನಷ್ಟು ಮುಂದರಿದಿದ್ದಿಲ್ಲ, ಶಿಕ್ಷಣ ಪ್ರಸಾರವೂ ಕಡಿಮೆಇತ್ತು. ಇದಲ್ಲದೆ ಈಪೀಠಸ್ಥರ ಹಿಂದಿನ ಮಹಾ ಸ್ವಾಮಿಗಳ ದಿಗ್ವಿಜಯ ಸಂಚಾರವು ಅಖಿಲಕರ್ನಾಟಕದಲ್ಲಿ ಮೇಲಿಂದಮೇಲೆ ಸಾಕಷ್ಟು ಇಲ್ಲದ್ದರಿಂದ, ಈ ಜಗದ್ಗುರು ಮುರಘರಾಜೇಂದ್ರ ಮಠಕ್ಕೆ ಮಕ ರ ತೋರಣ, ನಂದೀಧ್ವಜ, ಬಾದರಾಯಣ ಬಾಹು, ಮೊದಲಾದ ಉತಿ ಬಿರುದುಗಳು ಇರುವವೆಂಬುದುಪರಿಚಯವುಕೆಲವುಪರಮತೀಯರಿಗೆ ಗೊತ್ತಿ ರಲಿಲ್ಲ. ಸಣ್ಣ ದೊಡ್ಡ ಗ್ರಾಮಗಳಲ್ಲಿಯ ವೀರಶೈವ ಜನಾಂಗವು ಸುಶಿಕ್ಷಣ ವನ್ನು ಹೊಂದಿ ಸ್ವಸ್ವರೂಪ ವಿಸ್ಮೃತಿಯನ್ನು ಹೋಗಲಾಡಿಸಿಕೊಂಡು ತಮ್ಮ ಧರ್ಮದ ಹಾಗು ಸಮಾಜದ ಉನ್ನತಿಯನ್ನು ಮಾಡಿಕೊಳ್ಳಲಿಕ್ಕೆ ಅಶಕ್ತವಾ ಗಿತ್ತು. ಧರ್ಮದ ಬಾಹ್ಯಸ್ವರೂಪಗಳು ಬೇರೆ ಬೇರೆ ಪರಸ್ಥಿಗನುಸರಿಸಿ ಬೇರೆ

ಬೇರೆ ಮತದಲ್ಲಿ ಬೇರೆ ಬೇರೆಯಾಗಿರುತ್ತಿದ್ದರೂ ಎಲ್ಲ ಧರ್ಮದ ಅಂತರಂಗ ಒಂದೇ! ಹೀಗಿದ್ದರೂ ಕೆಲವು ಜನರಿಂದ ಧರ್ಮೋದ್ಧಾರಕ್ಕಾಗಿ ದಿಗ್ಯಾತ್ರೆ ಬೆಳಸಿದ ಈ ಜಗದ್ಗುರುಗಳಿಗೆ ಉಂಟು ಮಾಡಿದ ಪ್ರತಿಬಂಧವು ಬಹಳ ತೊಂದರೆಯನ್ನುಂಟು ಮಾಡಿತು.

ನಿಜವಾಗಿ ನೋಡಿದರೆ– ಹಿಂದೂ ಧರ್ಮ ಶಾಸ್ತ್ರದಲ್ಲಿ ಭಕ್ತಿ: ಜ್ಞಾನಂ ದಯಾಕೌಂಚಂ ತಪ: ಸತ್ಯಂ ದನು: ಶಮ:| ಅದ್ವೇಷೋವಿನಯೋನ್ಯಾಯ: ಏಷಧರ್ಮ ಸನಾತನ: || ಎಂದು ಹೇಳಿದೆ. ಅಂದಮೇಲೆ ಯಾರ ಸಂಗಡಲೂ ಮತ್ಸರಭಾವವನ್ನು ತಾಳದೆ, ತನ್ನ ಜಾತಿ ಅಥವಾ ಮತವು ಹೆಚ್ಚಿನದು, ಅನ್ಯರದು ಕೀಳೆಂದು ಗರ್ವಿಷ್ಠನಾಗದೆ, ಎಲ್ಲರೊಡನೆ ನಮ್ರತನದಿಂದಲೂ ನಿಷ್ಪಕ್ಷಪಾತದಿಂದಲೂ ನಡೆಯುವವನೇ ನಿಜವಾದ ಸನಾತನ ಧರ್ಮದ ಅನುಯಾಯಿಯು. ಹೀಗಿದ್ದರೂ ಕಾಲಗತಿಯಿಂದ ಧಾರ್ಮಿಕ ಶಿಕ್ಷಣದ ಅಭಾವವಾದ್ದರಿಂದ ಹಿಂದೂ ಧರ್ಮದ ತತ್ವಗಳು ಲಯವಾಗಿ ಅಜ್ಞಾನಪ ರಂಪರರೂಢಿಯೇ ಮುಂದರಿಯಿತು. "ಆತ್ಮವತ್ ಸರ್ವಭೂತಾನಿ" ಎಂಬ ಸಮತಾವಾದವು ಮೂಲಿಗುಂಪಾಗಿ, ಜನ್ಮವಿಶಿಷ್ಟ ಮೇಲು ಕೀಳೆಂಬ ಭಾವನೆಯು ಪ್ರಸಾರವಾಯಿತು. ಹಿಂದೂ ಧರ್ಮವು ಸಾವಿರಾರು ಭಾಗಗಳಾದವು. ಮುಂದರಿದ ಜಾತಿಯು ಕೆಲವರಲ್ಲಿ ಉಳಿದ ಜಾತಿಯ ವರು ತಮ್ಮ ದಾಸರೆಂದೂ ಅವರನ್ನು ಆಳಬೇಕೆಂದೂ ಬುದ್ಧಿಯು ಉ ದಯಿಸಿತು. ಹಿಂದುಳಿದ ಜಾತಿಯವರನ್ನು ಮುಂದರಿದ ಜಾತಿಯವರಲ್ಲಿ ಕೆಲವರು ದಾಸ್ಯಭಾವದಿಂದ ನೋಡಹತ್ತಿದರು.

ಹೀಗೆ ದಾಸ್ಯಭಾವವನ್ನು ಸಂವರ್ಧನಗೊಳಿಸುವ ಜನರ ವರ್ತನೆಯು ಹೇಗೆ ಲಾಂಛನಾಸ್ಪವಾದದುದೆಂದು ಭಾರತದ ಸಿಂಹನೋಪಾದಿಯಲ್ಲಿದ್ದ ದೇ. ಭ. ಲಾಲಾಲಜಪತರಾಯರು ಒಂದು ಪ್ರಸಂಗದಲ್ಲಿ ತೆಗೆದ ಉದ್ಗಾರವು ಮಾನನೀಯವಾಗಿರುವದು. ಅದನ್ನು ವಾಚಕರ ಅವಗಾಹನೆಗಾಗಿ ಕೆಳಗೆ ಕೊಡುವೆವು.—

No slavery is more harmful than that of mind, no sin is greater than keeping human beings in per

petual bondage. It is bad enough to enslave people, but to create and perpetuate circumstances to prevent them from breaking their claims and becoming free is infamous."

—Lala Lajpatrai.

ಅಂದರೆ " ಯಾವನೊಬ್ಬನ ಹೃದಯದಲ್ಲಿ ಕೀಳುತರದ ಭಾವನೆಯನ್ನು ಹುಟ್ಟಿಸುವಂಥ ಮಾನಸಿಕ ದಾಸ್ಯಕ್ಕಿಂತ ಹೆಚ್ಚಿನದೆನಿಸುವ ಕೆಟ್ಟ ಹಾಗೂ ಘಾತಕವಾದ ದಾಸ್ಯವು ಮತ್ತೊಂದಿಲ್ಲ. ಲೋಕದಲ್ಲಿಯ ಜನರನ್ನು ಸದಾ ಕೀಳುಭಾವನೆಯಲ್ಲಿರಿಸುವ ಪಾಪಕ್ಕಿಂತ ಮಹತ್ತಾದ ಪಾಪವು ಮತ್ತೊಂದಿಲ್ಲ. ಮೊದಲು ಜನರನ್ನು ದಾಸರನ್ನಾಗಿ ಮಾಡುವದೇ ತಪ್ಪು; ಆದರೂ ಜನರು ಸ್ವತಂತ್ರರಾಗಿ ತಮ್ಮ ದಾಸ್ಯತ್ವದ ಬಂಧನಗಳನ್ನು ಹರಿಯಗೊಡದಂತೆ ಉಪಾಯವನ್ನು ಸೃಜಿಸಿ ಅವರ ದಾಸ್ಯತ್ವವು ಸ್ಥಿರವಾಗುವಂತೆಮಾಡುವ ಸಾಹಸಗಳು ಲಾಂಛನಾಸ್ಪದವಾದವುಗಳು."

ಎಂದು ದೇ. ಭ ಲಾಲಾಲಜಪತರಾಯರು ತೆಗೆದಿರುವ ಉದ್ಗಾರವನ್ನು ಪರ್ಯಾಯಲೋಚಿಸಿದರೆ, ಈ ದಾಸ್ಯತ್ವವು ಧಾರ್ಮಿಕವೇ ಇರಲಿ, ಸಾಮಾಜಿಕವೇ ಇರಲಿ, ರಾಜಕೀಯವೇ ಇರಲಿ, ಇಂತಹ ಕೀಳುಭಾವನೆಯನ್ನು ಸಂವರ್ಧನಗೊಳಿಸುವಂಥವರನ್ನು ಕಂಡರೆ ನಿಜವಾದ ಸನಾತನ ಧರ್ಮಾಭಿಮಾನಿಯ ಮನಸ್ಸು ತಲ್ಲಣಗೊಳ್ಳದೆ ಇರದು. ಇದರಂತೆ ಹಿಂದುಧರ್ಮದಲ್ಲುಂಟಾಗಿದ್ದ ವಿಷಮತೆಯ ಅತಿರೇಕದಿಂದ ತಮ್ಮ ಸಂಚಾರದಲ್ಲಿ ತೊಂದರೆಯುಂಟಾದುದನ್ನು ಕಂಡು ಮಹಾಸ್ವಾಮಿಗಳು ಇದನ್ನು ಹೋಗಲಾಡಿಸಿಯೇ ತೀರಬೇಕಾಯಿತು.

" ಕಾಲೋಹ್ಯಾನಾದಿ ರೇಷೋತ್ರ ಭೂಯೋ ಭೂಯಃ ಕಲೌಯುಗೇ |
ಪ್ರಭೋ ಪ್ರಮಥನಾಥಾನಾ ಮವತಾರಶ್ಚ ತತ್ಕ್ರಿಯಾಃ ||
ಧರ್ಮಸಂಸ್ಥಾಪನಾರ್ಥಾಯ ವಿಜ್ಞೇಯಾ ಆಸ್ತಿ ಕೋತ್ತಮಾಃ|

ಅಂದರೆ " ಕಾಲವು ಅನಾದಿಯಾದುದು; ಈ ಕಲಿಯುಗದಲ್ಲಿ ಪ್ರಭುದೇವರೂ ಪ್ರಮಥನಾಥರೂ ಮೇಲಿಂದ ಮೇಲೆ ಅವತಾರ ತಾಳಿ ಯಾವ ಕೃತ್ಯಗಳನ್ನು ಮಾಡುವರೋ, ಅವು ಸರ್ವ ಧರ್ಮಸ್ಥಾಪನಾರ್ಥವಾಗಿರುವವು."

ಎಂದು ಪ್ರಭುಲಿಂಗಲೀಲಾಕರ್ತರು ಅಭಿಪ್ರಾಯಪಟ್ಟಂತೆ, ಈ ಮಹಾಸ್ವಾಮಿಗಳ ಕಾರ್ಯಕ್ಷೇತ್ರವು ಬಹಳ ವಿಸ್ತೃತವಾದದ್ದಿತ್ತು. ಇವರು ಕೇವಲ ಆಧ್ಯಾತ್ಮಿಕ ತತ್ವಗಳನ್ನು ಬಾಯಿಂದ ಬೋಧಿಸಿ ಕುಳಿತುಕೊಳ್ಳುತ್ತಿದ್ದಿಲ್ಲ. ಈ ಉಪದೇಶದೊಂದಿಗೆ ಭಕ್ತರಲ್ಲಿ, ಸಮತೆ, ಬಂಧುಭಾವ, ಈಶಭಕ್ತಿ, ಸುನೀತಿಗಳ ತಳಹದಿಯನ್ನು ಹಾಕಿ ಭಕ್ತರಲ್ಲಿ ಭಕ್ತಿಯಬೀಜವನ್ನು ಊರಿ ಅದು ಅಂಕುರಿಸಿತೋ ಇಲ್ಲವೋ ಎಂಬದನ್ನು ನಿರೀಕ್ಷಿಸುತ್ತಿದ್ದರು. ಕುಲಉದ್ಯೋಗಗಳ ಬಗ್ಗೆ ಸಮಾಜದಲ್ಲಿ ಬಳಿಕೆಯಲ್ಲಿದ್ದ ಕೀಳು ಮೇಲುಗಳ ಭಾವನೆಯನ್ನು ಅಳಿಸಿ ಜನ್ಮ ಕುಲಾದಿಗಳಿಂದ ಮನುಷ್ಯನ ಯೋಗ್ಯತೆಯನ್ನು ಪರೀಕ್ಷಿಸದೆ, ಸುಜ್ಞಾನ, ಸದ್ಗುಣ ಹಾಗು ಕರ್ಮಗಳಿಂದ ಅವನ ಯೋಗ್ಯತೆಯನ್ನು ನಿರ್ಧರಿಸಬೇಕೆಂಬ ತತ್ವವನ್ನು ಇವರು ಪ್ರಸಾರ ಮಾಡಬೇಕಾಗಿತ್ತು.

ಇದಕ್ಕಾಗಿ ಇವರು ತಮ್ಮ ಸಂಸ್ಥಾನದ ಪದ್ಧತಿಯಂತೆ ಸಕಲ ಬಿರುದುಗಳೊಂದಿಗೆ ಪರಮೋತ್ಸಾಹದಿಂದ ಯಾವದೊಂದು ಗ್ರಾಮವನ್ನು ಪ್ರವೇಶಿಸಿದಕೂಡಲೇ ವಿದ್ಯೆಯಲ್ಲಿ ಮುಂದರಿದವರು, ಪರಮತೀಯರು, ಇವರ ಬಿರುದುಗಳು ಮೆರೆಯಬಾರದೆಂದೂ, ಇಂಥಿಂಥ ಸ್ಥಳಗಳಲ್ಲಿ ಪಲ್ಲಕ್ಕಿಯು ಸಾಂಗವಾಗಬಾರದೆಂದೂ. ಇಂಥಿಂಥ ಸ್ಥಳಗಳಲ್ಲಿ ವಾದ್ಯಗಳನ್ನು ನಿಲ್ಲಿಸಬೇಕೆಂದೂ ಗಲಭೆಯನ್ನೆಬ್ಬಿಸುತ್ತಿದ್ದರು. ಕಟ್ಟಕಡೆಗೆ ಈ ಉತ್ಸವದಿಂದ ಶಾಂತತಾಭಂಗವಾಗುವದೆಂಬ ಕಾರಣ ತೋರಿಸಿ ಸರಕಾರಕ್ಕೆ ಅರ್ಜಿಯನ್ನು ಹಾಕಿ ಉತ್ಸವಕ್ಕೆ ಪ್ರತಿಬಂಧವನ್ನುಂಟು ಮಾಡುತ್ತಿದ್ದರು. ಮಹಾಸ್ವಾಮಿಗಳೇನೋ ನಿರಹಂಕಾರಿಗಳು; ಲೌಕಿಕದ ಯಾವ ಆಡಂಬರಕ್ಕೂ ಮೆಚ್ಚದವರು; ನಿಸ್ಪೃಹತೆಯ ಪ್ರಕಾಶದಲ್ಲಿ ಭಕ್ತರಿಗೆ ಸ್ವಸ್ವರೂಪದ ಜ್ಞಾನವನ್ನು ಮಾಡಿಕೊಡತಕ್ಕವರು. ಪರಧರ್ಮಸಹಿಷ್ಣುಗಳು. ಆದರೆ ಇಂತಹ ಪ್ರತಿಬಂಧಕರಿಗೆ ಹಾಗೆಯೇ ಸವಲತ್ತು ಕೊಡುತ್ತ ಮೌನದಿಂದ ಹೋದರೆ ಸಮಾಜದಲ್ಲಿಯ ವಿಷಮತೆಯನ್ನು ಸ್ಥಿರವಾಗಿರಿಸಿದಂತಾಗುವದು ! ವಿದ್ಯೆಯಿಂದ ಹಿಂದುಳಿದವರಲ್ಲಿ ದಾಸ್ಯಭಾವ, ಸ್ವಾಭಿಮಾನಶೂನ್ಯತೆ, ಆತ್ಮವಿಶ್ವಾಸದ ಹೀನತೆ ಇವುಗಳನ್ನು ಬೆಳೆಯಗೊಟ್ಟಂತಾಗುವದು. ಸಮಾಜದಲ್ಲಿಯ ಕರ್ತೃತ್ವಶಕ್ತಿಯು ಲಯವಾಗುವದು. ಜಗದ್ಗುರುಪೀಠದ ಮಹತಿಗೂ, ಸಮಾಜದ ಪ್ರತಿಷ್ಠೆಗೂ ಕುಂದು ಬರುವದು. ಎಂದು ಬಗೆದು ಮಹಾಸ್ವಾಮಿಗಳು ತಮ್ಮ ಮಹಾ

ಸಂಸ್ಥಾನದ ೭೨ ಬಿರುದುಗಳ ಹಕ್ಕನ್ನೂ, ತಮ್ಮ ಉದಾತ್ತ ಧ್ಯೇಯವನ್ನೂ ಸರಕಾರಕ್ಕೆ ತೋರ್ಪಡಿಸಿ ಈ ಕಲಹದ ಮೂಲವನ್ನೇ ಕಡಿದು ಹಾಕಿ ಉತ್ಸವವನ್ನು ಜರುಗಿಸಿ, ದರ್ಶನಾಶೀರ್ವಾದಗಳಿಂದ ಭಕ್ತರನ್ನು ಉದ್ಧರಿಸಿ ಮುಂದೆ ಸಾಗುತ್ತಿದ್ದರು. ಇಂಥ ತೊಂದರೆಯ ಪ್ರಸಂಗಗಳು ಮಹಾಸ್ವಾಮಿಗಳ ಸಂಚಾರದಲ್ಲಿ ಹೇರಳವಾಗಿ ಪ್ರಾಪ್ತವಾದರೂ ದೊಡ್ಡಗುಣಿ, ಬಾಗಲಕೋಟಿ, ಅಥಣಿಗಳಲ್ಲುಂಟಾದ ಪ್ರತಿಬಂಧಗಳು ಮರೆಯುವಂತಿರುವದಿಲ್ಲ. ಮೈಸೂರ ಸಂಸ್ಥಾನದಲ್ಲಿಯ ತುಮಕೂರ ಹತ್ತರಿರುವ ದೊಡ್ಡಗುಣಿ ಎಂಬ ಗ್ರಾಮದಿಂದ ಮಹಾ|| || ಸ್ವಾಮಿಗಳು ಮುಂದಕ್ಕೆ ಸಕಲ ಬಿರುದಾವಳಿಗಳಿಂದ ಬಿಜಯಂಗೈದಾಗ ಅನ್ಯಮತಸ್ಥರು ಇವರ ಸಮಾರಂಭಪೂರ್ವಕ ಸಂಚಾರಕ್ಕೆ ಪ್ರತಿಬಂಧವನ್ನುಂಟು ಮಾಡಿದರು. ಆಗ ಜಗದ್ಗುರುಗಳು ೪—೮ ತಿಂಗಳವರೆಗೆ ದೊಡ್ಡಗುಣಿಯಲ್ಲಿ ಮುಕ್ಕಾಮು ಹಾಕಿ ತಮ್ಮ ಸಂಸ್ಥಾನಕ್ಕೆ ದೊರೆತ ಹಿಂದಿನ * ಸನದುಗಳನ್ನೂ ತಮ್ಮ ಸಂಸ್ಥಾನಕ್ಕೆ ೭೨ ಬಿರುದುಗಳಿದ್ದ ದಾಖಲೆಗಳನ್ನೂ ಮತಗ್ರಂಥಗಳನ್ನೂ ಉದಹರಿಸಿ, ಜಯವನ್ನು ಪಡೆದು ಮುಂದಕ್ಕೆ ಪ್ರಯಾಣ ಬೆಳಸಿದರು.

---

೧ * ಮೈಸೂರ ಮುಮ್ಮಡಿ ಶ್ರೀಕೃಷ್ಣ ರಾಜೇಂದ್ರ ಧೊರೆಗಳ ಸನದು.




ಧಾತು ಸಂವತ್ಸರದ ಆಷಾಢ ಬ|| ೧೨ ಸೋಮವಾರದಲ್ಲಿ ಶ್ರೀಮತು ೧ ಅರಮನೆ ಸೀಮೋರ್ಗಡಿಗಳ ಅಮಿಲ್ ಕಿಲ್ಲೇದಾರರಿಗೆ ಬರಿಸಿ ಕಳಿಸಿದ ನಿರೂಪ ಆದಾಗಿ ಚಿತ್ರದುರ್ಗದಲ್ಲಿರುವ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಮುರಘರಾಜೇಂದ್ರ ಸ್ವಾಮಿಗಳವರ ಮಠದ ಒಪ್ಪತ್ತಿನ ನೀಲಕಂಠಚರಂತಿಗಳು ಚರಂತಿಕೊಡಲಿ. ಸೋಮಶೇಖರಶಾಸ್ತ್ರಿಗಳು ಸಹಾಹುಜೂರಿಗೆ ಬಂದು ಈ ಮಠದಲ್ಲಿ ಪೂರ್ವದಿಂದ ಮಕರತೋರಣ ೧. ನಂದೀಧ್ವಜದಲ್ಲಿ

ಈ ಬಗ್ಗೆ ಮೈಸೂರ ಧೊರೆಗಳಿಂದ ಮಹಾಸಂಸ್ಥಾನದ ಗೌರವಾರ್ಥವಾಗಿ ದೊರೆತಸನದುಗಳನ್ನು ವಾಚಕರ ಅವಗಾಹನೆಗಾಗಿ ಅಡಿಟಿಪ್ಪಣಿಯಲ್ಲಿ ಕೊಟ್ಟಿರುವೆವು.

---

ಯುವ್ಯಾಸನ ತೋಳು ವಂದು; ಪಂಚದೀವಟಿಗೆ ಯರಡು; ಮೊಹರ ಚಾಲು ಯರಡು; ವೇಟು ಪಾವಡಯರಡು; ಕುದ್ರಿಮೇಲಣ ಡಂಕಾಯರಡು, ಕ್ಯಾವಿಸಿಶಾನಿಯರಡು, ಮಾಯಿಮರಾತಬು ಒಂದು, ಚಂದ್ರವಾದ್ಯ ಯರಡು, ಉಡಕವಾದ್ಯ ಯರಡು, ಚಾಮರ ೨ ಬಿಚ್ಚುಪಿರಂಗು ೨. ರವಡು ೨. ತಲೆಗೆ ಕಟ್ಟಿ ಬಾರಿಸುವ ಚಂದ್ರವಾದ್ಯ ಯರಡು ತಲೆಗೆ ಕಟ್ಟಿಬಾರಿಸುವ ಸೂರ್ಯವಾದ್ಯ ೨. ಹಸರು ಕೆಂಪು ಹಳದಿ ಅಪ್ತಾಗಿರಿ ೨. ಚಂದ್ರಗಾವಿ ಉಡಾಸು, ಹಗಲು ದೀವಿಟಿಗೆ ೨. ಜಾಗಟೆ ೨. ಶಂಖ ೨. ಕಾವೀ ಝಾಂಡ್ಯ ೨. ಪಟಾ ಪಟಿ ಝಾಂಡ್ಯ ೨. ಬೆಳ್ಳೀಕಟ್ಟಿಗೆ ೫೦. ಹಸರು ಕಟ್ಟಿಗೆ ೫೦ ಈವ್ಯಾರೆ ಬಿರುದು ಸಹಿತವಾಗಿ ಸೀಮೆ ಸಂಚಾರ ಮಾಡುವಲ್ಲಿ ಅಡ್ಡಿಯಿಲ್ಲದಂತೆ ಅಪ್ಪಣೆಯಾಗಬೇಕೆಂದು ಹುಜೂರಲ್ಲಿ ಅಪ್ಪಣೆ ಮಾಡಿಕೊಂಡ ಕಾರಣ ಅಪ್ಪಣೆ ಕೊಟ್ಟು ಇದ್ದಿತು. ಮಾಮೂಲಾರಂಭ್ಯ ಉಂಟಾದ ಈ ಬಿರುದುಗಳ ಸಹಿತವಾಗಿ ಪೂರ್ವಾರಭ್ಯ ಸಂಚಾರ ಮಾಡುವ ಪ್ರಕಾರ ಶೀಮೊಗಳಲ್ಲಿ ಈಗಲೂ ಸಂಚಾರ ಮಾಡುವಲ್ಲಿ ಅಡ್ಡಿ ಮಾಡಲಾಗದು. ತಾರೀಖು ೨೨ ಮಾಹೆ ಜನ್ವರಿ ಸನ್ ೧೮೪೧ ಇಸವಿ ಖತ್ತ ಪ್ರಸನ್ನಯ್ಯ ಮುನಷಿಹುಜೂರ್. ಶ್ರೀಕೃಷ್ಣ ಯೆಂತ ಕನ್ನಡದಲ್ಲಿ ಸ್ಪೈ. ನಿದೆ.

೨. ಶ್ರೀಂಗೇರಿಯ ಮಠಕ್ಕೆ ಇರುವ ಮರ್ಯಾದೆಯು ಚಿನ್ಮೂಲಾದ್ರಿಬೃಹನ್ಮಠಕ್ಕೆ ಇರುವದೆಂಬ ಭಗ್ಗೆ ಮೈಸೂರ ಧೊರೆಗಳ ಸನದು.

श्रीचामराज वडेयर तनुज
श्रीकृष्णराज वडेयरु.

ಯುವಸಂವತ್ಸರದ ಪುಷ್ಯ ಶು ೧೩ ಸ್ಥಿರವಾರದಲ್ಲು ಶ್ರೀಮತು|| ಅರಮನೆ ಶೀಮೊಗಳ ಅಮೀಲ್ ಕಿಲ್ಲೆದಾರರಿಗೆ ಬರಸಿ ಕಳಿಸಿದ ನಿರೂಪ ಅದಾಗಿ ಚಿನ್ಮೂಲಾದ್ರಿ ಪ್ರಭುಶೂನ್ಯಸಿಂಹಾಸನ ಮಠಧ ಮುರಗಾರಾಜೇಂದ್ರ ಸ್ವಾಮಿಗಳು ತಮ್ಮ ಸಕಲವಿನಿಯೋಗಸಹಿತವಾಗಿ ಮಾಮೂಲ್ ಪ್ರಕಾರ ತಮ್ಮ ಶಿಷ್ಯರಲ್ಲಿ ಹೋಗುವಲ್ಲಿ ಬರುವಲ್ಲಿ ಶೃಂಗೇರಿಮಠಕ್ಕೆ ಸಲ್ಲುತ

ಇದೇ ಮೇರೆಗೆ ಬಾಗಲಕೋಟೆಯ ದಿಗ್ವಿಜಯಾತ್ರೆಯಲ್ಲಿ ಸಹ ಮಹಾಸ್ವಾಮಿಗಳ ಸಕಲ ಬಿರುದಾವಳಿಗಳ ಮೆರವಣಿಗೆಗೂ ಅಡ್ಡಪಲ್ಲಕ್ಕಿಗೂ ಕೆಲವು ಜನರು ಪ್ರತಿಬಂಧವನ್ನುಂಟು ಮಾಡಿ ತೊಂದರೆಯನ್ನು ತಂದೊಡ್ಡಿದರು. ಧರ್ಮೋದ್ಧಾರಕ್ಕಾಗಿ ದಿಗ್ಯಾತ್ರೆ ಕೈಕೊಂಡ ಜಗದ್ಗುರುಗಳು ಮಹಾತಪಸ್ವಿಗಳು; ಲೋಕಹಿತದಕ್ಷರು. ಷಟ್‌ಸ್ಥಲಜ್ಞಾನಿಗಳು; ಸಮಾಜ ಹಿತಕರ್ತರು. ಅಖಿಲಕರ್ನಾಟಕದ ಚಿತ್ತವೃತ್ತಿಯನ್ನು ಆಕರ್ಷಿಸಿದ ಯೋಗ್ಯತಾಶಾಲಿಗಳು; ಇದರಿಂದ ಇವರ ಮುಂದೆ ಬಂದ ತೊಂದರೆಗಳು ಪ್ರಚಂಡ ಮಾರುತನಿಂದ ಆಕಾಶದಲ್ಲಿಯ ಮೋಡಗಳು ಚದರಿ ಹೊಗುವಂತೆ ಹೇಳಹೆಸರಿಲ್ಲದೆ ಬಯಲಾವು. ಈ ಪ್ರಸಂಗದಲ್ಲಿ ವೀರಶೈವ ಭಕ್ತಶಿಖಾಮಣಿಗಳಾದ ಶಿರೂರ ಹಣಮಂತರಗೌಡರ ಮಕ್ಕಳಾದ ಮ| ರಾ| ರಾ| ತಿಮ್ಮಣ್ಣಗೌಡಪಾಟೀಲ ಇವರ ಗುರುಭಕ್ತಿಯು ವರ್ಣನೀಯವೆನಿಸಿಹೋಯಿತು. ಇವರು ಶಿರೂರಿಂದ ಬಾಗಲಕೋಟೆಯವರೆಗೆ ಜನಸಹಾಯವನ್ನೂ ಬೇರೆ ಅನುಕೂಲತೆಯನ್ನೂ ಸನ್ನಿಧಿಗೆ ಒದಗಿಸಿ ಗುರುಸೇವೆ ಮಾಡಿ ಕೃತಾರ್ಥರಾದರು. ಇವರ ಮಕ್ಕಳಲ್ಲಿ ಒಬ್ಬರು ಈಗ ವಿಜಾಪೂರದಲ್ಲಿ ಪ್ರಸಿದ್ಧ ವಕೀಲರೂ ವೀರಶೈವ ಮುಂದಾಳುಗಳೂ ಆದ ಶ್ರೀಮಾನ್ ಶಂಕರಗೌಡ ತಿಮ್ಮನಗೌಡ ಪಾಟೀಲ ಬಿ. ಎ. ಎಲ್. ಎಲ್. ಬಿ M L C. ಎಂಬ ಪ್ರತಿಷ್ಠಿತ ಗೃಹಸ್ಥರು. ಇನ್ನೊಬ್ಬರು ಶಿರೂರಲ್ಲಿ ಪೋಲೀಸಗೌಡರಾಗಿರುವ ಶಿವನಗೌಡರೆಂಬವರು; ಇವರು ಸುಶೀಲರೂ ಧರ್ಮಬುದ್ಧಿಯವರೂ ಉದಾರರೂ ಇರವರು. ಮಹಾಸ್ವಾಮಿಗಳು ಈ ಶಿರೂರ ತಿಮ್ಮನಗೌಡರ ಮನೆತನದ ಮೇಲೆ ಪರಮಾನುಗ್ರಹ ಮಾಡಿರುವರು.

ಇರಲಿ, ಇನ್ನು ಮಹಾಸ್ವಾಮಿಗಳ ಅಥಣಿಯ ದಿಗ್ಯಾತ್ರೆಯಲ್ಲಿಯ

---

ಕ್ಕ ಮಾಮೂಲ' ಸಕಲ ವಿನಿಯೋಗ ಯಾವುದು ಇಧೆಯೋ ಆದೇ ಮೇರೆಗೆ ಈವರೆಗೂ ಇಧೆಯಷ್ಟೇ; ಅದಕ್ಕೆ ಕೆಲವರು ತುಂಟರು ಹರಕತ್ತು ಮಾಡುವಂತವರ ಮಾತು ಕೇಳಕೊಂಡು ಶಿಪಾರಶಿನಂದ ಕಂಟ ಮಾಡದೆ ಮಾಮೂಲ್ ಮ್ಯಾರೆ ಸಂಚಾರ ಮಾಡುವಲ್ಲಿ ಹರಕತ್ ಮಾಡದಂತೆ ತಾಕೀದು ಮಾಡುವದು. ತಾರೀಖ ೧೩ನೇ ಮಾಹೇ ಜನೇವರಿ ಸನ್ ೧೮೧೬ನೇ ಇಶ್ವಿ ಖತ್ತು ಪ್ರಸನ್ನಯ್ಯ ಮುನಷಿ ಹುಜೂರ.

ಸಹಿ.—ಶ್ರೀಕೃಷ್ಣ ಅಂತ ಕನ್ನಡದಲ್ಲಿಯಿದೆ.

ಕೆಲವು ವಿಷಯಗಳನ್ನೂ ಅಗಾಧ ಕರ್ತೃತ್ವಶಕ್ತಿಯನ್ನೂ ವಿವರಿಸಿ ಈ ಪ್ರಕರಣವನ್ನು ಮುಗಿಸಿ ಮುಂದಿನ ವಿಷಯದ ಕಡೆಗೆ ಹೊರಳುವೆವು. ಮಹಾಸ್ವಾಮಿಗಳು ಲೋಕಹಿತಕ್ಕಾಗಿಯೂ, ಭಕ್ತೋದ್ಧಾರಕ್ಕಾಗಿಯೂ, ಅಥಣಿಗೆ ಬಿಜಯಂಗೈದು, ಮಕರತೋರಣ, ಬಾದರಾಯಣ ಬಾಹು ಸಹಿತ ನಂದೀಧ್ವಜ, ಇತ್ಯಾದಿ ೭೨ ಬಿರುದುಗಳೊಂದಿಗೆ ಮೆರವಣಿಗೆ ಹೊರಟ ಸಮಯದಲ್ಲಿ ಈ ಉತ್ಸವಕ್ಕೆ ಪ್ರತಿಬಂಧವುಂಟಾಯಿತು. ಈ ಉತ್ಸವದಲ್ಲಿ ಮಹಾ ತಪಸ್ವಿಗಳಾದ ಅಥಣಿಯ ಶ್ರೀ ಶಿವಯೋಗಿಗಳೂ, ಬೀಳೂರ ವಿರಕ್ತ ಮಠದ ಶ್ರೀ ಗುರುಬಸವಸ್ವಾಮಿಗಳೂ, ಮೋಟಾಗಿ ಮಠದ ಶ್ರೀ ಚನ್ನಬಸವಸ್ವಾಮಿಗಳೂ ಉಳಿದ ವಿರಕ್ತಶ್ರೇಷ್ಠರೂ ಮಿಲಿತರಾಗಿದ್ದರು. ದೇಶದಲ್ಲಿಯ ಅನೇಕ ಭಕ್ತಮಾಹೇಶ್ವರರೂ, ವೀರಶೈವಾಭಿಮಾನಿಗಳೂ, ಮಹಾಸ್ವಾಮಿಗಳ ದರ್ಶನಾಶೀರ್ವಾದಗಳಿಂದ ಕೃತಾರ್ಥರಾಗಬೇಕೆಂದು ಆಗಮಿಸಿದ್ದರು. ಕವಿಗಳು, ಪಂಡಿತರು, ಗಾಯನ ವಾದನಪಟುಗಳು ಪ್ರತಿಷ್ಠಿತಜನರು ಈ ಮಹೋತ್ಸವಕ್ಕಾಗಿ ಶೇಡಬಾಳ ಸ್ಟೇಶನ್ನದಿಂದ ಅಥಣಿಯವರೆಗೂ ದಟ್ಟಾಗಿ ಮಿಲಿತರಾಗಿದ್ದರು. ಶೇಡಬಾಳ ಸ್ಟೇಶನ್ನದಲ್ಲಿ ನೋಡಿದತ್ತೆಲ್ಲ ಅನ್ನಛತ್ರ, ಅರವಟ್ಟಿಗೆ, ಭಜನೆಯ ಸಂಘಗಳೇ ದೃಗ್ಗೋಚರವಾಗುತ್ತಿದ್ದವು. ಇಂಥ ಸಾಗರೋಪಾದಿಯಲ್ಲಿ ಕೂಡಿದ ಜನಸಮುದಾಯದಲ್ಲಿ ಹೊರಟ ಮಹಾಸ್ವಾಗಳ ಮೆರವಣಿಗೆಗೆ ವ್ಯಾಸನ ತೋಳಿನ ಸಂಬಂಧವಾಗಿ ಕಲಹವೆದ್ದು ಪ್ರತಿಬಂಧಉಂಟಾಯಿತು. ಮಹಾಸ್ವಾಮಿಗಳು ಮುಂಬಯಿ ಹಾಯಕೋರ್ಟಿನವರೆಗೆ ಕೆಲಸನಡಿಸಿ ವಿಜಯಶಾಲಿಗಳಾಗಿ ಉತ್ಸವವನ್ನು ಸಾಂಗಗೊಳಿಸಿ ಸಂಸ್ಥಾನದ ಕೀರ್ತಿಯನ್ನು ದಿಗಂತರದಲ್ಲಿ ಬೆಳಸಿದರು. ಇಂತಹ ಅನೇಕ ಪ್ರಸಂಗಗಳಲ್ಲೆಲ್ಲ ಮಹಾಸ್ವಾಮಿಗಳು ಸಂಸ್ಥಾನದ ಸನದುಗಳನ್ನೂ ಕಾಗದ ಪತ್ರಗಳನ್ನೂ ದಾಖಲೆಗಳನ್ನೂ ಸಾಕ್ಷಿಪುರಾವೆಗಳನ್ನೂ ಸರಕಾರಕ್ಕೆ ಸಾದರಪಡಿಸಿ ಎಲ್ಲಿಯೂ ಸಂಚಾರಕ್ಕೆ ತೊಂದರೆಯಾಗದಂತೆ ತೀರ್ಪು ಮಾಡಿಸಿದರು. ಇದರಿಂದ ಈ ಜಗದ್ಗುರುಪೀಠದ ಮಹತಿಯೂ, ಕೀರ್ತಿಯೂ ಆಚಂದ್ರಾರ್ಕಮೆರೆಯಲು ಆಧಾರವಾಯಿತು. ಹಾಗೂ ಆಯಾಯಾಪ್ರಸಂಗದಲ್ಲಾದ ಮಹಾಸ್ವಾಮಿಗಳ ಬೋಧಾಮೃತದಿಂದ “ ಜಗತ್ತಿನಲ್ಲಿ ಎಲ್ಲರೂ ಜಗದೀಶ್ವರನ ಅಂಶಭೂತರು. ಆ ಮಹಾಮಹಿಮನ ಪ್ರೀತಿಗೆ ಪಾತ್ರರಾಗಲು

ಎಲ್ಲರಿಗೂ ಸಮಾನ ಹಕ್ಕು ಇದೆ. ಈಶ್ವರನ ಸೃಷ್ಟಿಯಲ್ಲಿ ಒಬ್ಬರು ಹೆಚ್ಚು; ಇನ್ನೊಬ್ಬರು ಕಡಿಮೆ ಯೆಂಬ ಭಾವನೆ ಮಾಡುವದು ಅನುಚಿತವು." ಎಂಬ ಸರ್ವಸಮಾನತ್ವದ ಹಾಗು ಭಕ್ತಿಮಾರ್ಗದ ಪ್ರಸಾರವಾಯಿತು. ವೀರಶೈವರನ್ನೂ ವಿದ್ಯೆಯಲ್ಲಿ ಹಿಂದುಳಿದ ನಿಕೃಷ್ಟವರ್ಗದವರನ್ನೂ ದುರ್ಲಕ್ಷಿಸುವದೂ, ನಿರಾಕರಿಸುವದೂ, ಸರಿಯಲ್ಲವೆಂದು ಪ್ರಸಾರವಾಯಿತು. ಇವರು ಸಂಚಾರ ಮಾಡಿದಲ್ಲೆಲ್ಲ ಭಕ್ತರ ಉದ್ಧಾರವಾಯಿತು. ಸಾರಾಂಶ ಇವರ ದಿಗ್ಯಾತ್ರೆಯಿಂದ ವಿದ್ಯೆಯಲ್ಲಿ ಮುಂದರಿದ ಪರಮತೀಯರು ಸಹಉದಾರಮತವಾದಿಗಳಾಗಿ ಪರಮೇಶ್ವರನ ಆರಾಧನೆಯಲ್ಲಿಯೂ, ಮಹಾತ್ಮಾಗಾಂಧೀಜೀಯವರೇ ಮೊದಲಾದ ಮಹನೀಯರು ಕೈಕೊಂಡ ದೇಶಸೇವೆಯ ಕೆಲಸದಲ್ಲಿಯೂ ಐಕ್ಯಮತದಿಂದ ಸಹಕರಿಸಿ ನಡೆಯಲು ಪರಿಸ್ಥಿತಿಯುಂಟಾಯಿತು.

ಕೊಲ್ಲಾಪುರ ಪುಣೆ ಮೊದಲಾದ ನಗರಗಳಲ್ಲಿ ಪರಮತದವರು ಸಹ ಇವರ ಅಡ್ಡಪಲ್ಲಕ್ಕಿಯ ಉತ್ಸವವನ್ನೂ ಅನಂತ ಸನ್ಮಾನಗಳನ್ನೂ ಮಾಡಿ ಕೃತಾರ್ಥರಾದರು. ಸಾಂಗಲಿ, ಜತ್ತ, ಜಮಖಂಡಿ, ಮಿರಜ, ಔಂಧ ಮೊದಲಾದ ರಾಜಾಧಿರಾಜರು ಸಹ ಇವರಿಗೆ ಅಭೂತಪೂರ್ವ ಸನ್ಮಾನಮಾಡಿ ಕೃತಕೃತ್ಯರಾಗಿರುವರು.

ಮಹಾರಾಷ್ಟ್ರ ಪ್ರಾಂತದಲ್ಲಿರುವ ವೀರಶೈವರು ವೀರಶೈವಪದ್ಧತಿಯ ಪ್ರಕಾರ ಮಕ್ಕಳಿಗೆ ಹೆಸರಿಡುವದನ್ನು ಸಹ ಅಲಕ್ಷಿಸಿದ್ದರು. ವೀರಶೈವ ಆಚಾರ ವಿಚಾರಗಳಂತೂ ಇವರಲ್ಲಿ ನಾಮಶೇಷವಾಗಹತ್ತಿದ್ದವು. ಪರಕೀಯ ಸಂಸ್ಕೃತಿಯು ಇವರಲ್ಲಿ ಪೂರಾ ವ್ಯಾಪಿಸತೊಡಗಿತ್ತು. ಇಂಥ ಪರಿಸ್ಥಿಯಲ್ಲಿ ಮಹಾಸ್ವಾಮಿಗಳ ಆಗಮನವಾದ್ದರಿಂದ ಇವರಲ್ಲಿಯ ಮತಬಾಹ್ಯರೂಢಿಗಳು ಲಯವಾಗಿ ನಿಜವಾದ ಧರ್ಮಜಾಗೃತಿಯು ಉಂಟಾಯಿತು. ಈ ಮೇರೆಗೆ ಮಹಾಸ್ವಾಮಿಗಳು ೨೦ ವರ್ಷ ದಿಗ್ವಿಜಯ ಸಂಚಾರಮಾಡಿ ಅದ್ಭುತಕಾರ್ಯಗಳನ್ನು ಮಾಡಿ ಸಮಾಜಕ್ಕೆ ಅತ್ಯಂತ ಉಪಕಾರವನ್ನು ಮಾಡಿರುವರು.

# ೧೦ ನೇ ಅಧ್ಯಾಯ.

## ಶಾಖಾಮಠಗಳ ಸುವ್ಯವಸ್ಥೆ.

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರಘರಾಜೇಂದ್ರಸ್ವಾಮಿಗಳು ಚಿನ್ಮೂಲಾದ್ರಿಯ ಬೃಹನ್ಮಠದ ಸಿಂಹಾಸನವನ್ನೇರಿ ಹಿಂದಿನಪ್ರಕರಣದಲ್ಲಿ ಹೇಳಿದಂತೆ ದಿಗ್ವಿಜಯ ಸಂಚಾರವನ್ನು ಕೈಕೊಂಡಾಗ ದೇಶದಲ್ಲಿಯ ಅನೇಕ ವೀರಶೈವ ವಿರಕ್ತಮಠಗಳ ಸ್ಥಿತಿಯು ಶೋಚನೀಯವಾಗಿದ್ದುದು ಇವರ ನಿರ್ದಶನಕ್ಕೆ ಬಂದಿತು. ಆಗ ಇವರಿಗೆ ಇವುಗಳನ್ನು ಬಹು ಮಟ್ಟಿಗೆ ಸುಧಾರಿಸಬೇಕೆಂದು ಮನಸ್ಸುಂಟಾಯಿತು.

ಶ್ರೀ ಬಸವೇಶ್ವರರು, ಹಾಗು ಚನ್ನಬಸವೇಶ್ವರರು ವೀರಶೈವ ವಿರಕ್ತಮಠಗಳಿಗೆ ಕೊಟ್ಟುಹೋದಗತಿಯಿಂದ ಆಧ್ಯಾತ್ಮಶಕ್ತಿಗೆ ಕೇಂದ್ರಸ್ಥಾನವೆಂದೆನಿಸಿಕೊಂಡಿದ್ದ ಈ ವೀರಶೈವ ಮಠಗಳು ಐಹಿಕ ಸುಖೋಪಭೋಗಗಳ ತವರುಮನೆಯೆಂದೆನಿಸತೊಡಗಿದ್ದವು. ಪೂರ್ವಕಾಲದಲ್ಲಿ ಸ್ವಾರ್ಥತ್ಯಾಗಿಗಳೂ ವೈರಾಗ್ಯ ಶಿಖಾಮಣಿಗಳೂ ಆಗಿದ್ದ ಈ ವೀರಶೈವ ಮಠಾಧಿಪತಿಗಳು ಧಾರ್ಮಿಕಶಿಕ್ಷಣದ ಅಭಾವದಿಂದಲೂ, ಕಾಲಚಕ್ರದಲ್ಲಿಶಿಲ್ಕಿಯೂ, ತಾವು ಮಾಡತಕ್ಕ ಧರ್ಮಜಾಗೃತಿಯಕಾರ್ಯವನ್ನು ಮರೆತಿದ್ದರು. ವಿಜಯನಗರದ ವೈಭವಕಾಲದಲ್ಲಿದ್ದ ದೇಗುಲಗಳು ಈಗ ಹಾಳುಗರೆಯುತ್ತಿರುವಂತೆ ಬಸವೇಶಾದಿ ಪ್ರಮಥರ ಕಾಲದಲ್ಲಿ ವೈಭವಶಿಖರಕ್ಕೇರಿದ ವೀರಶೈವಮಠಗಳು ಹಾಳುದೇಗುಲಗಳಂತೆ ನಿರರ್ಥಕವಾಗಹತ್ತಿದ್ದವು. ಇದರಿಂದ ಇವರಿಂದ ಪ್ರಸಾರವಾಗತಕ್ಕ ವೀರಶೈವಧರ್ಮಜಾಗ್ರತೆಯು ನಿಂತು, ಸಂಸ್ಕೃತಿಯು ವಿಕೃತರೂಪವನ್ನು ಹೊಂದತೊಡಗಿತ್ತು. ಯಾವದೊಂದು ಮತವು ಅಥವಾ ಸಮಾಜವು ಮುಂದರಿಯಬೇಕಾದರೆ ಆಮತದ ಗುರುಗಳ ಇಲ್ಲವೆ ಮುಖಂಡರೆಂದೆನಿಸಿಕೊಳ್ಳುವವರ ಸದಾಚಾರ, ತಪಸ್ಸು, ಕರ್ತವ್ಯಾದಿಗಳೂ ಮಾದರಿಯಾಗಿರಬೇಕಾಗುತ್ತದೆ. ಪೂರ್ವದಲ್ಲಿ ವೀರಶೈವಸಮಾಜದಲ್ಲಿ ಅಸಾಧಾರಣ ಪಾಂಡಿತ್ಯವುಳ್ಳವರೂ, ದಿಗ್ದಂತಿಗಳೂ, ಸಕಲಶಾಸ್ತ್ರಕೋವಿದರೂ ತಪಸ್ವಿಗಳೂ ಆದ ಮಠಾಧಿಪತಿಗಳು ಕಂಗೊಳಿಸುತ್ತಿದ್ದರು. ಆದ್ದರಿಂದಲೇ ಆಗ ವೀರಶೈವ ಸಮಾಜವು ಬಹುಸುಧಾರಣೆಸ್ಥಿತಿಯಲ್ಲಿತ್ತು ಆದರೆ

ಧಾರ್ಮಿಕಶಿಕ್ಷಣದ ಅಭಾವದಿಂದಲೂ, ಅವಿದ್ಯೆಯಿಂದಲೂ, ಈ ವಿರಕ್ತ ಮಠಗಳಲ್ಲಿ ಅವಿದ್ಯೆಯೂ ಅವ್ಯವಸ್ಥೆಯೂ ಮನೆಮಾಡಿ ಬಿಟ್ಟಿದ್ದವು. ವಿರಕ್ತಮಠದ ಅಧಿಪತಿಗಳು ತಮ್ಮ ಕರ್ತವ್ಯವನ್ನು ಮರೆತು ಸಾಮಾನ್ಯ ಜನರಂತೆ ಆಚರಿಸಹತ್ತಿದ್ದರು. ಇದರಿಂದ ವೀರಶೈವ ಧರ್ಮವು ಶಿಥಿಲತೆಯನ್ನು ಹೊಂದತೊಡಗಿತ್ತು. ಭಕ್ತರ ಆಚಾರವಿಚಾರಗಳಲ್ಲಿ ಸಹ ಗುರುಗಳ ಸಡಿಲತೆಯಿಂದ ವ್ಯತ್ಯಾಸಗಳುಂಟಾಗಿದ್ದವು. ಇವುಗಳನ್ನು ಹೋಗಲಾಡಿಸುವದು ಮಠಾಧಿಪತಿಗಳ ಕರ್ತವ್ಯವಾಗಿತ್ತು. ಇದಲ್ಲದೆ "ಮಠಚ್ಛಾತ್ರಾನಿಲಯ:" ಎಂಬಂತೆ ಮಠಗಳೆಂದರೆ ವಿದ್ಯಾರ್ಥಿಗಳಿಗೆ ಅನ್ನ, ವಿದ್ಯಾ, ಜ್ಞಾನಗಳನ್ನೊದಗಿಸಿಕೊಡುವ ಸಂಸ್ಥೆಗಳು; ವಿದ್ಯಾರ್ಥಿಗಳು ತಮ್ಮ ಬಾಲ್ಯಾವಸ್ಥೆಯನ್ನು ಕಳೆದಮೇಲೆ ಬ್ರಹ್ಮಚರ್ಯೆಯಿಂದ ತಮ್ಮ ತಂದೆ ತಾಯಿಗಳನ್ನು ಬಿಟ್ಟು ಇಹಪರಸಾಧನದ ಜ್ಞಾನಾರ್ಜನೆಗಾಗಿ ಈ ಮಠಗಳನ್ನು ಪ್ರವೇಶಿಸುತ್ತಿದ್ದರು. ಈ ಮಠಗಳಾದರೂ ವಿದ್ಯಾರ್ಥಿಗಳಿಗೆ ಸ್ವಂತ ಮನೆಗಳಿಗಿಂತ ಹೆಚ್ಚು ಫಲಕಾರಿಯಾಗುತ್ತಿದ್ದವು. ಸರ್ವಸಂಗ ಪರಿತ್ಯಾಗ ಮಾಡಿದ ಈ ಮಠಾಧಿಪತಿಗಳಾದರೂ ಸದಾವಕಾಲದಲ್ಲಿ ಶಿಷ್ಯರ ಕ್ಷೇಮಲಾಭಗಳನ್ನು ಚಿಂತಿಸುತ್ತ ಅವರಿಗೆ ಆಧ್ಯಾತ್ಮಿಕ ತತ್ವಗಳನ್ನು ಬೋಧಿಸಿ ಇಹಪರಸುಖಗಳನ್ನು ಒದಗಿಸಿಕೊಡುತ್ತಿದ್ದರು. ಇಂಥ ಮಠಾಧಿಪತಿಗಳಲ್ಲಿ ಅನೇಕರು ಕರ್ತವ್ಯಚ್ಯುತರಾದುದನ್ನು ಕಂಡು, ಶ್ರೀಮನ್ಮಹಾರಾಜನಿರಂಜನ ಜಗದ್ಗುರು ಜಯದೇವ ಮುರಘರಾಜೇಂದ್ರ ಮಹಾಸ್ವಾಮಿಗಳು ಇವುಗಳನ್ನು ಸುಧಾರಿಸುವ ಯೋಜನೆಯನ್ನು ಕೈಕೊಂಡರು.

ಹೀಗೆ ಅವ್ಯವಸ್ಥೆಗಳಿಗೆ ಒಳಗಾಗಿದ್ದ ವೀರಶೈವ ವಿರಕ್ತಮಠಗಳನ್ನು ಸುಧಾರಿಸಿ ಇವುಗಳಿಗೆ ಮಾದರಿಯು ಜೀವನಕ್ರಮವನ್ನು ತೋರಿಸಬಲ್ಲ ಮಹನೀಯರೊಬ್ಬರು ವೀರಶೈವಸಮಾಜದಲ್ಲಿ ಈಗ ಅತ್ಯವಶ್ಯವಾಗಿ ಬೇಕಾಗಿತ್ತು. ಶ್ರೀಮಹಾ॥ ॥ ಸ್ವಾಮಿಗಳು ತಮ್ಮ ದಿಗ್ವಿಜಯಸಂಚಾರದಲ್ಲಿ ಕೆಲವು ವಿರಕ್ತಮಠಗಳ ಅವ್ಯವಸ್ಥೆಯನ್ನು ವೀರಶೈವ ಜನಜೀವನದ ದುರ್ದಶೆಯನ್ನೂ ಮನದಂದು ಕನಿಕರಪಟ್ಟು ಈ ಕಾರ್ಯಕ್ಷೇತ್ರವನ್ನೂ ಕೈಕೊಂಡರು. ಇವರಲ್ಲಿದ್ದ ಕರ್ತವ್ಯದಕ್ಷತೆ, ಪಾಂಡಿತ್ಯ, ಧೂರ್ತತನ, ಸದಾಚಾರ, ನಿಸ್ಪೃಹತೆ, ಇತ್ಯಾದಿ ಗುಣಗಳಿಂದ ಈ ಕಾರ್ಯವು ನಿರಾಯಸವಾಗಿ ಕೊನೆಗಾ

ಣಲು ಅನುಕೂಲವಾಯಿತು. ಇವರು ವಿರಕ್ತಮಠಾಧಿಪತಿಗಳಿಗೆ ಉಪದೇಶ ಮಾಡಿ ಸನ್ಮಾರ್ಗಪ್ರವರ್ತಕರಾಗುವಂತೆಯೂ ಮಠಗಳು ಶಾರದಾನಿಲಯವಾಗುವಂತೆಯೂ ಏರ್ಪಾಟುಮಾಡಿದರು. ಮಹಾಸಂಸ್ಥಾನದ ಅಂಕಿತಕ್ಕೊಳಗಾಗಿದ್ದ ವಿರಕ್ತಮಠಗಳ ಸ್ಥಾನಗಳು ತೆರವಾದೊಡನೆ ಅದಕ್ಕೆ ಧಾರ್ಮಿಕ ಶಿಕ್ಷಣ ಹೊಂದಿದ ತಕ್ಕ ಮರಿಗಳನ್ನು ಕಳಿಸಿ ಆಡಳಿತವನ್ನು ಸರ್ವಾಂಗ ಸುಂದರವಾಗಿ ಮಾಡತೊಡಗಿದರು. ಈ ಸಂದರ್ಭದಲ್ಲಿ ಇವರು ಗೊತ್ತು ಪಡಿಸಿದ ವಿರಕ್ತಮಠಾಧಿಪತಿಗಳಿಗೆ ಕೊಟ್ಟ ಅನುಭವ, ಕರ್ತವ್ಯಜಾಗೃತೆ ಇವುಗಳಿಂದ ಅವರಿಗೆ ಮಠದ ಸ್ಥಾವರ ಜಂಗಮಆಸ್ತಿಗಳಲ್ಲಿಯ ಲೌಕಿಕಾಭಿಮಾನವು ಲಯವಾಗಿ, ತಾವೊಬ್ಬ ವೀರಶೈವ ಸಮಾಜದ ಆಧಾರಸ್ತಂಭರೆಂಬ ಕಲ್ಪನೆಯು ಉತ್ಪನ್ನವಾಗಲು ಅನುವಾಯಿತು. ದುರ್ಬಲಸ್ಥಿತಿಯಲ್ಲಿದ್ದ ಮಠಗಳಿಗೆ ಸಮರ್ಥ ಅಧಿಕಾರಿಗನ್ನು ನಿಯಮಿಸಿದ್ದರಿಂದ ಆ ಮಠಗಳು ಉರ್ಜಿತಾವಸ್ಥೆಯನ್ನು ಹೊಂದಿದವು. ಇಂಥವುಗಳಲ್ಲಿ ಧಾರವಾಡದ ಶ್ರೀಜಗದ್ಗುರು ಮುರಘರಾಜೇಂದ್ರಮಠ, ನಿಜಾಮರಾಜ್ಯದಲ್ಲಿಯ ಗುರುಮಠ ಕಲ್ಲಿನಮಠ ಮೊದಲಾದವು ಸುಸ್ಥಿತಿಯನ್ನು ಹೊಂದಿ ಕೀರ್ತಿಶಾಲಿಗಳಾಗಿರುವದಕ್ಕೆ ಉದಾಹರಣೆಗಳಾಗಿವೆ.

ಶ್ರೀಮನ್ನಿರಂಜನವರ್ಯರಾದ ಶ್ರೀಮೃತ್ಯುಂಜಯಸ್ವಾಮಿಗಳು ದಾವಣಗೆರೆಯಿಂದ ಧಾರವಾಡ ಮುರಘಾಮಠಕ್ಕೆ ಆಗಮಿಸುವ ಮೊದಲು ಇದು ಅಷ್ಟೊಂದು ಉನ್ನತಾವಸ್ಥೆಯಲ್ಲಿರಲಿಲ್ಲ. ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರಘರಾಜೇಂದ್ರ ಸ್ವಾಮಿಗಳು ದಾವಣಗೆರೆಯ ವಿರಕ್ತಮಠದಿಂದ ಇವರನ್ನು ಧಾರವಾಡಕ್ಕೆ ಕಳಿಸಿದರು. ಆ ಮೇಲೆ ಇವರಿಂದ ಇಲ್ಲಿ ಅನ್ನದಾನ ವಿದ್ಯಾದಾನದ ಕಾರ್ಯಗಳು ನಡೆಯಲಿಕ್ಕೆ ಪ್ರಾರಂಭವಾದವು. ಜಗದ್ಗುರು ಮುರಘಾರಾಜೇಂದ್ರ ವಿದ್ಯಾರ್ಥಿಗೃಹವೆಂಬ ಧರ್ಮಾರ್ಥ ಸಂಸ್ಥೆಯು ಸ್ಥಾಪಿತವಾಯಿತು. ಪ್ರತಿವರ್ಷ ಪ್ರಾಯಮರಿ ಸ್ಕೂಲ ಲಿವ್ಹಿಂಗ ಪರೀಕ್ಷೆಗೆ ಧಾರವಾಡ ಸೆಂಟರಿಗೆಬರುವ ವೀರಶೈವ ಹಾಗೂ ಹಿಂದುಳಿದ ಜಾತಿಯ ವಿದ್ಯಾರ್ಥಿಗಳಿಗೆ ಧರ್ಮಾರ್ಥ ಅನ್ನದಾನವನ್ನು ಮಾಡುವ ಕಾರ್ಯವೂ ಜರುಗತೊಡಗಿದೆ ಈಗ ನೂರಾರು ವಿದ್ಯಾರ್ಥಿಗಳಿಗೆ ಧರ್ಮಾ

ರ್ಥ ಅನ್ನದಾನವನ್ನು ಮಾಡುವ ಕಾರ್ಯವೂ ಜರುಗತೊಡಗಿದೆ. ಈಗ ನೂರಾರು ವಿದ್ಯಾರ್ಥಿಗಳು ಅನ್ನವಸತಿಯ ಅನುಕೂಲತೆಯೊಂದಿಗೆ ಇಲ್ಲಿ ವಿದ್ಯಾರ್ಜನೆ ಮಾಡುತ್ತಿರುವರು. ಪ್ರತಿವರ್ಷ ಮಾಘ ಶುದ್ಧ ಪಂಚಮಿಯದಿನ ಶ್ರೀಶಿವಯೋಗೀಂದ್ರರ ರಥೋತ್ಸವವು ಜರಗುವದು. ಇದು ಮಹಾಸ್ವಾಮಿಗಳ ಪುಣ್ಯದ ದ್ಯೋತಕವೆಂದು ಅನ್ನಬಹುದು.

ಇದರಂತೆ ನಿಜಾಮರಾಜ್ಯದಲ್ಲಿರುವ ಗುರುಮಠ ಕಲ್ಲಿನಮಠದ ಉನ್ನತಿಯಾದರೂ ಮಹಾ|| || ಸ್ವಾಮಿಗಳಿಂದಲೇ ಆಗಿರುವದು. ಈ ಮಠವು ಪೂರ್ವದಲ್ಲಿ ಉನ್ನತ ಸ್ಥಿತಿಯಲ್ಲಿರಲಿಲ್ಲ. ಇದು ನಿಜಾಮರಾಜ್ಯದಲ್ಲಿಯ ವೀರಶೈವಧರ್ಮ ಜಾಗೃತಿಗೂ ಧರ್ಮಕಾರ್ಯಕ್ಕೂ ಆಧಾರಭೂತವಾದ ಮಠವು. ಮಹಾಸ್ವಾಮಿಗಳು ಅತ್ತಕಡೆಯ ಗಂಡುಮೆಟ್ಟಿನ ಮಠವಾದ ಇದರ ಸ್ಥಿತಿಯನ್ನು ನೋಡಿ, ಇದನ್ನು ಎಲ್ಲ ಬಗೆಯಿಂದ ಸುಧಾರಿಸಬೇಕೆಂದು ನಿರ್ಧರಿಸಿದರು. ಸನ್ನಿಧಿಯ ಕೃಪಾಪೋಷಣೆಯಿಂದ ಮೈಸೂರಲ್ಲಿ ವಿದ್ಯಾಭ್ಯಾಸಮಾಡಿ ಪಂಡಿತರೂ, ವಿವೇಕಿಗಳೂ ಜ್ಞಾನಿಗಳೂ ಎಂದು ಹೆಸರಾಗಿದ್ದ ಹಿರೇಬಾಗೇವಾಡಿಯ ಪಟ್ಟಾಧಿಕಾರಿಮಠದ ಮರಿಗಳಾಗಿದ್ದ ಶ್ರೀಚನ್ನಬಸವ ಮರಿದೇವರನ್ನು ಶ್ರೀ ಶಾಂತವೀರಸ್ವಾಮಿಗಳೆಂಬ ನಾಮಧೇಯವನ್ನಿಟ್ಟು ಈ ಮಠಕ್ಕೆ ಮಹಾಸ್ವಾಮಿಗಳು ಕಳುಹಿದರು. ಈಗ ಶ್ರೀ ಶಾಂತವೀರಸ್ವಾಮಿಗಳಿಂದ ಈ ಮಠವು ಅನ್ನದಾನ ವಿದ್ಯಾದಾನಗಳಲ್ಲಿ ಮಹೋನ್ನತಿಯನ್ನು ಹೊಂದಿದೆ. ನಿಜಾಮಭಾಗದ ವೀರಶೈವರಲ್ಲಿ ಈ ಸ್ವಾಮಿಗಳ ಕರ್ತೃತ್ವಶಕ್ತಿಯಿಂದಲೇ ಆಚಾರ ವಿಚಾರಗಳಲ್ಲಿಯೂ ಧರ್ಮಕಾರ್ಯದಲ್ಲಿಯೂ ಜಾಗೃತಿಯುಂಟಾಗಿದೆ.

ಮುಳಗುಂದದ ಶ್ರೀಮಹಾಂತಸ್ವಾಮಿಗಳಮಠವು ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರಘರಾಜೇಂದ್ರ ಸ್ವಾಮಿಗಳ ಆಡಳಿತಕ್ಕ ಒಳಗಾದಮೇಲಿಂದ ಅನೇಕ ಸುಧಾರಣೆಯನ್ನು ಹೊಂದಿದೆ. ಅದರ ಹುಟ್ಟಿಗೆ ಅನ್ನದಾನ ದೀಪೋತ್ಸವ ಇತ್ಯಾದಿ ಕಾರ್ಯಗಳು ಅನವರತ ಜರಗುತ್ತಲಿವೆ. ಈಮಠದ ಮರಿದೇವರು ಇನ್ನೂ ಸಂಸ್ಕೃತ ಉಚ್ಚತರದ ವಿದ್ಯಾಭ್ಯಾಸದಲ್ಲಿರುವರು. ವಿದ್ಯಾರ್ಜನೆಯ ಸೌಕರ್ಯವನ್ನು ಎಲ್ಲ ಮಠೀಯರಿಗೂ ಇಲ್ಲಿಮಾಡಬೇಕೆಂಬಯೋಜನೆ ನಡೆದಿದೆ. ೬-೭ ಸಾವಿರ ರೂಪಾಯಿಗಳ ಕಟ್ಟ

ಡವು ಮಹಾ॥ ॥ ಸ್ವಾಮಿಗಳ ಆಶೀರ್ವಾದದಿಂದಲೂ ಇವರ ಪರಮ ಭಕ್ತರಾದ ಮುಳಗುಂದದ ವೀರಶೈವ ಮಹನೀಯರ ಅವಿಶ್ರಾಂತ ಪ್ರಯತ್ನದಿಂದಲೂ ಕೊನೆಗಾಣತೊಡಗಿದೆ. ಇದು ಮುಗಿದೊಡನೆ ಇಲ್ಲಿ ವಿದ್ಯಾದಾನದಕಾರ್ಯವು ಜರಗುವಯೋಜನೆಯಾಗಿರುತ್ತದೆ.

ಇದರಂತೆ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರಘರಾಜೇಂದ್ರ ಸ್ವಾಮಿಗಳ ಸ್ವಾಮಿತ್ವಕ್ಕೆ ಒಳಗಾಗಿರುವ ಕಪ್ಪತ್ತದ ಅಡಿಯಲ್ಲಿರುವ ಶ್ರೀನಂದೀವರಿ ಸ್ವಾಮಿಗಳ ಮಠವಾದರೂ ಈಗ ಅತ್ಯುನ್ನತಸ್ಥಿತಿಗೆ ಬಂದಿರುವದೆಂದು ಬರೆಯಲು ಅತ್ಯಂತ ಸಂತೋಷವೆನಿಸುತ್ತದೆ. ಈ ನಂದೀವರಿ ಮಠದಲ್ಲಿ ಸಿಂಹಾಸನಾರೂಢರಾಗಿರುವ ಈಗಿನ ಶ್ರೀಮನ್ನಿರಂಜನ ಪ್ರ.ಸ್ವ.ಶಂಕರಸ್ವಾಮಿಗಳು ಮಹಾ॥ ॥ಸ್ವಾಮಿಗಳ ಅನುಗ್ರಹಕ್ಕೆ ಪಾತ್ರರಾದವರು. ಇವರು ಪಂಡಿತರೂ, ಆತ್ಮಾನಾತ್ಮ ವಿಚಾರಪರರೂ, ತಪಸ್ವಿಗಳೂ, ಧರ್ಮನಿಷ್ಠರೂ, ಇರುವರು. ಇವರ ಸಂಚಾರದಿಂದ ದೇಶದಲ್ಲಿ ವೀರಶೈವ ಧರ್ಮಜಾಗೃತಿ, ವೀರಶೈವಸಂಸ್ಕೃತಿ ಸುಧಾರಣೆ, ಅನ್ನದಾನ, ವಿದ್ಯಾದಾನ, ಇತ್ಯಾದಿ ಕಾರ್ಯಗಳು ನೆರವೇರುತ್ತಲಿವೆ. ಮೂಲಸ್ಥಾನವಾದ ಕಪ್ಪತ್ತದ ಬುಡದಲ್ಲಿದ್ದ ನಂದೀವರಿಮಠದಲ್ಲಿ ಗುರುಲಿಂಗಜಂಗಮರಿಗೂ, ಅತಿಥಿಅಭ್ಯಾಗತರಿಗೂ, ಸದಾ ಅನ್ನದಾನವು ನಡೆಯುತ್ತಿರುತ್ತದೆ. ಪ್ರತಿವರ್ಷ ಶ್ರಾವಣಮಾಸದ ಕಡೆಯ ಸೋಮವಾರ ರಥೋತ್ಸವವನ್ನು ಜರಗುಸುತ್ತಲೂ ಕಪ್ಪತ್ತೇಶ್ವರನ ಸನ್ನಿಧಿಗೆ ಹೋಗಿಬರುವ ಯಾತ್ರಿಕರ ಕೊರತೆ ಪೂರೈಸಿ ಕೊಡುತ್ತಲೂ, ಪ್ರ. ಸ್ವ ಶ್ರೀಮನ್ನಿರಂಜನ ಶಂಕರಸ್ವಾಮಿಗಳು ತಮ್ಮ ಮಠದಕೀರ್ತಿಯನ್ನು ದಿಗಂತರವಾಗಿ ಬೆಳಿಸಿರುವರು.

ಇದೇ ಮೇರಿಗೆ ಮಹಾ ಸಂಸ್ಥಾನದ ಶಾಖಾಮಠಗಳಾದ ಕೆಳಗೆ ಕಾಣಿಸಿದ ಮಠಗಳು ಶ್ರೀಜಗದ್ಗುರುಗಳ ಮೇಲ್ವಿಚಾರಣೆಗೊಳಗಾಗಿ ಇವರ ಸಲಹೆಯೊಂದಿಗೆ ಅನ್ನದಾನ ವಿದ್ಯಾದಾನಗಳಲ್ಲಿ ತತ್ಪರವಾಗಿ ಕರ್ನಾಟಕದಲ್ಲಿ ಹೆಸರಾಗಿವೆ.

**ಸರ್ಪಭೂಷಣಮಠ:—** ಇದು ಬೆಂಗಳೂರಲ್ಲಿದೆ. ಇದರ ಸ್ವಾಮಿಗಳು ಶ್ರೀಮನ್ನಿರಂಜನವರ್ಯ ಪ್ರ. ಸ್ವ. ಶ್ರೀಮಹಾದೇವ ಸ್ವಾಮಿಗಳೆಂಬವರು.

ಇವರು ಶ್ರೀಜಗದ್ಗುರು ಮಹಾಸ್ವಾಮಿಗಳ ಅನುಗ್ರಹಕ್ಕೆ ಪಾತ್ರರಾದವರು. ಮಹಾತಪಸ್ವಿಗಳೂ ಶಿವಾದ್ವೈತಸಿದ್ಧಾಂತದಲ್ಲಿ ಬಲ್ಲಿದರೂ, ಮಿಗಿಲಾದವೈರಾಗ್ಯಶಾಲಿಗಳೂ ಇರುವರು. ತಮ್ಮ ಅಮೋಘವಾಣಿಯಿಂದ ವೀರಶೈವರಲ್ಲಿ ಧರ್ಮಬೋಧಮಾಡುತ್ತ ಧರ್ಮಜಾಗೃತಿಯನ್ನು ಉಂಟುಮಾಡುತ್ತಿರುವರು. ಲಿಂಗಪೂಜಾ ಜಂಗಮದಾಸೋಹಗಳನ್ನು ಅವ್ಯಾಹತವಾಗಿ ಸರ್ಪಭೂಷಣ ಮಠದಲ್ಲಿ ನಡೆಸುತ್ತ ಅಖಂಡ ಕೀರ್ತಿಶಾಲಿಗಳಾಗಿರುವರು.

**ದಾವಣಗೇರಿ ಶಾಖಾಮಠ:**— ಇಲ್ಲಿ ಸದಾ ಅನ್ನದಾನ, ವಿದ್ಯಾದಾನಗಳು ಜರಗುತ್ತಲಿವೆ. ೨೦ ವಿದ್ಯಾರ್ಥಿಗಳು ಧರ್ಮಾರ್ಥ ವಿದ್ಯಾರ್ಜನೆ ಮಾಡುತ್ತಿರುವರು.

**ಸೋಮಾಪೂರ ಶಾಖಾಮಠ:**— ತುಮಕೂರಜಿಲ್ಹೆ ಕೊರಟಗಿರಿ ತಾಲೂಕ ಹೊಳವನಹಳ್ಳಿ ಸೋಮಾಪೂರಲ್ಲಿರುವ ಈ ವಿರಕ್ತಮಠದಲ್ಲಿ ಧರ್ಮಾರ್ಥ ಬೋರ್ಡಿಂಗ ಸ್ಥಾಪಿಸಲ್ಪಟ್ಟಿದೆ. ೧೦ ಜನ ವೀರಶೈವ, ೫ ಬ್ರಾಹ್ಮಣ, ೫ ಮುಸಲ್ಮಾನ ಹೀಗೆ ಅನಾಥ ವಿದ್ಯಾರ್ಥಿಗಳಿಗೆ ಅನ್ನವಸ್ತ್ರದಿದಾನಗಳೂ, ವಿದ್ಯಾರ್ಜನೆಯೂ ಜಾತಿಭೇಧವಿಲ್ಲದೆ ಸಾಗುತ್ತಲಿದೆ.

**ಕೊಲ್ಹಾಪೂರ ಶಾಖಾಮಠ:**— ಇಲ್ಲಿ ಮೊದಲು ಮಹಾಸಂಸ್ಥಾನದ ಮಠವಿರಲಿಲ್ಲ. ಈ ಸಂಗತಿಯು ಕೊಲ್ಹಾಪೂರ ಮಹಾರಾಜರ ನಿದರ್ಶನಕ್ಕೆ ಬರಲು ಅವರು ಒಂದು ಸ್ಥಳವನ್ನು ಧರ್ಮಾರ್ಥವಾಗಿ ಕೊಟ್ಟರು. ಶ್ರೀ ಜಗದ್ಗುರುಗಳು ೧ ಲಕ್ಷ ೩೦ ಸಾವಿರರೂಪಾಯಿಗಳನ್ನು ಖರ್ಚುಮಾಡಿ ಮಠಕಟ್ಟಿಸಿ ೩೦ ವಿದ್ಯಾರ್ಥಿಗಳ ಭೋಜನವಸತಿಗಳ ಅನುಕೂಲತೆಮಾಡಿಕೊಟ್ಟಿರುವರು. ಶ್ರೀ. ಮ. ಪ್ರ. ಮಿರ್ಜಿಯ ಗುರುಶಾಂತಸ್ವಾಮಿಗಳು ಇದರ ಒಡೆಯರು. ಇವರು ಶ್ರೀಜಗದ್ಗುರು ಮಹಾಸ್ವಾಮಿಗಳ ಅನುಗ್ರಹವನ್ನು ಸಂಪಾದಿಸಿದವರಿದ್ದು ಇವರ ಅಪ್ಪಣೆಯೊಂದಿಗೆ ಲೋಕೋತ್ತರ ಕಾರ್ಯಗಳನ್ನು ಜರುಗಿಸಿ ಮಠದ ಕೀರ್ತಿಯನ್ನು ಬೆಳಸುತ್ತಿರುವರು.

**ನವಲಗದ ಗವೀಮಠ:**— ಇದರ ಅಧಿಪತಿಗಳು. ಶ್ರೀ ಮ. ಪ್ರ. ಶ್ರೀಮನ್ನಿರಂಜನ ಬಸವಲಿಂಗ ಸ್ವಾಮಿಗಳು. ಇವರು ಮಹಾತಪಸ್ವಿಗಳು. ಕನ್ನಡನಾಡು, ಕನ್ನಡನುಡಿ, ಕನ್ನಡ ಸಂಸ್ಕೃತಿಗಳ ಅಭಿವೃದ್ಧಿಗಾಗಿ ಉತ್ಕಟ ಪ್ರೇಮವುಳ್ಳವರ; ಕಾರ್ಯದಕ್ಷರು; ಜಗದ್ಗುರು ಮಹಾಸ್ವಾಮಿಗಳ ಅನು

ಗ್ರಹಕ್ಕೆ ಪಾತ್ರರಾದವರು; ಇವರಿಂದ ಅನೇಕ ಲೋಕೋಪಕಾರದ ಕಾರ್ಯಗಳು ಜರಗುತ್ತಲಿವೆ.

**ಮಹಾಲಿಂಗಪುರಶಾಖಾಮಠ:—** ಈ ಮಠದ ಅಧಿಪತಿಗಳು ಶ್ರೀ. ಮ. ಪ್ರ. ಗುರುಲಿಂಗಸ್ವಾಗಳೆಂಬವರು, ಇವರು ಶ್ರೀ ಜಗದ್ಗುರು ಮಹಾಸ್ವಾಮಿಗಳ ಅನುಗ್ರಹಕ್ಕೆ ಪಾತ್ರರಾದವರು. ಶಿವಲಿಂಗಾನುಷ್ಠಾನ ತತ್ಪರರಾಗಿ ಗುರುಲಿಂಗಜಂಗಮಸೇವೆ ದಾಸೋಹಾದಿಗಳನ್ನು ನಡೆಸುತ್ತ ಲೋಕೋತ್ತರ ಕೀರ್ತಿಶಾಲಿಗಳಾಗಿರುವರು.

**ಅಥಣಿಯ ಗಚ್ಚಿನಮಠ:—** ಮಹಾಸಂಸ್ಥಾದ ಆಡಳಿತಕ್ಕೆ ಒಳಪಟ್ಟ ಈ ಮಠದಲ್ಲಿ ಧಾರ್ಮಿಕ ಶಿಕ್ಷಣದ ಅನುಕೂಲವಾಗಬೇಕೆಂದು ಸಂಸ್ಕೃತ ಪಾಠಶಾಲೆಯು ಸ್ಥಾಪನೆಯಾಗಿ ೨೦ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಅನುಕೂಲತೆಯಾಗಿದೆ.

**ಬ್ಯಾಡಿಗಿ ಶಾಖಾಮಠ:—** ಇವರ ಅಧಿಪತಿಗಳು ಶ್ರೀ. ಮ. ಪ್ರ. ಚನ್ನಬಸವಸ್ವಾಮಿಗಳು. ಇಲ್ಲಿ ಅನ್ನದಾನ, ವಿದ್ಯಾದಾನದ ವ್ಯವಸ್ಥೆ ಇದೆ. ೨೦ ವಿದ್ಯಾರ್ಥಿಗಳು ಸದ್ಯಕ್ಕೆ ಅಭ್ಯಾಸಿಸುತ್ತಿರುವರು.

ಮೈಸೂರ ಸೀಮೆಯಲ್ಲಿಯ ಬೆಟ್ಟದಪುರ ವಿರಕ್ತಮಠದ ಮೂರ್ತಿಗಳಾದ ಶ್ರೀ. ಶ್ರೀ. ಚಿಕ್ಕವೀರದೇಶಿಕೇಂದ್ರಸ್ವಾಮಿಗಳು ಈ ಜಗದ್ಗುರುಗಳನ್ನು ತಮ್ಮ ಮಠಕ್ಕೆ ಬಿಜಯಂಗೈಯಲು ಬಿನ್ನವಿಸಿಕೊಂಡು, ಮೈಸೂರಲ್ಲಿರುವ ತಮ್ಮ ಮಠದ ಬೋರ್ಡಿಂಗಿನ ವ್ಯವಸ್ಥೆಯಾಗಬೇಕೆಂದು ಸಲಹೆಕೇಳಿದರು ಹಾಗು ಕೆಲವುಪಂಚರನ್ನು ಚುನಾಯಿಸಿಕೊಂಡರು ಮಹಾಸ್ವಾಮಿಗಳು ಶ್ರೀ ಚಿಕ್ಕವೀರ ದೇಶಿಕೇಂದ್ರಸ್ವಾಮಿಗಳ ಪ್ರಾರ್ಥನೆಯ ಮೇರೆಗೆ ಅಲ್ಲಿಗೆ ಹೋಗಿ ಯೋಗ್ಯ ಸಲಹೆ ಕೊಟ್ಟು ಪಂಚರನ್ನು ನೇಮಿಸಿ ತಕ್ಕ ವ್ಯವಸ್ಥೆ ಮಾಡಿಬಂದರು.

ಉಳವಿಯು ವೀರಶೈವರಿಗೆ ಅತಿಮಾನ್ಯವಾದ ಕ್ಷೇತ್ರವು. ಇಲ್ಲಿ ಚನ್ನಬಸವಣ್ಣನರಮಠವಿದೆ ಪ್ರತಿವರ್ಷ ಮಾಘ ಶುದ್ಧ ೧೫ ರಲ್ಲಿ ಇಲ್ಲಿ ಜರಗುವ ರಥೋತ್ಸವಕ್ಕೆ ಲಕ್ಷಾವಧಿ ಜನರು ಕೂಡುವರು. ಜಗದ್ಗುರುಗಳು ಈ ಕ್ಷೇತ್ರದ ಹಾಗು ಉತ್ಸವದ ಮೇಲ್ವಿಚಾರಣೆಮಾಡುತ್ತ ಈಕ್ಷೇತ್ರಕ್ಕೆಬಂದ ಎಲ್ಲಭಕ್ತ ಮಾಹೇಶ್ವರರಿಗೆ ಪಂಚಕಮಿಟಿಯಮೂಲಕ ಅನೇಕಸೌಕರ್ಯವನ್ನುಂಟು

ಮಾಡಿರುವರು. ಇದರಿಂದ ಮಹಾಸಂಸ್ಥಾನದ ಕೀರ್ತಿಯು ದಿಗಂತರದಲ್ಲಿ ಪಸರಿಸಿರುವದು.

ಈ ಮೇರೆಗೆ ಚಿನ್ಮೂಲಾದ್ರಿಯ ಬ್ರಹನ್ಮೂಲ ಮಠದ ಅಂಕಿತಕ್ಕೆ ಒಳಗಾಗಿರುವ ವಿರಕ್ತವರ್ಯರ ಮಠಗಳಾದ ಕಾನಕಾನಹಳ್ಳಿ, ಗುತ್ತಲ, ರಾಮಪುರ, ಹಾವೇರಿ, ಬ್ಯಾಡಿಗಿ, ಮಾಗಡಿ, ಸಿದ್ದಾಪೂರ, ಶಿಳವಳ್ಳಿ, ಶಿರಸಂಗಿ, ನಿಡಸೂಸಿ, ಮಧುಗಿರಿ, ಗೂಳೂರ, ಚನ್ನಗಿರಿ, ಅನಂತಪುರ, ಬಿರೂರ, ಇತ್ಯಾದಿ ಸ್ಥಳಗಳಲ್ಲಿಯ ಮಠಗಳು ಮಹೋನ್ನತಿಯನ್ನಹೊಂದಿ, ಅಧ್ಯಾತ್ಮಜ್ಞಾನಕ್ಕೆ ಸಾಧನೀಭೂತವಾಗಿ ಮೆರೆಯುತ್ತಿರುವವು. ಇದಕ್ಕೆಲ್ಲ ಮಹಾಸ್ವಾಮಿಗಳ ಪುಣ್ಯಪ್ರಭಾವವೇ ಕಾರಣವೆಂದು ಹೇಳಬಹುದು.

ಹೀಗೆ ಶ್ರೀಜಗದ್ಗುರುಗಳು ಅಖಿಲ ಕರ್ನಾಟಕದಲ್ಲಿಯ ವಿರಕ್ತಮಠಗಳ ಸ್ಥಿತಿಯನ್ನು ಸುಧಾರಿಸಿ ತಮ್ಮಆಡಳತೆಗೆ ತೆಗೆದುಕೊಳ್ಳತಕ್ಕ ಪ್ರಸಂಗದಲ್ಲಿ ಹಲಕೆಲವು ಮಠಗಳ ಸಂಬಂಧವಾಗಿ ಸರಕಾರದಲ್ಲಿಯೂ, ವ್ಯವಹಾರದಲ್ಲಿಯೂ, ಬಹಳ ಪರಿಶ್ರಮವನ್ನು ತಕ್ಕೊಳ್ಳಬೇಕಾಯಿತು. ಇಂಥವುಗಳಲ್ಲಿ ಕೊಡಗುಸಂಸ್ಥಾನದಲ್ಲಿರುವ ಮಾದಾಪೂರಮಠದ ಆಡಳಿತವನ್ನು ಸರಿಪಡಿಸಿ ಈ ಮಠಕ್ಕೆ ಸಂಬಧಿಸಿದ ಜಮೀನುಗಳನ್ನೂ ಹಕ್ಕುಗಳನ್ನೂ ಬ್ರಹನ್ಮಠಕ್ಕೆ ಕೂಡಿಸಿಕೊಳ್ಳುವ ಸಂದರ್ಭದಲ್ಲಿ ಬಹಳ ಪ್ರಯತ್ನಬಡಬೇಕಾಯಿತು.

ಕೊಡಗಿನ ವೀರಶೈವ ರಾಜರಿಂದ ಈ ಮಠಕ್ಕೆ ೭-೮ ಗ್ರಾಮಗಳು ಬಹುಕಾಲದಿಂದ ಜಾಹಗೀರಾಗಿ ದೊರೆತು ನಡೆಯುತ್ತಿದ್ದವು. ಆದರೆ ಕೆಲವು ಕಾಲವು ಸಂದಿ ಹೋದ ಮೇಲೆ ಈ ಹಳ್ಳಿಗಳು ಬೇರೆಯವರ ಆಡಳಿತಕ್ಕೆ ಸೇರ್ಪಡೆಯಾಗಿದ್ದವು. ಮಹಾ|| || ಸ್ವಾಮಿಗಳು ಪಟ್ಟಾಭಿಷಿಕ್ತರಾದ ಮೇಲೆ ಹಿಂದಿನ ರಿಕಾರ್ಡುಗಳನ್ನು ಶೋಧಿಸುವಾಗ ಈ ಸಂಗತಿಯು ಹೊಳೆಯಿತು. ಆಗ ಸನ್ನಿಧಿಯು ಸತತ ಪ್ರಯತ್ನ ಮಾಡಿ ಕೋರ್ಟಿನಲ್ಲಿ ಕೆಲಸ ನಡಿಸಿ ಈ ಇನಾಮುಗಳನ್ನು ಮಹಾಸಂಸ್ಥಾನದ ಆಡಳಿತಕ್ಕೆ ಬರುವಂತೆ ಮಾಡಿಡೋಣಾಯಿತು.

ಈ ಮೇರೆಗೆ ಮಹಾಸ್ವಾಮಿಗಳು ಅಖಿಲ ಕರ್ನಾಟಕದೊಳಗಿನ ವಿರಕ್ತ ಶಾಖಾಮಠಗಳ ವ್ಯವಸ್ಥೆಯನ್ನು ಬಹಳವಾಗಿ ಸುಧಾರಿಸಿ ವೀರಶೈವ ಸಮಾಜಕ್ಕೆ ಮಹೋಪಕಾರವನ್ನು ಮಾಡಿರುವರು.

# ೧೧ ನೇ ಅಧ್ಯಾಯ.

## ವಿದ್ಯಾ ಪ್ರಸಾರಕ್ಕೆ ಸಹಾಯ.

---

ನಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ ||

—ಗೀತಾ

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರಘರಾಜೇಂದ್ರ ಸ್ವಾಮಿಗಳ ಅವತಾರದಲ್ಲಿ ಜರುಗಿದ ಅನೇಕ ಕಾರ್ಯಗಳಲ್ಲಿ ವಿದ್ಯಾ ಪ್ರಸಾರಕ್ಕೆ ಮಾಡಿದ ಸಹಾಯವು ಅತ್ಯಂತ ಶ್ಲಾಘನೀಯವೆಂದು ಹೇಳಲಿಕ್ಕೆ ಅಡ್ಡಿ ಇಲ್ಲ. ಭರತ ಖಂಡದಲ್ಲಿ ವಿದ್ಯಾ ಪ್ರಸಾರಕ್ಕೂ, ಅನಾಥರಿಗೂ ಇವರಷ್ಟು ಧನದ ಧಾರೆ ಎರೆದು ಸಹಾಯ ಮಾಡಿದವರಲ್ಲಿ ಯಾವ ಮಠದ ಸ್ವಾಮಿಗಳೂ ಇಲ್ಲವೆಂದು ಸೂರ್ಯ ಪ್ರಕಾಶದಷ್ಟು ಸ್ಪಷ್ಟವಿರುತ್ತದೆ. ಈ ಸಂಗತಿಯು ಶ್ರೀ ಜಗದ್ಗುರುಗಳ ಬಗ್ಗೆ ಈ ಪುಸ್ತಕದ ಕೊನೆಗೆ ತಮ್ಮ ಪೂಜ್ಯಭಾವವನ್ನು ಪ್ರಕಟಿಸಿದ ಡಾ|| ಸಿ. ಆರ್. ರಡ್ಡಿ ವ್ಹಾಯಿಸ ಚಾನ್ಸಲರ ಆಂಧ್ರ ಯುನಿವ್ಹರ್ಸಿಟಿ ವಾಲ್ಟೇರ, ಮೈಸೂರ ಮಹಾರಾಜಾ ಕಾಲೇಜದ ಫಿಲಾಸಫಿ ಪ್ರೊಫೇಸರ ಎ. ಆರ್. ವಾಡಿಯಾ, ಬಿ. ಎ. (ಕ್ಯಾಂಟ) ಬಾರ-ಆಟ-ಲಾ; ಹಾಗೂ ತಿರವಾಂಕೂರಲ್ಲಿಯ K. ಚಾಂಡೀ ರಿಟಾಯರ್ಡ ಕೌನ್ಸಿಲರ, ಮತ್ತು ಸದ್ಯದ ಮೈಸೂರ ದಿವಾನರಾದ ಸರ್, ಮಿರ್ಜಾ ಎಮ್. ಇಸ್ಮಾಯಿಲ್ ಸಾಹೇಬರವರು ಇತ್ಯಾದಿ ಮಹನೀಯರ ಲೇಖಗಳಿಂದ ಸಿದ್ಧವಾಗದೆ ಇರದು.

ಇವರು ಭಕ್ತೋದ್ಧಾರಕ್ಕಾಗಿ ಮಾಡಿದ ದೇಶ ದೇಶಗಳ ದಿಗ್ವಿಜಯ ಸಂಚಾರದಲ್ಲಿ ಅಗಣಿತ ಧನ ಸಂಚಯವು ಭಕ್ತರಿಂದ ಆಯಿತು. ಈ ಹಣವನ್ನು ಇವರು ಕೇವಲ ಬೆಳೆಸುತ್ತ ತಮ್ಮ ಮಠದ ಪ್ರತಿಷ್ಠೆಗೆ ಇಲ್ಲವೆ ಮಠದ ಪರಿವಾರದ ಜನರಿಗಾಗಿ ವೆಚ್ಚಮಾಡದೆ ವೀರಶೈವ ಮತ್ತು ಬೇರೆ

ಮತೀಯರ ವಿದ್ಯಾಭಿವೃದ್ಧಿಗೂ, ಅನಾಥರಿಗೂ, ಬೇರೆ ಸಾಮಾಜಿಕ ಕಾರ್ಯಗಳಿಗೂ ದಾನಮಾಡಿ ಸಕಲ ಮತೀಯರ ಚಿರಕೃತಜ್ಞತೆಗೆ ಪಾತ್ರರಾಗಿರುವರು.

ಇವರು ತಮ್ಮ ದಿಗ್ವಿಜಯ ಸಂಚಾರದಲ್ಲಿ ವೀರಶೈವರ ಹಾಗೂ ಹಿಂದುಳಿದ ವರ್ಗದವರ ಶೋಚನೀಯ ಸ್ಥಿತಿಯನ್ನು ಕಂಡು ಕನಿಕರ ಬಟ್ಟರು. ಕರ್ನಾಟಕವೆಂದರೆ ವೀರಶೈವರಿಂದ ತುಂಬಿದ ನಾಡು. ಇವರ ಜನಸಂಖ್ಯೆಯೂ ಇಲ್ಲಿ ವಿಶೇಷ. ಇವರ ಧರ್ಮವು ಈ ನಾಡಿನಲ್ಲಿ ಅನಾದಿಯಿಂದ ಮೆರೆವದ್ದು. ಇವರ ಸಾಹಿತ್ಯ ಸೇವೆಯಿಂದ ಕರ್ನಾಟಕ ದೇವಿಯು ಪೂಜೆಗೊಂಡದ್ದು. ಅನೇಕ ವರ್ಷಗಳಿಂದ ವೀರಶೈವರೇ ಕನ್ನಡಿಗರಲ್ಲಿ ವಿದ್ಯಾ ಪ್ರಸಾರ ಮಾಡುತ್ತ ಬಂದಿರುವರು. ಇವರ ಮಠಗಳೂ, ವಿದ್ಯಾಲಯಗಳೂ ಶ್ರೇಷ್ಠತರದವಿದ್ದವೆಂದು ಅನೇಕ ಮಠಗಳ ಸ್ಥಳೀಯ ಇತಿಹಾಸದಿಂದ ಗೊತ್ತಾಗುತ್ತದೆ. ಆದರೆ ಮುಂದೆ ಪೇಶ್ವೆಯರ ಆಳಿಕೆಯು ಪ್ರಬಲವಾಗಿ ಮಹಾರಾಷ್ಟ್ರ ಭಾಷೆಯು ದರಬಾರೀ ಭಾಷೆಯಾದಮೇಲೆಯೂ, ಬ್ರಿಟಿಷರು ಹಿಂದುಸ್ಥಾನಕ್ಕೆ ಆಗಮಿಸಿ ಇಂಗ್ಲೀಷ ಭಾಷೆಗೆ ಪ್ರಶಸ್ತಿ ಬಂದ ಮೇಲೆಯೂ, ಕನ್ನಡ ಭಾಷೆಯ ಮಹತ್ವವು ಕಡಿಮೆಯಾಗಿ ವೀರಶೈವರ ಪ್ರಗತಿಗೆ ಕುಂದುಂಟಾಯಿತು. ಕನ್ನಡಕ್ಕೇ ಮಹತ್ವಕೊಟ್ಟು ಸ್ವತಂತ್ರ ಉದ್ಯೋಗದಲ್ಲಿ ಮನಸ್ಸುಹಾಕಿ ಕನ್ನಡ ಓದು-ಬರಹಗಳಿಂದ ತಮ್ಮ ಕೊರತೆ ಪೂರೈಸಿಕೊಳ್ಳುತ್ತಿದ್ದ ವೀರಶೈವ ಸಮಾಜಕ್ಕೆ ಆಂಗ್ಲ ಭಾಷೆಯ ಮಹತ್ವವು ಗೊತ್ತಾಗುವದರೊಳಗೇ ಕರ್ನಾಟಕದಲ್ಲಿಯ ಮುಂದರಿದ ಸಮಾಜಗಳು ಉನ್ನತಿಯನ್ನು ಹೊಂದಿಬಿಟ್ಟಿದ್ದವು. ಆಂಗ್ಲ ಭಾಷಾಜ್ಞಾನದ ಅಭಾವದ ಮೂಲಕ ಸರಕಾರದಲ್ಲಿಯೂ, ಸಮಾಜದಲ್ಲಿಯೂ, ಯೋಗ್ಯ ಮರ್ಯಾದೆ ಇಲ್ಲದ್ದರಿಂದ ವೀರಶೈವ ಸಮಾಜವು ಹಿಂದೆ ಬಿದ್ದಿತ್ತು. ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರಘರಾಜೇಂದ್ರ ಸ್ವಾಮಿಗಳು ತಮ್ಮ ದಿಗ್ವಿಜಯ ಸಂಚಾರದಲ್ಲಿ ಇದನ್ನೆಲ್ಲ ಅವಲೋಕಿಸಿ ನಿರ್ಧರಿಸಿದ್ದೇನಂದರೆ—

ವೀರಶೈವ ಸಮಾಜವು ಅಭಿವೃದ್ಧಿಗೊಳ್ಳಬೇಕಾದರೆ ಈ ಸಮಾಜಕ್ಕೆ ಶಿಕ್ಷಣವು ದೊರೆಯಬೇಕು. ಧರ್ಮದ ಸದಭಿಮಾನವು ಉತ್ಪನ್ನವಾಗ

ಬೇಕು. ಉಳಿದ ಧರ್ಮದವರ ಸಂಗಡ ಪ್ರೇಮದಿಂದ ಆಚರಿಸಬೇಕು. ಸರಕಾರದಲ್ಲಿಯೂ, ವ್ಯವಹಾರದಲ್ಲಿಯೂ ಯೋಗ್ಯ ಮಾನಮರ್ಯಾದೆಗಳನ್ನು ಹೊಂದಬೇಕು. ಇಷ್ಟೆಲ್ಲ ಲಭಿಸಲಿಕ್ಕೆ ಶಿಕ್ಷಣವೇ ಮೂಲಾಧಾರವು. ಈಗ ಪ್ರಗತಿಹೊಂದಿದ ಸಮಾಜಗಳು ಶಿಕ್ಷಣದಿಂದಲೇ ಮುಂದಾಗಿವೆ. ಸಮಾಜವು ಎಷ್ಟು ನಿದ್ರಾವಸ್ಥೆಯಲ್ಲಿದ್ದರೂ, ಅದು ಹೋಗಲಾಡಲಿಕ್ಕೆ ಶಿಕ್ಷಣವೇ ಪರಮೌಷಧವು. ಇದರಿಂದ ನಾವು ಯಾರು? ನಮ್ಮ ಕರ್ತವ್ಯವೇನೆಂಬದರ ಅರಿವಾಗುತ್ತದೆ. ಚಿಕ್ಕ, ದೊಡ್ಡ ಪ್ರಮೇಯಗಳು ತಿಳಿದುಬರುತ್ತವೆ. ಬುದ್ಧಿಯು ವಿಕಾಸಗೊಳ್ಳುತ್ತದೆ. ಹೊಸ ಜ್ಞಾನವು ಪ್ರಾಪ್ತವಾಗುತ್ತದೆ. ದೊಡ್ಡ ದೊಡ್ಡ ತತ್ವಗಳು ತಿಳಿದುಬರುತ್ತವೆ. ಪಾಶ್ಚಾತ್ಯ ರಾಷ್ಟ್ರಗಳು ಶಿಕ್ಷಣದ್ವಾರದಿಂದಲೇ ಅಭಿವೃದ್ಧಿಯನ್ನು ಹೊಂದಿರುವವು. ಶಿಕ್ಷಣ ಸಾಮರ್ಥ್ಯದಿಂದಲೇ ವ್ಯಕ್ತಿ ಅಥವಾ ಸಮಾಜವು ವಂದ್ಯವೆನಿಸುತ್ತದೆ. ಆದುದರಿಂದ ನಮ್ಮ ವೀರಶೈವ ಸಮಾಜವು ಶಿಕ್ಷಣಹೊಂದುವಂತೆ ಮಾಡಬೇಕು. ಶಿಕ್ಷಣವಿಲ್ಲದಿದ್ದರೆ ಇದಕ್ಕೆ ಮನ್ನಣೆ ಸಿಗಲಾರದು. ಎಂದು ತಿಳಿದು ಜಗದ್ಗುರುಗಳು ಶಿಷ್ಯಾರ್ಜನೆಯಿಂದ ಬಂದ ಅಪಾರ ಧನವನ್ನೆಲ್ಲ ಅಖಿಲ ಭರತಖಂಡದ ವೀರಶೈವ ಮತ್ತು ಇತರ ಸಮಾಜದ ವಿದ್ಯಾಭಿವೃದ್ಧಿಗೆ ಧಾರೆ ಎರೆದರು.

ಇದಲ್ಲದೆ ಲೋಕ ಸೇವೆಯೇ ಈಶಸೇವೆಯೆಂದರಿತ ಇವರು ತಮ್ಮ ದಿಗ್ವಿಜಯ ಸಂಚಾರದಲ್ಲಿ ದೃಷ್ಟಿಗೆ ಬಿದ್ದ ಕುರುಡರು, ಕುಂಟರು, ಮೂಕರು ಮೊದಲಾದ ಅಂಗವಿಹೀನರ ಹೊಟ್ಟೆಸಾಗಲು ಸಮಾಜದಿಂದ ಏನಾದರೂ ವ್ಯವಸ್ಥೆಯನ್ನುಂಟುಮಾಡಬೇಕೆಂದು ಬಯಸಿದರು. ಒಂದು ವೇಳೆ ಹೀಗೆ ವ್ಯವಸ್ಥೆಮಾಡದಿದ್ದರೆ ಹಿಂದೂ ಸಮಾಜದಿಂದ ಇವರು ಸಿಡಿದು, ಕ್ರಿಶ್ಚನ್ ಅಥವಾ ಮುಸಲ್ಮಾನ ಧರ್ಮಗಳಲ್ಲಿ ಸೇರುವರು. ಇದರಿಂದ ಹಿಂದುತ್ವದ ಏಳ್ಗೆಗೆ ಕೊರತೆಬರುವದು. ಎಂದು ಧೂರ್ತತನದಿಂದ ಯೋಚಿಸಿ ಅನಾಥಾಲಯಗಳನ್ನೂ, ಧರ್ಮಛತ್ರಗಳನ್ನೂ ಏರ್ಪಾಟುಮಾಡಿದರು. ಇವುಗಳಿಗೆಲ್ಲ ಇವರು ತಮ್ಮ ಶಿಷ್ಯಾರ್ಜಿತ ಧನವನ್ನು ಸ್ವತಃ ನೀಡಿದರಲ್ಲದೆ, ಅಪಾರ ಧನ ಸಂಚಯಮಾಡಿದ ತಮ್ಮ ಭಕ್ತರನೇಕರಿಗೆ ಸತ್ಪಾತ್ರ ದಾನ-ಧರ್ಮದ ಮರ್ಮವನ್ನು ತಿಳಿಸಿಕೊಟ್ಟು, ಅನಾಥರಿಗೂ, ವಿದ್ಯಾರ್ಥಿಗಳಿಗೂ ಹಣ

ವೆಚ್ಚಮಾಡಲು ಬೋಧಿಸಿದರು. ಹಾಗೂ ಅವರ ಹೃದಯದಲ್ಲಿ ಮೂಡಿದ ಈ ಧರ್ಮ ಭಾವನೆಯನ್ನು ಕಾರ್ಯರೂಪದಲ್ಲಿ ಇಳಿಸಿಬಿಟ್ಟರು.

ಇಂಥವರಲ್ಲಿ ತಿಬಟೂರಿನ ಕೈ. ವಾ. ಜಿ. ಕೊಟ್ರೋರಪ್ಪನವರು ಶ್ರೀ ಜಗದ್ಗುರುಗಳ ಸತ್ಪಾತ್ರದಾನದ ಪದ್ಧತಿಯನ್ನು ಮರ್ಮವನ್ನು ತಿಳಿದವರಾಗಿ ತಿಬಟೂರಿನ ವೀರಶೈವಾಶ್ರಮಕ್ಕೆ ೨೫ ಸಾವಿರ ರೂಪಾಯಿಗಳ ದೇಣಿಗೆಯನ್ನು ಕೊಟ್ಟದ್ದು ಮೊದಲನೇ ಉದಾಹರಣೆಯಾಗಿರುವದು.

ಧರ್ಮವೀರ ಶಂಕರಣ್ಣನವರು ಶ್ರೀ ಜಗದ್ಗುರುಗಳ ಬೋಧದಿಂದ ವಿದ್ಯಾದಾನಕ್ಕೆ ೧ ಲಕ್ಷ ರೂಪಾಯಿ ದಾನಮಾಡಿರುವರು.

ಯಾದಗಿರಿಯ ಧರ್ಮವೀರ ಶಂಕರಪ್ಪನವರು ಶ್ರೀ ಮಹಾಸ್ವಾಮಿಗಳು ಬೆಂಗಳೂರ ಮುಕ್ಕಾಮಿನಲ್ಲಿದ್ದಾಗ ಶ್ರೀ ಗುರು ಕಲ್ಲಮಠದ ಸ್ವಾಮಿಗಳಿಂದ ಪ್ರೇರಿತರಾಗಿ ಸನ್ನಿಧಿಯ ದರ್ಶನಕ್ಕೆ ಆಗಮಿಸಿದರು. ಆಗ ಜಗದ್ಗುರುಗಳ ಸತ್ಪಾತ್ರದಾನ ಬೋಧನೆಯಿಂದ ಪರಿಪಕ್ವಮನಸ್ಕರಾಗಿ ಈ ಧರ್ಮವೀರರು ಸಂಸ್ಕೃತ ವಿದ್ಯಾ ಪ್ರಸಾರಕ್ಕಾಗಿ ೨ ಲಕ್ಷ ರೂಪಾಯಿಗಳನ್ನೀಡಿದರು. ಇಂಥ ಉದಾಹರಣೆಗಳು ಅನೇಕವಿರುತ್ತವೆ.

ಹೀಗೆ ಜಗದ್ಗುರುಗಳು ಶ್ರೀಮಂತ ಧರ್ಮಿಷ್ಠರಿಗೆ ಸಮಾಜ ಹಿತಕ್ಕಾಗಿ ಲಕ್ಷಗಟ್ಲೆ ದಾನಮಾಡುವ ಪ್ರೇರಣೆ ಮಾಡಿದರು. ವೀರಶೈವ ಸಮಾಜದಲ್ಲಿ ಹಾಗೂ ಹಿಂದುಳಿದವರಲ್ಲಿ ಬಡವರ ಸಂಖೆಯೇ ಹೆಚ್ಚು. ಇವರಿಗೆ ತಮ್ಮ ಮಕ್ಕಳಿಗೆ ಶಿಕ್ಷಣಕೊಡುವ ಮನಸ್ಸಿದ್ದರೂ ಬಡತನದ ಮೂಲಕ ಅದು ಅಸಾಧ್ಯವೆನಿಸುವದು. ಕಾರಣ ಈ ಅಶಿಕ್ಷಿತರ ಸಂಖ್ಯೆಯು ಕರಗಬೇಕಾದರೆ ಧರ್ಮಾರ್ಥ ವಿದ್ಯೆ ದೊರಕಿಸಿಕೊಡುವ ಯೋಚನೆಮಾಡಬೇಕೆಂದು ಯೋಚಿಸಿ ಕರ್ನಾಟಕದ ಮುಖ್ಯ ಮುಖ್ಯ ಸ್ಥಳಗಳಲ್ಲಿ ವಿದ್ಯಾರ್ಥಿ ನಿಲಯ ಅನಾಥಾಲಯಗಳನ್ನು ಸ್ಥಾಪಿಸಿದರು. ಅಲ್ಲಿ ಹಾಗು ವೀರಶೈವ, ಬ್ರಾಹ್ಮಣ, ಮುಸಲ್ಮಾನ ಮತ್ತು ಇತರ ಮತಸ್ಥ ವಿದ್ಯಾರ್ಥಿಗಳಿಗೆ ಅನ್ನ ವಸತಿಗಳ ಸೌಕರ್ಯವನ್ನು ಮಾಡಿಕೊಟ್ಟು ವಿಶ್ವಬಂಧುಗಳೆಂದು ಕೀರ್ತಿ ಪಡೆದರು.

ಶ್ರೀ ಜಗದ್ಗುರುಗಳಿಂದ ಈವರೆಗೆ ವೀರಶೈವ ಸಮಾಜಕ್ಕೂ, ಇತರ

ಜನಾಂಗಗಳಿಗೂ ಕೊಡಲ್ಪಟ್ಟಿರುವ ದೇಣಿಗೆಯ ಪಟ್ಟಿಯು (Donations) ಕೆಳಗೆ ಕಾಣಿಸಿದಂತಿರುವದು.

೧. ಚಿತ್ರದುರ್ಗದ ಬೃಹನ್ಮಠದ ಹತ್ತಿರ ೨ ಸಾವಿರ ರೂಪಾಯಿಗಳ ಖರ್ಚಿನಿಂದ ಒಂದು ಶಾಲಾ ಇಮಾರತನ್ನು ತಯಾರಿಸಿ, ಮೈಸೂರ ಸರಕಾರದ ವಶಕ್ಕೆ ಕೊಡೋಣಾಗಿದೆ. ಈ ಸ್ಕೂಲಿನಲ್ಲಿ ೩೦ ಜನ ವಿದ್ಯಾರ್ಥಿಗಳಿದ್ದು ಅದರಲ್ಲಿ ೧೫ ಜನ ಅನಾಥಬಾಲಕರು ಶ್ರೀ. ಮಠದಲ್ಲಿಯೇ ಊಟ ಮಾಡಿ ವಿದ್ಯಾಭ್ಯಾಸಮಾಡುತ್ತಿದ್ದಾರೆ.

೨. ಚಿತ್ರದುರ್ಗ ನಗರದಲ್ಲಿ ಶ್ರೀ ಮಹಾಸ್ವಾಮಿಗಳ ಹೆಸರಿನಿಂದ ಬೋರ್ಡಿಂಗ್ ಸ್ಥಾಪನೆಯಾಗಿದ್ದು ೨೦ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ.

೩. ಚಿತ್ರದುರ್ಗದ ಶ್ರೀ ಕೃಷ್ಣರಾಜೇಂದ್ರ ಜಿಲ್ಹಾ ಲೈಬ್ರರಿಗೆ ೫೦೦೦ ರೂಪಾಯಿಗಳನ್ನು ದಯಪಾಲಿಸೋಣಾಗಿದೆ.

೪. ಚಿತ್ರದುರ್ಗದಲ್ಲಿ ಸ್ಥಾಪಿಸಲ್ಪಡಬೇಕಾಗಿರುವ ಆದಿಕರ್ನಾಟಕನ್ನರ ಹಾಸ್ಟಲಿಗೋಸ್ಕರ ೧೦೦೦ ರೂಪಾಯಿಗಳನ್ನು ದಯಪಾಲಿಸೋಣಾಗಿದೆ.

೫. ಚಿತ್ರದುರ್ಗ ಜಿಲ್ಹಾ ಹೊಸದುರ್ಗ ತಾಲೂಕ ಜಾನಕಲ್ ಗ್ರಾಮದಲ್ಲಿ ಕಟ್ಟಿಸಿರುವ ಅಂಜುಮನ್ ಕಟ್ಟಡಕ್ಕೆ ೫೦೦ ರೂಪಾಯಿ ದಯಪಾಲಿಸೋಣಾಗಿದೆ.

೬. ದಾವಣಗೇರೆ ನಗರದಲ್ಲಿ ಕಟ್ಟಲ್ಪಡುತ್ತಿರುವ "ಶ್ರೀ ಶಿವಯೋಗೀಶ್ವರ" ಆಶ್ರಮಕ್ಕೆ ೧೦ ಸಾವಿರ ರೂಪಾಯಿಗಳನ್ನು ದಯಪಾಲಿಸೋಣಾಗಿದೆ.

೭. ದಾವಣಗೇರಿಯಲ್ಲಿ ಶ್ರೀ ಮಹಾಸಂಸ್ಥಾನ ಶಾಖಾಮಠದಲ್ಲಿ ಬೋರ್ಡಿಂಗ್ ಸ್ಥಾಪಿಸಲ್ಪಟ್ಟಿದ್ದು ೨೦ ವಿದ್ಯಾರ್ಥಿಗಳು ವಿದ್ಯಾಭ್ಯಾಸಮಾಡುತ್ತಿದ್ದಾರೆ.

೮. ತುಮಕೂರ ನಗರದಲ್ಲಿ ಶ್ರೀ ಮಹಾಸ್ವಾಮಿಗಳ ಹೆಸರಿನಲ್ಲಿ ಒಂದು ಬೋರ್ಡಿಂಗ್ ಸ್ಥಾಪಿತವಾಗಿದ್ದು ಇದಕ್ಕಾಗಿ ಮಹಾಸ್ವಾಮಿಗಳ

ವರು ೨೫ ಸಾವಿರ ರೂಪಾಯಿಗಳನ್ನು ದಯಪಾಲಿಸಿರುವರು. ಈ ಬೋರ್ಡಿಂಗಿನಲ್ಲಿ ೪೦ ವಿದ್ಯಾರ್ಥಿಗಳು ಅಭ್ಯಾಸಮಾಡುತ್ತಿದ್ದಾರೆ.

೯. ತಿಪಟೂರ ವೀರಶೈವಾನಂದಾಶ್ರಮಕ್ಕೆ ಮಹಾಸ್ವಾಮಿಗಳು ೧೫ ಸಾವಿರ ರೂಪಾಯಿಗಳನ್ನು ದಯಪಾಲಿಸಿ, ಮತ್ತೆ ಕೆಲ ಮಹನೀಯರಿಗೂ ಪ್ರೇರಿಸಿ ಹಣಕೂಡಿಸಿ, ಆ ಸಂಸ್ಥೆಯನ್ನು ಈಗಲೂ ನಡೆಸುತ್ತಿದ್ದಾರೆ. ಇಲ್ಲಿ ೧೦೫ ವಿದ್ಯಾರ್ಥಿಗಳ ಊಟ-ವಸತಿಗಳ ವ್ಯವಸ್ಥೆ ಇದ್ದು ಸಂಸ್ಕೃತ, ವೈದಿಕ, ಆಂಗ್ಲ ಭಾಷೆಗಳನ್ನು ಕಲಿಯುತ್ತಿದ್ದಾರೆ.

೧೦. ತುಮಕೂರ ಜಿಲ್ಹಾ ಕೊರಟಗೆರೆ ತಾಲೂಕ ಹೊಳವನಹಳ್ಳಿ ಸೋಮಪುರದಲ್ಲಿರುವ ಶ್ರೀ ಸಂಸ್ಥಾನ ಶಾಖಾಮಠದಲ್ಲಿ ಸ್ಥಾಪನೆಯಾಗಿರುವ ಬೋರ್ಡಿಂಗಿನಲ್ಲಿ ೧೦ ಜನ ವೀರಶೈವ, ೫ ಜನ ಬ್ರಾಹ್ಮಣ, ೫ ಜನ ಮಹಮ್ಮದೀಯ ಹೀಗೆ ಅನಾಥ ವಿದ್ಯಾರ್ಥಿಗಳ ಭೋಜನ-ವಸತಿಗಳ ಏರ್ಪಾಡಾಗಿದೆ.

೧೧. ತುಮಕೂರ ಜಿಲ್ಹಾ ಕೊರಟಗೆರೆ ತಾಲೂಕ ಹೊಳವನಹಳ್ಳಿ ಯಲ್ಲಿರುವ ಅಂಜುಮನ್ ಇಸ್ಲಾಮ ಫಂಡಿಗೆ ೫೦೦ ರೂಪಾಯಿ ದಯ ಪಾಲಿಸೋಣಾಗಿದೆ.

೧೨. ಬೆಂಗಳೂರ ನಗರದಲ್ಲಿ ಶ್ರೀ ಮಹಾಸ್ವಾಮಿಗಳ ಹೆಸರಿನಿಂದ ಸ್ಥಾಪನೆಯಾಗಿರುವ ಛಾತ್ರನಿಲಯಕ್ಕೋಸ್ಕರ ೩೫ ಸಾವಿರ ರೂಪಾಯಿ ದಯಪಾಲಿಸೋಣಾಗಿದೆ.

೧೩. ಹಾಸನ ಜಿಲ್ಹಾ ಅರಸಿಕೇರಿಯಲ್ಲಿ ಮಹಾಸ್ವಾಮಿಗಳವರಿಂದ ಬೋರ್ಡಿಂಗ್ ಸ್ಥಾಪನೆಯಾಗಿದ್ದು ಸದರ ಬೋರ್ಡಿಂಗಿನ ಮೂಲ ಧನ ಕ್ಕೋಸ್ಕರ ೧೦ ಸಾವಿರ ರೂಪಾಯಿಗಳನ್ನು ದಯಪಾಲಿಸೋಣಾಗಿದೆ.

೧೪. ಧಾರವಾಡ ಜಿಲ್ಹಾ ಸವಣೂರಲ್ಲಿ ಸ್ಥಾಪಿತವಾಗಿರುವ ಅಂಜು ಮನ್ ಇಸ್ಲಾಮ ಸಂಸ್ಥೆಗೆ ೫೦೦ ರೂ. ಗಳನ್ನು ದಯಪಾಲಿಸೋಣಾಗಿದೆ.

೧೫. ಧಾರವಾಡದಲ್ಲಿರುವ ಶ್ರೀ ಮುರಘರಾಜೇಂದ್ರ ಟೌನಹಾಲಿ ಗಾಗಿ ೧೦ ಸಾವಿರ ರೂಪಾಯಿಗಳನ್ನು ದಯಪಾಲಿಸಿದ್ದಾರೆ.

೧೬. ಕೊಲ್ಹಾಪೂರ ರಾಜಧಾನಿಯಲ್ಲಿ ೧ ಲಕ್ಷ ೩೦ ಸಾವಿರ ರೂ. ಗಳಿಂದ ಒಂದು ಮಠವನ್ನು ಕಟ್ಟಿಸಿದ್ದಾರೆ. ಆ ಮಠದಲ್ಲಿ ಸದ್ಯಕ್ಕೆ ೩೦ ಜನ ವಿದ್ಯಾರ್ಥಿಗಳು ವಿದ್ಯಾಭ್ಯಾಸಮಾಡುತ್ತಿದ್ದಾರೆ.

೧೭. ಸಾಂಗಲಿಯಲ್ಲಿ ಮಹಾಸ್ವಾಮಿಗಳ ಹೆಸರಿನಿಂದ ಒಂದು ಬೋರ್ಡಿಂಗ್ ಸ್ಥಾಪಿಸಲ್ಪಟ್ಟಿದ್ದು ೩೦ ವಿದ್ಯಾರ್ಥಿಗಳು ವಿದ್ಯಾಭ್ಯಾಸಮಾಡುತ್ತಿದ್ದಾರೆ.

೧೮. ಕೊಲ್ಹಾಪೂರದಲ್ಲಿ ಜೈನ, ಮರಾಠಾ, ಮಹಮ್ಮದೀಯ ಬೋರ್ಡಿಂಗಿಗಾಗಿ ೮೦೦ ರೂಪಾಯಿಗಳನ್ನು ದಯಪಾಲಿಸೋಣಾಗಿದೆ.

೧೯. ಧಾರವಾಡದಲ್ಲಿರುವ ಕರ್ನಾಟಕ ಕಾಲೇಜಕ್ಕೆ ೫೦೦೦ ರೂ. ಗಳನ್ನು ದಯಪಾಲಿಸಿದ್ದಾರೆ.

೨೦. ಔಂಧ ಸಂಸ್ಥಾನದಲ್ಲಿ ಅಲ್ಲಿಯ ಪಂತ ಪ್ರತಿನಿಧಿ ಸರಕಾರದ ಇಚ್ಛೆಯಮೇರೆಗೆ ಒಂದು ಬೋರ್ಡಿಂಗ್ ಸ್ಥಾಪಿಸಿದ್ದಾರೆ. ಅಲ್ಲಿ ಸದ್ಯಕ್ಕೆ ೨೫ ಜನ ವಿದ್ಯಾರ್ಥಿಗಳು ಅಭ್ಯಾಸಮಾಡುತ್ತಿದ್ದಾರೆ.

೨೧. ಸಾತಾರ ನಗರದಲ್ಲಿ ಮಹಾರಾಷ್ಟ್ರ ಪ್ರಾಂತದ ವೀರಶೈವ ವಿದ್ಯಾರ್ಥಿಗಳಿಗಾಗಿ ಬೋರ್ಡಿಂಗ್ ಸ್ಥಾಪನೆಯಾಗಿದ್ದು ೩೦ ವಿದ್ಯಾರ್ಥಿಗಳು ಅಭ್ಯಾಸಮಾಡುತ್ತಿದ್ದಾರೆ.

೨೨. ಸತಾರೆಯಲ್ಲಿರುವ ಅಂಜುಮನ್ ಇಸ್ಲಾಮ ಫಂಡಿಗಾಗಿ ೧ ಸಾವಿರ ರೂಪಾಯಿಗಳನ್ನು ದಯಪಾಲಿಸೋಣಾಗಿದೆ.

೨೩. ಸೊಲ್ಲಾಪೂರದಲ್ಲಿರುವ ಶ್ರೀ ವಾರದ ಸಂಸ್ಕೃತ ಪಾಠಶಾಲೆಗೆ ೧ ಸಾವಿರ ರೂಪಾಯಿಗಳನ್ನು ದಯಪಾಲಿಸಿದ್ದಾರೆ.

೨೪. ಬೆಳಗಾಂವ ಜಿಲ್ಹಾ ನಿಪ್ಪಾಣಿಯಲ್ಲಿ ಒಂದು ಬೋರ್ಡಿಂಗ್ ಸ್ಥಾಪನೆಯಾಗಿದ್ದು ಇಲ್ಲಿ ೨೦ ಜನ ವಿದ್ಯಾರ್ಥಿಗಳು ವಿದ್ಯಾಭ್ಯಾಸಮಾಡುತ್ತಿದ್ದಾರೆ.

೨೫. ಅಥಣಿಯಲ್ಲಿರುವ ಶ್ರೀ ಮಹಾಸಂಸ್ಥಾನದ ಶಾಖಾ ಗಚ್ಚಿನ ಮಠದಲ್ಲಿ ಒಂದು ಸಂಸ್ಕೃತ ಪಾಠಶಾಲೆಯು ಸ್ಥಾಪನೆಯಾಗಿದ್ದು ೨೦ ಜನ ವಿದ್ಯಾರ್ಥಿಗಳು ವಿದ್ಯಾಭಾಸಮಾಡುತ್ತಿರುವರು.

೨೬. ಉತ್ತರ ಕರ್ನಾಟಕದಲ್ಲಿ ಸಂಸ್ಕೃತತೆಗೆದುಕೊಂಡು ಉಚ್ಚ ತರಗತಿಯಲ್ಲಿ ತೇರ್ಗಡೆಹೊಂದಿದ ಆಂಗ್ಲ ಭಾಷಾಭ್ಯಾಸದ ವಿದ್ಯಾರ್ಥಿಗಳಿಗೆ ಇನಾಮು ಕೊಡಲು, ರಾ. ಬ. ಅರಟಾಳ ರುದ್ರಗೌಡರು ಐ. ಎಸ್. ಓ. ಇವರ ಕಡೆಗೆ ಮಹಾಸ್ವಾಮಿಗಳು ೫೦೦೦ ರೂಪಾಯಿ ಇಡಿಗಂಟನ್ನು ಕೊಟ್ಟಿರುವರು.

೨೭. ಧಾರವಾಡ ನಗರದಲ್ಲಿ ಮಹಾ ಸಂಸ್ಥಾನದ ಶಾಖಾಮಠದಲ್ಲಿ ಮಹಾ ಸಂಸ್ಥಾನದಿಂದ ಬೋರ್ಡಿಂಗ್ ಸ್ಥಾಪನೆಮಾಡಿದ್ದು ೧೧೦ ವಿದ್ಯಾರ್ಥಿಗಳು ವಿದ್ಯಾಭ್ಯಾಸಮಾಡುತ್ತಿದ್ದಾರೆ.

೨೮. ಬಾಗಲಕೋಟೆಯಲ್ಲಿರುವ ಬೋರ್ಡಿಂಗಿಗೋಸ್ಕರ ೧ ಸಾವಿರ ರೂಪಾಯಿಗಳನ್ನು ದಯಪಾಲಿಸಿದ್ದಾರೆ.

೨೯. ಧಾರವಾಡದ ಲಿಂಗಾಯತ ಟೌನಹಾಲಿಗೆ ೧೦ ಸಾವಿರ ರೂಪಾಯಿಗಳನ್ನು ಆಶೀರ್ವದಿಸಿರುತ್ತಾರೆ.

೩೦. ವೀರಶೈವ ಮಹಾಸಭೆಯ ಚಿರಸ್ಮರಣೀಯ ಫಂಡಿಗೆ ೫ ಸಾವಿರ ರೂಪಾಯಿಗಳನ್ನು ಆಶೀರ್ವದಿಸಿರುವರು. ಇದರ ಬಲದಿಂದ ಅದು ೭೫ ಸಾವಿರ ರೂಪಾಯಿಯಾಗಿದೆ.

೩೧. ಧಾರವಾಡ ಜಿಲ್ಹಾ ಬ್ಯಾಡಿಗಿಯಲ್ಲಿರುವ ಶ್ರೀ ಮಹಾ ಸಂಸ್ಥಾನದ ಶಾಖಾ ಮಠದಲ್ಲಿ ಒಂದು ಬೋರ್ಡಿಂಗ್ ಸ್ಥಾಪನೆಯಾಗಿದ್ದು ೨೦ ಜನ ವಿದ್ಯಾರ್ಥಿಗಳು ವಿದ್ಯಾಭ್ಯಾಸಮಾಡುತ್ತಿದ್ದಾರೆ.

೩೨. ಕಾಶಿಯಲ್ಲಿ ವಿದ್ಯಾಭ್ಯಾಸ ಮಾಡತಕ್ಕ ಸಂಸ್ಕೃತ ವಿದ್ಯಾಭ್ಯಾಸದ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗುತ್ತದೆಂದು ಮಹಾಸನ್ನಿಧಿಗೆ ಅರಿಕೆಯಾಗಲು, ೨೦ ಸಾವಿರ ರೂಪಾಯಿಗಳ ಖರ್ಚಿನಿಂದ ಅಲ್ಲಿ ಒಂದು ಮಠವನ್ನು ಸ್ಥಾಪನೆಮಾಡಿರುವರು. ಅಲ್ಲಿ ೨೦ ಜನ ವಿದ್ಯಾರ್ಥಿಗಳ ಭೋಜನ ವಸತಿಗಳಿಗೆ ಅನುಕೂಲತೆಮಾಡೋಣಾಗಿದೆ.

೩೩. ಪಾಶ್ಚಾತ್ಯ ರಾಷ್ಟ್ರಗಳಿಗೆ ವಿದ್ಯಾರ್ಜನೆಗಾಗಿ ಹೋಗಿದ್ದ ಬ್ಯಾರಿಸ್ಟರ ಮಡಿವಾಳೇಶ್ವರ, ಸರದಾರ ಆರ್. ಎಸ್. ಪಾಟೀಲ ಮುಂತಾದವರಿಗೂ, ಮುಂಬಯಿ, ಮದ್ರಾಸ, ಕೊಲ್ಹಾಪೂರ, ಬೆಂಗಳೂರ, ಕಾಶಿ

# ಮ. ಗಾಂಧಿ.





PUBLISHED BY M. H. HOSUR MANAGER VIDYARANYA GRANTHMALA OFFICE MULGUND.

ಮೊದಲಾದ ಸ್ಥಳಗಳಲ್ಲಿ ಆಂಗ್ಲ ಅಥವಾ ಸಂಸ್ಕೃತ ವಿದ್ಯಾಭ್ಯಾಸಮಾಡುತ್ತಿರುವ ವೀರಶೈವ ಮತ್ತು ಬೇರೆ ಮತದ ವಿದ್ಯಾರ್ಥಿಗಳಿಗೂ, ವಿದ್ಯಾರ್ಥಿ ವೇತನಗಳನ್ನು ದಯಪಾಲಿಸಿರುವರಲ್ಲದೆ, ಈಗಲೂ ಈ ವೇತನಗಳು ನಡೆಯುತ್ತಿವೆ.

೩೪. ಹಾವೇರಿಯಲ್ಲಿ ಆದಿಕರ್ನಾಟಿಗರಿಗೆ ಸ್ಕೂಲ ಕಟ್ಟಡವನ್ನು ಕಟ್ಟಿಸಿಕೊಟ್ಟಿದ್ದಾರೆ.

೩೫. ಸೊಲ್ಲಾಪೂರದ ಮಹಿಳಾ ಸಮಾಜಕ್ಕೆ ಹಣದ ಸಹಾಯ ಮಾಡಿರುವರು.

ಈ ಮೇರೆಗೆ ಮಹಾಸ್ವಾಮಿಗಳವರು ಕರ್ನಾಟಕದಲ್ಲಿಯೂ, ಹೊರಗಡೆಯಲ್ಲಿಯೂ ಇರುವ ಸಕಲಮತೀಯ ವಿದ್ಯಾರ್ಥಿಗಳಿಗೆ, ಅನಾಥರಿಗೆ ಉದಾರ ಹೃದಯದಿಂದ ಸಹಾಯಮಾಡಿ ದಿಗಂತ ವಿಶ್ರಾಂತ ಕೀರ್ತಿಯನ್ನು ಗಳಿಸಿ ಜಗದಾತ್ಮರಾಗಿರುತ್ತಾರೆ. ಅಂತೂ " ಸರ್ವೇ ಜನಾಃ ಸುಖಿನೋ ಭವಂತು " ಎಂಬುದೇ ಮಹಾಸ್ವಾಮಿಗಳ ತತ್ವವಾಗಿರುವದು.

---

# ೧೨ ನೇ ಅಧ್ಯಾಯ.

## ಮಹಾತ್ಮಾ ಗಾಂಧಿಯವರೂ, ಶ್ರೀ. ಶ್ರೀ. ಜಗದ್ಗುರುಗಳೂ.

ಶ್ರೀ ಜಗದ್ಗುರುಗಳು ಲೋಕೋಪಕಾರ್ಯಗಳನ್ನು ಕೈಕೊಂಡು ಭಕ್ತರನ್ನು ಉದ್ಧರಿಸುವಾಗ ಜಗತ್ತಿನಲ್ಲಿ ಪ್ರಸಿದ್ಧರಾದ ಅನೇಕ ಮಹಾತ್ಮರಿಗೆ ಇವರ ಸಂದರ್ಶನವನ್ನು ಪಡೆಯುವ ಯೋಗವು ಸಂಘಟಿಸಿತು. ಈ ಸಮಯದಲ್ಲಿ ಪರಸ್ಪರ ವಿಚಾರಗಳು

ಪ್ರದರ್ಶಿಸಲ್ಪಟ್ಟವು. ಇಂಥ ಪ್ರಸಂಗಗಳಲ್ಲಿ ಜಗನ್ಮಾನ್ಯರಾದ ಮಹಾತ್ಮಾ ಗಾಂಧೀಜಿಯವರು ೧೯೩೪ ರಲ್ಲಿ ಕರ್ನಾಟಕದ ಸಂಚಾರವನ್ನು ಕೈಕೊಂಡಾಗ ಹಾವೇರಿ ಕ್ಯಾಂಪಿನಲ್ಲಿ ಜಗದ್ಗುರುಗಳನ್ನು ಸಂದರ್ಶಿಸಿದ ಪ್ರಸಂಗವು ಐತಿಹಾಸಿಕ ದೃಷ್ಟಿಯಿಂದ ಮಹತ್ವದ್ದಾದ್ದರಿಂದ ಈ ಸಂದರ್ಭದಲ್ಲಿಯು ಕೆಲವು ಸಂಗತಿಗಳನ್ನು ಈ ಅಧ್ಯಾಯದಲ್ಲಿ ವಿವರಿಸುವೆವು.

ಸದ್ಯಃಕಾಲದಲ್ಲಿ ಜಗತ್ತಿನೊಳಗಿನ ಎಲ್ಲ ಮಾನವೀಪ್ರಾಣಿಗಳ ಮನಸ್ಸನ್ನು ಆಕರ್ಷಣ ಮಾಡಿದ ಮಹಾ ಪುರುಷರೆಂದರೆ ಮಹಾತ್ಮಾ ಗಾಂಧೀಜಿಯವರು. ಇವರು ಶ್ರೀಕೃಷ್ಣ, ಬುದ್ಧ, ಕ್ರಿಸ್ತ, ಮಹಮ್ಮದ, † ಲಾಓತ್ಷೆ, ಆದ್ಯ ಶಂಕರಾಚಾರ್ಯ, ಬಸವೇಶ್ವರ ಮೊದಲಾದ ವಿಭೂತಿಗಳಂತೆ ಸತ್ಯ, ಅಹಿಂಸೆ ಮೊದಲಾದ ಸದ್ಗುಣಗಳಿಂದ ವಿಶ್ವಪ್ರೇಮವನ್ನು ಸಂಪಾದಿಸಿರುವರು. ಇವರ ದೇಹವೆಂದರೆ ಸತ್ಯ, ಅಹಿಂಸೆಯ ಮೂರ್ತಿಮಂತ ಸ್ವರೂಪವು. ‡ " ಸತ್ಯಕೆ ಸಿವಾ ಔರ ಕೋಯಿ ಧರ್ಮ ಮೈನೆ ಜಾನಾ ನಹಿ ಹೈ, ಔರ ನ ಜಾನತಾ ಚಾಹತಾ ಹೂಂ. " ಎಂಬ ಮ. ಗಾಂಧೀಯವರ ಚಿತ್ರದ ಕೆಳಗೆ ಕೊಟ್ಟ ಇವರ ಸ್ವಹಸ್ತಾಕ್ಷರದ ಲೇಖನದ ಅವಲೋಕನದಿಂದ ಸತ್ಯದಮೇಲಿನ ಇವರ ಉತ್ಕಟ ಪ್ರೇಮವು ವ್ಯಕ್ತವಾಗುತ್ತದೆ. ಹಾಗು ಇವರ ಅದ್ಭುತವಾದ ಯೋಗ್ಯತೆಯು ತಿಳಿಯಬರುತ್ತದೆ. ಅಸತ್ಯ, ಹಿಂಸೆ ಇವುಗಳಿಂದ ಮಹಾತ್ಮರು ಅಜಾತ ಶತ್ರುಗಳಾಗಿರುವರು. ಜಗತ್ತಿನ ಸಾಮುದಾಯಿಕ ಮನೋಭೂಮಿಕೆಯಮೇಲೆ ಸತ್ಯ, ಅಹಿಂಸೆಗಳಿಂದಲೇ ಇವರು ತಮ್ಮ ವರ್ಚಸ್ಸನ್ನು ಕೂಡಿಸಿರುವರು. ಈ ಗುಣಗಳಿಂದಲೇ ಇವರು ಜಗತ್ತಿನಲ್ಲಿ ಪೂಜ್ಯರಾಗಿರುವರು. ಇವರು ಸತ್ಯ, ಅಹಿಂಸೆ, ಪ್ರೇಮ ಇವುಗಳ ಕೇವಲ ಉಪದೇಶಕರಾಗಿರದೆ, ಮೂರ್ತಿಮಂತ ಆಚರಣೆಯಲ್ಲಿ ತಂದವರಿರುವರೆಂದು ಸೂರ್ಯಪ್ರಕಾಶದಷ್ಟು ಸ್ಪಷ್ಟವಿರುತ್ತದೆ.

---

† ಲಾಓತ್ಷೆ ಇವನು ಕ್ರಿ. ಶ. ಪೂ. ೫೦ ರ ಸುಮಾರಕ್ಕೆ ಚೀನದಲ್ಲಿ ಆಗಿಹೋದ ಮಹಾ ಪುರುಷನು. ಇವನೊಬ್ಬ ತತ್ವವೇತ್ತನು. ಇವನನ್ನು ಬುದ್ಧದೇವನಂತೆ ಅಲ್ಲಿಯ ಜನರು ತಿಳಿಯುವರು. ವಿಶೇಷ ಮಾಹಿತಿಗಾಗಿ ಸ್ವಾಮಿ ಅಭೇದಾನಂದಕೃತ " ಜಗದುದ್ಧಾರಕ ಮಹಾತ್ಮರು " ಭಾಗ ೧. ಈ ಪುಸ್ತಕವನ್ನು ನೋಡಬಹುದು.

‡ ಅರ್ಥ— ಸತ್ಯದ ಹೊರತು ನಾನು ಯಾವ ಧರ್ಮವನ್ನೂ ತಿಳಿಯುವದಿಲ್ಲ. ಹಾಗೂ ತಿಳಿಯಬಿಚ್ಛಿಸುವದಿಲ್ಲ. ತಾ. ೬—೩—೨೪. —ಮ. ಗಾಂಧಿ.

ಮಹಾತ್ಮಾ ಗಾಂಧಿಯವರು ತೋರಿಸುತ್ತಿರುವ ಪ್ರೇಮವೆಂದರೆ ಜಡ ದೇಹದ ಮೇಲಿನ ಪ್ರೇಮವಲ್ಲ; ಇಷ್ಟೇ ಅಲ್ಲ; ಇವರ ಹೃದಯದಲ್ಲಿಯ ಪ್ರೇಮವು ಸಂಕುಚಿತವಿರದೆ, ವಿಶ್ವವ್ಯಾಪಿಯಾಗಿರುವದು. ಹಾಗೂ ಸಾರ್ವತ್ರಿಕ ಭ್ರಾತೃಭಾವವನ್ನು ವಿಕಾಸಗೊಳಿಸುವಂತಹದಿರುವದು! ಈಗ ಜಗತ್ತಿನಲ್ಲಿ ಅತ್ಯುನ್ನತ ಸ್ಥಿತಿಗೆ ಮುಟ್ಟಿರುವವೆಂದೆನಿಸಿಕೊಳ್ಳುವ ರಾಷ್ಟ್ರಗಳು ತೋರಿಸುತ್ತಿರುವ ಭ್ರಾತೃಭಾವವೂ, ಸಮಾನ ಶೀಲತೆಯೂ ಮಹಾತ್ಮಾಜಿಯವರ ಪ್ರಯೋಗಶಾಲೆಯಲ್ಲಿ ಸಂಕುಚಿತ ಹಾಗೂ ದ್ವೇಷ ಮಿಶ್ರಿತವೆಂದೆನಿಸದೆ ಇರಲಾರವು. ಆದರೆ ಮಹಾತ್ಮಾಜಿಯವರ ಪ್ರೇಮ ಧರ್ಮವು ಮಾತ್ರ ಹೀಗಿರುವದಿಲ್ಲ. ಇವರ ಹೃದಯಾಕಾಶದಲ್ಲಿ ಪ್ರಕಾಶಮಾನವಾಗಿರುವ ಪ್ರೇಮವು ಅಖಿಲ ಮಾನವ ಜಾತಿಯಮೇಲಿನ ಪ್ರೇಮವೆಂದಿಷ್ಟೇ ಮರ್ಯಾದಿತ ಅಥವಾ ಸಂಕುಚಿತವಾಗಿರದೆ, ಅಖಿಲ ಸೃಷ್ಟ ಪದಾರ್ಥಗಳ ಮೇಲೆ ಮಾಡುವ ಪರಮೇಶ್ವರನಮೇಲಿನ ಆತ್ಮಸ್ವರೂಪ, ದಿವ್ಯ ಪ್ರೇಮವೆನಿಸಿಕೊಳ್ಳುತ್ತವೆ. ಇಂಥ ದಿವ್ಯ ಸದ್ಗುಣಗಳಿಂದ ಕೂಡಿದ ಪುಣ್ಯ ವಿಭೂತಿಯ ಗುಣಗಳನ್ನು ವರ್ಣಿಸುವದು ಪಾಮರರಿಗೆ ಅಸಾಧ್ಯವು.

ಮಹಾತ್ಮಾ ಗಾಂಧಿಯವರು ಅಹಿಂಸೆ, ಸತ್ಯ, ಖಾದಿಗಳ ಪ್ರಚಾರ ಕಾರ್ಯಮಾಡುತ್ತ ಇ. ಸ. ೧೯೩೪ ರಲ್ಲಿ ಕರ್ನಾಟಕದ ಸಂಚಾರವನ್ನು ಕೈಕೊಂಡಾಗ ಹಾವೇರಿಗೆ ಆಗಮಿಸಿದರು. ಆಗ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರಘರಾಜೇಂದ್ರ ಮಹಾ ಸ್ವಾಮಿಗಳ ಮುಕ್ಕಾಮು ಹಾವೇರಿಯಲ್ಲಿತ್ತು. ಮಹಾತ್ಮಾಜಿಯವರಿಗೆ ಶ್ರೀ ಜಗದ್ಗುರುಗಳ ಜಗದ್ರಕ್ಷಣ ಕಾರ್ಯದ ಮರ್ಮವೂ, ಇವರ ಧಾರ್ಮಿಕ ಶೈಕ್ಷಣಿಕ ಉನ್ನತಿಯ ಕಾರ್ಯಗಳೂ, ವಿಚಾರಗಳೂ, ಅದ್ವಿತೀಯ ಆತ್ಮಬಲವೂ ತೋರಬಂದಿದ್ದವು. ಮಹಾತ್ಮಾಜಿಯವರ ವಿಷಯವಂತೂ ಜಗತ್ ಪ್ರಖ್ಯಾತವು! ಹೀಗಾಗಿ ಇವರೀರ್ವರ ಮಹನೀಯರ ಸಂಘಟನೆಯ ಯೋಗವು ಪ್ರಾಪ್ತವಾಗಿ ಪ್ರಯಾಗ ಕ್ಷೇತ್ರದಲ್ಲಿ ಗಂಗಾ-ಯಮುನೆಗಳ ಸಂಯೋಗವಾದಂತೆ ಹಾವೇರಿಯಲ್ಲಿ ೨೫ ಮಿನಿಟುಗಳ ಪರ್ವಕಾಲದ ವರೆಗೆ ಇವರೀರ್ವರ ಸಂಯೋಗವಾಯಿತು.

ಮಹಾತ್ಮಾ ಗಾಂಧಿಯುವರು ಶ್ರೇಷ್ಠ-ಕನಿಷ್ಠಗಳು ಜನ್ಮದಿಂದ ಬಂದವುಗಳಲ್ಲ; ಮನುಷ್ಯ ಜಾತಿಯ ಹಿತಾರ್ಥವಾದ ಎಲ್ಲ ಉದ್ಯೋಗಗಳು ಶ್ರೇಷ್ಠ ಹಾಗು ಸಮಾನವಾದವುಗಳು. ದೇವರ ಸೃಷ್ಟಿಯಲ್ಲಿ ಎಲ್ಲರೂ ಸಮಾನರು; ಎಂಬ ತತ್ವಗಳನ್ನು ಒಪ್ಪುವವರು; ಅಹಿಂಸೆ ಹಾಗೂ ಸತ್ಯವಾದಿಗಳು. ವಿಶ್ವ ಪ್ರೇಮಿಗಳು; ದೇಶೋದ್ಧಾರಕ್ಕಾಗಿ ಹಗಲಿರುಳು ಹೆಣಗಾಡುವವರು, " ಖಾದಿಯೇ ಸುಖದ ಹಾದಿ " ಎಂಬ ತತ್ವದಜನಕರು.

ಶ್ರೀ ಜಗದ್ಗುರುಗಳಾದರೂ ತಮ್ಮ ಅವತಾರ ಕಾರ್ಯದಲ್ಲಿ ಜಾತಿ ವಿಶಿಷ್ಟ ಮೇಲು-ಕೀಳುಗಳೆಂಬ ಭಾವನೆಯ ಮೂಲೋತ್ಪಾಟನವನ್ನು ಮಾಡಿದವರು. ನಿರರ್ಥಕವಾದ ಕರ್ಮಬಾಹುಲ್ಯವನ್ನು ನಿವಾರಿಸಿದವರು. ಸಮತಾವಾದವನ್ನು ಉಜ್ಜೀವನಗೊಳಿಸಿದವರು. ವಿಶ್ವ ಪ್ರೇಮವನ್ನು ಸಂಪಾದಿಸಿದ ಜಗದ್ವಂದ್ಯರು. ಸತ್ಯ-ಅಹಿಂಸೆಗಳಿಗಾಗಿ ತಮ್ಮ ಆಯುಷ್ಯವನ್ನೆಲ್ಲ ಲೋಕೋದ್ಧಾರಕ್ಕಾಗಿ ಧಾರೆ ಎರೆದವರು. ಖಾದೀ ಪ್ರೇಮಿಗಳು, ದಿನೋದ್ಧಾರಕರು, ಆದುದರಿಂದ " ಸಮಾನ ಶೀಲೇಷು ವ್ಯಸನೇಷು ಸಖ್ಯಂ " ಎಂಬಂತೆ ಜಗದ್ಗುರುಗಳನ್ನು ಕಂಡೊಡನೆ ಮಹಾತ್ಮಾಜಿಯುವರಿಗೆ ಪರಮಾನಂದವಾಯಿತು. ಆಗ ಅವರು ಭಕ್ತಿ-ಪ್ರೇಮಗಳಿಂದ ಕೂಡಿದವರಾಗಿ ವಂದನೆಗೈದರು. ಖಾದೀ ಉಡಿಗೆ-ತೊಡಿಗೆಗಳಿಂದ ಸದಾ ಪರಿಭೂಷಿತರಾಗಿರುವ ಮಹಾಸ್ವಾಮಿಗಳ ದಿವ್ಯ ದರ್ಶನದಿಂದ ಇಂದು " ಧನ್ಯನಾದೆ " ಎಂಬ ಉದ್ಗಾರವನ್ನು ತೆಗೆದರು.

ಜಗದ್ಗುರುಗಳಾದರೂ ಮಹಾತ್ಮಾಜಿಯುವರ ಹಸನ್ಮುಖ, ಸತ್ಯ-ಅಹಿಂಸೆಗಳಿಂದ ಕೂಡಿದ ಅದ್ವಿತೀಯ ತೇಜಸ್ಸು, ಸದ್ಭಾವ, ಸ್ವದೇಶ ಪ್ರೀತಿ ಇವುಗಳನ್ನು ಕಂಡು ಹರ್ಷೋದ್ಗಾರಗಳನ್ನು ತೆಗೆದರು.

ದೇಶೋದ್ಧಾರಕ್ಕಾಗಿ ಸರ್ವ ಸಂಗ ಪರಿತ್ಯಾಗಮಾಡಿದ ಮ. ಗಾಂಧಿಯುವರೂ, ಧರ್ಮೋದ್ಧಾರಕ್ಕಾಗಿ ಅವತರಿಸಿದ ಶ್ರೀ ಜಗದ್ಗುರುಗಳೂ ಸಮ್ಮಿಲಿತರಾದ ಆ ಅಪೂರ್ವ ನೋಟವನ್ನು ವರ್ಣಿಸುವದು ಸುಲಭವಲ್ಲ; ಯಾಕಂದರೆ ಇಬ್ಬರೂ ಅದ್ವಿತೀಯ ಪುರುಷರು. ಇದರಿಂದ ಅಲ್ಲಿ ಅರುಣ-ಸೂರ್ಯರ ಕಾಂತಿಯ ಸಂಯೋಗವಾದಂತೆ ಭಾಸವಾಗುತ್ತಲಿತ್ತು. ಬರ

ಬರುತ್ತ ಸೂರ್ಯನ ಕಾಂತಿಯಲ್ಲಿ ಅರುಣ ಕಾಂತಿಯು ಕೂಡಿಹೋಗುವಂತೆ ಇವರೀರ್ವರ ತೇಜಸ್ಸೂ ಏಕಾಕಾರವಾದವು. ಆಗ ಎಲ್ಲಕಡೆಯಲ್ಲಿ ಸ್ತಬ್ಧತೆಯು ಉಂಟಾಯಿತು. ಅಲ್ಲಿದ್ದ ಜನರೆಲ್ಲ ಧರ್ಮಮೂರ್ತಿಯಾದ ಜಗದ್ಗುರುಗಳಕಡೆಗೆ ಒಮ್ಮೆ, ಸತ್ಯ ಹಾಗೂ ಅಹಿಂಸೆಯ ಮೂರ್ತಿಯಾದ ಭಾರತಮಾತೆಯ ಸತ್ಪುತ್ರ ಮ. ಗಾಂಧೀಜಿಯವರ ಕಡೆಗೇ ಮತ್ತೊಮ್ಮೆ, ಹೀಗೆ ನೋಡತೊಡಗಿದರು. ಹೀಗೆ ನೋಟಕರ ಅಲ್ಪಕಾಲವು ಸ್ತಬ್ಧತೆಯಲ್ಲಿ ಕಳೆದುಹೋಗಲು ಜಗದ್ಗುರುಗಳು ಮಹಾತ್ಮಾಜಿಯವರ ಯೋಗಕ್ಷೇಮವನ್ನು ವಿಚಾರಿಸಿ ಅವರ ಸ್ವದೇಶ ಸೇವೆಯ ಬಗ್ಗೆ ಅಭಿನಂದಿಸಿದರು. ಮಹಾತ್ಮಾಜಿಯವರು ತಲೆಬಾಗಿ ವಂದನೆಗೈದು ಎಲ್ಲಕ್ಕೂ ಧರ್ಮ ರಕ್ಷಣ ಹಾಗು ಲೋಕಸಂಗ್ರಹ ಕಾರ್ಯಗಳನ್ನು ಕೈಕೊಂಡ ತಮ್ಮಗಳ ಅನುಗ್ರಹವೇ ಕಾರಣವು ಎಂದು ನುಡಿದು ತಮ್ಮ ವಿನಯ ಭಾವವನ್ನು ವ್ಯಕ್ತಗೊಳಿಸಿದರು. ಅನಂತರ ಮಹಾತ್ಮಾಜಿಯವರು ಭಾರತೋದ್ಧಾರಕ್ಕಾಗಿ ಇದೀಗ ಖಾದೀ ಧಾರಣ, ಅಸ್ಪೃಶ್ಯ ನಿವಾರಣ, ಸತ್ಯ, ಅಹಿಂಸೆಗಳ ಅವಶ್ಯವಿರುವದೆಂದು ತಮ್ಮ ವಿಚಾರಗಳನ್ನು ತೋರ್ಪಡಿಸಿದರು.

ಜಗದ್ಗುರುಗಳು ಇವೆಲ್ಲವುಗಳಿಗೆ ಸಹಾನುಭೂತಿಯನ್ನು ತೋರಿಸಿದರು. ಕಡೆಗೆ ಅಸ್ಪೃಶ್ಯತಾ ನಿವಾರಣೆಯ ಬಗ್ಗೆ ಮಾತನಾಡುವಾಗ ಅಂದದ್ದೇನಂದರೆ– " ಅಸ್ಪೃಶ್ಯರನ್ನು ಉದ್ಧಾರಮಾಡಬೇಕೆಂದು ನಾವೂ ಒಪ್ಪುತ್ತೇವೆ. ಆದರೆ ಈ ವಿಷಯದಲ್ಲಿ ಸದಾಚಾರ ಶೀಲಗಳ ಮಾರ್ಗದಿಂದ ಅವರಿಗೆ ಗತಿ ಕೊಡಬೇಕು. ನಮ್ಮ ಪ್ರಯತ್ನದಿಂದ ಅವರಲ್ಲಿದ್ದ ಹೀನ, ದೀನ ಸ್ಥಿತಿಗಳನ್ನು ಹೋಗಲಾಡಿಸಿ ಅವರಲ್ಲಿ ಶಿವಭಕ್ತಿ, ಸದ್ಗುಣ, ಸದಾಚಾರಗಳು ಉತ್ಪನ್ನವಾಗುವಂತೆ ಜಾಗ್ರತೆಗೊಳಿಸಿದರೆ, ಅವರು ಅಸ್ಪೃಶ್ಯರೆಂಬ ಭಾವನೆಯು ತಾನೇ ಮಾಯವಾಗುವದು. ಇವರ ಉದ್ಧಾರದಲ್ಲಿ ಮಾನವೀ ಬಂಧುತ್ವದ ದೃಷ್ಟಿಯು ಇರಬೇಕಾಗಿದ್ದರೂ, ಅವರಲ್ಲಿ ಧಾರ್ಮಿಕ ಸಂಸ್ಕೃತಿ ಅಥವಾ ಆಚಾರಗಳ ಕಟ್ಟು ಮೊದಲು ನೆಲಗೊಳ್ಳುವಂತೆ ಮಾಡುವದು ಅತ್ಯಾವಶ್ಯಕವು. ನಮ್ಮ ಪೂರ್ವಜರಾದ ಶ್ರೀ ಬಸವಣ್ಣನವರು ೮೦೦ ವರ್ಷಗಳ ಹಿಂದೆ ಧಾರ್ಮಿಕ ದೃಷ್ಟಿಯ ಸಾಮರಸ್ಯದಿಂದಲೇ ಇವರನ್ನು ಉದ್ಧರಿಸಿರುವರು. ಇಷ್ಟೇ ಅಲ್ಲ ಇಹಪರಸಾಧನಗಳ ಮಾರ್ಗವನ್ನು ತೋರಿಸಿರುವರು.

ಸ್ಪೃಶ್ಯಾಸ್ಪೃಶ್ಯ ವಿಚಾರಗಳು ಮನುಷ್ಯನ ಪವಿತ್ರಾಚರಣೆಯನ್ನು ಅವಲಂಬಿಸಿರುವವಲ್ಲದೆ, ವ್ಯಕ್ತಿಯನ್ನವಲಂಬಿಸಿರುವದಿಲ್ಲ. ಗೋಮಾಂಸಾದಿ ನಿಷಿದ್ಧ ವಸ್ತುಗಳನ್ನು ಸೇವಿಸುವವನು, ಪ್ರಾಣಿಹಿಂಸೆಮಾಡಿ ನಿಂದ್ಯವಾದ ರೀತಿಯಿಂದ ಉದರಂಭರಣಮಾಡುವವನು, ತನ್ನ ದುಷ್ಕರ್ಮಕ್ಕೆ ಅಂಜಿ ಊರಿಂದ ದೂರಿರುವವನು, ಧರ್ಮಾಧರ್ಮ ವಿಚಾರವನ್ನು ಅಳಿದವನು, ಶಿರೆಬಡಕನು ಇಂಥವನು ಜನ್ಮತಃ ಸ್ಪೃಶ್ಯನಿದ್ದರೂ ಅಸ್ಪೃಶ್ಯನೇ! ಇನ್ನು ಆದಿಕರ್ನಾಟಕವೆಂದೆನಿಸಿಕೊಳ್ಳುವ ಹೊಲೆಯರು, ಮಾದಿಗರು ಮೊದಲಾದವರು ವಸ್ತುತಃ ಜನ್ಮದಿಂದ ದುಷ್ಟರಲ್ಲ; ಗುಣದಿಂದಲೂ ಎಲ್ಲರೂ ದುಷ್ಟರಿರಲಿಕ್ಕಿಲ್ಲ. ಆದರೆ ದುಷ್ಟ ಪದಾರ್ಥಗಳನ್ನು ಅವರು ಸೇವಿಸುವರು; ದುಷ್ಟ ಜೀವಿಗಳ ಸಂಸರ್ಗದಲ್ಲಿರುವರು. ಕಾರಣ ಅವರು ದೇಹದೃಷ್ಟಿಯಿಂದ ದುಷ್ಟರಾಗಿರುವರು. ಇದಕ್ಕೆ ಗೋಮಾಂಸಾದಿ ನಿಷಿದ್ಧ ವಸ್ತುಗಳ ಭಕ್ಷಣ, ಸಿಂದಿ-ಸೆರೆಗಳ ಸೇವನ, ಹೆಣದಮೇಲಿನ ವಸ್ತ್ರಧಾರಣಾದಿಗಳೇ ಕಾರಣವೆಂದು ಹೇಳಬಹುದು.

ಮೇಲೆ ಹೇಳಿದಂತೆ ಮನುಷ್ಯನು ಯಾವದೊಂದು ಶ್ರೇಷ್ಠ ಜಾತಿಯಲ್ಲಿ ಜನಿಸಿದ್ದರೂ ಅಧರ್ಮ, ಅಸತ್ಯ, ಹಿಂಸೆ, ಅತ್ಯಾಚಾರಗಳಿಗೆ ಮಿತಿಮೀರಿ ಒಳಗಾದರೆ ಅವನು ಅಸ್ಪೃಶ್ಯನೇ ಸರಿ. ಅಸ್ಪೃಶ್ಯರೆಂದೆನಿಸಿಕೊಳ್ಳುವ ಆದಿಕರ್ನಾಟಿಗರು, ಹೊಲೆ, ಮಾದಿಗಾದಿ ಜಾತಿಯಲ್ಲಿ ಜನಿಸಿದ್ದರೂ ಸತ್ಯ, ಸದ್ಧರ್ಮ, ಸದಾಚಾರಗಳಿಂದ ಕೂಡಿರುವವರಾದರೆ, ಸ್ಪೃಶ್ಯಜನರಿಗೆ ಸಹ ಅವರು ಮಾರ್ಗದರ್ಶಕರಾಗುವರು. ಯಾಕಂದರೆ ಮೇಲೆ ಹೇಳಿದ ಅಧರ್ಮಿಗಳು ಜಾತಿಯಿಂದ ಉಚ್ಚರೆನಿಸಿಕೊಂಡರೂ ದುಷ್ಟಸ್ವಭಾವದ ಅತಿರೇಕದಿಂದ ಚಾಂಡಾಲರಿಗಿಂತಲೂ ಹೇಯರಾಗುವರು. ಹೊಲೆ-ಮಾದಿಗರು ಸತ್ತ ದನಗಳನ್ನು ತಿಂದರೆ ಇವರು ಮನುಷ್ಯನ ಪ್ರಾಣಾಧಾರವಾಗಿರುವ ಪರದ್ರವ್ಯವನ್ನು ಅನ್ಯಾಯವಾಗಿ ಹರಣಮಾಡಿ ಅವನ ಜೀವಾ ತಿಂದುಬಿಡುವರು. ಹೊಲೆ-ಮಾದಿಗರು ಬಡತನದಮೂಲಕ ಗತಿಗಾಣದೆ ಹೊಲಸು ವಸ್ತ್ರ, ಹೊಲಸು ಶರೀರಗಳಿಂದ ಇರುವದಾದರೆ ಇವರು ಅಧರ್ಮ, ಅನೀತಿ, ಪರನಿಂದೆ, ಪರಸ್ತ್ರೀಭೋಗ, ಕುಯುಕ್ತಿ, ಮೋಸ, ನಿರ್ದಯ, ದಾಸ್ಯ ಮೊದಲಾದ ಆತ್ಮಘಾತಕ ಗುಣಗಳಿಂದ ಮನೋ

ಮಾಲಿನ್ಯವನ್ನು ಹೊಂದಿರುವರು. ಅಂತೇ ನಿಜವಾದ ಅಸ್ಪೃಶ್ಯತ್ವವು ವ್ಯಕ್ತಿ ಅಥವಾ ಜಾತಿಯಲ್ಲಿರದೆ ವೃತ್ತಿಯಲ್ಲಿ ಇರುತ್ತದೆಂದು ಸಿದ್ಧವಾಗುತ್ತದೆ.

ಇನ್ನು ಇಂಥ ಹೊಲೆ-ಮಾದಿಗರಾದಿ ಆದಿಕರ್ನಾಟಿಗರನ್ನು ಉದ್ಧಾರ ಮಾಡಬೇಕೆನ್ನುವವರು ಜಗತ್ತಿನಲ್ಲಿಯ ಹೀನ ಕ್ರಿಯಗಳನ್ನು ಸ್ವಹಸ್ತದಿಂದ ಮಾಡಿ ಜನರ ಜೀವನ ಕ್ರಿಯೆಗೆ ಸಹಕಾರಿಗಳಾಗಿರುವ ಇವರನ್ನು ಉದಾರ ಹೃದಯದಿಂದ ನೋಡತಕ್ಕದ್ದು. ಅವರ ಸ್ಥಿತಿಯನ್ನು ಸುಧಾರಿಸುವದಕ್ಕಾಗಿ ದಾನ-ಧರ್ಮ ಮಾಡತಕ್ಕದ್ದು. ಅನಾಥಾಲಯಗಳನ್ನು ಸ್ಥಾಪಿಸಿ ಇವರ ವಿದ್ಯಾಭಿವೃದ್ಧಿ ಮಾಡತಕ್ಕದ್ದು.

ಆದಿಕರ್ನಾಟಕಸ್ಥರಾದರೂ ತಾವು ಉದ್ಧಾರವಾಗಬೇಕೆಂಬ ಭಾವನೆಯಿಂದ ಕಾಯಿಕ, ಮಾನಸಿಕ ಪಾವಿತ್ರ್ಯವನ್ನು ಕಾಯ್ದುಕೊಳ್ಳಬೇಕು. ತಮ್ಮ ಕುಲಕಸಬು ಮುಗಿದೊಡನೆ ಸ್ವಚ್ಛತೆಯಿಂದಿರಲು ಪ್ರಯತ್ನಿಸಬೇಕು. ತಮ್ಮ ಆಹಾರದ ಪದಾರ್ಥಗಳನ್ನೂ, ಓಣಿಗಳನ್ನೂ, ಮನಿಗಳನ್ನೂ ಸ್ವಚ್ಛವಾಗಿರಿಸಬೇಕು. ಒಟ್ಟಿನಮೇಲೆ ಸ್ವಚ್ಛತೆ, ಶಿಕ್ಷಣ, ಸ್ವಾಭಿಮಾನ, ಆತ್ಮಜ್ಞಾನ, ಸದ್ಭಕ್ತಿ ಇತ್ಯಾದಿ ಸದ್ಗುಣಗಳು ತಮ್ಮ ಸಮಾಜದಲ್ಲಿ ನೆಲೆಗೊಳ್ಳುವಂತೆ ಪ್ರಯತ್ನಿಸತಕ್ಕದ್ದು."

ಎಂದು ಮಹಾತ್ಮಾಜಿಯವರ ಸಮ್ಮುಖದಲ್ಲಿ ಅಪ್ಪಣೆಕೊಡಿಸಿದರು. ಅನಂತರ ಈ ೨೦ ನೇ ಶತಮಾನದಲ್ಲಿ ಪರಧರ್ಮದ ಪ್ರಭುತ್ವ, ವರ್ಣಾಶ್ರಮಧರ್ಮದ ರಕ್ಷಕರಾದ ಸನಾತನಿಗಳ ಹಟ, ಇಂಥ ಪರಿಸ್ಥಿತಿಯಲ್ಲಿ ಮಹಾತ್ಮಾ ಗಾಂಧೀಯವರು ಪ್ರಾಯೋಪವೇಶನದಂಥ ಜೀವದಮೇಲಿನ ಗಂಡಾಂತರಕ್ಕೆ ಸಹ ಹೆದರದೆ ಆದಿಕರ್ನಾಟಕಸ್ಥರನ್ನು ಉದ್ಧರಿಸುತ್ತಿರುವದನ್ನೂ ಅಸಿಧಾರಾವ್ರತದಂಥ ಇವರ ದೇಶಸೇವೆಯನ್ನೂ ಪ್ರಶಂಸೆಮಾಡಿದರು. ಕಡೆಗೆ ಮಹಾತ್ಮಾಜಿಯವರಲ್ಲಿಯ ಸತ್ಯ, ಅಹಿಂಸೆ, ದಯೆ, ಆತ್ಮಶಕ್ತಿ, ಸಮಭಾವ ಇವುಗಳು ಅದ್ವಿತೀಯವಾದವುಗಳೆಂದು ಹರ್ಷೋದ್ಗಾರಗಳನ್ನು ತೆಗೆದು ಕೌತುಕಪಟ್ಟರು.

ಮಹಾತ್ಮಾಜಿಯವರೂ ಶ್ರೀ ಜಗದ್ಗುರುಗಳ ಪರಿಪಕ್ವ ವಿಚಾರಗಳನ್ನು ಹಸನ್ಮುಖದಿಂದ ಕೇಳಿ ಅವರ ದರ್ಶನದಿಂದ ಕೃತಾರ್ಥರಾದರು. ಈ

ಸಮಯದಲ್ಲಿ ಮಹಾತ್ಮರ ಹೃತ್ಕಮಲವನ್ನು ಜಗದ್ಗುರುಗಳು ವ್ಯಾಪಿಸಿಬಿಟ್ಟಿದ್ದರಿಂದ ಅವರ ಪವಿತ್ರ ಭಾವನೆಗೆ ಕ್ಷಣಹೊತ್ತು ಬ್ರಹ್ಮಾನಂದದ ಭರತೆ ಬಂದಿತು. ಆಗ ಇದೊಂದು ಹೊಸ ಸೃಷ್ಟಿಯಲ್ಲಿ ವ್ಯವಹರಿಸುತ್ತಿರುವರೆಂಬ ಭಾವನೆಯು ಅವರಿಗಾಯಿತು. ಹೀಗೆ ತುಸುಹೊತ್ತು ಕ್ರಮಿಸಲು ಮಹಾತ್ಮಾಜಿಯವರು ಜಗದ್ಗುರುಗಳನ್ನು ವಂದಿಸಿ, ಅವರ ಅಪ್ಪಣೆಪಡೆದು ತಮ್ಮ ಬಿಡಾರಕ್ಕೆ ತೆರಳಿದರು.

---

# ೧೩ ನೇ ಅಧ್ಯಾಯ.

# ಮೈಸೂರ ಶ್ರೀಮನ್ಮಹಾರಾಜರೂ, ಶ್ರೀ. ಶ್ರೀ. ಜಗದ್ಗುರುಗಳೂ.

ಕರ್ನಾಟಕದ ಸಾಮ್ರಾಜ್ಯಾಧಿಪತಿಗಳೆಂದು ಹೆಸರಾದ ಶ್ರೀಮನ್ಮಹಿಸೂರ ಸಂಸ್ಥಾನದ ದೊರೆಗಳು ಪರಂಪರಾಗತವಾಗಿ ಚಿನ್ಮೂಲಾದ್ರಿ ಬ್ರಹನ್ಮಠದಕ್ಕೆ ಭಕ್ತಿಯಿಂದ ನಡಕೊಳ್ಳುತ್ತ ಬಂದಿರುವರು. ಈ ಅರಮನೆ ಗುರುಮನೆಗಳ ಸಂಬಂಧವು ಕೇವಲ ಭಕ್ತಿ, ವಿಶ್ವಾಸಪೂರ್ವಕವಾದುದು. ಈ ದೊರೆಗಳು ತಮ್ಮ ಭಕ್ತಿ, ಪ್ರೀತಿಗಳನ್ನು ಅತಿಶಯವಾದ ರೀತಿಯಿಂದ ಬಹುಕಾಲದಿಂದ ಪ್ರದರ್ಶಿಸುತ್ತ ಬಂದಿರುವರು. ಇದಕ್ಕೆ ೭ ನೇ ಪಟ್ಟಾಧಿಕಾರಿಗಳಾದ ಶ್ರೀ ಶ್ರೀ ಕಟ್ಟಿಗೇಹಳ್ಳಿ ಸ್ವಾಮಿಗಳು ಶ್ವೇತಛತ್ರಾದಿ ಸಕಲ ಮರ್ಯಾದೆಯಿಂದ ಮೈಸೂರ ರಾಜಧಾನಿಯಲ್ಲಿ ಅಲ್ಲಿಯ ದೊರೆಗಳಿಂದ ಸನ್ಮಾನವನ್ನು ಹೊಂದಿದ್ದೂ, ೮ನೇ ಪಟ್ಟಾಧಿಕಾರಿಗಳಾದ ಶ್ರೀ ಶ್ರೀ ಮುರಘರಾಜೇಂದ್ರ ಸ್ವಾಮಿಗಳು ಮೈಸೂರಿಗೆ ಬಿಜಯಂಗೈದು ಶ್ರಿ ಮಠಸ್ಥ

ಪಂಡಿತರನ್ನು ಗೆದ್ದು ಲಿಂಗಸೂತ್ರನಿರ್ಣಯವನ್ನು ಕೊಟ್ಟಾಗ ಅಲ್ಲಿಯ ಮಹಾರಾಜರಿಂದ ರಾಜಮನ್ನಣೆಯನ್ನು ಹೊಂದಿ ಪೂಜೆಗೊಂಡದ್ದೂ, ೧೮ ನೇ ಪಟ್ಟಾಧಿಕಾರಿಗಳಾದ ಶ್ರೀ ಶ್ರೀ ಸಣ್ಣಬರಹದ ರಾಚೋಟಿಸ್ವಾಮಿಗಳನ್ನು ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರು ಅಮೌಲ್ಯ ಕಾಣಿಕೆ ಸಲ್ಲಿಸಿ ರಾಜಧಾನಿಗೆ ಮಹೋತ್ಸಾಹದಿಂದ ಬರಮಾಡಿಕೊಂಡು ಸಿಂಹಾಸನದಮೇಲೆ ಕೂಡ್ರಿಸಿ ಪೂಜಿಸಿದ್ದೂ ತಕ್ಕ ಆಧಾರಗಳಾಗಿವೆ.

ಇದರಂತೆ ಮೈಸೂರ ಈಗಿನ ದೊರೆಗಳಾದ ನಾಲ್ವಡಿ ಶ್ರೀ ಕೃಷ್ಣರಾಜೇಂದ್ರ ಪ್ರಭುಗಳು ತಾ. ೧೪—೯—೧೯೩೭ ನೇ ಇಸ್ವಿಯ ದಿವಸ ಚಿನ್ಮಲಾದ್ರಿಯ ಶ್ರೀಮಜ್ಜಗದ್ಗುರು ಬ್ರಹನ್ಮಠಕ್ಕೆ ಆಗಮಿಸಿ ಭಕ್ತಿಪೂರ್ವಕವಾಗಿ ಭೆಟ್ಟಿಯನ್ನು ಕೊಟ್ಟು ತಮ್ಮ ಭಕ್ತಿ, ವಿಶ್ವಾಸಗಳನ್ನು ಪ್ರದರ್ಶಿಸಿರುವರು. ಹಾಗು ತಾ. ೨೪—೨—೧೯೩೮ ನೇ ಇಸ್ವಿಯ ದಿವಸ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರಘರಾಜೇಂದ್ರ ಸ್ವಾಮಿಗಳ ನಾಮಾಂಕಿತದಲ್ಲಿ ಮೈಸೂರಲ್ಲಿ ನಿರ್ಮಿತವಾಗುವ ರೋಗ ನಿದಾನ ಶಾಸ್ತ್ರೀಯ ಪ್ರಯೋಗ ಪರೀಕ್ಷಾ ಶಾಲೆಯ ಅಸ್ತಿಭಾರ ಶಿಲೆಯನ್ನು ಪ್ರತಿಷ್ಠಿಸುವಾಗ ಮಹಾ|| ||ಸ್ವಾಮಿಗಳ ಆಗಮನಮಾಡಿಕೊಂಡು ಅರಮನೆಯ ಸಕಲ ಮರ್ಯಾದೆಯಿಂದ ಗೌರವಿಸಿ ತಮ್ಮ ನಿಸ್ಸೀಮ ಭಕ್ತಿ, ವಿಶ್ವಾಸಗಳನ್ನು ವ್ಯಕ್ತಮಾಡಿರುವರು. ಈ ಸಂಗತಿಗಳು ಬ್ರಹನ್ಮಠದ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡತಕ್ಕಂಥವುಗಳಾಗಿರುವವು. ಕಾರಣ ಈ ವಿಷಯವಾಗಿ ಇಲ್ಲಿ ಪ್ರಸ್ತಾಪಿಸುವೆವು.

## ಬ್ರಹನ್ಮಠಕ್ಕೆ ಶ್ರೀ ನಾಲ್ವಡಿ ಶ್ರೀ ಕೃಷ್ಣರಾಜೇಂದ್ರ ಮಹಾಪ್ರಭುಗಳವರ ಭಕ್ತಿಪೂರ್ವಕವಾದ ಭೆಟ್ಟಿ.

ಕರ್ನಾಟಕ ಸಾಮ್ರಾಜ್ಯಾಧಿಪತಿಗಳಾದ ಮೈಸೂರ ಶ್ರೀಮನ್ಮಹಾರಾಜರವರು ತಮ್ಮ ಪ್ರಧಾನಾಮಾತ್ಯರಾದ ಸರ್ ಮಿರ್ಜಾ ಎಮ್. ಇಸ್ಮಾಯಿಲ್ ಹಾಗು ದರಬಾರೀ ಮಹಾಜನರೊಂದಿಗೆ ತಾ. ೧೪-೯-೩೭ ಕ್ಕೆ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರಘರಾಜೇಂದ್ರ ಮಹಾಸ್ವಾಮಿಗಳವರ ಬ್ರಹನ್ಮಠಕ್ಕೆ ಭಕ್ತಿಪೂರ್ವಕವಾಗಿ ಭೆಟ್ಟಿಯನ್ನೀ

ಯಲು ಬರುವರೆಂಬ ವಾರ್ತೆಯು ಮೊದಲೇ ಪ್ರಕಟವಾದ್ದರಿಂದ ದೇಶ ದೇಶದ ಜನರು ಆನಂದಭರಿತರಾಗಿ ಪ್ರಭು ಹಾಗೂ ಮಹಾಸ್ವಾಮಿಗಳವರ ದರ್ಶನಾಕಾಂಕ್ಷಿಗಳಾಗಿ ರೈಲು, ಮೋಟರು, ಬಂಡಿಗಳ ಮಾರ್ಗದಿಂದ ಗುಂಪು ಗುಂಪಾಗಿ ಬಂದು ಬ್ರಹನ್ಮಠದ ಸುತ್ತಲು ದಟ್ಟಾಗಿ ತುಂಬಿಬಿಟ್ಟಿದ್ದರು. ಮಹಾರಾಜರವರ ಆಗಮನಾರ್ಥವಾಗಿ ಶ್ರೀ ಬ್ರಹನ್ಮಠವನ್ನು ತಳಿರು-ತೋರಣಗಳಿಂದ ರಮ್ಯವಾಗಿ ಅಲಂಕರಿಸಿದ್ದರು. ಮಹಾದ್ವಾರದ ಶಿಖರದಮೇಲೆಯೂ, ಕರ್ತೃಗದ್ದಿಗೆಯ ಶಿಖರದಮೇಲೆಯೂ ಸುವರ್ಣ ಕಲಶಗಳು ಇಡಲ್ಪಟ್ಟಿದ್ದವು. ದರ್ಬಾರ ಹಾಲಿನಲ್ಲಿ ಗದ್ದುಗೆಯಮೇಲೆ ಬಂಗಾರದ ರತ್ನಖಚಿತ ಸಿಂಹಾಸನವು ಛತ್ರ-ಚಾಮರ ಸಹಿತ ರಮ್ಯವಾಗಿ ಶೋಭಿಸುತ್ತಿತ್ತು. ಬಲಗಡೆಗೆ ಬೆಳ್ಳಿ-ಬಂಗಾರದ ಭವ್ಯವಾದ ಜೋಡಾನೆಯ ಅಂಬಾರಿಯು ಇಡಲ್ಪಟ್ಟಿತ್ತು. ಎಡಗಡೆಗೆ ಬಂಗಾರದ ಪಲ್ಲಕ್ಕಿಯು ರಾಜಗೊಂಡೆಗಳಿಂದ ಸಿಂಗರಿಸಿ ಇಡಲ್ಪಟ್ಟಿತ್ತು. ಶ್ರೀ ಜಯದೇವ ಹಾಲಿನಲ್ಲಿ ರಾಜಶಿವಿಯ ಮೇರೆಗೆ ಸಭೆಯು ಸಿದ್ಧತೆಯಾಗಿತ್ತು.

ತಾ. ೧೪—೯—೩೭ ನೇ ದಿವಸ ಮು. ೯—೧೫ ಘಂಟೆಗೆ ಸರಿಯಾಗಿ ಶ್ರೀಮನ್ಮಹಾರಾಜರವರು ತಮ್ಮ ಪರಿವಾರದೊಂದಿಗೂ, ದಿವಾನ ಸಾಹೇಬರೊಂದಿಗೂ ಶ್ರೀ ಬ್ರಹನ್ಮಠಕ್ಕೆ ದಯಮಾಡಿಸಿದರು. ಶ್ರೀಮನ್ಮಹಾರಾಜರ ಸ್ವಾರಿಯು ಲೈನದಾರಿಯಲ್ಲಿ ಕಟ್ಟಿದ್ದ ಭವ್ಯ ಮಂಟಪಕ್ಕೆ ಬಂದೊಡನೆ ಅಲ್ಲಿಯೇ ಸ್ವಾಗತಮಾಡಬೇಕೆಂದು ಗೊತ್ತುಪಡಿಸಿದ್ದರಿಂದ ಅಲ್ಲಿಗೆ ಬಂಗಾರದ ಪಾಲಿಕೆ, ಬೆಳ್ಳಿಯ ತೋರಣ, ಶ್ವೇತ ಛತ್ರ, ಅಪ್ತಾಗಿರಿ, ಸಿಂಗಾರಾದ ಜೋಡಾನೆಗಳು, ಕುದುರೆಗಳು, ಒಂದೇ ಉಡಿಗೆ-ತೊಡಿಗೆಯಲ್ಲಿದ್ದ ದರ್ಬಾರಿ ಜನರು, ಪ್ರತಿಷ್ಠಿತ ಮಹಾಜನರು ಇವರನ್ನು ಕೂಡಿಕೊಂಡು ಮಠದ ಎಜಂಟರು ಮಂಗಲವಾದ್ಯಗಳೊಂದಿಗೆ ಫಲ-ಪುಷ್ಪಾದಿಗಳನ್ನು ತಕ್ಕೊಂಡು ಎದುರುಗೊಳ್ಳಲಿಕ್ಕೆ ಹೋದರು. ಶ್ರೀಮನ್ಮಹಾರಾಜರು ೯| ಘಂಟೆಗೆ ಸರಿಯಾಗಿ ಮೋಟರಿನಲ್ಲಿ ಬರಲು ೨೧ ಕುಶಾಲ ಗುಂಡುಗಳು ಹಾರಿಸಲ್ಪಟ್ಟವು. ಅನಂತರ ಪೂಮಾಲೆ ಹಾಕಿ ಸ್ವಾಗತಗೈದು ಜಯಜಯಕಾರವನ್ನು ಮಾಡಿದರು. ಎರಡೂ ಆನೆಗಳು ಚಾಮರ ಬೀಸುತ್ತಲೂ, ನಮಸ್ಕಾರ ಮಾಡುತ್ತಲೂ ಸಾಗಿದ್ದವು. ಎರಡೂ ಬದಿಗೆ ಭಕ್ತಿ

ಪರವಶರಾಗಿ ಆನಂದದಿಂದ ನಿಂತಿದ್ದ ಜನರ ನಮಸ್ಕಾರಗಳನ್ನು ಸ್ವೀಕರಿಸುತ್ತ ಮಹಾರಾಜರು ಮುಂದಕ್ಕೆ ಬಂದರು. ಮಹಾದ್ವಾರದೊಳಗಿಂದ ಹೆಬ್ಬಾಗಿಲ ಸಮೀಪಕ್ಕೆ ಮಹಾರಾಜರ ಮೋಟರು ಬರಲು ಶ್ರೀ ಜಗದ್ಗುರುಗಳು ಬೇರೆ ಬೇರೆ ಪ್ರಾಂತಗಳಿಂದ ಬಂದ ಮೂರ್ತಿಗಳೊಡನೆ ಮಹಾರಾಜರನ್ನು ಸ್ವಾಗತಿಸಿ ಒಳಗೆ ಬರಮಾಡಿಕೊಂಡರು. ಮಹಾರಾಜರು ಜಗದ್ಗುರುಗಳ ಸಂಗಡ ಮಠದೊಳಗೆ ಪ್ರವೇಶಮಾಡಿ, **ಶ್ರೀ ಕರ್ತೃಗದ್ದಿಗೆಯ ದರ್ಶನಮಾಡಿಕೊಂಡರು.** ಮಂಗಳಾರತಿಯನ್ನು ಮಾಡಿಸಿದರು. ಆಗ ಮಹಾರಾಜರು ಈ ಗದ್ದಿಗೆಯು ಯಾರದೆಂದು ಪ್ರಶ್ನೆಮಾಡಲು, ಜಗದ್ಗುರುಗಳು "ಆನೇ ಪಟ್ಟಾಧಿಕಾರಿಗಳಾದ ಶ್ರೀ ಮುರಘರಾಜೇಂದ್ರ ಸ್ವಾಮಿಗಳದು" ಎಂದು ಹೇಳಿ ಅವರ ಅಗಾಧವಾದ ಅವರ ಚರಿತ್ರೆಯನ್ನು ಸಂಕ್ಷಿಪ್ತವಾಗಿ ವಿವರಿಸಿದರು. ಆನಂತರ ಮಹಾರಾಜರು ಶ್ರೀ ಜಗದ್ಗುರುಗಳೊಂದಿಗೆ ಮಹಡಿಯಮೇಲೆ ಶ್ರೀ ಜಯದೇವ ಮಹಾಲಿಗೆ ದಯಮಾಡಿಸಿದರು. ಇವರೊಡನೆ ದಿವಾನ ಸಾಹೇಬರೂ ದಯಮಾಡಿಸಿದರು. ಸಿದ್ಧಪಡಿಸಿದ ಉಚ್ಚಾಸನಗಳ ಸಮೀಪಕ್ಕೆ ಬರಲು, ಶ್ರೀಮನ್ಮಹಾರಾಜರು ಶ್ರೀ ಜಗದ್ಗುರು ಮಹಾಸ್ವಾಮಿಗಳನ್ನು ಮುಹೂರ್ತಗೊಳ್ಳುವದಕ್ಕಾಗಿ ಬಿನ್ನವಿಸಿಕೊಳ್ಳಲು, ಶ್ರೀ ಜಗದ್ಗುರುಗಳವರು ಮುಹೂರ್ತಗೊಳಿಸಿದರು. ಆಗ ಶ್ರೀಮನ್ಮಹಾರಾಜರವರು ಮಹಾಸ್ವಾಮಿಗಳಿಗೆ ಅರ್ಪಿಸಲು ಸಂಗಡ ತರಿಸಿದ್ದ ಅಮೌಲ್ಯವಾದ ರೇಶಿಮೆ ಜರತಾರೀ ಎರಡು ಮಡಿ, ಎರಡು ಜರೀ ರೇಶಿಮೆಯ ಕ್ಯಾವೀ ಬಣ್ಣದ ಶಲ್ಲೆ, ಜರೀ ಧೋತರ ಜೋಡು, ಜರೀ ಬುಟಿಯ ಜಾಂಬಳೀ ರೇಶಿಮೆಯ ಮುಕುಟಗಳು ಎರಡು, ಕಾಶ್ಮೀರಿ ಹಸರು ಜರೀ ಶಾಲು ಎರಡು, ಮೊಹರುಮಾಡಿದ ಕಾಣಿಕೆ ಹಣದ ಥೈಲಿ ಇವುಗಳನ್ನು ಫಲ-ಪುಷ್ಪಾದಿಗಳೊಂದಿಗೆ ಅರ್ಪಿಸಿ ಜಗದ್ಗುರು ಮಹಾಸ್ವಾಮಿಗಳ ಪಾದಕ್ಕೆ ನಮಸ್ಕಾರ ಮಾಡಿದರು. ಶ್ರೀ ಜಗದ್ಗುರುಗಳು ಮಹಾರಾಜರಿಗೆ ಮುಹೂರ್ತ ಮಾಡಲು ತಿಳಿಸಲು, ಮಹಾರಾಜರು ಉಚ್ಚಾಸನದ ಮೇಲೆ ಮುಹೂರ್ತಮಾಡಿದರು. ಆಗ ಮಹಾಸ್ವಾಮಿಗಳು ಬಂಗಾರದ ಜರೀ ಮಾಲೆಯನ್ನು ಹಾಕಿ, ಶ್ರೀಮನ್ಮಹಾರಾಜರವರಿಗೆ ಆಶೀರ್ವಾದಪೂರ್ವಕವಾಗಿ ಜರೀ ಪೇಟಾ, ಜರೀ ಶಲ್ಲೆ, ಜರೀ ರುಮಾಲ,

ಜರೀ ಮಖಮಲಿನ ಚೀಲದಲ್ಲಿ ಬಿಳೀ ರೇಶಿಮೆಯಮೇಲೆ ಮುದ್ರಿಸಿದ ಖಿಲ್ಲತ್ತು, ವಿಭೂತಿ ಗಟ್ಟಿ, ಗೌರೀಶಂಕರ, ಜಪಮಾಲೆ, ಕಂಠಮಾಲಾ, ಸ್ಫಟಿಕದ ಲಿಂಗ ಮೊದಲಾದವುಗಳನ್ನು ಅರ್ಪಿಸಲು, ಮಹಾರಾಜರು ಹಸನ್ಮುಖರಾಗಿ ಭಕ್ತಿ, ವಿಶ್ವಾಸಗಳಿಂದ ಸ್ವೀಕರಿಸಿ, ಭಸ್ಮವನ್ನು ಧರಿಸಿಕೊಂಡರು. ದರ್ಬಾರಿ ಪಕ್ಷಿಗಳು ಉಳಿದವುಗಳನ್ನೆಲ್ಲ ತೆಗೆದಿಟ್ಟುಕೊಂಡರು.

ಆಮೇಲೆ ಶ್ರೀ ಜಗದ್ಗುರುಗಳು— ತಾವು ವಿಲಾಯತಿಗೆ ಹೋಗಿ, ಆರೋಗ್ಯ ಲಾಭವನ್ನು ಸಂಪಾದಿಸಿದುದು ನಮಗೆ ಅತ್ಯಂತ ಆನಂದಕರವಾಗಿದೆ.

ಶ್ರೀ ಮಹಾರಾಜರು— “ ಅದೆಲ್ಲಕ್ಕೆ ತಮ್ಮಂಥ ಮಹಾಮಹಿಮರ ಕೃಪೆಯೇ ಕಾರಣವು ”. ಎಂದು ನುಡಿದು ವಿನಯಭಾವವನ್ನು ವ್ಯಕ್ತಪಡಿಸಿದರು.

ಶ್ರೀ ಜಗದ್ಗುರುಗಳು— ಅಮಾತ್ಯರಾದ ಸರ್ ಮಿರ್ಜಾ ಸಾಹೇಬರು ಸಂಸ್ಥಾನದೊಂದಿಗೆ ಒಳ್ಳೇ ಭಕ್ತಿ, ವಿಶ್ವಾಸಗಳಿಂದ ನಡಕೊಳ್ಳುತ್ತಿದ್ದಾರೆ. ನಾವು ಮಠದಲ್ಲಿದ್ದಾಗ ಮೂರು ಸಾರೆ ಅವರು ಇಲ್ಲಿಗೆ ಆಗಮಿಸಿದ್ದರು. ನಾವು ಸರ್ಕೀಟಿಗೆ ಹೋದಾಗ ಎರಡು ಸಾರೆ ಬಂದದ್ದು ಕೇಳಿ ನಮಗೆ ಬಹಳ ಸಂತೋಷವೆನಿಸಿತು. ಎಂದು ನುಡಿದರು. ಆಗ ಸರ್, ಮಿರ್ಜಾ ಸಾಹೇಬರು ನಗೆಮೊಗದವರಾಗಿ ಕೈಜೋಡಿಸಿಕೊಂಡು ನಿಂತಿದ್ದರು.

ತರುವಾಯ ಶ್ರೀ ಜಗದ್ಗುರುಗಳು ವೀರಶೈವ ಮತದ ಬಗ್ಗೆ ಪ್ರಸ್ತಾಪಿಸಿ ಈ ಮತವಲ್ಲಿ ಬಸವಣ್ಣನವರೇ ಮೊದಲಾದ ಶಿವಶರಣರ ಅವತಾರವಾದ ೮೦೦ ವ. ಗಳ ಪೂರ್ವದಲ್ಲಿ ಈ ಮತವು ಒಳ್ಳೇ ಊರ್ಜಿತಸ್ಥಿತಿಯಲ್ಲಿತ್ತು. ಶ್ರೀ ಬಸವಣ್ಣನವರ ವಚನಗಳು ವೇದಕ್ಕೆ ಸಮಾನವಾಗಿವೆ. ಅವರು ಹೇಳಿದ “ ಇಬ್ಬರು-ಮೂವರು ದೇವರೆಂದು ಉಬ್ಬುಬ್ಬಿ ಮಾತನಾಡಬೇಡ; ಒಬ್ಬನೇ ಕಾಣಿರೋ! ಇಬ್ಬರೆಂಬುದು ಹುಸಿನೋಡಾ ಕೂಡಲಸಂಗಮದೇವನಲ್ಲದಿಲ್ಲೆಂದಿತ್ತು ವೇದ ” ಎಂಬ ವಚನವು ವೇದದಲ್ಲಿಯ “ ಏಕಮೇವಾದ್ವಿತೀಯಂ ಬ್ರಹ್ಮ ” ಎಂಬ ವೇದವಾಕ್ಯದ ಅರ್ಥವನ್ನು ವ್ಯಕ್ತಪಡಿಸುತ್ತದೆ. ಬಸವಣ್ಣನವರ ಹಾಗೂ ಉಳಿದ ಶಿವಶರಣರ ವಚನ



ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು ಜಯ
ದೇವ ಮುರುಘರಾಜೇಂದ್ರ ಮಹಾಸ್ವಾಮಿಗಳು.



ಶ್ರೀ ಮನ್ಮೈಸೂರ ಮಹಾರಾಜರು.

PUBLISHED BY N. H. HOSUR MANAGER VIDYARANYA GRANTHMALA OFFICE MULGUND



ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ
ಮುರಘರಾಜೇಂದ್ರಮಹಾಸ್ವಾಮಿಗಳೂ,
ಶ್ರೀಮನ್ಮೈಸೂರ ಮಹಾರಾಜರೂ.

ಗಳು ವೇದಾಗಮನಗಳ ಸಾರವನ್ನು ಒಳಕೊಂಡಿವೆ. ಎಂದು ಉದ್ಗಾರ ಗಳನ್ನು ತೆಗೆದರು. ಹಾಗು ಮಹಾರಾಜರಿಗೆ ದಯಪಾಲಿಸಬೇಕೆಂದು ತೆಗೆದಿಟ್ಟ ೧. ಮಹಾಸನ್ನಿಧಿಯ ರಹದಾರಿ ಬುಕ್ಕು ೨. ಪಂಚಪೀಠಗಳ ಬಿನ್ನವತ್ತಳಿಕೆ ಬುಕ್ಕು ೩. ಶೂನ್ಯ ಸಂಪಾದನೆ ೪. ಪ್ರಭುದೇವರ ವಚನ ೫. ಬಸವೇಶ್ವರ ವಚನ ೬. ಹರಿಹರನ ರಗಳೆ ೭. ಬಸವರಾಜ ರಗಳೆ ೮. ಪ್ರಭುಲಿಂಗಲೀಲಾ ಸಂಗ್ರಹ ೯. ಅಕ್ಕಮಹಾದೇವಿಯ ವಚನ ೧೦. ಶಿವಾನುಭವ ಸೂತ್ರ. ಈ ಹತ್ತು ಪುಸ್ತಕಗಳನ್ನು ಇತ್ತು ಬಸವಣ್ಣನವರ ಒಂದೆರಡು ವಚನಗಳನ್ನು ಉದಹರಿಸಿದರು. ಆಗ ಮಹಾರಾಜರ ಆನಂದವು ಉಕ್ಕೇರಿ ಆನಂದ ಬಾಷ್ಪಗಳು ಉದುರುತ್ತಿದ್ದವು.

ಇಂಥದರಲ್ಲಿಯೇ ಮಹಾರಾಜರು **"ಜಗದ್ಗುರು ಮಹಾಸ್ವಾಮಿಗಳೇ, ತಾವು ಶಿಕ್ಷಣ ಪ್ರಸಾರಕ್ಕಾಗಿ ಹಾಗು ಇತರ ಮಹತ್ಕಾರ್ಯಗಳಿಗೆ ಶ್ರಮವಹಿಸಿ ಮಾಡಿರುವ ಕೆಲಸಗಳು ನಮ್ಮ ಮೈಸೂರ ಸಂಸ್ಥಾನಕ್ಕೆ ಕೀರ್ತಿ ಗೌರವಗಳನ್ನು ತರತಕ್ಕವುಗಳಾಗಿವೆ."** ಎಂದು ಪ್ರಶಂಸೋದ್ಗಾರಗಳನ್ನು ತೆಗೆದರು. ಅನಂತರ ಶ್ರೀ ಜಗದ್ಗುರುಗಳೊಂದಿಗೆ ಮಠದ ಕೆಲವು ಭಾಗಗಳನ್ನು ಅವಲೋಕಿಸುತ್ತ ಜಯದೇವ ಮಹಾಲಿನ ಹ್ವರಾಂಡಕ್ಕೆ ಬಂದರು. ಅಲ್ಲಿ ಅಡಿಕೆ, ತೆಂಗುಗಳ ತೋಟದ ಕಡೆಗೆ ಈ ಉತ್ಸವಕ್ಕಾಗಿ ಬಂದ ಯಾವತ್ತೂ ಜಾತಿಯ ಜನರ ಅನ್ನಸಂತರ್ಪಣೆ ನಡೆದದ್ದು ದೃಗೋಚರವಾಗಲು, ಮಹಾರಾಜರಿಗೆ ಅತ್ಯಾನಂದವೆನಿಸಿತು. ಅನಂತರ ಮತ್ತೆ ಕೆಲವು ಸಂಭಾಷಣೆಮಾಡುತ್ತಾ ಜಗದ್ಗುರುಗಳೊಂದಿಗೆ ಮಹಾರಾಜರು ಸಾವಕಾಶವಾಗಿ ಹೊರಗೆ ದಯಮಾಡಿಸಿದರು. ಜನಸಮೂಹವು ನಭೋಮಂಡಲವನ್ನು ಭೇದಿಸುವಂತೆ "ಶ್ರೀ ಕೃಷ್ಣರಾಜೇಂದ್ರ ಮಹಾರಾಜಕೀ ಜೈ!!" "ಜಯ ನಮಃ ಪಾರ್ವತೀ ಹರಹರ ಮಹಾದೇವ" ಎಂದು ಜಯಘೋಷ ಮಾಡುತ್ತಿರಲು ಶ್ರೀ ಮಹಾರಾಜರು ತಮ್ಮ ಮೋಟರಿನಿಂದ ೯—೪೫ ಘಂಟೆಗೆ ತಿರುಗಿ ದಯಮಾಡಿಸಿದರು.

ಈ ಸಂದರ್ಭದಲ್ಲಿಯ ಶ್ರೀಮನ್ಮಹಾರಾಜರ ಆಗಮನದ ಗೌರವಾರ್ಥವಾಗಿ ಶ್ರೀ ಜಗದ್ಗುರುಗಳು ಹತ್ತು ಸಾವಿರ ರೂಪಾಯಿಗಳನ್ನು ಸಾರ್ವಜನಿಕ ಕಾರ್ಯಗಳು ಜರುಗಲು ಧರ್ಮಾರ್ಥವಾಗಿ ಕೊಟ್ಟರು. ಮೈಸೂರ

ಸರಕಾರದವರು ಈ ಹಣವನ್ನು ಸ್ವೀಕರಿಸಿ ಇವುಗಳಲ್ಲಿ ೫ ಸಾವಿರ ರೂಪಾಯಿಗಳನ್ನು ಚಿತ್ರದುರ್ಗದ ಆಸ್ಪತ್ರೆಗೂ, ೫ ಸಾವಿರ ರೂಪಾಯಿಗಳನ್ನು ವಾಣೀ ವಿಲಾಸ ಆಸ್ಪತ್ರೆಗೂ ವಿನಿಯೋಗಿಸಿರುವರು. ಇವೆಲ್ಲವುಗಳು ಸನ್ನಿಧಿಯ ಪರಮೌದಾರ್ಯಕ್ಕೂ, ಸಾರ್ವಜನಿಕವಾದ ಉಪಕಾರಕ್ಕೂ ನಿದರ್ಶನವಾಗಿವೆ.

ಮೇಲೆ ಹೇಳಿದಂತೆ ಶ್ರೀಮನ್ಮಹಾರಾಜರಿಗೆ ಶ್ರೀ ಜಗದ್ಗುರು ಮಹಾಸ್ವಾಮಿಗಳ ದರ್ಶನವಾದ ಯೋಗಾಯೋಗದಿಂದ ಮಹಾಸ್ವಾಮಿಗಳ ಮೇಲಿನ ಮಹಾರಾಜರ ಭಕ್ತಿ-ವಿಶ್ವಾಸಗಳು ದ್ವಿಗುಣಿತವಾದವು. ಇವರ ತಪಸ್ಸಾಮರ್ಥ್ಯವು ಮಹಾರಾಜರನ್ನು ಬೆರಗುಗೊಳಿಸಿತು. ಕಾರಣ ಶ್ರೀಮನ್ಮಹಾರಾಜರು ಮೈಸೂರ ನಗರದಲ್ಲಿ ತಮ್ಮ ಅಮೃತ ಹಸ್ತದಿಂದ ಶಂಕುಸ್ಥಾಪನೆಮಾಡಿ ನಿರ್ಮಾಣಮಾಡಬೇಕೆಂದಿದ್ದ ರೋಗನಿದಾನ ಶಾಸ್ತ್ರೀಯ ಪ್ರಯೋಗ ಪರೀಕ್ಷಾ ಶಾಲೆಯನ್ನು ಶ್ರೀ ಜಗದ್ಗುರು ಮಹಾಸ್ವಾಮಿಗಳ ನಾಮಾಂಕಿತದಲ್ಲಿ ಏರ್ಪಾಡು ಮಾಡಬೇಕೆಂದು ಯೋಚಿಸಿದರು. ಹಾಗು ತಾ. ೨೪—೨—೩೮ ನೇ ದಿವಸ ನೆರವೇರುವ ಇದರ ಶಂಕುಸ್ಥಾಪನೆಯ ಮಹೋತ್ಸವಕ್ಕೆ ಶ್ರೀ ಜಗದ್ಗುರು ಮಹಾಸ್ವಾಮಿಗಳನ್ನು ಆಹ್ವಾನಿಸಿದರು. ಕಾರಣ ಶ್ರೀ ಜಗದ್ಗುರುಗಳು ಶ್ರೀಮನ್ಮಹಾರಾಜರ ಈ ಬಿನ್ನಹವನ್ನು ಮನ್ನಿಸಿ ಮೈಸೂರ ರಾಜಧಾನಿಗೆ ತಮ್ಮ ಸಕಲಪರಿವಾರದೊಂದಿಗೆ ಬಿಜಯಂಗೈಯಬೇಕಾಯಿತು.

ತಾ. ೨೪—೨—೩೮ ನೇ ಈಶ್ವರನಾಮ ಸಂ|| ಮಾಘ ಬ|| ದಶಮಿ ಗುರುವಾರ ಸಾಯಂಕಾಲದ ೪|| ಘಂಟೆಯ ಶುಭಮುಹೂರ್ತದಲ್ಲಿ ಈ ರೋಗಲಕ್ಷಣ ಶೋಧನಾಲಯದ ಶಂಕುಸ್ಥಾಪನೆಯ ಕಾರ್ಯವು ಜರುಗುವದು ನಿಶ್ಚಿತವಾಗಿತ್ತು. ಆದರೂ ಮೈಸೂರ ಮಹಾಜನರು ಜಗದ್ಗುರುಗಳನ್ನು ಸಕಲ ಆಜಬಾಜು ಸಮೇತ ರಾಜಮರ್ಯಾದೆಯೊಂದಿಗೆ ವಿಜೃಂ-ಭಣೆಯಿಂದ ರಾಜಧಾನಿಯಲ್ಲಿ ಬಿಜಯಂಗೈಸಿಕೊಳ್ಳಬೇಕೆಂದು ಏರ್ಪಾಟು ಮಾಡಿ ಅದರಂತೆ ಜಗದ್ಗುರುಗಳಿಗೆ ಎರಡು ದಿವಸ ಮೊದಲೇ ಆಗಮಿಸಲು ಬಿನ್ನವಿಸಿಕೊಂಡಿದ್ದರು. ಕಾರಣ ಜಗದ್ಗುರುಗಳು ರಾಜಧಾನಿಯ ಮಹಾಜನಗಳ ಪ್ರಾರ್ಥನೆಯಮೇರೆಗೆ ತಾ. ೨೨—೨—೩೮ ನೇ ಇಶ್ವಿ ರಾತ್ರಿಯೇ

ಮೋಟರಿನಿಂದ ಆಗಮಿಸಿ, ಶ್ರೀರಂಗಪಟ್ಟಣದ ಉಕ್ಕಡದ ಬಳಿಯಲ್ಲಿರುವ ಶ್ರೀ ವೀರಣ್ಣನವರ ತೋಟದ ಮನೆಯಲ್ಲಿ ಬಿಡಾರಮಾಡಿದ್ದರು. ಇವರ ಭಕ್ತರ ಹಾಗೂ ಪರಿವಾರದ ೨ ಸ್ಪೆಶಲ್ ಟ್ರೇನುಗಳು ೨೩—೨—೩೮ ಕ್ಕೆ ರಾಜಧಾನಿಗೆ ಬಂದಿದ್ದವು.

ತಾ. ೨೩—೨—೩೮ ನೇ ಪ್ರಾತಃಕಾಲಕ್ಕೆ ಸಕಲ ರಾಜಮರ್ಯಾದೆಯಿಂದಲೂ, ಬಿರುದುಬಾವಲಿಗಳಿಂದಲೂ ಉತ್ಸಾಹಪೂರ್ವಕವಾಗಿ ರಾಜಧಾನೀ ಪ್ರವೇಶದ ಸಮಾರಂಭಕ್ಕೆ ಪ್ರಾರಂಭವಾಯಿತು. ಮೊದಲು ಇವರನ್ನು ಪೌರಸಭಾಧ್ಯಕ್ಷರಾದ ಶ್ರೀ ಎಮ್. ಎ. ಶ್ರೀನಿವಾಸನ್, ಅರಮನೆಯ ಇಲಾಖೆಯ ಶ್ರೀ ಎಮ್. ರಾಮರಾವ, ದರ್ಬಾರು ಬಕ್ಷಿ ಶ್ರೀ ಎಚ್. ಎಲ್. ದೇವರಾಜ ಅರಸು, ಜಿಲ್ಹಾಧಿಕಾರಿಗಳು, ಆಪ್ತ ಕಾರ್ಯದರ್ಶಿಗಳು, ಅಸಿ|| ಸುಪರಿಂಟೆಂಡೆಂಟ ಶ್ರೀ ಚಾಂಡೀ, ಎಕ್ಸಾಯಿಜ ಕಮೀಶನರರು, ಅಮಲ್ದಾರರು, ಟ್ರೆಝರಿ ಅಸಿಸ್ಟೆಂಟರು, ಶ್ರೀ ಜಿ. ರುದ್ರಪ್ಪನವರು ಪೌರಸಭಾಸದಸ್ಯರು, ಶ್ರೀ ಬಿ. ಎಸ್. ಪುಟ್ಟಸ್ವಾಮಿ, ಶ್ರೀ ಪಿ. ಎನ್. ಸಂಗಪ್ಪ, ಶ್ರೀ ಟ್ಟಿ ಎಸ್. ಸಿದ್ದಪ್ಪ ಮುಂತಾದ ಸ್ವಾಗತ ಸಮಿತಿಯವರು ಮಹಾಸ್ವಾಮಿಗಳನ್ನು ಸ್ವಾಗತಿಸಿ ಎದುರುಗೊಂಡರು.

ಬೀದಿ ಬೀದಿಗಳೆಲ್ಲ ತಳಿರು-ತೋರಣಗಳಿಂದಲೂ, ಕಮಾನುಗಳಿಂದಲೂ ಅಲಂಕೃತವಾಗಿದ್ದವು. ಅಸಂಖ್ಯಾತ ಜನರು ದರ್ಶನೋತ್ಸುಕರಾಗಿ ಮಿಲಿತರಾಗಿದ್ದರು. ಅರಮನೆಯ ಸಕಲ ಮರ್ಯಾದೆಗಳೂ ಬಂದಿದ್ದವು. ಮಹಾಸ್ವಾಮಿಗಳು ಪಲ್ಲಕ್ಕಿಯಲ್ಲಿ ಮಂಡಿಸಿದ್ದರು. ಮೆರವಣಿಗೆಯು ದೊಡ್ಡ ಗಡಿಯಾರದ ಸಮೀಪಕ್ಕೆ ಬರುತ್ತಲೇ ಅರಮನೆಯ ತೋಪುಖಾನೆಯಿಂದ ೧೧ ತೋಪುಗಳು ಹಾರಿದವು. ಸ್ವಾಗತ ಸಮಿತಿಯವರೂ, ಅಂಜುಮನ್ ಇಸ್ಲಾಮ ಸಂಘದವರೂ, ಜೈನಮಂಡಲಿಯವರೂ, ವರ್ತಕ ಸಂಘದವರೂ, ಆಂಧ್ರ ಕ್ಷತ್ರಿಯ ಸಮಾಜದವರೂ, ಬ್ರಹ್ಮಪ್ಪ-ತವನಪ್ಪನವರೂ ಮಹಾಸ್ವಾಮಿಗಳಿಗೆ ಫಲ-ಪುಷ್ಪಹಾರ-ಕಾಣಿಕೆಗಳನ್ನು ಸಲ್ಲಿಸಿದರು.

ಮೆರವಣಿಗೆಯು ವೀರನಗೆರೆ, ದೊಡ್ಡಪೇಟೆ, ಗಾಂಧೀ ಚೌಕ, ಮೈಸೂರ ಬ್ಯಾಂಕ ರಸ್ತೆ, ವಾಣೀವಿಲಾಸ ಮಾರ್ಕೇಟ ರಸ್ತೆ, ಅಂಗಡೀಬೀದಿ, ಆನಂದವಾಡೀ ರಸ್ತೆ, ಕಾಂತರಾಜ ರೋಡು, ನಾರಾಯಣಶಾಸ್ತ್ರೀ ರಸ್ತೆ,

ಜ್ಯುಬಲೀ ರಸ್ತೆ, ದಿವಾಣ ರೋಡುಗಳಲ್ಲಿ ಹಾಯ್ದು ಮಧ್ಯಾಹ್ನ ೧೨॥ ಘಂ. ಶೇಷಾದ್ರಿ ಹೌಸಿಗೆ ಬಂದು ತಲ್ಪಿತು. ಇಲ್ಲಿಯೇ ಮಹಾಸ್ವಾಮಿಗಳ ಬಿಡಾರದ ವ್ಯವಸ್ಥೆ ಮಾಡಿದ್ದರಿಂದ ರಾಜಧಾನೀ ಪ್ರವೇಶ ಸಮಾರಂಭವು ಇಲ್ಲಿಗೆ ಸಮಾಪ್ತವಾಯಿತು. ಸನ್ನಿಧಿಯ ಅಪ್ಪಣೆಪಡೆದು ಎಲ್ಲರೂ ಮುಂದಿನ ಕೆಲಸಗಳಿಗೆ ತೆರಳಿದರು. ಜಗದ್ಗುರುಗಳ ಪವಿತ್ರ ದರ್ಶನದಿಂದ ಇಂದು ರಾಜಧಾನಿಯು ಆನಂದಸಾಗರದಲ್ಲಿ ಮುಳುಗಿತು.

ಮರುದಿವಸ ಸಾಯಂಕಾಲದ ಸುರಮ್ಯ ಸಮಯದ ಶುಭಮುಹೂರ್ತದಲ್ಲಿ ಶ್ರೀ ಜಗದ್ಗುರುಗಳು ಮಹಾಸ್ವಾಮಿಗಳ ನಾಮಾಂಕಿತದಿಂದ ನಿರ್ಮಾಣವಾಗುವ ರೋಗನಿದಾನ ಶಾಸ್ತ್ರೀಯ ಪ್ರಯೋಗ ಪರೀಕ್ಷಾ ಭುವನದ ಅಸ್ತಿಭಾರ ಶಿಲೆಯ ಸ್ಥಾಪನೆಯು ಶ್ರೀಮನ್ಮಹಾರಾಜರ ಅಮೃತ ಹಸ್ತದಿಂದ ಜರಗುವ ಸಮಾರಂಭಕ್ಕೆ ಪ್ರಾರಂಭವಾಯಿತು. ಶ್ರೀಮನ್ಮಹಾರಾಜರೂ, ಶ್ರೀ ಜಗದ್ಗುರು ಮಹಾಸ್ವಾಮಿಗಳೂ ಘನವಾದ ಮೆರವಣಿಗೆಯಿಂದ ಸಭೆಗೆ ಆಗಮಿಸಿದರು. ಡಾ॥ ರಾಬಿನ್‌ಸನ್, ಮತ್ತು ಇತರ ಅಧಿಕಾರಿಗಳು ಇವರನ್ನು ಆನಂದದಿಂದ ಸ್ವಾಗತಿಸಿ, ಈ ಸಮಾರಂಭಕ್ಕಾಗಿ ಏರ್ಪಡಿಸಿದ್ದ ಭವ್ಯವಾದ ಮಂಟಪದ ವೇದಿಕೆಯನ್ನು ಅಲಂಕರಿಸಲು ಬಿನ್ನವಿಸಿದರು. ನೆರದಿದ್ದ ಅಧಿಕಾರಿಗಳು ಪ್ರತಿಷ್ಠಿತ ಗೃಹಸ್ಥರು ರಾಜಭಕ್ತಿ ಪ್ರಣಾಮಗಳನ್ನು ಮಾಡಿದರು. ಶ್ರೀಮನ್ಮಹಾರಾಜರು ಕೈಜೋಡಿಸಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು.

ಮಂಗಲಕರವಾದ ಪ್ರಾರ್ಥನೆಯಾದಮೇಲೆ ಶ್ರೀಮನ್ಮಹಾರಾಜರಿಗೆ ಬಿನ್ನವತ್ತಳಿಕೆಯನ್ನು ಸಮರ್ಪಿಸಿದರು. ಆ ಮೇಲೆ ಶ್ರೀಮನ್ಮಹಾರಾಜರು ಅಪ್ಪಣೆಕೊಡಿಸಿದ ಭಾಷಣವು ಕೆಳಗೆ ಕೊಟ್ಟಂತಿರುವದು.

## ಈ ಸಮಯದಲ್ಲಿ ಶ್ರೀಮನ್ಮಹಾರಾಜರು ಅಪ್ಪಣೆಕೊಡಿಸಿದ ಭಾಷಣ.

ಡಾಕ್ಟರ ರಾಬಿನ್‌ಸನ್‌ರವರೇ, ಮಹಿಳೆಯರೇ ಮತ್ತು ಮಹಾಶಯರೇ,

ನಮ್ಮೆಲ್ಲರ ಪ್ರೀತಿಗೂ ಪಾತ್ರವಾದ ನಮ್ಮ ಮೈಸೂರು ಸಂಸ್ಥಾನದ ಅಭ್ಯುದಯ ಸಾಧನೆಗಾಗಿ, ನಾವು ಅನೇಕ ಮುಖವಾದ ಅಭಿಲಾಷೆಗಳಿಂದ

ಕೂಡಿ ವಿಧವಿಧವಾದ ಕಾರ್ಯಕ್ರಮಗಳನ್ನು ಗಮನದಲ್ಲಿಟ್ಟುಕೊಂಡು ಪ್ರವರ್ತಿಸುತ್ತಿರುವುದು ನಿಮ್ಮೆಲ್ಲರಿಗೂ ವಿದಿತವಾಗಿರುವ ಅಂಶವಾಗಿದೆ. ನಮ್ಮ ಸಂಸ್ಥಾನವು, ಭರತಖಂಡದ ಮತ್ತಾವ ಭಾಗಕ್ಕೂ ಕನಿಷ್ಠವೆನಿಸ ದಷ್ಟುಮಟ್ಟಿನ ಆರೋಗ್ಯಕರವಾದ ಪ್ರದೇಶವಾಗಿ ಪರಿಣಮಿಸಲು ಸಾಧಕ ವಾದ ವ್ಯವಸ್ಥೆಯನ್ನೇರ್ಪಡಿಸಿ ಆಚರಣೆಗೆ ತರುವುದೂ ಅವುಗಳಲ್ಲೊಂದು ಕಾರ್ಯಕ್ರಮ. ತತ್ಸಾಧನೆಗಾಗಿ ನೆರವೇರಬೇಕಾದ ಅನೇಕ ಕಾರ್ಯ ಕಲಾಪಗಳಲ್ಲಿ, ವೈದ್ಯವಿದ್ಯಾ ಪಾರಂಗತರಾದ ಅಧ್ಯಾಪಕ ವರ್ಗದವರಿಂದ ಕೂಡಿ ಸಮಸ್ತ ಸಾಧನಗಳಿಂದಲೂ, ಸುಸಜ್ಜಿತವಾದ ವೈದ್ಯ ಮಹಾಪಾಠ ಶಾಲೆಯ ಸುವ್ಯವಸ್ಥೆಯೂ ಅಂಗಭೂತವೆನಿಸಿ ಅತ್ಯಾವಶ್ಯಕವಾಗಿರುತ್ತದೆ. ಈ ವೈದ್ಯ ಮಹಾಪಾಠಶಾಲೆಯ ಅತ್ಯಂತ ಮುಖ್ಯವಾದ ಶಾಖೆಗಳಲ್ಲೊಂದೆ ನಿಸಿ ಇಲ್ಲಿ ನಿರ್ಮಿತವಾಗುವುದಾಗಿರುವ ರೋಗನಿದಾನ ಶಾಸ್ತ್ರೀಯ ಪ್ರಯೋಗ ಪರೀಕ್ಷಾ ಶಾಲೆಯ ಅಸ್ತಿಭಾರ ಶಿಲೆಯನ್ನು ಪ್ರತಿಷ್ಠಿಸುವುದ ಕ್ಕಾಗಿ, ನಾವು ಈ ದಿನ ಇಲ್ಲಿಗೆ ಆಗಮಿಸಿರುವೆವು.

ಈ ಪಾಶ್ಚಾತ್ಯ ರೋಗನಿದಾನ ಶಾಸ್ತ್ರವು ತೀರ ಆಧುನಿಕವಾದುದಾ ಗಿಯೂ ಮತ್ತು ಅತ್ಯದ್ಭುತ ರೀತಿಯಲ್ಲಿ ವೃದ್ಧಿಹೊಂದುವುದಾಗಿಯೂ ಇರು ವದಲ್ಲದೆ, ಚಿಕಿತ್ಸಾ ಕಲೆಯ ಉಪಯುಕ್ತ ಸಾಧನವಾಗಿಯೂ ಇದೆ ಎಂಬ ಅಂಶವನ್ನು ನಿಮ್ಮ ಸ್ಮೃತಿಪಥಕ್ಕೆ ತರಲಿಚ್ಛಿಸುವೆವು. ರೋಗನಿದಾನ ಶಾಸ್ತ್ರೀಯ ಸಂಶೋಧನಗಳಿಂದ ಲಭಿಸಿ ವೃದ್ಧಿಹೊಂದಿರುವ ನಾನಾಕಾರ್ಯ ಸಿದ್ಧಿಗಳೂ ಅತಿಮಾನುಷ ಕ್ರಿಯೆಗಳೆಂದೇ ಈಗಿನವರಿಗೆ ತೋರುವಮಟ್ಟಿಗೆ ಅತ್ಯದ್ಭುತಗಳಾಗಿವೆ. ಭೌತಿಕಶಾಸ್ತ್ರವೂ, ಜೀವಶಾಸ್ತ್ರವೂ, ರಸಾಯನ ಶಾಸ್ತ್ರವೂ, ಮತ್ತು ಔಷಧ ತತ್ವಶಾಸ್ತ್ರವೂ ವಿಸ್ಮಯ ಜನಕವಾದ ರೀತಿ ಯಲ್ಲಿ ಅಭಿವೃದ್ಧಿಹೊಂದಿವೆ. ಪ್ರಾಚೀನ ಕಾಲದಲ್ಲಿ ಸ್ವಪ್ನದಲ್ಲಿಯೂ ಸಾಧ್ಯವಿಲ್ಲದಿದ್ದಷ್ಟು ಅದ್ಭುತವಾದ ಚಿಕಿತ್ಸಾ ಕಾರ್ಯಗಳು, ವ್ರಣಗಳು ವಿಷಮಿಸದಂತೆ ಮಾಡುವ ವಿಷಕ್ರಿಮಿನಾಶಕಗಳಾದ ಔಷಧ ಪ್ರಯೋಗಗಳ ದೆಸೆಯಿಂದಲೂ ಮತ್ತು ಶಸ್ತ್ರಚಿಕಿತ್ಸೆಯು ನಡೆಯುವಾಗ ಯಾತನಾನುಭವ ವನ್ನು ತಪ್ಪಿಸುವ ಸಾಧನಗಳ ದೆಸೆಯಿಂದಲೂ ಆಧುನಿಕ ಕಾಲದಲ್ಲಿ ಅತಿ ಸುಲಭವಾಗಿ ಪರಿಣಮಿಸಿದೆ. ಆಧುನಿಕ ರೀತಿಯ ನೈರ್ಮಲ್ಯ ರಕ್ಷಣ

ವಿಧಾನಗಳ ಪ್ರಭಾವದಿಂದ ಅನೇಕಾನೇಕ ರೋಗಗಳ ನಿವಾರಣವು ಸಾಧ್ಯವಾಗಿದೆ. ಆಧುನಿಕ ರೋಗನಿದಾನ ಶಾಸ್ತ್ರದ ಸಾಧನೆಗಳು ಪ್ರಾಯಶಃ ಇವೆಲ್ಲಕಿಂತಲೂ ಅದ್ಭುತವಾದ ರೀತಿಯಲ್ಲಿ ಅಭಿವೃದ್ಧಿ ಹೊಂದಿವೆಯೆಂದು ಹೇಳಬಹುದು.

ಪಾಶ್ಚಾತ್ಯ ರೋಗನಿದಾನ ಶಾಸ್ತ್ರವು, ಮನುಷ್ಯದೇಹದ ನಾನಾಭಾಗಗಳು ಕೆಲಸಮಾಡುವ ರೀತಿಗಳನ್ನೂ, ಅವು ಕ್ರಮತಪ್ಪಿದಾಗ್ಗೆ ನಮ್ಮಿಂದ ರೋಗವೆಂಬ ನಾಮುವನ್ನು ಪಡೆಯುವ ವಿಪರೀತ ಸ್ಥಿತಿಯನ್ನು ನಿವಾರಿಸುವ ಮತ್ತು ಪರಿಹರಿಸುವ ವಿಧಾನಗಳನ್ನೂ, ವಿಚಾರಮಾಡುವ ನಾನಾ ಶಾಖೆಗಳಿಂದ ಕೂಡಿದೆ. ಕಳೆದ ಅರವತ್ತು ಅಥವಾ ಎಪ್ಪತ್ತು ವರ್ಷಗಳ ಅವಧಿಯಲ್ಲಿ ಈ ಶಾಸ್ತ್ರವು ಮೇಲಿಂದಮೇಲೆ ವೃದ್ಧಿಹೊಂದಿ, ಅದ್ಭುತವಾದ ನೂತನ ವಿಚಾರಗಳು ಏಕಪ್ರಕಾರವಾಗಿ ಗೋಚರಿಸುತ್ತ ಬಂದಿವೆ. ರೋಗನಿದಾನ ಶಾಸ್ತ್ರದ ಸಹಾಯದಿಂದ ವೈಜ್ಞಾನಿಕ ಸಂಶೋಧಕರು ಶ್ವಾಸನಾಳ ಸಂಬಂಧವಾದ “ ಡಿಫ್ತೀರಿಯಾ ” ರೋಗ, ಧನುರ್ವಾಯು, ಸರ್ಪದಂಶ ಇವುಗಳ ವಿಷಹಾರಕ ವಸ್ತುಗಳನ್ನು ರಚಿಸಿದ್ದಾರೆ. ಅಲ್ಲದೆ ಸಿಡುಬು, ವಿಷೂಚಿಕಾ ವ್ಯಾಧಿ, “ ಪ್ಲೇಗ ” ರೋಗ, ವಿಷಮಶೀತಜ್ವರ, ಉನ್ಮತ್ತ ಪ್ರಾಣಿದಂಶ ವ್ಯಾಧಿ ಮುಂತಾದವುಗಳೇ ಸಂಭವಿಸದಂತೆ ನಿವಾರಿಸುವದಕ್ಕಾಗಿ “ ಇನಾಕ್ಯುಲೇಶನ್ ” ಎಂಬ ಸೂಚೀಮುಖ ಚಿಕಿತ್ಸಾವಿಧಾನವನ್ನು ಕಲ್ಪಿಸಿದ್ದಾರೆ. ನವೀನ ಸಂಶೋಧನಗಳ ಪರಿಣಾಮುವಾಗಿ ಲಭಿಸಿರುವ ಆಶ್ಚರ್ಯಕರವಾದ ಅಸಂಖ್ಯಾತ ಸತ್ಫಲಗಳಲ್ಲಿ ಈಗ ಉದಾಹರಣೆಗಾಗಿ ಸೂಚಿತವಾದವುಗಳು ಕೇವಲ ಕೆಲವುಮಾತ್ರವೇ. ಆದಕಾರಣ, ಈಗ ಲಭಿಸಿರುವ ಆ ಅಸಂಖ್ಯಾತ ಸತ್ಫಲಗಳನ್ನೂ ಪರಿಗಣಿಸಿದರೆ, ಅಪರಿಹಾರ್ಯವೆನಿಸುವ ರೋಗವೇ ಇಲ್ಲದಂತಾಗುವ ಕಾಲವೂ ಬರುವದೆಂಬ ಪ್ರತ್ಯಾಶೆಯನ್ನಿಟ್ಟುಕೊಂಡರೂ ಯುಕ್ತವೆನಿಸುವಷ್ಟುಮಟ್ಟಿಗೆ ಅವು ಅದ್ಭುತವಾಗಿವೆ.

ಪ್ರಾಚೀನ ಮಠಗಳಲ್ಲೊಂದರ ಪೀಠಾಧಿಪತಿಗಳಾದ ಶ್ರೀ ಜಯದೇವ ಮುರಘರಾಜೇಂದ್ರ ಸ್ವಾಮಿಗಳವರು ಮಾನವ ವರ್ಗದ ಕ್ಲೇಶಹಾರಕವಾದ ಆಧುನಿಕ ಸಾಧನವಾಗಿ ದಿನದಿನವೂ ವೃದ್ಧಿಹೊಂದುತ್ತಿರುವ ಈ ರೋಗನಿದಾನ ಶಾಸ್ತ್ರದ ಪ್ರಯೋಗ ಪರೀಕ್ಷಾ ಶಾಲೆಯ ನಿರ್ಮಾಣಕ್ಕಾಗಿ ಧನ

ಸಹಾಯ ಮಾಡಿರುವದು ಯುಕ್ತವೇ ಆಗಿದೆ. ಶ್ರೀ ಮುರಘರಾಜೇಂದ್ರ ಮಠವು ಸರ್ವ ಭಾವಗಳಿಂದಲೂ ಗೌರವಕ್ಕೆ ಪಾತ್ರವಾಗಿದೆ. ಶ್ರೀ ಮಠದಿಂದ ಧರ್ಮಾರ್ಥವಾಗಿ ಸ್ಥಾಪಿತವಾಗಿರುವ ಸಂಸ್ಥೆಗಳು ಅನೇಕ ವರ್ಷಗಳಿಂದಲೂ ಸುಪ್ರಸಿದ್ಧವಾಗಿರುವವಲ್ಲದೆ, ನಮ್ಮ ಸಂಸ್ಥಾನದಲ್ಲಿ ನಾಲ್ಕು ಡಿಸ್ಟ್ರಿಕ್ಟುಗಳಿಗೆ ಕಡಿಮೆಯಿಲ್ಲದ ಸುವಿಸ್ತಾರ ವಾದ ಪ್ರದೇಶದಲ್ಲಿರುವ ನಾನಾ ಸ್ಥಳಗಳಲ್ಲಿಯೂ ವ್ಯವಸ್ಥಿತವಾಗಿವೆ. ಈ ಧರ್ಮ ಕಾರ್ಯಗಳಿಗಾಗಿ ಶ್ರೀ ಮಠದಿಂದ ವಿನಿಯೋಗವಾಗಿ ರುವ ಧನವು ಹದಿನೆಂಟು ಲಕ್ಷ ರೂಪಾಯಿಗಳೆಂದು ನಮ್ಮ ಅವಗಾ ಹನೆಗೆ ಬಂದಿದೆ. ಧರ್ಮ ಕಾರ್ಯಗಳಿಗಾಗಿ ವಿನಿಯೋಗವಾಗಿರುವ ಆ ಧನದಲ್ಲಿ ಬಹುಭಾಗದ ಮೊತ್ತಗಳು, ಮುಖ್ಯವಾಗಿ ವೀರಶೈವ ಪಂಗಡದ ವಿದ್ಯಾರ್ಥಿಗಳಿಗೆ ಭೋಜನ ವಸತಿಗಳನ್ನೊದಗಿಸುವ ವಿದ್ಯಾರ್ಥಿನಿಲಯಗ ಳನ್ನು ನಿರ್ಮಿಸುವದೇ ಮುಂತಾದ ವಿದ್ಯಾಭ್ಯಾಸ ಸಂಬಂಧದ ಸೌಕರ್ಯಗ ಳನ್ನು ಕಲ್ಪಿಸುವದಕ್ಕಾಗಿಯೇ ವ್ಯಯವಾಗಿವೆ. ಈಗ ಶ್ರೀ ಶ್ರೀಗಳವರು ಸಾಮಾನ್ಯತಃ ವೈದ್ಯವಿದ್ಯಾಭ್ಯಾಸ ಮಾಡತಕ್ಕವರಿಗೂ, ಪರಿಣಾಮದಲ್ಲಿ ಮಹಾಜನರಿಗೂ, ಪ್ರಯೋಜನಕರವಾಗಿರುವ ಮಹತ್ತರವಾದ ಈ ಕಾರ್ಯ ಕ್ಕಾಗಿ ಉದಾರವಾದ ಧರ್ಮದ್ರವ್ಯವನ್ನಿತ್ತು ಉಪಕರಿಸಿದ್ದಾರೆ.

ಧರ್ಮಾರ್ಥವಾದ ಈ ಸಹಾಯದಿಂದ ಪ್ರಯೋಜನ ಪಡೆದು, ಇಲ್ಲಿ ನಿರ್ಮಿತವಾಗುವುದಾಗಿರುವ ರೋಗನಿದಾನ ಶಾಸ್ತ್ರೀಯ ಪ್ರಯೋಗ ಪರೀಕ್ಷಾ ಶಾಲೆಯಲ್ಲಿ ವ್ಯಾಸಂಗಮಾಡುವ ವಿದ್ಯಾರ್ಥಿ–ವಿದ್ಯಾರ್ಥಿನಿಯರೆ ಲ್ಲರೂ ನಿರ್ವಹಿಸಬೇಕಾದ ಗುರುತರವಾದ ಕರ್ತವ್ಯವನ್ನು ಕುರಿತು ಸೂಚಿಸ ಲಿಚ್ಛಿಸುವೆವು. ಅವರುಗಳೆಲ್ಲರೂ, ಮೈಸೂರು ಸಂಸ್ಥಾನದ ಈ ವೈದ್ಯ ಮಹಾಪಾಠಶಾಲೆಯು ಭರತಖಂಡದ ಇತರ ಪ್ರದೇಶಗಳಲ್ಲಿರುವ ವೈದ್ಯ ಮಹಾಪಾಠಶಾಲೆಗಳಲ್ಲಿ ಉತ್ತಮೋತ್ತಮವಾದವುಗಳ ವರ್ಗಕ್ಕೆ ಸೇರಲನು ಕೂಲಿಸುವಂತೆ ಶ್ರದ್ಧೆಯಿಂದ ವರ್ತಿಸುವದು ಮಾತ್ರವೇ ಅಲ್ಲದೆ, ಮಾನವ ವರ್ಗಕ್ಕೆ ಮಂಗಳಕರವಾಗಿ ಪರಿಣಮಿಸುವ ನೂತನ ವಿಚಾರಗಳನ್ನು ಕಂಡು ಹಿಡಿಯಲು ಅಪರಿಮಿತವಾದ ಅವಕಾಶವಿರುವ ಈ ರೋಗನಿದಾನ ಶಾಸ್ತ್ರದ ವ್ಯಾಸಂಗವೂ ಸಂಶೋಧನಗಳೂ ಕೂಲಂಕಷವಾಗಿ ನಡೆಯುವ ವಿದ್ಯಾಸಂಸ್ಥೆ

ಎಂಬ ಖ್ಯಾತಿಯನ್ನು ಗಳಿಸುವಂತೆಯೂ ಮಾಡಬೇಕೆಂಬುದು ನಮ್ಮ ಅಂತರವಾದ ಅಭಿಲಾಷೆ.

ಮಹಿಳೆಯರೇ, ಮತ್ತು ಮಹಾಶಯರೇ, ಶ್ರೀ ಜಯದೇವ ಮುರಘರಾಜೇಂದ್ರ ಸ್ವಾಮಿಗಳವರ ನಾಮಾಂಕಿತದಲ್ಲಿ ಇಲ್ಲಿ ನಿರ್ಮಿತವಾಗುವ ರೋಗನಿದಾನ ಶಾಸ್ತ್ರೀಯ ಪ್ರಯೋಗ ಪರೀಕ್ಷಾಶಾಲೆಯ ಅಸ್ತಿಭಾರ ಶಿಲೆಯನ್ನು ಪ್ರತಿಷ್ಠಿಸಲು, ನಾವು ವಿಶೇಷವಾಗಿ ಹರ್ಷಿಸುವೆವು.

ಈ ಮೇರೆಗೆ ಶ್ರೀಮನ್ಮಹಾರಾಜರ ಭಾಷಣವಾಗಲು ಪ್ರಜೆಗಳೆಲ್ಲರು ತಲೆದೂಗಿದರು. ಅನಂತರ ರಾಜಪದ್ಧತಿಯಂತೆ ಸಮಾರೋಪಣ ವಿಧಿಯಾದ ಮೇಲೆ ಶ್ರೀ ಜಗದ್ಗುರುಗಳ ಹಾಗೂ ಶ್ರೀಮನ್ಮಹಾರಾಜರ ಜಯ ಜಯಕಾರದೊಡನೆ ಸಭೆಯು ಸಮಾಪ್ತವಾಯಿತು. **ಇದೇ ಭವನ ನಿರ್ಮಾಣಕ್ಕೆ ಶ್ರೀ ಜಗದ್ಗುರು ಮಹಾಸ್ವಾಮಿಗಳವರು ಅಖಿಲ ಮಾನವಕೋಟಿಯ ಮೇಲೆ ಕರುಣೆಯಿಟ್ಟು, ೪೦ ಸಾವಿರ ರೂಪಾಯಿಗಳನ್ನು ದಯಪಾಲಿಸಿ, ಜಗತ್ತನ್ನೇ ಉಪಕೃತಗೊಳಿಸಿರುವರು.**

ಈ ಸಮಾರಂಭವು ಮುಗಿದಮೇಲೆ ರಾತ್ರಿಯ ಸಮಯದಲ್ಲಿ ಮೈಸೂರ ವೀರಶೈವ ಮಹಾಜನಗಳು ಭಕ್ತಿ ವಿಶ್ವಾಸಗಳನ್ನು ತೋರ್ಪಡಿಸಿ ಜಗದ್ಗುರುಗಳಿಗೆ ಬಿನ್ನವತ್ತಳೆಯನ್ನರ್ಪಿಸುವ ಸಮಾರಂಭವು ಶೇಷಾದ್ರಿ ಹೌಸಿನ ಮುಂಭಾಗದಲ್ಲಿ ಹಾಕಿದ ದೊಡ್ಡ ಡೇರೆಯಲ್ಲಿ ಜರುಗಿತು. ಈ ಸಮಾರಂಭಕ್ಕೆ ಜಿಲ್ಹಾಧಿಕಾರಿಗಳಾದ ಶ್ರೀ ಎಂ. ಜಿ. ಮೇಕ್ರಿ, ಪೌರಸಭಾಧ್ಯಕ್ಷರಾದ ಶ್ರೀ ಎಮ್. ಎ. ಶ್ರೀನಿವಾಸನ್, ಜಿಲ್ಹಾ ಪೋಲೀಸ ಸುಪರಿಂಟೆಂಡೆಂಟ ಶ್ರೀ ಎಮ್. ರಂಗಸ್ವಾಮಿ ಅಯ್ಯಂಗಾರ, ಸಬ್‌ಡಿವ್ಹಿಜನಲ್ ಅಧಿಕಾರಿಗಳಾದ ಶ್ರೀ ರಣಜೋಧಸಿಂಗ ಪ್ರೊ॥ ಟಿ. ಎಸ್. ವೆಂಕಣ್ಣಯ್ಯನವರು ಮುಂತಾದ ಅಸಂಖ್ಯಾತ ಪ್ರಮುಖ ಜನರು ಆಗಮಿಸಿದ್ದರು. ಶ್ರೀ ಜಗದ್ಗುರುಗಳು ಉಚ್ಚಾಸನದಲ್ಲಿ ಮಂಡಿಸಿದ ಮೇಲೆ ಪ್ರಾರ್ಥನಾಪರ ಮಂಗಲ ಪದ್ಯಗಳೂ, ಮಹನೀಯರ ಸಂದೇಶ ವಾಚನಗಳೂ ಜರುಗಿದವು. ಆ ಮೇಲೆ ರಾಜಧಾನಿಯ ವೀರಶೈವರ ಪರವಾಗಿ ಸ್ವಾಗತಸಮಿತಿಯ ಅಧ್ಯಕ್ಷರಾದ ಶ್ರೀ ಕೆ. ರೇವಣ್ಣನವರು ಜಗದ್ಗುರುಗಳಿಗೆ ಬಿನ್ನವತ್ತಳೆಯನ್ನರ್ಪಿಸಿದರು.

ಇದರಲ್ಲಿ ಮುಖ್ಯವಾಗಿ ಲೋಕಸೇವೆಯೇ ಈಶ ಸೇವೆಯೆಂದು ಭಾವಿಸಿ ಜಗದ್ಗುರು ಮಹಾಸ್ವಾಮಿಗಳು ಇದುವರೆಗೆ ಸ್ಥಾಪಿಸಿದ ಅಂಸಖ್ಯಾಕ ವಿದ್ಯಾರ್ಥಿನಿಲಯ, ಅನಾಥನಿಲಯಾದಿಗಳ ವಿಷಯವೂ, ಅಖಿಲ ಕರ್ನಾಟಕದಲ್ಲಿ ವೀರಶೈವ ವಿದ್ಯಾರ್ಥಿನಿಲಯಗಳನ್ನು ಏರ್ಪಾಡುಮಾಡಿದ ವಿಷಯವೂ, ಪಾಶ್ಚಾತ್ಯದೇಶಕ್ಕೆ ವಿದ್ಯಾರ್ಜನೆಗೆ ಹೋದವರಿಗೆ ಸಹಾಯಮಾಡಿದ ಸಂಗತಿಗಳೂ ಸಮಾವೇಶವಾಗಿದ್ದವು. ಕೊನೆಗೆ ಜಗದ್ಗುರುಗಳು ಅನೇಕ ಧಾರ್ಮಿಕ, ಸಾಮಾಜಿಕ ಸಂಸ್ಥೆಗಳಿಗೂ, ಇಸ್ಲಾಮ ಹಾಗು ಆದಿಕರ್ನಾಟಕಸ್ಥರಿಗೂ, ಅನ್ಯಮತೀಯರಿಗೂ ದಾನ ಧಾರೆ ಎರೆದು ವಿಶ್ವಬಂಧುಗಳಾದ ವಿಷಯವು ಬಂದು ಸನ್ನಿಧಿಯ ಪರಮೌದಾರ್ಯವೂ, ಸಾರ್ವಜನಿಕರ ಉಪಕಾರವೂ ಪ್ರದರ್ಶಿಸಲ್ಪಟ್ಟಿದ್ದವು.

ಭಕ್ತಿಪೂರ್ವಕವಾಗಿ ಅರ್ಪಿಸಿದ ಈ ಬಿನ್ನವತ್ತಳೆಯ ವಾಚನವು ಮುಗಿದಮೇಲೆ ಸ್ವಾಮಿಗಳು ಇದಕ್ಕೆ ಉತ್ತರಕೊಡುತ್ತ “ ನಾವೊಬ್ಬ ಚುನಾಯಿಸಲ್ಪಟ್ಟ ವ್ಯಕ್ತಿ. ನಾವೊಬ್ಬ ಅಧ್ಯಕ್ಷರು. ನಾವು ಸ್ವತಂತ್ರಿಸಿ ಮತ್ತೊಬ್ಬರಿಗೆ ಪಟ್ಟಕಟ್ಟುವಂತಿಲ್ಲ. ಸಮಾಜದವರು ಚುನಾಯಿಸಬೇಕು. ಇದೇ ಈ ಪೀಠದ ಪದ್ಧತಿ. ಹಾಗೆ ಚುನಾಯಿಸಲ್ಪಟ್ಟ ಸ್ವಾಮಿಯವರಿಗೆ ಬೇರೆ ಉದ್ಯೋಗವೇ ಇಲ್ಲ. ಸಮಾಜದ ಹಿತಸಾಧನೆಯೇ ಅವರ ಉದ್ಯೋಗ, ಬಯಕೆ. ‘ ಗುರುವಿಗೆ ತನು, ಲಿಂಗಕ್ಕೆ ಮನ, ಜಂಗಮಕ್ಕೆ ಧನ ’ ಕೊಡಬೇಕೆಂದು ಉಕ್ತಿಯಿದೆ. ಕಡೆಯ ಮಾತು ಬಹಳ ಯುಕ್ತಿಯ ಮಾತು. ಜಂಗಮರು ವೈರಾಗ್ಯಶೀಲರು. ಅವರಿಗೇಕೆ ಧನ? ಯಾತಕ್ಕೆ ಅವರಿಗೆ ಹಣವನ್ನು ಸಮಾಜದವರು ಕೊಡಬೇಕು? ಅದರ ಪ್ರಯೋಜನವೇನು? ಇದರಲ್ಲಿ ಪೂರ್ವಿಕರು ನಮಗೆ ಹಾಕಿಕೊಟ್ಟಿರುವ ‘ ಸಮತಾವಾದ ’ ಪದ್ಧತಿಯ ತತ್ತ್ವವಡಗಿದೆ. ಜಂಗಮರಿಗೆ ಹಣಬೇಡ. ಅಂಥವರಿಗೆ ನೀವು ಹಣವನ್ನು ಕೊಡುತ್ತೀರಿ. ಬೇಡವಾದ ಹಣವನ್ನು ಜಂಗಮರು ಬಡಬಗ್ಗರಿಗೆ ಹಂಚುತ್ತಾರೆ. ಸಮಾಜದಲ್ಲಿ ಸೌಖ್ಯ ಉಂಟಾಗುತ್ತದೆ. ಇದೇ ಶಿವಶರಣರ ತತ್ತ್ವ. ಸಮತಾವಾದದ ತತ್ತ್ವ. ಈಗ ಅರ್ಪಿಸಿದ ಬಿನ್ನವತ್ತಳೆಗಳಲ್ಲಿ ನಮ್ಮ ಔದಾರ್ಯವನ್ನು ನೀವು ಕೊಂಡಾಡಿದ್ದೀರಿ. ಹೀಗೆ ನಾವು ಮಾಡುವದು ನಮ್ಮ ಕರ್ತವ್ಯ. ಮನುಷ್ಯನು ಮನುಷ್ಯ

ವರ್ಗಕ್ಕೆ ಸೇರಬೇಕಾದರೆ ಅವನು ದಯಾಪೂರಿತನಾಗಬೇಕು. ಅವನ ಆತ್ಮವು ವ್ಯಾಪಕವಾಗಬೇಕು. ವಿಕಾಸಗೊಳ್ಳಬೇಕು. ಅಂತಹ ಮನುಷ್ಯ ವರ್ಗದ ಗುರುಗಳಾಗಿರತಕ್ಕವರ ಮಾತೇನ್ನೇನು? ನಾವು ಮಾಡಿರುವ ಅಲ್ಪವನ್ನು ಅತ್ಯಧಿಕವಾಗಿ ವರ್ಣಿಸಿದ್ದೀರಿ. ಬಸವಣ್ಣನವರಂದಂತೆ, ಅದು ' ಭಂಗಾರದ ಶೂಲದಲ್ಲಿ ಇರಿದಂತೆ! ' ಇದೆಲ್ಲ ನೀವು ನಮ್ಮಲ್ಲಿಟ್ಟಿರುವ ಭಕ್ತಿ ವಿಶ್ವಾಸಗಳ ಸಂಕೇತವೆಂದು ಭಾವಿಸುತ್ತೇವೆ. " ಎಂದು ಅಪ್ಪಣೆಕೊಡಿಸಿದರು.

ಅನಂತರ ರಾಜಧಾನಿಯ ಜೈನಮಂಡಳಿ, ಅಂಜುಮನ್ ಇಸ್ಲಾಮು ಸಂಘ, ವರ್ತಕಸಂಘ, ಆಂಧ್ರ ಕ್ಷತ್ರಿಯ ಸಮಾಜ ಮುಂತಾದವರು ಬಿನ್ನ ವತ್ತಳೆಗಳನ್ನು ಸಮರ್ಪಿಸಿದರು.

ಈ ಎಲ್ಲ ಬಿನ್ನವತ್ತಳೆಗಳಿಗೆ ಒಟ್ಟಿಗೆ ಉತ್ತರ ಕೊಡಲು ಬಯಸುತ್ತ ಮಹಾಸ್ವಾಮಿಗಳು– ತಮಗೆ ಇಷ್ಟೊಂದು ಸಹಾಯ ಸಹಕಾರವನ್ನು ನೀಡಿದ ಶ್ರೀಮನ್ಮಹಾರಾಜರಿಗೂ, ಶ್ರೀಮನ್ಮಹಾರಾಜ ಸರಕಾರಕ್ಕೂ ತಮ್ಮ ಕೃತಜ್ಞತೆಗಳನ್ನು ಸೂಚಿಸುತ್ತಾ ದಿವಾನ್ ಸರ್ ಮಿರ್ಜಾರವರಿಗೆ ಶ್ರೀಮನ್ಮ ಹಾರಾಜರು ಮತ್ತೆ ೫ ವರ್ಷಗಳಕಾಲ ದಿವಾನ ಪಟ್ಟವನ್ನು ಹೆಚ್ಚಿಸಿದುದ ಕ್ಕಾಗಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು. ಅನಂತರ ಹಾಗೇ ಅಪ್ಪಣೆಕೊಡಿಸುತ್ತ " ನೀವು ಅರ್ಪಿಸಿದ ಬಿನ್ನವತ್ತಳೆಗಳಿಗೆಲ್ಲ ಒಂದೇ ಉತ್ತರ ಕೊಡಲು ಬಯಸುತ್ತೇನೆ. ಅದು ಮನುಷ್ಯ ಲಕ್ಷಣವನ್ನು ಕುರಿ ತಿದ್ದು, ಹೇಗಿದ್ದರೆ ಮನುಷ್ಯನು ಮನುಷ್ಯನಾಗುತ್ತಾನೆ? ಬಸವಣ್ಣನವರು ಹೇಳುತ್ತಾರೆ, " ದಯಯೇ ಧರ್ಮದ ಮೂಲವಯ್ಯ; ದಯವಿಡಬೇಕು ಸಕಲ ಪ್ರಾಣಿಗಳಲ್ಲಿ; ದಯವಿಲ್ಲದ ಧರ್ಮವಾವುದಯ್ಯ– ಎಂದು! " ಇದು ಕನ್ನಡಮಾತೆಂದು ಅಲಕ್ಷ್ಯಮಾಡಬಾರದು. ಮಾತು ಯಾವದಾದರೇನು? ಬಸವಣ್ಣನವರ ವಚನಗಳು ಉಪನಿಷತ್ತುಗಳಿಗೆ ತಿಲಾಂಶವೂ ಕಡಿಮೆ ಇಲ್ಲ. ಏಕಮೇವಾ ದ್ವಿತೀಯಂ ಬ್ರಹ್ಮ ಎಂದು ಉಪನಿಷತ್ತೆಂದರೆ– ಬಸವಣ್ಣನ ವರು, ದೇವರು ಒಬ್ಬರು ಇಬ್ಬರು ಎಂದು ಉಬ್ಬಿ ಆಡದಿರಯ್ಯ; ದೇವರೊ ಬ್ಬರೇ ಕಾಣಯ್ಯ ಎನ್ನುತ್ತಾರೆ. ಅರ್ಥ ಒಂದೇ ಜ್ಞಾನ ಒಂದೇ ಮನುಷ್ಯ ನಿಗೆ ದಯಯೇ ಪರಮ ಧರ್ಮ.

" ಪ್ರಪಂಚದ ನಾನಾ ಪದಾರ್ಥಗಳಲ್ಲಿ ನಾಲ್ಕು ಪಂಗಡಗಳು ಕಾಣು

ತ್ತವೆ. ಅವು ಯಾವವೆಂದರೆ, ಖನಿಜ ಪದಾರ್ಥಗಳು, ಉದ್ಭಿಜ ಪದಾರ್ಥಗಳು, ಪ್ರಾಣಿಜ ಪದಾರ್ಥಗಳು ಮತ್ತು ಮನುಷ್ಯವರ್ಗದವು. ವಿಸ್ಮಯವಾದ ವಿಷಯವೇನೆಂದರೆ, ಮನುಷ್ಯರಲ್ಲಿ ಈ ನಾಲ್ಕು ಪ್ರಕಾರದ ಮನುಷ್ಯರೂ ಇರುತ್ತಾರೆ. ಖನಿಜವರ್ಗದ ಮನುಷ್ಯರಿದ್ದಾರೆ, ಅವರ ಆತ್ಮನಿಗೆ ಚಲನವಿಕಾಸಗಳಿಲ್ಲ. ಕ್ರಿಯಾಕರ್ಮ ಶೂನ್ಯರು. ಉದ್ಭಿಜ ಅಥವಾ ಸಸ್ಯವರ್ಗದ ಜನರಿದ್ದಾರೆ; ಅವರ ಆತ್ಮಕ್ಕೆ ಕೊಂಚ ವಿಸ್ತಾರವುಂಟು. ತಮ್ಮ ಸಂಬಂಧವಿರುವತನಕಾದರೂ ಅವರು ವ್ಯಾಪಕರಾಗಿರುತ್ತಾರೆ. ಪ್ರಾಣಿವರ್ಗದ ಮನುಷ್ಯರಿದ್ದಾರಲ್ಲ; ಅವರು ಸರ್ವತ್ರವ್ಯಾಪಕರಾಗುತ್ತಾರೆ. ಅವರದು ಪ್ರಾಣಿಗಳು ಎಲ್ಲೆಲ್ಲಿಯೂ ಚರಿಸುವಂತೆ ವಿಸ್ತೃತ ಪ್ರೇಮ. ಆದರೂ ಅವರು ಮನುಷ್ಯವರ್ಗದ ಮನುಷ್ಯರಾಗಿರುವದಿಲ್ಲ. ಮನುಷ್ಯನು ಮನುಷ್ಯವರ್ಗಕ್ಕೆ ಸೇರಬೇಕಾದರೆ ಅವನ ಆತ್ಮವು ಜಾಗೃತವಾಗಬೇಕು. ಗಾಂಧಿಯವರಿಗೆ ಮಹಾತ್ಮ ಎಂಬ ಹೆಸರೇಕೆ ಬಂತು? ಎಲ್ಲರಿಗೂ ಆ ಹೆಸರೇಕಿಲ್ಲ? ಅವರ ಆತ್ಮವು ವಿಸ್ತಾರವಾಗಿದೆ. ವ್ಯಾಪಕವಾಗಿದೆ.

"ಮಹಾತ್ಮಾ ಗಾಂಧಿಯವರು ಹರಿಜನೋದ್ಧಾರಕ್ಕೆ ನಿಂತರು. "ಲೋಕೋ-ಭಿನ್ನರುಚಿಃ" ಸನಾತನಿಗಳು ಅವರಮೇಲೆ ಬಾಂಬು ಹಾಕಿದರು. ಇದಕ್ಕಾಗಿ ಮಹಾತ್ಮರ ಪರಿವಾರದವರು ಕ್ರುದ್ಧರಾದರು. ನೋಡಿ, ಪರಸ್ಪರ ಕೌಟಿಲ್ಯವಿದ್ದರೆಯೇ ಹಿಂಸ್ರಗಳಾಗುವುದು. ಹಾವನ್ನು ಕಂಡು ನಾವು ಅದನ್ನು ನಾಶಮಾಡಲು ಬಯಸುತ್ತೇವೆ. ಅದಕ್ಕೇ ಅದು ನಮ್ಮನ್ನು ಕಾಡಿಸುತ್ತದೆ. ಅದು ಪ್ರಕೃತಿನಿಯಮ. ದುಷ್ಟಪ್ರಾಣಿಗಳಹಾಗೆಯೇ ದುಷ್ಟಜನರ ಸ್ವಭಾವವೂ ಕೂಡ. ಸನಾತನಿಗಳಮೇಲೆ ನಾನು ಆರೋಪಣೆ ಮಾಡುತ್ತಿಲ್ಲ. "ಲೋಕೋ-ಭಿನ್ನರುಚಿಃ" ಎಂದು ಮೊದಲೇ ಹೇಳಿದ್ದೇವೆ. ಆದರೆ ಸತ್ಯವಾದುದನ್ನು ಖಂಡಿತವಾಗಿ ಧೈರ್ಯವಾಗಿ ಹೇಳಬೇಕು. ಈಶ್ವರ ಸಂಕಲ್ಪದಿಂದ ಆ ಬಾಂಬು ಗಾಂಧಿಯವರಿಗೆ ತಗಲಲಿಲ್ಲ. ಬಾಂಬೆಸೆದವರಿಗೆ ಪ್ರತೀಕಾರಮಾಡುವದಿರಲಿ, ತಮ್ಮ ಕಡೆಯವರು ಕ್ರೋಧಕ್ಕೆ ತುತ್ತಾದುದನ್ನು ಕಂಡು ಮಹಾತ್ಮರು ಉಪವಾಸಮಾಡಿದರು. ಬೇಡಿದಷ್ಟು ಪ್ರೇಮ ಮಹಾತ್ಮರದು. ಆದಕ್ಕೆ ಅವರು ಮಹಾತ್ಮರೆನಿಸಿದರು. ಆ ವಿಸ್ತಾರವಾದ ಆತ್ಮವೇ ಮನುಷ್ಯ ಲಕ್ಷಣ. ಎಲ್ಲರೂ ಮಹಾತ್ಮರಾಗಲು

ಸಾಧ್ಯವಿಲ್ಲ. ಆದರೂ ಆ ಆತ್ಮ ಲಕ್ಷಣವು ಇರಬೇಕು." ಎಂದು ವಿವೇಚಿಸುತ್ತ ತಾವು ಈ ಮನುಷ್ಯ ಲಕ್ಷಣವನ್ನು ಮಾತ್ರ ಪ್ರದರ್ಶಿಸುತ್ತಿರುವಂತೆ ತಿಳಿಸಿದರು. ಮತ್ತು ಶಿವಶರಣರ ಪದ್ಧತಿಯಲ್ಲಿರುವ ಸಮತಾವಾದದ ತತ್ವವನ್ನು ವಿವರಿಸಿದರು.

ಭಾಷಣವನ್ನು ಮುಕ್ತಾಯಮಾಡುತ್ತ ಶ್ರೀಮನ್ಮಹಾರಾಜರಿಗೂ, ಅವರ ಸರಕಾರಕ್ಕೂ, ಅವರ ಅಧಿಕಾರಿ ವರ್ಗದವರಿಗೂ ಸರ್ವ ಮಂಗಳವನ್ನು ಕೋರುವ ಹಾರೈಕೆಗಳನ್ನು ಮಾಡಿದರು.

ಜಿಲ್ಹಾಧಿಕಾರಿಗಳಿಗೂ, ಜಿಲ್ಹಾ ಪೋಲೀಸ ಅಧಿಕಾರಿಗಳಿಗೂ, ಪೌರ ಸಭಾಧ್ಯಕ್ಷರಿಗೂ, ಸಬ್‌ಡಿವಿಜನ್ ಅಧಿಕಾರಿಗಳೇ ಮುಂತಾದ ಮುಖ್ಯಸ್ಥರಿಗೆಲ್ಲ ಸ್ವಾಮಿಗಳು ಪುಷ್ಪಮಾಲಿಕಾ, ಪ್ರಸಾದಗಳನ್ನು ನೀಡಿದರು. ಅನಂತರ ಸಭೆ ಮುಗಿಯಿತು.

ಹೀಗೆ ಶ್ರೀ ಜಗದ್ಗುರು ಮಹಾಸ್ವಾಮಿಗಳು ರಾಜಧಾನಿಯಲ್ಲಿ ಶ್ರೀಮನ್ಮಹಾರಾಜರಿಂದಲೂ, ಸಮಸ್ತ ಮಹಾಜನರಿಂದಲೂ ಅಭೂತಪೂರ್ವ ರಾಜಮರ್ಯಾದೆಯನ್ನು ಹೊಂದಿದ್ದರಿಂದ ಬೃಹನ್ಮಠದ ಕೀರ್ತಿಯು ದಿಂಗಂತರದಲ್ಲಿ ಬೆಳೆಯಿತು. ರಾಜಧಾನಿಯಲ್ಲಿ ಜಗದ್ಗುರು ಮಹಾಸ್ವಾಮಿಗಳ ಪ್ರವಾಸವು ಶ್ರೀಮನ್ಮಹಾರಾಜರಿಗೂ, ಪ್ರಜೆಗಳಿಗೂ ಮಂಗಲಕಾರಕವಾಗುವಂತೆ ಪರಿಣಮಿಸಿತು.

# ೧೪ ನೇ ಅಧ್ಯಾಯ.

## ಶ್ರೀ ಜಗದ್ಗುರು ಮಹಾಸ್ವಾಮಿಗಳಿಂದ

### ಜರುಗಿದ ಬೇರೆ ಕೆಲವು ಕಾರ್ಯಗಳು.

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರಘರಾಜೇಂದ್ರ ಮಹಾಸ್ವಾಮಿಗಳು ತಮ್ಮ ಅವತಾರ ಕಾರ್ಯದಿಂದ ಮಹಾತ್ಮಾ ಗಾಂಧಿ, ಶ್ರೀಮನ್ಮೈಸೂರ ಮಹಾರಾಜರು, ಪುಣೆಯ ಡಾ|| ಭಾಂಡಾರಕರರವರು, † ಕೊಲ್ಹಾಪೂರದ ಶ್ರೀ ಶಾಹೂ ಛತ್ರಪತಿ ಮಹಾರಾಜರು, ಸರ್ ಮಿರ್ಜಾ ಎಮ್. ಇಸ್ಮಾಯಿಲ್ ಸಾಹೇಬರು ಇತ್ಯಾದಿ ಲೋಕವಿಖ್ಯಾತ ವಿಭೂತಿಗಳ ಭಕ್ತಿ ಪ್ರೇಮಗಳಿಗೆ ಪಾತ್ರರಾಗಿ ಕೇವಲ ವೀರಶೈವ ಜನಾಂಗಕ್ಕಷ್ಟೇ ಅಲ್ಲದೆ ಇಡೀ ಜಗತ್ತಿಗೇ ಪೂಜ್ಯರೆಂದೆನಿಸಿರುವರು. ಇವರು ಹಿಂದೆ ಹೇಳಿದ ಅನೇಕ ಲೋಕೋದ್ಧಾರಕ ಕಾರ್ಯಗಳನ್ನು ಕೈಕೊಂಡು ಜರುಗಿಸಿದರಲ್ಲದೆ ಇನ್ನೂ ಕೆಲವು ಮಹತ್ವವಾದ ಕಾರ್ಯಗಳನ್ನು ಜರುಗಿಸಿರುವರು. ಅವುಗಳಲ್ಲಿ ಕನ್ನಡಿಗರ ಜೀವಾಳಾಗಿದ್ದ ಅಖಿಲ ಕರ್ನಾಟಕ ೭ನೇ ಏಕೀಕರಣ ಪರಿಷತ್ತನ್ನು ಪ್ರಾರಂಭಿಸುವಾಗ ಮಾಡಿದ ಭಾಷಣ. ದಾವಣಗೇರಿಯಲ್ಲಿ ಶ್ರೀ ವೀರಶೈವ ಭಕ್ತ-ಪ್ರತಿನಿಧಿ ಸಭೆಗರೆದು ಮಾಡಿದ ಬೋಧ, ಖಾದಿಯ ಮೇಲಿನ ಪ್ರೇಮ, ಚಿತ್ರದು

---

† ಜಗದ್ಗುರು ಮಹಾಸ್ವಾಮಿಗಳು ಪುಣೆಗೆ ಬಿಜಯಂಗೈದಾಗ ಡಾ|| ಭಾಂಡಾರಕರರವರು ಮಹಾಸ್ವಾಮಿಗಳ ದರ್ಶನದಿಂದ ಸಂತುಷ್ಟರಾಗಿ ಬಹಳವಾಗಿ ಗೌರವಿಸಿ ವಿಜ್ಞಾಪನಾ ಪತ್ರಿಕೆಯನ್ನರ್ಪಿಸಿರುವರು. ಹಾಗು ತಾವು ಬರೆದ **The Early History of the Dekkan** ಎಂಬ ಇಂಗ್ಲೀಷ ಗ್ರಂಥದಲ್ಲಿ ಜಗದ್ಗುರುಗಳ ಗುಣ-ಗೌರವವನ್ನು ಬಹಳವಾಗಿ ಪ್ರಶಂಸಿಸಿರುವರು.

ಇದರಂತೆ ಕೊಲ್ಹಾಪೂರದ ಶಾಹು ಛತ್ರಪತಿ ಮಹಾರಾಜರೂ ತಮ್ಮ ರಾಜಧಾನಿಯಲ್ಲಿ ಶ್ರೀ ಶ್ರೀ ಗಳವರ ಉತ್ಸವಕ್ಕೆ ಸಂಪೂರ್ಣ ಗೌರವವನ್ನು ಕೊಟ್ಟಿರುವರು.

ಗ೯ದ ಆದಿಕರ್ನಾಟಕರ ಶಾಸ್ತ್ರರನ್ನ ಆದ ಮೇಲೆ ಅವರಿಗೆ ಮಾಡಿದ ಬೋಧ ಇವು ಬಹಳೇ ಮಹತ್ವದ್ದಾಗಿರುವವು. ಇವುಗಳನ್ನು ಕುರಿತು ಈ ಅಧ್ಯಾಯದಲ್ಲಿ ಯಥಾಮತಿಯಾಗಿ ಪ್ರಸ್ತಾಪಿಸುವೆವು.

ಅಖಿಲ ಕರ್ನಾಟಕದ ೭ ನೇ ಏಕೀಕರಣ ಪರಿಷತ್ತನ್ನು ತೆರೆಯುವಾಗ ಶ್ರೀ ಜಗದ್ಗುರು ಮಹಾಸ್ವಾಮಿಗಳು ಕೆಳಗೆ ಕಾಣಿಸಿದ ಒಳ್ಳೇ ಮಹತ್ವದ ಭಾಷಣಮಾಡಿ ಕನ್ನಡಿಗರಲ್ಲಿ ನವಚೈತನ್ಯವನ್ನು ಹುಟ್ಟಿಸಿರುವರು. ಇದರಿಂದ ಮಹಾಸ್ವಾಮಿಗಳಲ್ಲಿ ಕರ್ನಾಟಕದ ಬಗ್ಗೆ ಎಂಥ ಉತ್ಕಟ ಅಭಿಮಾನವಿರುವದೆಂಬದು ವ್ಯಕ್ತವಾಗುತ್ತದೆ.

[ ಅಖಿಲ ಕರ್ನಾಟಕ ೭ ನೇ ಏಕೀಕರಣ ಪರಿಷತ್ತನ್ನು ಪ್ರಾರಂಭಿಸುವಾಗ ಶ್ರೀಮನ್ಮಹಾನಿರಂಜನ ಜಗದ್ಗುರು ಜಯದೇವ ಮುರಘರಾಜೇಂದ್ರ ಮಹಾಸ್ವಾಮಿಗಳು ಮಾಡಿದ ಭಾಷಣದ ಸಾರಾಂಶ ]

ಮುಂಬಯಿ ಏಕೀಕರಣದ ಜಿಲ್ಲೆಗಳು ನಮಗೆ ಅಪರಿಚಯವಾದವುಗಳಲ್ಲ. ಇಲ್ಲಿ ನಮ್ಮ ಸಂಸ್ಥಾನದ ಮಠಗಳು ನೆಲೆಗೊಂಡಿರುವದರಿಂದ ಜನಸಾಮಾನ್ಯದ ಪರಿಚಯವು ಚನ್ನಾಗಿರುತ್ತದೆ. ಈ ಭಾಗದಿಂದಲೇ ಕರ್ನಾಟಕ ಏಕೀಕರಣದ ಜೀವಂತ ಝರಿಯು ಹರಿದು, ಅಖಿಲ ಕರ್ನಾಟಕವನ್ನೇ ವ್ಯಾಪಿಸಿದ್ದು ನಮ್ಮ ದೃಷ್ಟಿಗೆ ಎಲ್ಲೆಲ್ಲಿಯೂ ಬೀಳುತ್ತಲಿದೆ. ಯಾವನೊಬ್ಬ ಕರ್ನಾಟಕದ ಮಹಾರಾಜನೇ ಇರಲಿ, ಮಠಾಧೀಶನೇ ಇರಲಿ ಈ ವಿಷಯವು ಎಲ್ಲರಿಗೂ ಅಭಿಮಾನವನ್ನುಂಟುಮಾಡತಕ್ಕಂಥ ಸಂಗತಿಯಾಗಿರುತ್ತದೆ. ಇಂಥ ಏಕೀಭೂತ ಕರ್ನಾಟಕದ ಪ್ರತಿನಿಧಿಗಳಾಗಿ ಬರುವ ಮಹಾಜನಗಳಿಂದ ಕೂಡಿದ ಈ ಸಭೆಯ ಪ್ರಾರಂಭೋತ್ಸವವನ್ನು ಜರುಗಿಸುವ ಸುಸಂಧಿಯನ್ನು ಸ್ವಾಗತ ಸಮಿತಿಯವರು ಸಾದರದಿಂದ ನಮಗೆ ಒಪ್ಪಿಸಿರುವದು ತುಂಬಾ ಸಂತೋಷವನ್ನುಂಟುಮಾಡಿದೆ.

## ರಾಜಕಾರಣ

ಕರ್ನಾಟಕ ಏಕೀಕರಣದ ಕಾರ್ಯವು ಕನ್ನಡಿಗರಿಗೆ ಮಹತ್ವದ್ದಾಗಿರುತ್ತದೆ. ಕನ್ನಡ ನಾಡಿನ ಇತಿಹಾಸವು ಎಷ್ಟು ಉಜ್ವಲವಾಗಿದೆಯೋ ಅಷ್ಟೇ ಪ್ರಾಚೀನವೂ ಆಗಿರುತ್ತದೆ. ಕನ್ನಡ ದೇಶದ ಸಾಮ್ರಾಜ್ಯಾಧಿಪತಿ

ಗಳು ಸ್ವರಾಜ್ಯವನ್ನು ಕಟ್ಟಿ ವಂಗದೇಶದವರೆಗೆ ಆಳಿರುತ್ತಾರೆಂಬುವದು ಇತಿಹಾಸ ಪ್ರಸಿದ್ಧವು. ಈ ಸಾಮ್ರಾಜ್ಯಾಧಿಪತಿಗಳಲ್ಲಿ ವಿಜಯನಗರದ ಅರಸರ ಹೆಸರನ್ನು ತೆಗೆದುಕೊಂಡಕೂಡಲೇ ಕನ್ನಡಿಗರ ಸ್ವಾಭಿಮಾನದ ಜ್ಯೋತಿಯು ಉಕ್ಕುತ್ತಲಿರುವದು ಸ್ವಾಭಾವಿಕವು.

## ಧರ್ಮ

ಕರ್ನಾಟಕವು ಅಖಿಲ ಭಾರತ ಭೂಮಿಗೆ ಮತ್ತೊಂದು ಶ್ರೇಷ್ಠವಾದ ಕಾಣಿಕೆಯನ್ನು ಕೊಟ್ಟಿರುತ್ತದೆ. ಆ ಕಾಣಿಕೆಯು ಧಾರ್ಮಿಕ ಸ್ವರೂಪ ದ್ದಿರುತ್ತದೆ. ಹಿಂದುಸ್ಥಾನದಲ್ಲಿ ಪ್ರಸಿದ್ಧಿಯನ್ನು ಹೊಂದಿದ ಎಲ್ಲಾ ಮತ ಗಳ ಸ್ಥಾಪಕರೂ, ಉದ್ಧಾರಕರೂ ಕರ್ನಾಟಕದಲ್ಲಿಯೇ ವಿಶೇಷವಾಗಿ ಆಗಿ ರುತ್ತಾರೆಂದು ಹೇಳಲಿಕ್ಕೆ ನಮಗೆ ಅಭಿಮಾನವೂ, ಆನಂದವೂ ಉಂಟಾ ಗುತ್ತಲಿದೆ.

## ಸಂಸ್ಕೃತಿ

ಕನ್ನಡಿಗರ ಸಂಸ್ಕೃತಿಯು ಪ್ರಾಚೀನ ಕಾಲದಿಂದ ಪ್ರಸಿದ್ಧಿಯನ್ನು ಹೊಂದಿರುತ್ತದೆ. ಶಿಲ್ಪಕಲೆಯು ಹಿಂದುಸ್ಥಾನದ ಯಾವ ಪ್ರಾಂತದ ಕಲೆಗೂ ಇಷ್ಟೇ ಏಕೆ ಜಗತ್ತಿನ ಯಾವದೇ ಒಂದು ದೇಶದ ಶಿಲ್ಪಕಲೆಗೂ ಕಡಿಮೆ ತರಗತಿಯನ್ನು ಹೊಂದಲಾರವು. ಹಳೇಬೀಡು, ಶ್ರವಣಬೆಳ ಗೊಳ, ಬೇಲೂರು ಮೊದಲಾದ ಸ್ಥಳಗಳಲ್ಲಿರುವ ಕಟ್ಟಡಗಳು ನಮ್ಮ ನಾಡಿನ ಶಿಲ್ಪಿಗಳ ಅದ್ಭುತ ಸಾಮರ್ಥ್ಯವನ್ನು ತೋರಿಸುತ್ತವೆ. ಇತಿಹಾಸದಲ್ಲಿ ಸುಪ್ರಸಿದ್ಧರಾದ ಸರ್ ಯದುನಾಥ ಸರಕಾರ ಮತ್ತು ಡಾ. ಕಾಲಿದಾಸನಾಗ ಮೊದಲಾದವರು ಬದಾಮಿಯೇ ಮೊದಲಾದ ಸ್ಥಳಗಳನ್ನು ನೋಡಿ, ನಮ್ಮ ದೇಶದ ಶಿಲ್ಪಕಲೆಯನ್ನು ಹೊಗಳಿರುತ್ತಾರೆ.

## ಸಾಹಿತ್ಯ

ಇಂದಿನ ನಮ್ಮ ಸಾಹಿತ್ಯವೇ ಮುಂದಿನ ಜನಾಂಗದ ಏಳಿಗೆಯ ಹೆಗ್ಗು ರುತು. ಇಂತದ ಸಾಹಿತ್ಯವನ್ನು ಬೆಳಿಸಲಿಕ್ಕೆ ನಮ್ಮಲ್ಲಿ ಒಂದು ಸಾವಿರ ಕ್ಕಿಂತಲೂ ಹೆಚ್ಚಿಗೆ ಕವಿಗಳಾಗಿರುತ್ತಾರೆ. ಈ ಸಾವಿರ ಜನ ಕವಿಗಳಲ್ಲದೆ ೩೦೦ ಜನ ಶಿವಶರಣರು ಎರಡೆಂಭತ್ತು ಕೋಟಿ ವಚನಗಳನ್ನು ಬರೆದು ಕರ್ನಾಟಕ ವಾಙ್ಮಯಕ್ಕೆ ಮಹದುಪಕಾರವನ್ನು ಮಾಡಿರುತ್ತಾರೆ. ಹರಿ

ದಾಸರೂ ಕೂಡ ಹೇರಳವಾಗಿ ಪದಗಳನ್ನು ವಿವಿಧರೀತಿಯಿಂದ ರಚಿಸಿ ನಮ್ಮ ಸಾಹಿತ್ಯವನ್ನು ಬೆಳಿಸುತ್ತಾರೆ.

## ಏಕೀಕರಣ

ಇದನ್ನು ಸಾಧಿಸಿಕೊಳ್ಳಬೇಕಾದರೆ ಕನ್ನಡಿಗರು ಮೊದಲು ಏಕೀಕೃತ ರಾಗಬೇಕು. ಕನ್ನಡಿಗರೆಲ್ಲರೂ ಒಂದೇ ಎಂಬುವ ಭಾವನೆಯನ್ನು ತಾಳ ಬೇಕು. ನಮ್ಮ ಕುಲವು ಕನ್ನಡ ಕುಲವು. ನಮ್ಮ ಸಂಸ್ಕೃತಿಯು ಕನ್ನಡ. ಇಂತಹ ಕನ್ನಡ ಕುಲದ ಉದ್ಧಾರವಾಗಬೇಕಾದರೆ ಜಾತಿ, ಮತ, ಪಂಥಗಳ ತೊಡಕನ್ನು ತರದೆ ಸಮಸ್ತ ಕರ್ನಾಟಕಸ್ಥರ ಉದ್ಧಾರವು ಕನ್ನಡ ದೇಶದ ಏಕೀರಕಣದಲ್ಲಿಯೇ ಇರುತ್ತದೆಂದು ತಿಳಿದು ಸರ್ವರೂ ಪ್ರಯತ್ನಿಸ ಬೇಕಾಗಿರುತ್ತದೆ.

ಕನ್ನಡನಾಡು ಒಟ್ಟುಗೂಡದ ವಿನಹ ನಮ್ಮಲ್ಲಿ ಪರಸ್ಪರ ಪ್ರೇಮವು ಹುಟ್ಟಲಾರದು. ಅಂತೆಯೇ ಈಗ ಕನ್ನಡಿಗರಾದ ನಾವು ಇಂದಿಗೆ ಪರ ಕೀಯ ಅಪಹಾಸ್ಯಕ್ಕೆ ಗುರಿಯಾಗಿದ್ದೇವೆ. ಮತ್ತು ಸ್ವಾಭಿಮಾನವನ್ನು ಕಳೆದುಕೊಂಡಿದ್ದೇವೆ. ಆದ್ದರಿಂದ ಇಂತಹ ಪರಮಪವಿತ್ರವಾದ ಏಕೀಕರಣ ಕಾರ್ಯವನ್ನು ಸಾಧಿಸಲಿಕ್ಕೆ ಕನ್ನಡಿಗರು ಬೇಕಾದಂತಹ ಸ್ವಾರ್ಥತ್ಯಾಗ ವನ್ನು ಮಾಡಲಿಕ್ಕೆ ಸಜ್ಜಾಗಬೇಕು. ಪ್ರಾಂತಗಳ ನಿರ್ಮಾಣವು ಹಿಂದು ಸ್ಥಾನ ಸ್ವರಾಜ್ಯ ಭವನಕ್ಕೆ ಆಧಾರಸ್ಥಂಬದಂತಿರುತ್ತದೆ. ಈ ತತ್ತ್ವವನ್ನು ಕಾಂಗ್ರೆಸೂ ಕೂಡ ಈ ಮೊದಲೇ ಒಪ್ಪಿರುತ್ತದೆ. ಹಿಂದುಸ್ಥಾನಕ್ಕೆ ಸ್ವಾತಂತ್ರ್ಯದ ಮಹತ್ವವಿದ್ದಷ್ಟು ಕನ್ನಡಿಗರಿಗೆ ಕರ್ನಾಟಕ ಏಕೀಕರಣದ ಮಹತ್ವವಿದೆ. ಕರ್ನಾಟಕ ಏಕೀಕರಣವು ಕನ್ನಡಿಗರ ಜೀವಾಳವಾಗಿರುವ ದರಿಂದ ಅದನ್ನು ಸಾಧಿಸಲೇಬೇಕೆಂದು ಮತ್ತೊಂದು ಸಾರೆ ಹೇಳುವೆವು. ಕರ್ನಾಟಕ ಏಕೀಕರಣಕ್ಕೆ ನಮ್ಮ ಸಂಸ್ಥಾನದ ಸಂಪೂರ್ಣ ಸಹಾನು ಭೂತಿಯುಂಟು.

ಈ ಸಭೆಯ ಕಾರ್ಯವು ಜಯಪ್ರದವಾಗಿ ನಡೆದು ಕನ್ನಡಿಗರ ಇಷ್ಟಾರ್ಥಗಳು ಕೈಗೂಡಲೆಂದು ಹಾರೈಸಿ ಈ ಸಭೆಯು ಪ್ರಾರಂಭವಾಯಿ ತೆಂದು ಸಂತೋಷದಿಂದ ಪ್ರಕಟಿಸುತ್ತೇವೆ. “ ಸರ್ವೇ ಜನಾಃ ಸುಖಿನೋ ಭವಂತು ” ಓಂ ಶಿವಂ ಭೂಯಾತ್.

ವೀರಶೈವ ಭಕ್ತ ಪ್ರತಿನಿಧಿ ಸಭೆ:— ಶ್ರೀ ಜಗದ್ಗುರು ಮಹಾ ಸ್ವಾಮಿಗಳು ಬೃಹನ್ಮಠದ ಜಗದ್ಗುರು ಮಠದ ಅಧಿಪತಿಗಳಾದ ತುಸು ವರ್ಷಗಳಲ್ಲಿಯೇ ವೀರಶೈವರ ಬಗ್ಗೆ ಅತ್ಯಂತ ಕಳಕಳಿಯುಳ್ಳ ಇವರು ದಾವಣಗೆರೆಯಲ್ಲಿ "ವೀರಶೈವ ಭಕ್ತ ಪ್ರತಿನಿಧಿ ಸಭೆ" ಎಂಬ ಸಭೆಯನ್ನು ಜರುಗಿಸಿದರು. ಇಂಥ ಸಭೆಗಳನ್ನು ನೆರೆಸಿ, ವೀರಶೈವ ಭಕ್ತರಲ್ಲಿ ಧಾರ್ಮಿಕ ಸುಧಾರಣೆಯನ್ನು ಮಾಡಬೇಕೆಂಬುದೇ ಇವರ ಗುರಿಯು. ವೀರಶೈವ ಸಮಾಜವು ದಕ್ಷಿಣ ಹಿಂದುಸ್ಥಾನದಲ್ಲಿ ಅನೇಕ ಕಡೆಗೆ ಹರಡಿರುವದರಿಂದ ಬೇರೆ ಬೇರೆ ಕಡೆಯಲ್ಲಿದ್ದ ತಮ್ಮ ಭಕ್ತರೆಲ್ಲರ ಸಂಘಟನೆಯುಂಟಾಗಬೇಕು. ಪರಸ್ಪರರ ಪರಿಚಯವಾಗಬೇಕು. ಧರ್ಮ ಜಾಗೃತಿಯುಂಟಾಗಬೇಕು. ಸಮಾಜ ಸೇವೆಯ ಹಂಬಲವು ಎಲ್ಲರಲ್ಲಿ ಹುಟ್ಟಬೇಕು. ಭಕ್ತರ ಐಹಿಕ ಹಾಗು ಪಾರತ್ರಿಕ ಉನ್ನತಿಯಾಗಬೇಕೆಂಬುವದೇ ಇವರ ಆಶಯವು.

ಈ ಸಭೆಯಲ್ಲಿ ಇವರು— "ವೀರಶೈವರಲ್ಲಿ ಪ್ರತಿಯೊಬ್ಬರು ಶಿವ ದೀಕ್ಷಾ ಸಂಸ್ಕಾರವನ್ನು ಹೊಂದಬೇಕು. ಲಿಂಗಧಾರಿಯಾದ ಪ್ರತಿಯೊಬ್ಬನು ದಿವಸಕ್ಕೆ ಮೂರು ಸಾರೆ ಅಥವಾ ಎರಡು ಸಾರೆ ಶಿವಪೂಜೆಯನ್ನು ಆಚರಿಸಬೇಕು. ಶಿವಪೂಜೆಗೈಯದೆ ಏನನ್ನೂ ಸೇವಿಸಬಾರದು. ವೀರಶೈವನಾದವನು ಅಭಕ್ಷ್ಯ ಭಕ್ಷಣ, ಅಪೇಯ ಪಾನಗಳನ್ನು ಮಾಡಕೂಡದು. ಪ್ರತಿ ಗ್ರಾಮದಲ್ಲಿ ವೀರಶೈವರ ಗೃಹ-ವಾಸಸ್ಥಾನಗಳು ಶುಚಿರ್ಭೂತವಾಗಿರಬೇಕು. ಶ್ರೀ ಬಸವಣ್ಣನವರ ಮೇಲುಪಂಕ್ತಿಗನುಸರಿಸಿ, ನಮ್ಮ ಭಕ್ತರೆಲ್ಲ ಧರ್ಮದ ನಿಯಮಗಳನ್ನು ಪಾಲಿಸುತ್ತ ಸದಾಚಾರಿಗಳಾಗಿರತಕ್ಕದ್ದು." ಇತ್ಯಾದಿಯಾಗಿ ಬೋಧಿಸಿ ವೀರಶೈವ ಭಕ್ತ ಸಮಾಜದಲ್ಲಿ ಜಾಗೃತಿಯನ್ನುಂಟುಮಾಡಿದರು.

† † † † †

ಖಾದೀ ಬಟ್ಟೆಯ ಬಗ್ಗೆ:— ಶ್ರೀ ಜಗದ್ಗುರು ಮಹಾಸ್ವಾಮಿಗಳು ಖಾದಿಯನ್ನು ಹೆಚ್ಚಾಗಿ ಪ್ರೀತಿಸುವರು. ಇವರು ಯಾವಾಗಲೂ ಕೈಮಗ್ಗದಲ್ಲಿ ಕೈನೂಲಿನಿಂದ ತಯಾರಿಸಿದ ಬಟ್ಟೆಗಳನ್ನೇ ನಖಶಿಖಾಂತ ಉಪಯೋಗಿಸುವರು. ಖಾದಿಯು ಹಿಂದುಸ್ಥಾನದಲ್ಲಿ ಹೊಟ್ಟೆಗಿಲ್ಲದೆ ಬಳಲುತ್ತಿರುವ ಬಡಬಗ್ಗರಿಗೆ ಅವ್ಯಾಹತವಾಗಿ ಅನ್ನವನ್ನೊದಗಿಸಿಕೊಡುವ ಪರಮ ಸಾಧ

ನವು. ಇವನ್ನು ಕೊಳ್ಳುವದರಿಂದ ಹತ್ತಿಯನ್ನು ಬೆಳೆದವರಿಗೆ, ಹತ್ತಿಯನ್ನು ಆರೆಯುವವರಿಗೆ, ಹಿಂಜುವವರಿಗೆ, ನೂಲುವವರಿಗೆ, ನೇಕಾರರಿಗೆ ಹೊಟ್ಟೆಗೆ ಪೂರೈಸಿದಂತಾಗುವದು. ಶ್ರಮವಿಭಾಗದ ತತ್ವವು ಇದರಲ್ಲಿ ಅಡಕವಾಗಿರುವದರಿಂದ ಇದರಿಂದ ಸಮಾಜದ ಹಾಗೂ ರಾಷ್ಟ್ರದ ಉನ್ನತಿಯಾಗುವದು. ಹಿಂದುಸ್ಥಾನದಲ್ಲಿಯ ಬಡಬಗ್ಗರ ಉದರನಿರ್ವಾಹಕ್ಕೆ ಆಧಾರವಾಗಿರುವ ಈ ಪವಿತ್ರ ಖಾದೀ ಬಟ್ಟೆಯನ್ನು ಧರಿಸುವದರಿಂದ ಮನಸ್ಸು ಶಾಂತವೂ, ಪ್ರಸನ್ನವೂ ಇರುವದೆಂದು ತಿಳಿದೇ ಇವರು ಖಾದಿಯನ್ನು ಉಪಯೋಗಿಸುವರು.

† † † † †

ಆದಿಕರ್ನಾಟಕರ ಉದ್ಧಾರ:— ಈ ವಿಷಯವಾಗಿ ಜಗದ್ಗುರು ಮಹಾಸ್ವಾಮಿಗಳು ಮ. ಗಾಂಧೀಜಿಯವರೊಡನೆ ಸಂಭಾಷಣಮಾಡಿದ ಸಮಯದಲ್ಲಿ ಕೆಲವು ಸಂಗತಿಗಳನ್ನು ಹಿಂದೆ ಕೊಟ್ಟಿರುವೆವು. ಆದರೂ ಹಿಂದೊಮ್ಮೆ ಚಿತ್ರದುರ್ಗದಲ್ಲಿ ಆದಿಕರ್ನಾಟಕರ ಪರಿಷತ್ತಾದ ಮೇಲೆ ಅವರು ಮಹಾಸನ್ನಿಧಿಯ ದರ್ಶನಕ್ಕೆ ಬಂದರು. ಆಗ ಜಗದ್ಗುರು ಮಹಾಸ್ವಾಮಿಗಳು ಮಾಡಿದ ಉಪದೇಶವು ಮಹತ್ವದ್ದಿರುವದರಿಂದ ಅದರ ಸಾರಾಂಶವನ್ನೂ ಮುಂದಾದ ಫಲಿತಾಂಶವನ್ನೂ ಇಲ್ಲಿ ವಿವರಿಸುವೆವು.

ಹಿಂದೆ ಚಿತ್ರದುರ್ಗನಗರದಲ್ಲಿ ಆದಿಕರ್ನಾಟಕರ ಸಭೆಯೊಂದು ಜರುಗಿತು. ಈ ಸಭೆಯಲ್ಲಿ ಆದಿಕರ್ನಾಟಕರನ್ನು ಕುರಿತು ಸಹಾನುಭೂತಿಯನ್ನು ತೋರಿಸಿದರು. ದೊಡ್ಡ ದೊಡ್ಡ ಭಾಷಣಗಳೂ ಆದವು. ಆದರೆ ೧೨ ಘಂಟೆಗೆ ಸಭಾಕಾರ್ಯವು ಮುಗಿಯಲ್ಪಟ್ಟು ಹರಿಜನರೆಲ್ಲ ಹೊರಗೆ ಬರಲು, ಅವರಿಗೆ ನೀರುಕುಡಿಯಲಿಕ್ಕೆ ನಳಗಳೇ ಮುಟ್ಟಿಸಲ್ಪಡಲಿಲ್ಲ. ಮಧ್ಯಾಹ್ನವು ಮೀರಿದ್ದರಿಂದ ಇವರ ಕ್ಷುಧಾ-ತೃಷೆಗಳು ಹೆಚ್ಚಾಗಿದ್ದವು. ಆಗ ನೀರಡಿಸಿ ಹಸಿದ ಆ ಹರಿಜನರೆಲ್ಲ ಬೃಹನ್ಮೂಲ ಮಠಕ್ಕೆ ಶ್ರೀ ಜಗದ್ಗುರು ಮಹಾಸ್ವಾಮಿಗಳ ಸನ್ನಿಧಿಗೆ ಹೊರಟುಬಂದುಬಿಟ್ಟರು.

ಬೇಸಿಗೆಯ ಸಮಯ ಬಿಸಿಲು ಅತ್ಯಂತ ಪ್ರಖರತೆಯನ್ನು ಹೊಂದಿತ್ತು. ಆಗ ಶ್ರೀ ಜಗದ್ಗುರು ಮಹಾಸ್ವಾಮಿಗಳು ಮಠದಮುಂದೆ ಹೊರಭಾಗದಲ್ಲಿದ್ದ ದೊಡ್ಡ ಬೇವಿನ ಮರದ ಬುಡದಲ್ಲಿ ತಂಗಾಳಿಗೆ ನಿಂತಿದ್ದರು. ಆಗ

ಇವರ ಉಡಿಗೆ-ತೊಡಿಗೆಗಳಲ್ಲಿ ಆಡಂಬರವು ಲೇಶವಾದರೂ ಇದ್ದಿಲ್ಲ. ಮೈ-ಮೇಲೆ ಒಂದು ತೆಳ್ಳನ್ನ ಖಾದಿಯ ಕ್ಯಾವೀ ಬಣ್ಣದ ಕಪನಿಯನ್ನು ಧರಿಸಿದ್ದರು. ಕೈಯಲ್ಲೊಂದು ಖಾದೀ ಅಂಗವಸ್ತ್ರವಿತ್ತು. ಮಧ್ಯಾಹ್ನ ಸಮಯದ ಶಿವಲಿಂಗಾರ್ಚನೆಯನ್ನು ಆದೇ ತೀರಿಸಿಕೊಂಡು ಬಂದದ್ದರಿಂದ ಹಣೆಯಮೇಲೆ ವಿಭೂತಿಯು ಒಪ್ಪುತ್ತಿತ್ತು. ಕಾಲುಗಳಲ್ಲಿ ಆವುಗೆಗಳಿದ್ದವು. ಕಂಠದಲ್ಲಿ ರುದ್ರಾಕ್ಷಮಾಲೆಯೊಂದು ಒಪ್ಪುತ್ತಿತ್ತು.

ಮಠಕ್ಕೆ ಬರುತ್ತಿರುವ ಆದಿಕರ್ನಾಟಕ ಜನರಿಗೆ ಮಹಾಸ್ವಾಮಿಗಳು ಹೊರಗೆ ಬಂದು ನಿಂತಿದ್ದರಿಂದ ಅನಾಯಾಸವಾಗಿ ದರ್ಶನವಾಯಿತೆಂದು ಆನಂದವಾಯಿತು. ಎಲ್ಲರೂ ದೂರದಿಂದ ಸಾಷ್ಟಾಂಗ ನಮಸ್ಕಾರಮಾಡಿ, ಕೈಮುಗಿದುಕೊಂಡು ನಿಂತು, ಊರಲ್ಲಾದ ಹರಿಜನರ ಸಭೆಯಲ್ಲಿ ಬಾಯಿಂದ ಸಹಾನುಭೂತಿ ತೋರಿಸಿದ್ದನ್ನೂ, ಹಸಿವೆ-ನೀರಡಿಕೆಯಿಂದ ಪೀಡಿತರಾದ ನಮಗೆ ನಳಗಳನ್ನು ಮುಟ್ಟಗೊಡಲಿಲ್ಲವೆಂಬದನ್ನೂ ವಿದಿತಪಡಿಸಿದರು. ಕಡೆಗೆ ಮಹನೀಯರಾದ ತಾವು ನಮ್ಮನ್ನೆಲ್ಲ ಅನುಗ್ರಹಿಸಿ ಉದ್ಧರಿಸಬೇಕೆಂದು ಬೇಡಿಕೊಂಡರು.

ಆಗ ಜಗದ್ಗುರು ಮಹಾಸ್ವಾಮಿಗಳು ಕನಿಕರಪಟ್ಟವರಾಗಿ ಶಾಂತಮುದ್ರೆಯಿಂದ– “ಆದಿಕರ್ನಾಟಕ ಸಮುದಾಯವೇ, ನಿಮ್ಮನ್ನು ಇಂದು ಸಮಕ್ಷಮ ಕಂಡು ಬೋಧಮಾಡುವ ಪ್ರಸಂಗವು ಬಂದದ್ದಕ್ಕಾಗಿ ನಮಗೆ ಅತ್ಯಂತ ಆದಂದವೆನಿಸುತ್ತದೆ. ಭಾರತಮಾತೆಯ ಪುತ್ರರೇ, ನೀವು ಯಾರಿಗೂ ಏನೂ ಹೆಸರಿಡಬೇಡಿರಿ. ನಿಮಗೆ ಚಾಂಡಾಳರೆನ್ನುವ ಶಬ್ದವು ನಿಮ್ಮ ಕೃತಿಯಿಂದ ಬಂದಿರುತ್ತದೇ ಹೊರತು ಬೇರೊಂದು ಕಾರಣದಿಂದಲ್ಲ. ಕಾರಣ ಸ್ಪೃಶ್ಯರೆಂದೆನಿಸಿಕೊಳ್ಳಲಿಚ್ಛಿಸುತ್ತಿದ್ದ ನೀವು ದೈಹಿಕ, ಮಾನಸಿಕ, ವ್ಯವಹಾರಿಕ, ಪಾವಿತ್ರ್ಯವನ್ನು ಕಾಯ್ದುಕೊಳ್ಳಲು ಪ್ರಯತ್ನಿಸಿರಿ. ಹೊಲಸು ಪದಾರ್ಥಗಳನ್ನೂ, ಗೋಮಾಂಸ, ಮದ್ಯ ಮೊದಲಾದ ನಿಷಿದ್ಧ ವಸ್ತುಗಳನ್ನೂ ಸೇವಿಸುವದನ್ನು ಬಿಡಿರಿ. ಶವದ ಮೇಲಿನ ಬಟ್ಟೆಗಳನ್ನು ಧರಿಸಬೇಡಿರಿ. ದುರ್ಗವ್ವ-ದ್ಯಾಮವ್ವ ಇತ್ಯಾದಿ ಜಾತ್ರೆಗಳಲ್ಲಿ ಕುರಿ, ಕೋಣಗಳನ್ನು ಕಡಿಯಬೇಡಿರಿ. ನಿಮ್ಮ ಕಾರ್ಯದಮಟ್ಟಿಗಷ್ಟೇ ನೀವು ಹೊಲಸ್ಸಿನಲ್ಲಿ ಇರಬೇಕೇ ಹೊರತು ಉಳಿದ ವೇಳೆಯಲ್ಲಿ ನಿರ್ಮಲರಾಗಿರ್ರಿ.

ದಿನಾಲು ಸ್ನಾನಮಾಡಿರಿ. ಒಮ್ಮೆಯಾದರೂ ಶಿವಧ್ಯಾನಮಾಡಿರಿ. ನಿಮ್ಮ ಕೇರಿ-ಮನೆಗಳನ್ನು ಥಳಥಳವಾಗಿಟ್ಟುಕೊಳ್ಳಿರಿ. ಧಾರ್ಮಿಕ ಭಾವನೆಯುಳ್ಳವರಾಗಿ ಮೆಟ್ಟುಮೆಟ್ಟಿನಿಂದ ಪ್ರಗತಿಯನ್ನು ಹೊಂದಿರಿ. ಇದರಿಂದ ನಿಮ್ಮ ಅಸ್ಪೃಶ್ಯತ್ವವು ತಾನೇ ನಾಶವಾಗುವದು. ಅಂದರೆ ನಿಮಗೆ ಸಮಾಜವು ಸಹಾನುಭೂತಿಯನ್ನು ತೋರಿಸುವದು." ಎಂದು ವರದ ವಾಣಿಯಿಂದ ಬೋಧಿಸಿದರು. ಹಾಗು ಬಹಿರ್ಭಾಗದಲ್ಲಿ ಅವರಿಗೆ ಅನ್ನ-ನೀರುಗಳ ವ್ಯವಸ್ಥೆಮಾಡಿ ಅವರ ಕ್ಷುಧಾತೃಷೆಯನ್ನು ಪರಿಹರಿಸಿದರು.

ಹಸಿವೆ-ನೀರಡಿಕೆಗಳು ಹರಿದು ಆನಂದ ಉಂಟಾಗಲು ಕಡೆಗೆ ಎಲ್ಲರೂ ಕೈಜೋಡಿಸಿಕೊಂಡು ಪ್ರಾರ್ಥಿಸಿದ್ದೇನಂದರೆ-

"ದೇವರೂ, ಇಂದು ನಮ್ಮಮೇಲೆ ದಯಮಾಡಿದಿರಿ. ನಿಮ್ಮ ಬೋಧದಿಂದ ದಡ್ಡರಾದ ನಮಗೆ ಎಚ್ಚರಿಕೆಯುಂಟಾಯಿತು. ಇನ್ನು ಮುಂದೆ ನಿಮ್ಮ ಅಪ್ಪಣೆಯಂತೆಯೇ ನಡೆದು ತಂದೆಗಳಾದ ನಿಮ್ಮಿಂದ ಸೈ ಎನಿಸಿಕೊಳ್ಳುವೆವು." ಎಂದು ಸಾಷ್ಟಾಂಗ ನಮಸ್ಕಾರಮಾಡಿ ತಮ್ಮ ತಮ್ಮ ಸ್ಥಳಕ್ಕೆ ನಡೆದರು.

ವಾಚಕರೇ, ಸತ್ಸಮಾಗಮದ ಮಹಿಮೆಯು ಸಾಮಾನ್ಯವಾದುದಲ್ಲ. ಅದರ ಫಲವು ಅವರವರ ದೃಢಭಕ್ತಿಯ ಮೂಸದಿಂದ ಆಗಿಯೇತೀರುವದು. ಇದರಂತೆ ಜಗದ್ಗುರು ಮಹಾಸ್ವಾಮಿಗಳ ಸದ್ಬೋಧ ದೊರೆತ ಆ ಹರಿಜನರ ವೃತ್ತಿಯಲ್ಲಿಯೂ ಸುಧಾರಣೆಯಾಗದೆ ಇರಲಿಲ್ಲ. ಮುಂದೆ ಮಹಾಸ್ವಾಮಿಗಳು ಅಪ್ಪಣೆ ಕೊಡಿಸಿದಂತೆ ಸಿಂದಿ-ಸೆರೆ ಕುಡಿಯುವದನ್ನೂ, ಗೋಮಾಂಸಾದಿ ನಿಷಿದ್ಧ ವಸ್ತುಗಳನ್ನು ಸೇವಿಸುವದನ್ನೂ ಅವರು ಬಿಟ್ಟುಬಿಟ್ಟರು. ಉಡಿಗೆ ತೊಡಿಗೆಗಳಲ್ಲಿ ನೈರ್ಮಲ್ಯವುಳ್ಳವರಾದರು. ಆ ಭಾಗದ ಸಿದ್ದೇನಹಳ್ಳಿ ಎಂಬ ಗ್ರಾಮದಲ್ಲಾಗುವ ದೇವಿಯ ಜಾತ್ರೆಯಲ್ಲಿ ಪ್ರತಿವರ್ಷ ೭-೮ ಕೋಣಗಳನ್ನು, ಕುರಿಗಳನ್ನು ಕಡಿಯುತ್ತಿದ್ದರು. ಅದನ್ನು ಇವರು ಪೂರಾ ನಿಲ್ಲಿಸಿಬಿಟ್ಟರು. ಹಾಗು ಮಹಾಸ್ವಾಮಿಗಳಿಂದ ೧೦೦ ರೂಪಾಯಿ ಮೆಚ್ಚುಗೆ ಪಡೆದು ಸಸ್ಯಾಹಾರದಿಂದ ಅಡಿಗೆಮಾಡಿಸಿ ಅನ್ನದಾನಮಾಡಿ ಆ ವರ್ಷದ ಜಾತ್ರೆಯನ್ನು ಜರುಗಿಸಿದರು. ದೌರ್ಜನ್ಯದ ದಾರಿಯನ್ನೇ ಬಿಟ್ಟು ಸೌಜನ್ಯದ ದಾರಿಯನ್ನೇ ಹಿಡಿದರು. ಮಹಾಸ್ವಾಮಿಗಳ ಅಪ್ಪಣೆಯಂತೆ ಮದ್ಯಪಾನವನ್ನು

ಮಾಡಲಿಕ್ಕಿಲ್ಲವೆಂದೂ, ತಮ್ಮ ಜನರಲ್ಲಿ ಯಾರಾದರೂ ಮಾಡಿದರೆ ಬಹಿಷ್ಕಾರವೆಂದೂ ಪ್ರತಿಜ್ಞೆಮಾಡಿದರು.

ಜಗದ್ಗುರು ಮಹಾಸ್ವಾಮಿಗಳು ಇವರ ಚಿತ್ತವೃತ್ತಿಯನ್ನು ಹರಣ ಮಾಡಿದ್ದರಿಂದ ತಾವು ಸದಾಚಾರಿಗಳೂ, ನಿರ್ಮಲರೂ, ಶಿವಧ್ಯಾನತತ್ಪರರೂ ಆಗಿ ಮಹಾ|| || ಸ್ವಾಮಿಗಳ ಸನ್ನಿಧಿಯನ್ನು ಇನ್ನೊಮ್ಮೆ ಯಾವಾಗ ಕಂಡೇವು; ತಮ್ಮಲ್ಲಾಗಿರುವ ರೂಪಾಂತರವನ್ನು ಯಾವಾಗ ಜಗದ್ಗುರುಗಳಿಗೆ ತೋರಿಸೇವು ಎಂದು ಹಂಬಲಿಸುತ್ತ ಮರುವರ್ಷ ಇವರು ಮಹಾ|| || ಸನ್ನಿಧಿಯ ದರ್ಶನಕ್ಕೆ ಸ್ನಾನಮಾಡಿ ಶಿವಭಜನೆ ಮಾಡುತ್ತ ಬ್ರಹನ್ಮಠಕ್ಕೆ ಬಂದರು. ಆಗ ಜಗದ್ಗುರುಗಳಿಗೆ ಈ ಜನರಲ್ಲಿ ಹೀಗೆ ಕ್ರಾಂತಿಯುಂಟಾದುದನ್ನು ಕಂಡು ಬಹಳ ಆನಂದವಾಯಿತು. ಮಹಾಸ್ವಾಮಿಗಳು ಮುಸಲ್ಮಾನ, ಕ್ರಿಶ್ಚನ್ ಮೊದಲಾದ ಪರಧರ್ಮದವರಿಗೆ ಪ್ರವೇಶಕ್ಕೆ ನಿರ್ದಿಷ್ಟಪಡಿಸಿರುವ ಸ್ಥಾನದವರೆಗೆ ಈ ಹರಿಜನರಿಗೆ ದರ್ಶನಕ್ಕೆ ಬರಲು ಸವಲತ್ತನ್ನು ಕೊಟ್ಟು ಇವರ ಆನಂದವನ್ನು ದ್ವಿಗುಣಿತಗೊಳಿಸಿದರು. ಸನ್ಮಾರ್ಗವನ್ನು ಹಿಡಿಸಿದರು.

† † † † †

ಈ ಮೇರೆಗೆ ಜಗದ್ಗುರು ಮಹಾಸ್ವಾಮಿಗಳು ಅನೇಕ ಧಾರ್ಮಿಕ-ಸಾಮಾಜಿಕ ಕಾರ್ಯಗಳನ್ನು ಕೈಕೊಂಡು ಲೊಕಕಲ್ಯಾಣಮಾಡಿರುವರು. ಹಾವೇರಿ ಶಿವಾನಂದ ಥೇಟರಿನಲ್ಲಿ ಇವರು ಜಾಹೀರುಭಾಷಣಮಾಡಿ ಅಪ್ಪಣೆ ಕೊಡಿಸಿದ್ದೂ, ೧೯೩೭ ರಲ್ಲಿ ಸೊಲ್ಲಾಪೂರ ಮೆಕ್ಯಾನಿಕ ಥೇಟರಿನಲ್ಲಿ ಅಪ್ಪಣೆ ಕೊಡಿಸಿದ್ದೂ ದೊಡ್ಡ ದೊಡ್ಡ ದೇಶಭಕ್ತರಿಗೆ ಸಹ ಮಾರ್ಗದರ್ಶಕಗಳಾಗಿರುವವು.

# ೧೫ ನೇ ಅಧ್ಯಾಯ.

## ಶ್ರೀ ಜಗದ್ಗುರು ಮಹಾಸ್ವಾಮಿಗಳ ಬಗ್ಗೆ

### ಮಹನೀಯರು ವ್ಯಕ್ತಪಡಿಸಿದ ಪೂಜ್ಯಭಾವ.

ಪ್ರಿಯ ವಾಚಕರೇ, ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರಘರಾಜೇಂದ್ರ ಮಹಾಸ್ವಾಮಿಗಳಿಂದ ಜರುಗಿದ ಲೋಕೋಪಯೋಗ ಕಾರ್ಯಗಳು ಅಗಮ್ಯವೂ, ಆಶ್ಚರ್ಯಕರವಾದಂಥವುಗಳೂ ಇರುತ್ತವೆ. ಅಂತೇ ಶ್ರೀಮನ್ಮೈಸೂರ ಮಹಾರಾಜರೂ, ಕೊಲ್ಹಾಪೂರದ ಶ್ರೀ ಶಾಹುಛತ್ರಪತಿ ಮಹಾರಾಜರುಗಳಂಥ ರಾಜಾಧಿರಾಜರೂ, ಮಹಾತ್ಮಾ ಗಾಂಧೀಜಿಯವರಂಥ ಲೋಕನಾಯಕರೂ, ಇವರ ವಿಷಯವಾಗಿ ಪೂಜ್ಯಭಾವವನ್ನು ವ್ಯಕ್ತಪಡಿಸಿರುವರು. ಈ ಅಧ್ಯಾಯದಲ್ಲಿ ನಮ್ಮ ಬಿನ್ನಹವನ್ನು ಮನ್ನಿಸಿ ಶ್ರೀ ಜಗದ್ಗುರು ಮಹಾಸ್ವಾಮಿಗಳ ವಾಙ್ಮಯರೂಪ ಸೇವೆಯೆಂದು ನಾವು ನಮ್ಮ ಗ್ರಂಥಮಾಲೆಯ ದ್ವಾರ ಕೈಕೊಂಡ ಈ ಕಾರ್ಯಕ್ಕೆ ತಮ್ಮ ಶುಭ ಸಂದೇಶಗಳನ್ನೂ ಶ್ರೀ ಶ್ರೀಗಳವರಿಂದ ಜರುಗಿದ ಕಾರ್ಯ ಇವರಬಗ್ಗೆ ತಮ್ಮಲ್ಲಿದ್ದ ಪೂಜ್ಯಭಾವ ಇವುಗಳನ್ನೂ ಒಳಗೊಂಡ ತಮ್ಮ ಅಮೌಲ್ಯ ವಿಚಾರಗಳನ್ನೂ, ಪತ್ರರೂಪದಿಂದ ಕಳಿಸಿದ ಡಾ|| ಸಿ. ಆರ್. ರಡ್ಡಿಯವರು ವ್ಹಾಯಿಸ ಚಾನ್ಸಲರ, ಆಂಧ್ರ ಯುನಿವ್ಹರ್ಸಿಟಿ ವಾಲ್ಟೇರ; ಮೈಸೂರ ಮಹಾರಾಜಾ ಕಾಲೇಜದ ಫಿಲಾಸಫಿ ಪ್ರೊ|| ಎ. ಆರ್. ವಾಡಿಯಾ ಬಿ. ಎ. (ಕಾಂಟ) ಬಾರ್-ಅಟ್-ಲಾ. ಮತ್ತು ತಿರು-ವಾಂಕೂರಲ್ಲಿರುವ ಶ್ರೀ K. ಚಾಂಡಿ, ರಿಟಾಯರ್ಡ ಕೌನ್ಸಿಲರ ಮೈಸೂರ; ಸರ್, ಮಿರ್ಜಾ ಎಮ್. ಇಸ್ಮಾಯಿಲ್ ಸಾಹೇಬರು ದಿವಾನ ಆಫ್ ಮೈಸೂರ; ಈ ಮಹನೀಯರ ಉಪಕಾರವನ್ನು ಸ್ಮರಿಸಿ, ಇವರ ಪತ್ರಗಳನ್ನು ವಾಚಕರ ಮುಂದಿರಿಸಿ ಮಂಗಲಕರವಾದ ಶ್ರೀ ಜಗದ್ಗುರುಗಳ ಈ ಚರಿತ್ರೆಯನ್ನು ಸಮಾಪ್ತಗೊಳಿಸುವೆವು. ಶ್ರೀ ಜಗದ್ಗುರು ಮಹಾಸ್ವಾಮಿಗಳ

ವಾಙ್ಮಯ ರೂಪ ಸೇವೆಯೆಂದು ಕೈಕೊಂಡು ಕೊನೆಗಾಣಿಸಿದ ಈ ಕಾರ್ಯವನ್ನು ವಾಚಕರು ಹಂಸಕ್ಷೀರ ನ್ಯಾಯದಂತೆ ಪರಿಗ್ರಹಿಸಬೇಕಾಗಿ ಪ್ರಾರ್ಥನೆ.

† † † † †

ಡಾ|| ಸಿ. ಆರ್. ರಡ್ಡಿ ವ್ಹಾಯಿಸ ಚಾನ್ಸಲರ ಆಂಧ್ರ ಯುನಿವ್ಹರ್ಸಿಟಿ ಇವರು ನಮ್ಮ ಗ್ರಂಥಮಾಲೆಗೆ ಶುಭಸಂದೇಶವನ್ನು ಕಳಿಸಿ, ಜಗದ್ಗುರು ಮಹಾಸ್ವಾಮಿಗಳ ವಿಷಯವಾಗಿ ಪೂಜ್ಯಭಾವವನ್ನು ತೋರ್ಪಡಿಸಿ ಕಳಿಸಿದ ಪತ್ರ.

---

# ANDHRA UNIVERSITY.

VICE CHANCELLOR.
C. R. REDDI.

ಆಂಧ್ರ
ಯುನಿವ್ಹರ್ಸಿಟಿ.

WALTAIR
2nd February 1940.

I have the greatest regard for Shriman Maharaj Niranjana Jagadguru Jayadeva Muragharajendra Mahaswami of Chittaldurg. During my service in Mysore the head of the Educational Department, I had the honour and privilage of coming into contact with his noble personality. He impressed me as a real Jagadguru, one who made no distinction in his benefactions between the different Castes and Creeds and treated all alike in a spirit of world-wide love and charity.

I may recal some reminiscences which I trust will be of interest to the general

public. His visit to Bangalore about the year 1919 or 1920 cannot have faded from the memory of its citizens. He was received with the highest honours, and more significant than formal honours, with boundless love and veneration by the masses, excepting a few who tried to create mischief but failed miserably. The time he spent in the Choultry near the City Railway Station, where fine arrangements had been made for his reception by the Lingayat Community, was a round of spiritual discourses and secular festivities.

It was the intention of the Jagadguru to commemorate his visit to Bangalore. Unfortunately, at that time, the Lingayats were divided into two rival parties. I need not rake up the details. The rival parties pulled in opposite directions, and the Mahaswami was put in a difficult position. On accouut of these differences, His Highness the Yuvarajah of Mysore who had agreed to be present at one of the functions of Muragharajendra Mahaswami, wisely declined and cancelled the engagement. It was on an evening at about 8—0 P. M. Anemissary of the Jagadguru called at my residence and informed me that the Mahaswami disered my presence

immediately. I at once obeyed the command. The Mahaswami was seated in the hall by himself, all the functions of the day being over. He received me with grace and cordiality, and though I protested that the honour was too much, he made me sit by him on the sofa. He told me that he had Rs. 20,000/— to give; and ln view of the factions amongst his disciples, he did not know to whom to give. His object was to make it an educational benefaction. I told the Mahaswami that the best form would be to found a Hostel, that I would undertake to bargain with the Government for the free gift of a site and for a grant equal to the ammount he would give, and that under all the circumstances of the case, it would be wisest on his part to give me the money, and that too by name, and not as Inspector-General of Education, since I had to carry on correspondence with the Government as his agent and trustee! No sooner told than done. He drew a cheque for Rs. 20,000/— in favour of C. R. Reddi Esq., handed it to me, loaded me with fruits and flowers and sent me back home thoroughly satisfied with the evening's work. When the news got abroad the next day, the factions became united, there being

nothing to quarrel about. I interceded with His Highness the Yuvarajah and got him to lay the foundation stone of the Muraghara-jendra Mahaswami Hostel. Government too, though no formal orders could be passed, agreed to give the site which I had mentioned as specially desirable. Within three days, the foundation stone was laid by His Highness the Yuvarajah. I cannot recall without a melting heart and tearful eye the gracious command of Muragharajendra Mahaswami that my seat should be next to his.

I may end up this tale by stating that till the Governmect gave an equal grant, the moneys were kept in deposit in my own name; and then just on the eve of my resignation, when all the preliminaries had been put through, I gave a cheque to the Inspector-General of Education and regretfully quitted the scene of my educational activities in Mysore.

The Jagadguru used to give Scholarships to Muhammadan boys as well, not to speak of Hindus. Naturally he concentrated the chief part of his charities on Lingayats, from whom he derived all his revenues. But it speaks much for the catholicity of Muragharajendra

Mahaswame that his charities covered a much wider field than his community.

During my visit to Chittaldrug I was invited to visit the Mutt of the Mahaswami. I was treated with a grace and cordiality beyond my deserts.

I feel that in him I had a truly great and noble friend, sincere and generous.

The Lingayats have been particularly fortunate in having as their spiritual leader a person of his exalted character and wide, progressive humanitarian outlook.

**C. R. Reddi.**

( ಮೇಲಿನ ಪತ್ರದ ಕನ್ನಡ ಅನುವಾದ )

ವ್ಹಾಯಿಸ ಚಾನ್ಸಲರ,
**ಸಿ. ಆರ್. ರಡ್ಡಿ.**

ಆಂಧ್ರ ಯುನಿವ್ಹ-ರ್ಸಿಟಿ.

**ವಾಲ್ಟೇರ,**
ತಾ. ೨ ನೇ ಫೆಬ್ರುವರಿ ೧೯೪೦

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರಘ ರಾಜೇಂದ್ರ ಮಹಾಸ್ವಾಮಿಗಳು ಚಿತ್ರದುರ್ಗ ಇವರ ಬಗ್ಗೆ ನನಗೆ ಬಹಳ ಪೂಜ್ಯಭಾವವಿದೆ. ಮೈಸೂರ ಸಂಸ್ಥಾನದಲ್ಲಿ ವಿದ್ಯಾಖಾತೆಯ ಮುಖ್ಯಾಧಿ ಕಾರಿಯಾಗಿ ನಾನು ಕೆಲಸಮಾಡುವಾಗ ಇವರ ಪ್ರತ್ಯಕ್ಷ ಸಹವಾಸದ ಯೋಗವು ನನಗೆ ಒದಗಿಬಂದಿತ್ತು. ಆಗ ಇವರು ನಿಜವಾದ ಜಗದ್ಗುರು ಗಳೆಂದು ನನಗನಿಸಿತು. ಇವರು ಜಾತಿ-ಮತಗಳ ಭೇದವೆಣಿಸದೆ, ಉಪ ಕಾರವನ್ನು ಮಾಡುತ್ತಿರುವರು. ಜಾಗತಿಕ ಪ್ರೀತಿ-ನೀತಿಗಳ ಉದಾತ್ತ ಧ್ಯೇಯದಿಂದ ಇವರು ಎಲ್ಲರನ್ನು ಸಮಭಾವದಿಂದ ನೋಡುತ್ತಿರುವರು.

ನನ್ನ ನಂಬಿಗೆಯಂತೆ ಜನಸಾಮಾನ್ಯರಿಗೆ ಉಪಯೋಗಬೀಳುವಂಥ ಕೆಲವು ಸಂಗತಿಗಳನ್ನು ನಾನು ಇಲ್ಲಿ ಹೇಳುವೆನು. ೧೯೧೯—೨೦ರ ಸುಮಾರಕ್ಕೆ ಇವರು ಬೆಂಗಳೂರಿಗೆ ಬಂದದ್ದನ್ನು ಬೆಂಗಳೂರ ನಾಗರಿಕರು ಎಂದೂ ಮರೆಯುವ ಸಂಭವವಿಲ್ಲ. ಆಗ ಶ್ರೀ ಶ್ರೀ ಗಳು ಬಹಳ ಮರ್ಯಾದೆಯಿಂದ ಸ್ವಾಗತಿಸಲ್ಪಟ್ಟರು. ಜನರೆಲ್ಲ ನಿಜವಾದ ಆದರ, ಮರ್ಯಾದೆ, ಪೂಜ್ಯಭಾವಗಳನ್ನು ತೋರಿಸಿದರು. ಶ್ರೀಗಳವರಿಗೆ ಕುಚೇಷ್ಟೆಮಾಡಬೇಕೆಂದು ಪ್ರಯತ್ನಿಸಿದ ಕೆಲವರು ಬಹಳ ಅಪಮಾನವನ್ನು ಹೊಂದಿ ನಿರಾಶೆಯುಳ್ಳವರಾದರು. ರೇಲ್ವೆ ಸ್ಟೇಶನದ ಹತ್ತರದ ಛತ್ರದಲ್ಲಿ ಇವರ ಬಿಡಾರವಿತ್ತು. ಲಿಂಗಾಯತ ಸಮಾಜದವರು ಅಲ್ಲಿ ಉತ್ತಮ ವ್ಯವಸ್ಥೆಯನ್ನಿಟ್ಟಿದ್ದರು. ಈ ಸ್ಥಳದಲ್ಲಿ ಧಾರ್ಮಿಕ ಹಾಗೂ ಸಾಮಾಜಿಕ ವಿಷಯಗಳ ಚರ್ಚೆಯು ಸದಾ ನಡೆಯುತ್ತಿದ್ದಿತು.

ಶ್ರೀ ಶ್ರೀ ಗಳವರಿಗೆ ಬೆಂಗಳೂರಿಗೆ ಆಗಮಿಸಿದ್ದನ್ನು ನೆನಪಿಡುವಂತೆ ಮಾಡಬೇಕೆಂಬ ಇಚ್ಛೆ ಇತ್ತು. ಆದರೆ ಆ ಕಾಲಕ್ಕೆ ಅಲ್ಲಿದ್ದ ಲಿಂಗಾಯತ ರಲ್ಲಿ ದುರ್ದೈವದಿಂದ ಎರಡು ಪಂಗಡಗಳಾಗಿದ್ದವು. ಈ ಬಗ್ಗೆ ಆದರ ವಿವರಗಳನ್ನು ಇಲ್ಲಿ ಕೊಡುವದು ಅನಾವಶ್ಯಕವು. ಆಗ ಎರಡು ಪಕ್ಷಗಳು ಬೇರೆ ಬೇರೆ ಕಡೆಗೆ ಜಗ್ಗುತ್ತಿದ್ದುದರಿಂದ ಮಹಾಸ್ವಾಮಿಗಳಿಗೆ ಬಹಳ ಕಠಿಣ ಪರಿಸ್ಥಿತಿಯು ಒದಗಿತು. ಶ್ರೀಯುದ್ಯುವರಾಜರವರು ಈ ಸಮಾರಂಭಕ್ಕೆ ಹಾಜರ ಇರಲು ಮೊದಲು ಒಪ್ಪಿದ್ದರು. ಆದರೆ ಇಂಥ ಭಿನ್ನ ಪರಿಸ್ಥಿತಿಯು ಒದಗಿದ ಮೂಲಕ ಬರುವದನ್ನು ಜಾಣತನದಿಂದ ನಿರಾಕರಿಸಿದರು. ಪರಿಸ್ಥಿತಿಯು ಹೀಗುಂಟಾಗಲು ಅಲ್ಲ ಒಂದು ದಿನ ಸಂಜೆಯುಮುಂದೆ ೮ ಗ. ಸುಮಾರಕ್ಕೆ ಜಗದ್ಗುರುಗಳ ಶಿಷ್ಯನೊಬ್ಬನು ನನ್ನ ಮಂದಿರಕ್ಕೆ ಬಂದು ಮಹಾಸ್ವಾಮಿಗಳು ತಮಗೆ ಬರಲಿಕ್ಕೆ ಅಪ್ಪಣೆಮಾಡಿರುವರೆಂದು ಹೇಳಿದನು. ನಾನಾದರೂ ಆವರ ಅಪ್ಪಣೆಯನ್ನು ಕೂಡಲೇ ಮನ್ನಿಸಿ ಶ್ರೀಗಳವರ ಸನ್ನಿಧಿಗೆ ಹೋದೆನು. ಆಗ ಆ ದಿನದ ಕಾರ್ಯಕಲಾಪಗಳನ್ನು ಮುಗಿಸಿ ಒಬ್ಬರೇ ಬಿಡಾರದಲ್ಲಿ ವಿರಾಮಾಸನದಮೇಲೆ ಕುಳಿತಿದ್ದರು. ನನ್ನನ್ನು ಕಂಡೊಡನೆ ದಯಾದೃಷ್ಟಿಯಿಂದಲೂ, ಸಖ್ಯಭಾವದಿಂದಲೂ ನನ್ನನ್ನು ಬರ ಮಾಡಿಕೊಂಡರು. ನಾನು ಇಷ್ಟೊಂದು ಮರ್ಯಾದೆಗೆ ಪಾತ್ರನಲ್ಲವೆಂದು

ಬಿನ್ನವಿಸಿಕೊಂಡರೂ ಶ್ರೀಗಳವರು ನನ್ನನ್ನು ಹತ್ತರದಲ್ಲಿಯು ಒಂದು ಮಂಚದಮೇಲೆ ಕುಳ್ಳಿರುವಂತೆ ಮಾಡಿದರು. ಅನಂತರ ಮಹಾಸ್ವಾಮಿಗಳು— " ನನ್ನ ಹತ್ತರ ಕೊಡಲು ೨೦ ಸಾವಿರ ರೂಪಾಯಿಗಳಿವೆ. ಆದರೆ ನಮ್ಮ ಶಿಷ್ಯರಲ್ಲಿ ಪಂಗಡಗಳಿದ್ದಮೂಲಕ ಯಾರಿಗೆ ಕೊಡಬೇಕೆಂಬುದು ತೋಚಲೊಲ್ಲದು " ಎಂದರು. ಶ್ರೀ ಶ್ರೀ ಗಳವರ ಉದ್ದೇಶವು ಆ ಹಣವನ್ನು ವಿದ್ಯಾಭಿವೃದ್ಧಿಗಾಗಿ ವೆಚ್ಚಮಾಡಬೇಕೆಂದಿತ್ತು. ಆಗ ನಾನು ಅವರಿಗೆ— " ಈ ಹಣದಿಂದ ಒಂದು ಉತ್ತಮವಾದ ಛಾತ್ರನಿಲಯವನ್ನು ಕಟ್ಟಿಸುವದು ಯೋಗ್ಯವು. ನಾನು ಸಹ ಸರಕಾರದವರೊಡನೆ ಕೆಲಸ ನಡಿಸಿ ಈ ಕಾರ್ಯಕ್ಕೆ ಒಂದು ಧರ್ಮಾರ್ಥ ಸ್ಥಳವನ್ನೂ, ಇದರಷ್ಟೇ ಸಹಾಯ ದ್ರವ್ಯವನ್ನೂ ಒದಗಿಸಿ ಕೊಡುವೆನೆಂ"ದು ಭರವಸೆಯನ್ನಿತ್ತೆನು. ಹಾಗು " ಈ ಹಣವನ್ನು ನನ್ನ ಕೈಯಲ್ಲಿ ಕೊಡುವದಾದರೆ " ಇನಸ್ಪೆಕ್ಟರ ಜನರಲ್ " ಎಂಬ ದೃಷ್ಟಿಯಿಂದ ಕೊಡದೆ ವ್ಯಕ್ತಿಯ ಹೆಸರಿನಿಂದ ಕೊಡುವದು ಯೋಗ್ಯವು. ಅಂದರೆ ಸರಕಾರದವರ ಸಂಗಡ ಎಜಂಟ ಅಥವಾ " ಟ್ರಸ್ಟಿ " ಪರವಾಗಿ ಪತ್ರವ್ಯವಹಾರವನ್ನು ಮಾಡಲನುವಾಗುವದು " ಎಂದು ಹೇಳಿದೆನು.

ಇದನ್ನು ಕೇಳಿದ ಕೂಡಲೆ ಶ್ರೀ ಶ್ರೀ ಗಳವರು ಒಮ್ಮೆಲೇ ನನ್ನ ಹೆಸರಿನಿಂದ ೨೦ ಸಾವಿರ ರೂಪಾಯಿಗಳ ಚಕ್ಕನ್ನು ಕೊಟ್ಟರು. ಹಾಗು ಫಲ-ಪುಷ್ಪಗಳ ಭಾರದಿಂದ ನನಗೆ ಮರ್ಯಾದೆಮಾಡಿ ಆನಂದದಿಂದ ತಿರುಗಿ ಕಳಿಸಿದರು. ಈ ಸುದ್ದಿಯು ಮರುದಿವಸ ಹಬ್ಬಿದಕೂಡಲೇ ವಿರುದ್ಧ ಪಕ್ಷಗಳು ಬಡಿದಾಡಲಿಕ್ಕೆ ಕಾರಣ ಉಳಿಯದಮೂಲಕ ಒಂದಾದವು. ಮುಂದೆ ನಾನು ಶ್ರೀಮದ್ಯುವರಾಜರ ದರ್ಶನ ತಕ್ಕೊಂಡು ಪತ್ರವ್ಯವಹಾರಮಾಡಿ ಶ್ರೀ ಮುರಘರಾಜೇಂದ್ರ ಮಹಾಸ್ವಾಮಿಗಳ ಛಾತ್ರನಿಲಯದ ಶಂಕುಸ್ಥಾಪನೆಯನ್ನು ಅವರಿಂದ ಮಾಡಿಸಿದೆನು. ಸರಕಾರವು ನಾನು ನಿರ್ದಿಷ್ಟಮಾಡಿದ ಸ್ಥಳವನ್ನು, ಕಾಯಿದೆಯನ್ನೂ, ವರಿಷ್ಟರ ಪರವಾನಿಗೆಯನ್ನೂ ನಿರೀಕ್ಷಿಸದೆ, ಕೊಟ್ಟುಬಿಟ್ಟರು. ೩ ದಿವಸಗಳಲ್ಲಿ ಯುವರಾಜರಿಂದ ಶಂಕುಸ್ಥಾಪನೆಯಾಯಿತು. ಮಹಾಸ್ವಾಮಿಗಳ ಈ ಕಾರ್ಯವು ನನ್ನ ಮೂಲಕ ಜರುಗಿದ್ದನ್ನೂ ಅವರ ಆಸನದಹತ್ತರ ನನ್ನ ಆಸನವಿದ್ದದ್ದನ್ನೂ

ನೆನಿಸಿದರೆ ನನ್ನ ಹೃದಯವು ಕರಗಿ ಆನಂದಬಾಷ್ಪಗಳು ಉದುರುತ್ತವೆ.

ಇದಕ್ಕೆ ಸರಿಯಾದ ಹಣವು ಸರಕಾರದಿಂದ ದೊರೆಯುವವರೆಗೆ ಎಲ್ಲ ಹಣವು ನನ್ನ ಹೆಸರಿನಿಂದಲೇ ಠೇವಿಸಿಂದ ಉಳಿಯಬೇಕಾಯಿತು. ನಾನು ಕೆಲಸದಿಂದ ನಿವೃತ್ತನಾಗುವಾಗ ಪೂರ್ವದ ಎಲ್ಲ ಕಾರ್ಯಕ್ರಮಗಳು ಮುಗಿ ದಿದ್ದವು. ಆಗ ನಾನು ಸದರ ಚಕ್ಕನ್ನು ವಿದ್ಯಾಖಾತೆಯ ಇನಸ್ಪೆಕ್ಟರ ಜನ ರಲ್ ಇವರ ಕಡೆಗೆ ಕೊಟ್ಟು ಮೈಸೂರ ಸಂಸ್ಥಾನದಲ್ಲಿಯ ನನ್ನ ಕೆಲಸ ದಿಂದ ಆಸಮಧಾನದಿಂದ ನಿವೃತ್ತಿಯನ್ನು ಹೊಂದಿದೆನು.

ಜಗದ್ಗುರುಗಳು ಹಿಂದುಗಳಿಗಷ್ಟೇ ಅಲ್ಲದೆ, ಮುಸಲ್ಮಾನರಿಗೆ ಸಹ ಶಿಷ್ಯವೇತನವನ್ನು ಕೊಟ್ಟಿರುವರು. ಯಾರೊಬ್ಬರು ತಾವು ಯಾವ ಸಮಾ ಜದಿಂದ ಆದಾಯವನ್ನು ಹೊಂದುವರೋ ಆ ಸಮಾಜಕ್ಕೆ ವಿಶೇಷ ಸಹಾಯ ವನ್ನು ಮಾಡುವದು ಸ್ವಾಭಾವಿಕವು. ಆದರೆ ಶ್ರೀ ಮುರಘರಾಜೇಂದ್ರ ಮಹಾಸ್ವಾಮಿಗಳು ಮಾತ್ರ ತಮ್ಮ ಸಮಾಜದ ಹೊರ್ತು ಉಳಿದವರಿಗೆಸಹ ಸಹಾಯಮಾಡುತ್ತಿದ್ದುದು ಪ್ರಶಂಸನೀಯವಾದ ಸಂಗತಿಯು.

ನಾನು ಚಿತ್ರದುರ್ಗಕ್ಕೆ ಹೋದಾಗ ಮಹಾಸ್ವಾಮಿಗಳವರ ಮಠಕ್ಕೆ ಆಮಂತ್ರಿಸಲ್ಪಟ್ಟಿದ್ದೆನು. ಆ ಕಾಲಕ್ಕೆ ನನ್ನ ಯೋಗ್ಯತೆಮೀರಿ ನನಗೆ ಆದರಾ ತಿಥ್ಯವನ್ನು ಮಾಡಿದರು. ಮಹಾಸ್ವಾಮಿಗಳೆಂದರೆ ಬಹಳ ದೊಡ್ಡ ಹಾಗು ಉದಾತ್ತ ನಿಜವಾದ ಗೆಳೆಯರೆಂದು ನಾನು ತಿಳಿಯುವೆನು.

ಇಂಥ ಉಚ್ಚ ಮತ್ತು ಉದಾತ್ತ ಸ್ವಭಾವದ, ವಿಶಾಲ ದೃಷ್ಟಿಯ, ಮಾನವೀ ಉನ್ನತಿಗೆ ಪ್ರಯತ್ನಿಸುವ ಧಾರ್ಮಿಕ ಮುಖಂಡರನ್ನು ಪಡೆದದ್ದು ಲಿಂಗಾಯತ ಜನರ ಸುದೈವವು!

ಸಿ. ಆರ್. ರಡ್ಡಿ.

ಮೈಸೂರ ಯುನಿವ್ಹರ್ಸಿಟಿಯ ಫಿಲಾಸಫಿ ಪ್ರೊ|| ಎ. ಆರ್. ವಾಡಿಯಾ
ಬಿ. ಎ. (ಕ್ಯಾಂಟಬ್) ಬಾರ-ಅಟ್-ಲಾ ಇವರು ಶ್ರೀ ಜಗದ್ಗುರುಗಳ
ವಿಷಯವಾಗಿ ಪೂಜ್ಯಭಾವವನ್ನು ತೋರಿಸಿ ಬರೆದುಕಳಿಸಿದ ಪತ್ರ.

**UNIVERSITY of MYSORE.**

**A. R. Wadia,** B. A. (CANTAB.) **Bar-at-Law,**
*Professor of Phillasaphy.*

**Maharajas College Mysore.** *30th January 1940.*

I have a very vivid recollection of the day nearly ten years ago, when as Offg. Director of Public Instruction I had the honour of paying a visit to Shriman Maharaj Niranjan Jagadguru Jayadeva Murgharajendra Mahaswami of Chitaldrug. His courtesy, learning and the peaceful atmosphere that pervaded him have left a lasting impression on my mind. On various occasions I have congratulated the Veerasaiva community on the remarkable progressit has been able to achieve in education, thanks mainly to the very enlightened policy followed by the revered heads of the Veerasaiva mutts, and among these none occupies a more honoured place than the Mahaswami of Chitaldrug. I am personaly aware of the many students whom he has helped with generous scholarships. I know with what assiduous care he has followed their scholastic career, and at the end of it

he has strained every nerve to secure for them suitable appointments. I can understand the enthusiasm with which members of the Veerasaiva community usually speak of him and with what reverance they watch every movement of his and every word that falls from his lips. There is every hope for the Veerasaiva community so long as it can boast of such enlightened Gurus. A religious mutt should be a place of service. Most mutts in our country are keen on receiving, but not on giving. Shriman Murgharajendra Mahaswami is of a different calibre. He receives but to give back in abundance to the poor and deserving of his community and the public at large.

**A. R. Wadia.**

( ಮೇಲಿನ ಪತ್ರದ ಕನ್ನಡ ಅನುವಾದ )

**ಯುನಿವ್ಹರ್ಸಿಟಿ ಆಫ್ ಮೈಸೂರ**

**ಎ. ಆರ್. ವಾಡಿಯಾ, ಬಿ. ಎ. (ಕ್ಯಾಂಟ) ಬಾರ್-ಅಟ್-ಲಾ.**

ಪ್ರೊಫೇಸರ ಆಫ್ ಫಿಲಾಸಫಿ.

**ಮಹಾರಾಜಾ ಕಾಲೇಜ ಮೈಸೂರ** ತಾ. ೩೦ ಜನೇವರಿ ೧೯೪೦.

ಸುಮಾರು ೧೦ ವರ್ಷಗಳ ಪೂರ್ವದಲ್ಲಿ ಡಾಯರೆಕ್ಟರ ಆಫ್ ಪಬ್ಲಿಕ್ ಇನಸ್ಟ್ರಕ್ಶನ್ ಈ ದೃಷ್ಟಿಯಿಂದ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರಘರಾಜೇಂದ್ರ ಮಹಾಸ್ವಾಮಿಗಳು ಚಿತ್ರದುರ್ಗ ಇವರ ಭೆಟ್ಟಿಯಾಗುವ ಯೋಗವು ಒದಗಿದ್ದು ನನಗೆ ಇನ್ನೂ ನಿಚ್ಚಳವಾಗಿ ನೆನಪಿನಲ್ಲಿದೆ. ಆಗ ಅವರ ವಿನಯ, ವಿದ್ಯೆ, ಶಾಂತ ವಾತಾವರಣ ಇವು

ನನ್ನ ಮನಸ್ಸಿನಮೇಲೆ ಬಹಳ ಸ್ಥಿರವಾದ ಪರಿಣಾಮವನ್ನುಂಟುಮಾಡಿದವು. ವೀರಶೈವ ಸಮಾಜವು ವಿದ್ಯಾಭಿವೃದ್ಧಿಯಲ್ಲಿ ಮಹತ್ವವಾದ ಪ್ರಗತಿಯನ್ನು ಹೊಂದಿದ್ದು ಅದು ಮುಖ್ಯವಾಗಿ ವೀರಶೈವ ಮಠಾಧಿಕಾರಿಗಳ ಧೋರಣದಂತೆ ನಡೆದದ್ದಕ್ಕಾಗಿ! ಆದರಲ್ಲಿಯೂ ಚಿತ್ರದುರ್ಗದ ಮಹಾಸ್ವಾಮಿಗಳು ಬಹಳ ಮಹತ್ವದ ಸ್ಥಾನವನ್ನು ಹೊಂದಿದ್ದಕ್ಕಾಗಿ ಎನ್ನಲಿಕ್ಕೆ ಅಡ್ಡಿಯಿಲ್ಲ. ಇದಕ್ಕಾಗಿ ನಾನು ವೀರಶೈವ ಸಮಾಜವನ್ನು ಎಷ್ಟೋ ಸಾರೆ ಅಭಿನಂದಿಸಿದ್ದೇನೆ. ಎಷ್ಟೋ ವಿದ್ಯಾರ್ಥಿಗಳು ಈ ಸ್ವಾಮಿಗಳಿಂದ ಶಿಷ್ಯವೇತನವನ್ನು ಹೊಂದಿದ್ದು ನನಗೆ ಸ್ವತಃ ಗೊತ್ತಿದೆ. ಈ ಸ್ವಾಮಿಗಳು ಅವರ ವಿದ್ಯಾವ್ಯಾಸಂಗವನ್ನು ಬಹಳ ಲಕ್ಷ್ಯಪೂರ್ವಕ ನೋಡುತ್ತಿದ್ದರೆಂಬದನ್ನೂ ಅವರಿಗೆ ಯೋಗ್ಯವಾದ ನೌಕರೀ ಸ್ಥಳಗಳನ್ನು ಒದಗಿಸಿಕೊಡುವದಕ್ಕಾಗಿ ಪ್ರಯತ್ನಿಸುತ್ತಿದ್ದರೆಂಬದನ್ನೂ ನಾನು ಬಲ್ಲೆನು. ವೀರಶೈವ ಸಮಾಜದವರು ಬಹಳ ಸದಭಿಮಾನಪೂರ್ವಕವಾಗಿ ಇವರ ವಿಷಯವಾಗಿ ಮಾತನಾಡುವರು. ಮತ್ತು ಇವರ ಪ್ರತಿಯೊಂದು ಚಲನವಲನಗಳನ್ನೂ, ಬಾಯಿಂದ ಹೊರಟ ಮಾತುಗಳನ್ನೂ ಭಕ್ತಿಪೂರ್ವಕವಾಗಿ ಆದರಿಸುವರು. ಇಂಥ ಗುರುಗಳಿರುವವರೆಗೆ ವೀರಶೈವ ಸಮಾಜದವರು ಬೇಕಾದುದನ್ನು ಆಶಿಸಬಹುದು. ಧಾರ್ಮಿಕ ಮಠಗಳೆಂದರೆ ಸಮಾಜ ಸೇವೆಯ ಆಸ್ಥಾನಗಳು. ನಮ್ಮ ದೇಶದಲ್ಲಿ ಎಷ್ಟೋ ಮಠಗಳು ಪರಿಗ್ರಹಿಸುವ ವಿಷಯದಲ್ಲಿ ಬಹಳ ಜಾಗ್ರತವಿರುತ್ತವೆ. ಆದರೆ ಕೊಡುವ ವಿಷಯದಲ್ಲಿ ಮಾತ್ರ ಏನೂ ಇಲ್ಲ. ಶ್ರೀ ಮುರಘರಾಜೇಂದ್ರ ಮಹಾಸ್ವಾಮಿಗಳು ಮಾತ್ರ ಹೀಗಿರದೆ ದೊಡ್ಡ ಯೋಗ್ಯತೆಯುಳ್ಳವರಿರುವರು. ಇವರು ಸ್ವೀಕರಿಸಿದ ಹಣವನ್ನು ತಮ್ಮ ಸಮಾಜದಲ್ಲಿಯ ಬಡವರಿಗೆ ಮತ್ತು ಯೋಗ್ಯ ಜನರಿಗೆ ಅಲ್ಲದೆ ಸಾಮಾನ್ಯವಾದ ಜನರಿಗೆ ಸಹ ಎಷ್ಟೋ ಪಟ್ಟು ತಿರುಗಿ ದಾನಮಾಡುತ್ತಾರೆ.

**A. R. Wadia.**

ತಿರುವಾಂಕೂರದಲ್ಲಿರುವ ಶ್ರೀ. K. ಚಾಂಡೀ ರಿಟಾಯರ್ಡ ಕೌನ್ಸಿಲರ ಮೈಸೂರ ಸ್ಟೇಟ ಇವರು ಶ್ರೀ ಜಗದ್ಗುರು ಮಹಾಸ್ವಾಮಿಗಳ ವಿಷಯ ವಾಗಿ ಪೂಜ್ಯಭಾವವನ್ನು ತೋರಿಸಿ ಬರೆದು ಕಳಿಸಿದ ಪತ್ರ.

I have had the previlage of waiting on His Holiness Shriman Maharaj Jagadguru Mahaswami of Muragi Matt in the Mysore State, and of for taking of his generous hospitality, on several occasions. I have also had opportunities of hearing about his great erudition, and universal sympathy. His Holiness is a statesman saint with great natural dignity and generosity, singularly free from prejudices and imbred with deep feelings of segaid for the young and the down todden. During his regime, His Holiness has succeeded in establishing several schools and hostels, and has given vast sums for the uplift of the depressed classes. His statesmans hip and tact have been responsible for solwing. Many communal, social, and religions problem. May the Almighty endow His Holiness with health and long life in order that the great community of which he is the spiritual Head may be finded and disprised & him for many years to come.

1—2—1940. **K. Chandy.**

*Forwarded with compliments.*

(ಮೇಲಿನ ಪತ್ರದ ಕನ್ನಡ ಅನುವಾದ)

ಶ್ರೀಮನ್ಮಹಾರಾಜ ಜಗದ್ಗುರು ಮಹಾಸ್ವಾಮಿ ಮುರಗೀಮಠ (ಮೈಸೂರ ಸಂಸ್ಥಾನ) ಇವರ ಸಂದರ್ಶನವೂ, ಔದಾರ್ಯಪೂರ್ವಕ ಆತಿಥ್ಯವೂ ನನಗೆ ಎಷ್ಟೋ ಸಾರೆ ಲಭಿಸುವ ಸುಯೋಗ ಒದಗಿತ್ತು. ಇದರಂತೆ ಇವರ ವಿದ್ವತ್ತೆಯೂ, ವಿಶ್ವಬಂಧುತ್ವವೂ ಎಷೋ ಸಾರೆ ದೃಗ್ಗೋಚರವಾಗಿರುವವು. ಶ್ರೀ ಸ್ವಾಮಿಗಳು ಮುತ್ಸದ್ದಿಗಳಿದ್ದು, ಸ್ವಾಭಾವಿಕವಾದ ಗಾಂಭೀರ್ಯವೂ, ಔದಾರ್ಯವೂ ಇವರಲ್ಲಿದೆ. ಇವರು ಯಾರ ವಿಷಯವಾಗಿಯೂ ಏನೊಂದನ್ನು ಮೊದಲೇ ಭಾವಿಸುವ ಸ್ವಭಾವದವರಿರುವದಿಲ್ಲ. ತರುಣ ಹಾಗೂ ಪತಿತ ಜನರ ವಿಷಯವಾಗಿ ಬಹಳ ಆದರಭಾವವುಳ್ಳವರು. ಇವರು ಹಿಂದುಳಿದ ಜಾತಿಗಳ ಉದ್ಧಾರಕ್ಕಾಗಿ ಎಷ್ಟೋ ಹಣ ವೆಚ್ಚಮಾಡಿರುವರು. ಮತ್ತು ಅನೇಕ ಶಾಲೆಗಳನ್ನೂ, ಛಾತ್ರಾನಿಲಯಗಳನ್ನೂ ಏರ್ಪಾಟುಮಾಡಿರುವರು. ಎಷ್ಟೋ ಸಾರೆ ಜಾತಿಯವಿಷಯಕ ಹಾಗೂ ಸಾಮಾಜಿಕ, ಧಾರ್ಮಿಕ ತೊಡಕುಗಳನ್ನು ಬಿಡಿಸಲು ಇವರ ಮುತ್ಸದ್ದಿತನವೂ, ಚಾಣಾಕ್ಷತನವೂ ಕಾರಣವಾದದ್ದು ನನಗೆ ಗೊತ್ತಿದೆ. ತಾವು ಅಧಿಪತಿಗಳಾಗಿರುವ ಸಮಾಜದ ಪ್ರಗತಿಯನ್ನು ಅನೇಕ ವರ್ಷ ಮುಂದರಿಸುವದಕ್ಕಾಗಿಯೂ, ಉತ್ತೇಜನಗೊಳಿಸುವದಕ್ಕಾಗಿಯೂ, ದೇವರು ಇವರಿಗೆ ಚಿರವಾದ ಆಯುರಾರೋಗ್ಯವನ್ನು ದಯಪಾಲಿಸಲಿ.

ತಾ. ೧—೨—೧೯೪೦.  **K. Chandy.**

ಸನ್ಮಾನ ಪೂರ್ವಕವಾಗಿ ಕಳಿಸಿಕೊಟ್ಟಿದೆ.

† † † † †

ಕೆಳಗಿನ ಲೇಖವು ನಮ್ಮ ಗ್ರಂಥಮಾಲೆಯ ಬಿನ್ನಹಕ್ಕೆ ಮನ್ನಣೆಯಿತ್ತು, ಮೈಸೂರ ಸಂಸ್ಥಾನದ ದಿವಾನ ಸಾಹೇಬ ಸರಕಾರದವರ ಪ್ರಾಯವ್ಹೇಟ ಸೆಕ್ರೆಟರಿಗಳಾದ Mr. E. da Costa, M. A. (Oxon.) ಇವರು ಕಳಿಸಿದ ಸರ್, ದಿವಾನ ಸಾಹೇಬರ ಭಾಷಣವು.

ಇದು ತಾ. ೨—೧—೧೯೪೦ನೇ ದಿವಸ ಚಿತ್ರದುರ್ಗದ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರಘರಾಜೇಂದ್ರ ಸ್ವಾಮಿಗಳವರ ಮಠಕ್ಕೆ ಮೈಸೂರ ಸಂಸ್ಥಾನದ ದಿವಾನರಾದ ಅಮೀನ ಉಲ್ಮುಲ್ಕ ಸರ್

ಮಿರ್ಜಾ ಎಂ. ಇಸ್ಮಾಯಿಲ್ ಕೆ. ಸಿ. ಐ. ಇ. ಓ. ಬಿ. ಇ. ಇವರು ಭೇಟ್ಟಿ ಕೊಟ್ಟ ಸಮಯದಲ್ಲಿ ಮಾಡಿದ ಭಾಷಣವು.

## Dewan's speach on the occasion of his visit to the Sri Murugha Mutt anb the opening of the Sri Murugha Mutt Bhimasamudra Road.

*2nd January 1940.*

Sir Mirja Ismail, Dewan, paid a visit to the Sri Murugha Mutt this afternoon and performed the ceremony of declaring open to traffic the Murghi Mutt-Bhimasamudra road. In doing so, the Dewan expressed his gratitude to His Holiness the Swamiji of the Mutt for the cordial welcome he had accorded to him and for his good wishes.

The Dewan recalled that it was the second time he was visiting the Mutt. He still retained the most pleasant impressions of the warm welcome he had received during his last visit to the Mutt some years ago. He considered it his great good fortune to have been able to pay another visit to the Mutt.

Continuing, the Dewan said that he would be happy to convey to His Highness the Maharaja the sentiments of warm appreciation which the Swamiji had expressed in regard to His Highness's benevolent rule.

# ಅಮೀನ ಉಲ್ಮುಲ್ಕ ಸರ್ ಮಿರ್ಜಾ ಎಮ್. ಇಸ್ಮಾಯಿಲ್ ದಿವಾನ ಆಫ್ ಮೈಸೂರರವರು.



ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು
ಜಯದೇವ ಮುರಘರಾಜೇಂದ್ರ ಮಹಾಸ್ವಾ
ಮಿಗಳ ವಿಷಯವಾಗಿ ವ್ಯಕ್ತಪಡಿಸಿದ

## — ಪೂಜ್ಯಭಾವ —

PUBLISHED BY N. H. HOSUR MANAGER VIDYARANYA GRANTHMALA OFFICE MULGUND

He was deeply gratified at the generous references which the Swamiji had made about himself and such service as it was given to him to render to His Highness and his state.

The Dewan next observed that he and the Swamiji had known each other for many years now, and the more he saw of the Swamiji the greater the feelings of reverence which the latter inspired in him.

The Dewan then referred to the Swamiji's catholicity of outlook and to his various acts of public benefaction which were designed to help all communities, Veerasaiva and other. Donominational chariry was certainly not a matter to be cavilled at. But charity, which know no bounds of caste and creed, was of a higher kind. That the Swamiji had transeended denominational charity was amply borne out by the many institutions he had endowed, notably, the Pathological Laboratory attached to the Medical College at Mysore, and the ward built as an adjunct to the District Hospital at Chittaldrug.

To be able to visit a Swamiji inspired by such generous and all embracing sympathies and goodwill was, therefore, a great privilage and pleasure to him, said the Dewan. The

Sri Murugi Mutt inspired not only feelings of reverence among its own followers but also feelings of regard among men of other communities. It was an ancient institution respected all over the state.

The Devan concluded by saying that it gave him much pleasure in declaring the Sri Murughi Mutt-Bhimasamudra road open to trafic. It was his earnest wish that the reputation of the Sri Murughi Mutt may grow more and more in the future.

‡ ‡ ‡ ‡

### ೮ ನೇ ವೀರಶೈವ ಮಹಾಸಭೆಯ ಅಧ್ಯಕ್ಷರಾಗಿದ್ದ ಕ್ರೈ. ವಾ. ದಿವಾನ ಬಹಾದ್ದೂರ, ರಾಜಭೂಷಣ ಸರ್ ಕೆ. ಪಿ. ಪುಟ್ಟಣ್ಣಶೆಟ್ಟಿ ಸಿ. ಐ. ಇ. ಯವರು ಶ್ರೀ ಜಗದ್ಗುರು ಮಹಾಸ್ವಾಮಿಗಳ ವಿಷಯವಾಗಿ ತೋರಿಸಿದ ಪೂಜ್ಯಭಾವ.

"……………………ಶ್ರೀ ಜಗದ್ಗುರುಗಳ ಪರಿಣತ ಪಾಂಡಿತ್ಯವೂ, ಅನನ್ಯ ಅಸಾಧಾರಣವಾದ ದೈವಭಕ್ತಿಯೂ; ಪರಮ ಪವಿತ್ರವಾಗಿಯೂ, ನಿಷ್ಕಳಂಕವಾಗಿಯೂ ಇರುವ ಶೀಲಸ್ವಭಾವವೂ ಮತ್ತು ಶ್ರೀಗಳವರಿಗೆ ತಮ್ಮ ಮತಕ್ಕೆ ಸೇರಿರುವವರ ಅಭ್ಯುದಯ ಪುರೋವೃದ್ಧಿಗಳಲ್ಲಿ ಇರತಕ್ಕ ಅಸದೃಶವಾದ ಆಶಯವೂ ಶ್ರೀ ಜಗದ್ಗುರುಗಳವರ ಹೆಸರು ಆಚಂದ್ರಾರ್ಕ ಚಿರಸ್ಥಾಯಿಯಾಗಿರುವಂತೆ ಮಾಡತಕ್ಕವುಗಳಾಗಿರುತ್ತವೆ. ಇಂಥಾ ಅಸಾಮಾನ್ಯೌದಾರ್ಯ ಪರೋಪಕಾರ ಕಾರ್ಯಗಳಿಗಾಗಿ ನಾವು ಶ್ರೀ ಸ್ವಾಮಿಗಳವರಿಗೆ ಎಷ್ಟು ಕೃತಜ್ಞರಾಗಿದ್ದರೂ ಸಾಲದಾಗಿದೆ."

× × × × ×

## ಉಪಸಂಹಾರ.

ಪಾಠಕ ಮಹಾಶಯರೇ, ಶ್ರೀಮನ್ಮಹಾರಾಜ ನಿ. ಜಗದ್ಗುರು ಜಯದೇವ ಮುರಘರಾಜೇಂದ್ರ ಮಹಾಸ್ವಾಮಿಗಳೆಂದರೆ ಭರತಖಂಡದ ಜೀವಜ್ಯೋತಿಗಳಲ್ಲಿಯ ಅತ್ಯಂತ ಪ್ರಕಾಶಮಾನವಾದ ವಿಭೂತಿಯು. ಭರತಖಂಡದೊಳಗಿನ ಅಖಿಲ ಸಾಧು ಸಂತರ ಲ್ಲಿಯ ತೇಜವು ಈ ಪುಣ್ಯ ಮೂರ್ತಿಯಲ್ಲಿ ವಿರಾಜಿಸುತ್ತಿರುವದು. ಇಂಥ ತಪಸ್ವಿಗಳೂ, ಧರ್ಮ ರಕ್ಷಕರೂ, ಆತ್ಮಸಾಕ್ಷಾತ್ಕಾರಿಗಳೂ, ಶಿವಾದ್ವೈತ ಸಿದ್ಧಾಂತಜ್ಞರೂ, ನಮ್ಮ ಭರತಖಂಡದಲ್ಲಿ ಉದಯಿಸುತ್ತಿರುವದರಿಂದಲೇ ಭಾರತಮಾತೆಯ ಉತ್ಕರ್ಷದ ಸಲುವಾಗಿ ನಾವು ಉತ್ಕಟಾಶೆಯನ್ನು ತಳೆಯಬಹುದಾಗಿದೆ. ಇಂಥವರ ದರ್ಶನಾನುಗ್ರಹದಿಂದಲೇ ಪಾಮರರಲ್ಲಿ ಆತ್ಮಜ್ಞಾನದ ಅಂಕುರವು ಉದ್ಭವಿಸುವದು. ಇಂಥವರಲ್ಲಿ ಭಕ್ತಿಯನ್ನಿರಿಸುವದರಿಂದಲೇ ಮನಸ್ಸು ಈಶ್ವರ ಪ್ರೇಮದಲ್ಲಿ ನಲಿದಾಡಹತ್ತುವದು! ಹೃದಯದಲ್ಲಿ ಭಕ್ತಿರಸದ ಉದ್ರೇಕವಾಗಿ ಈಶ ಭಕ್ತಿಯು ಉದ್ಭವಿಸುವದು. ಅಂತೇ ಇವರನ್ನು ಲೋಕೋದ್ಧಾರಕ ವಿಭೂತಿಗಳೆಂದು ಒಪ್ಪಬೇಕಾಗುವದು. ಭವದುಃಖದಿಂದ ಪಾರಾಗಬೇಕೆನ್ನುವವರು ಇವರು ಮಾಡಿದ ಉಪದೇಶದಂತೆಯೂ, ಇವರು ತೋರಿಸಿಕೊಟ್ಟ ಮಾರ್ಗದಂತೆಯೂ ನಡೆಯಬೇಕು. ಅಂದರೆ ಕೋಟಿ ಕಲ್ಯಾಣವಾಗುವದರಲ್ಲಿ ಸಂದೇಹವಿಲ್ಲ.

ಜಗದ್ಗುರು ಮಹಾಸ್ವಾಮಿಗಳು ಕರ್ನಾಟಕದಲ್ಲಿ ವೀರಶೈವ ಮತದಲ್ಲಿ ಜನ್ಮವೆತ್ತಿದರೂ, ಸರ್ವ ದೇಶ, ಸರ್ವ ಧರ್ಮ, ಸರ್ವ ಜೀವಿಗಳಲ್ಲಿ ಇವರ ಪ್ರೇಮವು ಪಸರಿಸಿರುವದು. ತಮ್ಮಿಂದಲೂ, ತಮ್ಮ ಬ್ರಹನ್ಮಠದಿಂದಲೂ ಯಾವತ್ತೂ ಜೀವಿಗಳಿಗೆ ಸುಖವೂ, ಉಪಕಾರವೂ ಆಗಬೇಕೆಂಬುದೇ ಇವರ ಮನೀಷೆಯು. ಇವರಲ್ಲಿ ದಿಗ್ವಿಜಯ ಪಾಂಡಿತ್ಯವು ಮನೆಮಾಡಿಕೊಂಡಿದ್ದರೂ ಸಾದಾ ಮನುಷ್ಯರಂತೆಯೇ ಇವರು ಕಾಣುವರು. ಇವರು ತಮ್ಮ ಪ್ರೇಮ ರಜ್ಜುವಿನಿಂದ ಸರ್ವರನ್ನು ವಶಮಾಡಿಕೊಂಡುಬಿಡುವರು. ಭಕ್ತರನ್ನುದ್ದೇಶಿಸಿ ಬೋಧಮಾಡುವ ಕಾಲಕ್ಕಂತೂ ಇವರ ಪ್ರೇಮಾಂತಃಕರಣವು ಉಕ್ಕಿ ಹೊರಸೂಸುವದು. ಇವರ ನಿರೂಪಣದಲ್ಲಿಯೂ, ಮಾತಿನಲ್ಲಿಯೂ, ಆಚರಣೆಯಲ್ಲಿಯೂ ಪ್ರೇಮವೇ ಕಂಡುಬರುವದು. ಇದ

ರಿಂದ ಶ್ರೀ ಜಗದ್ಗುರು ಮಹಾಸ್ವಾಮಿಗಳೆಂದರೆ ಪ್ರೇಮದ ಮೂರ್ತಿ ಯೆಂದು ಭಾವನೆಯಾಗದೆ ಇರುವದಿಲ್ಲ. ಶ್ರೀ ಶ್ರೀಗಳವರು ಲೋಕೋದ್ಧಾರಕ ಕೆಲಸಗಳನ್ನು ಕೈಕೊಂಡು ಅವುಗಳಲ್ಲಿ ಸಾಮಾನ್ಯ ಮನುಷ್ಯರಂತೆ ಮಗ್ನರಾಗಿರುತ್ತಿದ್ದರೂ ಶಿವಾರ್ಪಣ ಬುದ್ಧಿಯಿಂದಲೇ ಅವುಗಳಲ್ಲಿ ಅನಾಸಕ್ತರಾಗಿ ಕೊನೆಗಾಣಿಸುವರು. ಯಾವಾಗಲೂ ಶಿವಾನಂದದಲ್ಲಿಯೇ ಇವರು ತಲ್ಲೀನರಾಗಿರುವರು. ಯಾರೊಬ್ಬರಿಗೆ ಒಮ್ಮೆ ಶ್ರೀ ಜಗದ್ಗುರು ಮಹಾಸ್ವಾಮಿಗಳ ದರ್ಶನವಾದರೆ ಸಾಕು. ಸನ್ನಿಧಿಯನ್ನು ಬಿಟ್ಟು ಅಗಲುವದೆಂದರೆ ಜೀವದಸುತ್ತೇ ಬರುತ್ತದೆ. ಇವರ ಶಿವಾದ್ವೈತ ಜ್ಞಾನವನ್ನೂ, ಭಕ್ತಪ್ರೇಮವನ್ನೂ ಕಂಡರೆ ಎಂಥ ನಾಸ್ತಿಕನಿಗಾದರೂ ಆಸ್ತಿಕ್ಯ ಭಾವವು ಹುಟ್ಟುತ್ತದೆ.

ಇಂಥ ಮಹಾ ಮಹಿಮಾಶಾಲಿಗಳಾದ ಜಗದ್ಗುರು ಮಹಾಸ್ವಾಮಿಗಳ ತಪಸ್ಸಾಮ್ರಾಜ್ಯವು ಆರೋಗ್ಯಭಾಗ್ಯಾದಿಗಳಿಂದ ಚಿರಕಾಲ ಮುಂದರಿದು, ಅದರ ಮಧುರತರ ಫಲಗಳನ್ನು ಜನತೆಯು ಬಹುಕಾಲ ಸೇವಿಸುವಂತೆ ಆಗಲೆಂದು ಬಯಸಿ, ಅದಕ್ಕಾಗಿ ಜಗನ್ನಿಯಂತನನ್ನು ಪರಮ ಭಕ್ತಿಯಿಂದ ಪ್ರಾರ್ಥಿಸಿ ಶ್ರೀ ಶ್ರೀಗಳವರ ಮಂಗಲಕರವಾದ ಇಲ್ಲಿಯವರೆಗಿನ ಈ ದಿವ್ಯ ಚರಿತ್ರೆಯನ್ನು ಸನ್ನಿಧಿಯ ಚರಣಾರವಿಂದದಲ್ಲಿ ಅರ್ಪಿಸುವೆನು.

ಸಮಾಪ್ತ.

# ಆತ್ಮನಿವೇದನೆ.

**ಜ**ಗನ್ನಿಯಂತನು ಈ ಅಪೂರ್ವ ಗ್ರಂಥವನ್ನು ಬರೆಯಲು ಪ್ರೇರಣೆ ಮಾಡಿ ಇದನ್ನು ಕೊನೆಗಾಣಿಸಿದ್ದಕ್ಕಾಗಿ ಆತನ ಅಡಿದಾವರೆಗಳಲ್ಲಿ ಅನಂತ ವಂದನೆಗಳನ್ನು ಸಮರ್ಪಿಸುವೆನು. ಈ ಚರಿತ್ರವನ್ನು ಬರೆಯುವದಕ್ಕೆ ಶ್ರೀ ಜಗದ್ಗುರು ಮಹಾಸ್ವಾಮಿಗಳ ಪವಿತ್ರವಾದ ದಿವ್ಯ ದರ್ಶನದಿಂದ ನನ್ನಲ್ಲಿ ಹುಟ್ಟಿದ ಭಕ್ತಿಯೇ ಮೂಲ ಕಾರಣವು! ಕಳೆದ ಶಾ. ಶ. ಈಶ್ವರ ನಾಮ ಸಂವತ್ಸರ ಮಾಘ ಬಹುಳ ನವಮಿಯ (ತಾ. ೯—೨—೧೯೩೮ ನೇ) ದಿವಸ ಮುಳಗುಂದದ ಶ್ರೀ ಬಾಲಲೀಲಾ ಮಹಾಂತ ಶಿವಯೋಗಿ ಸ್ವಾಮಿಗಳ ಮಠದಲ್ಲಿ ಶ್ರೀ ಶ್ರೀಗಳವರ ಮುಕ್ಕಾಮು ಆಗಿತ್ತು. ಅಂದು ಆಕಸ್ಮಾತ್ತಾಗಿ ಇವರ ಪವಿತ್ರ ದರ್ಶನವನ್ನು ತೆಗೆದುಕೊಳ್ಳಬೇಕೆಂದು ನಾನು ಹೋಗಿರಲು ನನ್ನ ಮನಸ್ಸಿನಲ್ಲಿ ವಿಲಕ್ಷಣವಾದ ಸ್ಥಿತ್ಯಂತರವಾಯಿತು. ಆಗ ಸಮಾರು ೧೧ ಘಂಟೆ ರಾತ್ರಿಯಾಗಿರಬಹುದು. ಶ್ರೀ ಜಗದ್ಗುರು ಮಹಾಸ್ವಾಮಿಗಳ ಸನ್ನಿಧಿಯಲ್ಲಿ ಒಂದು ಸಭೆ ಜರುಗಿ ಅದರಲ್ಲಿ ಬೆಂಗಳೂರ ಸರ್ಪಭೂಷಣ ಮಠದ ಶ್ರೀಮನ್ನಿರಂಜನವರ್ಯ ಪ್ರ.ಸ್ವ ಮಹಾದೇವ ಸ್ವಾಮಿಗಳ ಬೋಧಪರ ನಿರುಪಣವಾಗಿ ಸಭಾಜನರು ಆನಂದಸಾಗರದಲ್ಲಿ ಮುಳಗಿದ್ದರು. ವಕ್ತೃಗಳೆಲ್ಲರ ಭಾಷಣವಾದಮೇಲೆ ಶ್ರೀ ಶ್ರೀಗಳವರು ಮುತ್ತಿನಂಥ ಮಾತಿನಿಂದ ಅಪ್ಪಣೆಕೊಡಿಸಿದರು. ಶ್ರೋತೃಗಳ ಆನಂದಕ್ಕೆ ಎಣೆಯಿಲ್ಲದಾಯಿತು. ನಾನೂ ಆನಂದದಿಂದಲೂ, ಭಕ್ತಿಯಿಂದಲೂ ಪರವಶನಾದೆನು. ಸಭೆಯು ಮುಗಿದಮೇಲೆ ವಿದ್ಯಾರಣ್ಯ ಗ್ರಂಥಮಾಲೆಯ ದ್ವಾರ ನಾನು ಮಾಡಿದ ಕನ್ನಡ ಸೇವೆಯನ್ನೂ ನಾನು ಬರೆದ ಗ್ರಂಥಗಳನ್ನೂ ಶ್ರೀ ಜಗದ್ಗುರು ಮಹಾಸ್ವಾಮಿಗಳಿಗೂ, ಶ್ರೀ ಮನ್ನಿರಂಜನ ಪ್ರ.ಸ್ವ. ಮಹಾದೇವ ಸ್ವಾಮಿಗಳಿಗೂ ಸಮರ್ಪಿಸಿ ಸನ್ನಿಧಿಯ ಚರಿತ್ರೆಯನ್ನು ಬರೆಯಬೇಕೆಂದಿರುವ ನನ್ನ ಸಂಕಲ್ಪವನ್ನು ಭಕ್ತಿಯಿಂದ ವಿದಿತಪಡಿಸಿದೆನು. ಆಗ ಶ್ರೀ ಮಹಾ ಸ್ವಾಮಿಗಳು " ನಿಮ್ಮ ಭಕ್ತಿ ಇದ್ದಂತೆ ಆಗಲಿ " ಎಂದು ಅಪ್ಪಣೆಕೊಡಿಸಿ ಪ್ರಸಾದವನ್ನಿತ್ತು ಅನುಗ್ರಹಿಸಿದರು. ಅನಂತರ ಜಗದ್ಗು

ರುಗಳಿಗೆ ಸಾಷ್ಟಾಂಗನಮಸ್ಕಾರಮಾಡಿ ನಾನು ಈ ಕೆಲಸಕ್ಕೆ ನಿಶ್ಚಯ ಮಾಡಿದೆನು.

ಮುಳಗುಂದದ ಶ್ರೀ ಬಾಲಲೀಲಾ ಮಹಾಂತ ಶಿವಯೋಗಿ ಸ್ವಾಮಿಗಳ ಮಠದಂಥ ಪವಿತ್ರಸ್ಥಾನದಲ್ಲಿ ಅಲ್ಲಿದ್ದ ವೀರಶೈವ ಮಹನೀಯರ ಹಾಗೂ ಬೆಂಗಳೂರ ಸರ್ಪಭೂಷಣಮಠದ ಶ್ರೀಮನ್ನಿರಂಜನವರ್ಯ! ಮಹಾದೇವ ಸ್ವಾಮಿಗಳ ಸಮ್ಮುಖದಲ್ಲಿ ಈ ಜಗದ್ಗುರು ಮಹಾಸ್ವಾಮಿಗಳ ವಾಙ್ಮಯ ರೂಪಸೇವೆಯನ್ನು ಮಾಡಬೇಕೆಂದು ಸಂಕಲ್ಪಮಾಡಿದ ನನಗೆ ಇಂಥ ಲೋಕವಿಖ್ಯಾತ ಜಗದ್ವಂದ್ಯ ವಿಭೂತಿಗಳ ಚರಿತ್ರೆಯನ್ನು ನಾನು ಹ್ಯಾಗೆ ಬರೆದು ಮುಗಿಸುವೆನೆಂಬ ಚಿಂತೆಯುಂಟಾಯಿತು. ಯಾಕಂದರೆ ಇಂಥ ದೊಡ್ಡವರ ಚರಿತ್ರೆಯನ್ನು ಬರೆಯಲು ನಾನು ಅನಧಿಕಾರಿಯು. ಹಾಗು ಈ ಗ್ರಂಥದಲ್ಲಿ ವಿವಿಧ ವಿಷಯಗಳ ಗಹನತೆಯಿದೆ. ಇದಕ್ಕಾಗಿ ನಾನು ಚಡಪಡಿಸಹತ್ತಿದೆನು. ಆದರೆ ಮಹಾಸ್ವಾಮಿಗಳ ಅನುಗ್ರಹದಿಂದಲೋ ಏನೋ ನವಚೈತನ್ಯವು ನನ್ನಲ್ಲಿ ಉತ್ಪನ್ನವಾಗಿ ಈ ಕೆಲಸಕ್ಕೆ ಹಚ್ಚಿಬಿಟ್ಟಿತು. ಮುಂದೆ ಜಗದ್ಗುರುಗಳ ಮಹಾ ಮಹಿಮೆಯಿಂದ ಈ ಕೆಲಸವು ಸಾಗಿದ್ದನ್ನು ನೋಡಿದರೆ ಮೈಮೇಲಿನ ಕೂದಲುಗಳು ನೆಟ್ಟಗಾಗುತ್ತವೆ.

ಮುಂದೆ ಈ ಚರಿತ್ರೆಯ ಬಗ್ಗೆ ವಿಷಯಸಂಗ್ರಹವನ್ನುಮಾಡಲು ನಾನು ಶ್ರೀ ಜಗದ್ಗುರು ಮಹಾಸ್ವಾಮಿಗಳ ಜನ್ಮಭೂಮಿಯಾದ ಬಿನ್ನಾಳ, ವಿದ್ಯಾಭ್ಯಾಸಸ್ಥಳವಾದ ಗದಗ, ಬೃಹನ್ಮಠವಿರುವ ಚಿತ್ರದುರ್ಗ, ಶ್ರೀ ಶ್ರೀಗಳು ಅನೇಕ ಕಾರ್ಯ ಕ್ಷೇತ್ರಗಳನ್ನು ಕೈಕೊಂಡ ದಾವಣಗೆರೆ, ಅಥಣಿ, ಬಾಗಲಕೋಟೆ, ಲಕ್ಷ್ಮೇಶ್ವರ ಇತ್ಯಾದಿ ಊರುಗಳನ್ನು ಸಂಚರಿಸಬೇಕಾಯಿತು. ಈ ಸಮಯದಲ್ಲಿ ಅನೇಕ ಮಹನೀಯರಿಂದ ನನಗೆ ಸಹಾಯವಾಯಿತು. ಕೆಲವರು ಶ್ರೀ ಶ್ರೀಗಳವರ ಬಗ್ಗೆ ಅನೇಕ ವೃತ್ತಾಂತಗಳನ್ನು ಅರುಹಿದರು. ಕೆಲವರು ಗ್ರಂಥರಚನೆಗೆ ಅನುಕೂಲವಾಗುವ ಪುಸ್ತಕಗಳನ್ನು ಅನುಕೂಲಪಡಿಸಿದರು. ಇಂಥವರಲ್ಲಿ ಶ್ರೀ ಚಿನ್ಮಲಾದ್ರಿ ಬೃಹನ್ಮಠದ ಕಾರಭಾರಿಗಳು, ದಾವಣಗೇರಿಯಲ್ಲಿಯ ಜಯದೇವ ಪ್ರೆಸ್ಸಿನ ಮಾಲಕರಾದ ಕೊಟ್ರೂರಪ್ಪನವರು, ಜನಜಾಗ್ರತೆ ಗ್ರಂಥಮಾಲಾ ಸಂಪಾದಕರಾದ ಶ್ರೀ ಮುಪ್ಪಣ್ಣ ಚನಬಸಪ್ಪ ಬಳ್ಳೊಳ್ಳಿ, ಶ್ರೀ ಕಲವೀರಪ್ಪ ಶೆಟ್ಟರು

ಬಿಳಚುಳಿ. ಶ್ರೀ ದೊಡ್ಡಬಸಪ್ಪನವರು ತಟ್ಟಿ ಲಕ್ಷ್ಮೇಶ್ವರ, ಶ್ರೀ ಎಲ್. ವ್ಹಿ. ಕಟ್ಟಿ ಮುಳಗುಂದ, ಮುಳಗುಂದದ ಶ್ರೀ ಅಭಿನವ ರೇಣುಕ ವಾಚನಾಲಯದ ಚಾಲಕರು, ಶ್ರೀ ಬುದ್ಧಯ್ಯಸ್ವಾಮಿ ಪುರಾಣಿಕ, ಹಾಗು ಮುಳಗುಂದ ಶ್ರೀ ಮಹಾಂತ ಶಿವಯೋಗಿಗಳ ವಾಚನಾಲಯದ ಚಾಲಕರು ಮತ್ತು ಶ್ರೀ ಮಹಾದೇವಪ್ಪ ಬಸಪ್ಪ ಕತ್ತಿ ಚಿಂಚಲಿ, ಶ್ರೀ ಸೋಮರಡ್ಡೆಪ್ಪ ಗೂಳಪ್ಪ ಕತ್ತಿ ಚಿಂಚಲಿ, ಶ್ರೀ ಬಸಪ್ಪ ಸಣ್ಣಯಲ್ಲಪ್ಪ ಬಾಲರಡ್ಡಿ ಚಿಂಚಲಿ ಇವರ ಉಪಕಾರವು ಸ್ಮರಣೀಯವಾಗಿರುವದು. ಹಾಗು ಈ ಪುಸ್ತಕದಲ್ಲಿ ಹಾಕಲು ಉದಾರ ಮನಸ್ಸಿನಿಂದ ಪಡಿಯಚ್ಚುಗಳನ್ನು ಅನುಕೂಲಮಾಡಿದ ಶರಣಸಂದೇಶದ ಸಂಪಾದಕರಾದ ದೇ. ಭ. ಹರ್ಡೇಕರ ಮಂಜಪ್ಪನವರ ಮತ್ತು ಜಯದೇವ ಪ್ರೆಸ್ಸಿನ ಒಡೆಯರಾದ ಕೊಟ್ರೂರಪ್ಪನವರ ಉಪಕಾರವೂ, ಸಮಯಕ್ಕೆ ಕಾಗದಗಳನ್ನೊದಗಿಸಿಕೊಟ್ಟ ಶ್ರೀಮಾನ್ ಮಡಿವಾಳಪ್ಪ ಲಿಂಗಪ್ಪ ವೀಣೇಕಾರ ಗದಗ ಇವರ ಉಪಕಾರವೂ ನನಗೆ ಬಹಳವಾಗಿರುವದು. ಇವರಿಗೆ ನಾನು ಅತ್ಯಂತ ಋಣಿಯಾಗಿದ್ದೇನೆ.

ಅನಂತರದ ಅಮೌಲ್ಯವಾದ ಉಪಕಾರಸ್ಮರಣೆಯೆಂದರೆ ಮುಂದಿನದು. ನಮ್ಮ ಬಿನ್ನಹವನ್ನು ಮನ್ನಿಸಿ ನಮ್ಮ ಗ್ರಂಥಮಾಲೆಗೆ ಶುಭಸಂದೇಶಗಳನ್ನೂ, ಶ್ರೀ ಶ್ರೀಗಳವರ ಬಗ್ಗೆ ಪೂಜ್ಯಭಾವಯುಕ್ತವಾದ ಲೇಖಗಳನ್ನೂ ಕಳಿಸಿದ ಶ್ರೀಮಾನ್ ಸಿ. ಆರ್. ರಡ್ಡಿ ವ್ಹಾಯಿಸ ಚಾನ್ಸಲರ ಆಂಧ್ರ ಯುನಿವ್ಹರ್ಸಿಟಿ ವಾಲ್ಟೇರ, ಮೈಸೂರ ಮಹಾರಾಜಾ ಕಾಲೇಜದ ಫಿಲಾಸಫಿ ಪ್ರೊ|| ಎ. ಆರ್. ವಾಡಿಯಾ ಬಾರ್-ಅಟ್-ಲಾ, ತಿರುವಾಂಕೂರಲ್ಲಿರುವ K. ಚಾಂಡೀ ರಿಟಾಯರ್ಡ ಕೌನ್ಸಿಲರ ಹಾಗೂ ಮೈಸೂರ ದಿವಾನರಾದ ಸರ್ ಮಿರ್ಜಾ ಎಮ್. ಇಸ್ಮಾಯಿಲ್ ಕೆ. ಸಿ. ಐ. ಇ. ಒ. ಬಿ. ಇ. ಇವರಿಗೆ ನಾನು ಅತ್ಯಂತ ಋಣಿಯಾಗಿರುವೆನು. ಇವರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತೇನೆ. ಇವರಂತೆ ನನ್ನ ಬಿನ್ನಹವನ್ನು ಮನ್ನಿಸಿ ಮುನ್ನುಡಿಯನ್ನು ಬರೆದು ಈ ಗ್ರಂಥವನ್ನು ಕನ್ನಡ ವಾಗ್ದೇವಿಯ ಅಡಿದಾವರೆಯಲ್ಲಿಟ್ಟ ಶ್ರೀಮಾನ್ ಎಮ್. ಎಸ್. ಸರದಾರ ಬಿ. ಎ. (ಆಕ್ಸನ್) ಬಾರ್-ಅಟ್-ಲಾ ಸೊಲ್ಲಾಪೂರ ಇವರ ಉಪಕಾರವನ್ನೂ, ಈ ಪುಸ್ತಕಕ್ಕೆ ಸದಭಿಪ್ರಾಯ ಕಳಿಸಿದ ಡಾ|| ಎಸ್. ಸಿ. ನಂದೀಮಠ M.A.P.

H. D. ಪ್ರಿನ್ಸಿಪಾಲ ಲಿಂಗರಾಜ ಕಾಲೇಜ ಬೆಳಗಾಂವ ಹಾಗೂ ಶ್ರೀಮಾನ್ ಚಂದ್ರಶೇಖರ ಶಾಸ್ತ್ರಿಗಳು ವ್ಯಾಕರಣತೀರ್ಥ, ಪ್ರಿನ್ಸಿಪಾಲ ಶಂಕರ ಸಂಸ್ಕೃತ ಕಾಲೇಜ ಯಾದಗಿರಿ ಇವರ ಉಪಕಾರವನ್ನೂ ಸ್ಮರಿಸಿ ವಂದನೆಗಳನ್ನ ರ್ಪಿಸುವೆನು.

ಶ್ರೀ ಶ್ರೀಗಳವರ ಚರಿತ್ರೆಯು ಇಷ್ಟಕ್ಕೇ ಮುಗಿಯದೆ ಇನ್ನೂ ಅಗಾಧವಿರುವದು. ವಾಚಕರು ತಮಗೆ ತೋಚಿದ ಸಂಗತಿಗಳನ್ನೂ ಇದರಲ್ಲಿಯ ಗುಣದೋಷಗಳನ್ನೂ ದಯವಿಟ್ಟು ತಿಳಿಸಿದರೆ ಅವುಗಳನ್ನು ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಿ ಮುಂದಿನ ಮುದ್ರಣದಲ್ಲಿ ಸುಧಾರಿಸುವೆನು. ಯುದ್ಧದಮೂಲಕ ಕಾಗದದ ಬೆಲೆಯೂ, ಪ್ರಿಂಟಿಂಗಿನ ಸಾಮಾನುಗಳ ಬೆಲೆಯೂ ಅತ್ಯಂತ ಅಧಿಕವಾಗಿ ಏರಿದ್ದರಿಂದ ಅಯಾಚಿತರೀತಿಯಿಂದ ಪ್ರಸಿದ್ಧಮಾಡಿದ ಈ ಪುಸ್ತಕ ಪ್ರಕಟನೆಗೆ ತೊಂದರೆಯೆನಿಸಿತು. ಆದರೂ ಶ್ರೀ ಜಗದ್ಗುರು ಮಹಾಸ್ವಾಮಿಗಳ ತಪಸ್ಸಾಮರ್ಥ್ಯದ ಅನುಗ್ರಹಬಲದಿಂದ ಕಾರ್ಯವು ಕೊನೆಗಂಡಿದ್ದಕ್ಕಾಗಿ ಶ್ರೀ ಶ್ರೀಗಳವರಿಗೆ ಕೃತಜ್ಞಪೂರ್ವಕ ವಂದನೆಗಳನ್ನು ಭಕ್ತಿಯಿಂದ ಸಮರ್ಪಿಸಿ ಲೆಕ್ಕಣಿಕೆಯನ್ನು ಕೆಳಗಿಡುವೆನು.

ಬಸವ ಸಂ. ೮೦೯
ಬಸವಜಯಂತಿ
ವಿಕ್ರಮ ಸಂ. ವೈ. ಶು. ೨

ಸಜ್ಜನ ವಿಧೇಯ,

**ಜಿ. ಎಚ್. ಹೊಸೂರ.**

---

ಈ ಪುಸ್ತಕದ ೧ ರಿಂದ ೬೪ ಪುಟಗಳು ಗದಗ ರಸಿಕರಂಜನಿ ಪ್ರಿಂಟಿಂಗ್ ಪ್ರೆಸ್ಸಿನಲ್ಲಿಯೂ, ೬೫ ರಿಂದ ೧೪೪ ರ ವರೆಗಿನ ಪುಟಗಳೂ ಉಳಿದ ಪುಟಗಳೂ ಗದಗ ಶಂಕರನಾರಾಯಣೀ ಪ್ರಿಂಟಿಂಗ್ ಪ್ರೆಸ್ಸಿನಲ್ಲಿಯೂ ಮುದ್ರಿಸಲ್ಪಟ್ಟವು.

||ಓಂ||

# ಹಸ್ತರೇಷಾ-ಭವಿಷ್ಯ ನಿರ್ಣಯದ ಅಪೂರ್ವ

# ಗ್ರಂಥವು.

**ಸಿದ್ಧಸಮಾಜದ ಸ್ಥಾಪಕರಾದ— ಶ್ರೀ ಸ್ವಾಮಿ ಶಿವಾನಂದ ಪರಮಹಂಸಗಳವರ ಆಶೀರ್ವಾದರೂಪಕ**

## ಹಸ್ತರೇಷಾ ಸಾಮುದ್ರಿಕ ದೀಪ

ಅಥವಾ

## "ಹಸ್ತಸಾಮುದ್ರಿಕ ಭವಿಷ್ಯ ಕಥನವಿದ್ಯಾ"

( ಇಂಗ್ಲೀಷದಲ್ಲಿ ಬರೆದವರು, **ಬಿ. ಎನ್. ದಿವಾನ.**)

ಬೇರೆ ಬೇರೆ ಹಸ್ತರೇಷೆಗಳ ಹಾಗೂ ಹಸ್ತಗಳ ಸುಮಾರು ೧೦೦ ಆಕೃತಿಗಳೊಡಗೊಂಡಿವೆ. ಪ್ರಾಚೀನ ಸಾಮುದ್ರಿಕ ಗ್ರಂಥದೊಳಗಿನ ಮೂಲ ಭಾಷಾಂತರವೂ, ಪೌರ್ವಾತ್ಯ ಹಾಗೂ ಪಾಶ್ಚಿಮಾತ್ಯ ಹಸ್ತ ಸಾಮುದ್ರಿಕೆಯು ಸ್ಪಷ್ಟ, ವಿಸ್ತೃತ, ಸುಲಭ ವಿವೇಚನೆಯೂ, ಸ್ಪಷ್ಟೀಕರಣವೂ, ಈ ಗ್ರಂಥದಲ್ಲಿ ಇರುವದರಿಂದ ಈಗ್ರಂಥಕ್ಕೆ ಅಪೂರ್ವತೆಯೂ ಉಚ್ಚದರ್ಜೆಯೂ ಪ್ರಾಪ್ತವಾಗಿರುತ್ತದೆ. ಹಸ್ತರೇಷಾ ಸಾಮುದ್ರಿಕಶಾಸ್ತ್ರದ "ಗೂಢಅಂತರಂಗದ" ಗುಪ್ತಭವಿಷ್ಯಜ್ಞಾನವು ಕನ್ನಡ ಓದುಬರಹ ಬಲ್ಲ ಸಾಮಾನ್ಯ ಮನುಷ್ಯರಿಗೆ ಸಹ ತಿಳಿಯುವ ಹಿಂದುಸ್ಥಾನದಲ್ಲಿಯು ಕನ್ನಡ ಭಾಷೆಯಲ್ಲಿಯು ಮೊದಲನೇಯು ಗ್ರಂಥವಿದು.—

**ಹಸ್ತರೇಷಾ ಸಾಮುದ್ರಿಕ ಶಾಸ್ತ್ರವನ್ನು** ಮನೆಯಲ್ಲಿಯೇ ತಿಳಿಯಲಿಚ್ಛಿಸುವ ಸ್ತ್ರೀ ಮತ್ತು ಪುರುಷರು ಅವಶ್ಯವಾಗಿ ಈ ಗ್ರಂಥವನ್ನು ಸಂಗ್ರಹಿಸತಕ್ಕದ್ದು.—

ಸಾಮುದ್ರಿಕ ಶಾಸ್ತ್ರದೊಳಗಿನ ಈ ಪ್ರಚಂಡಗ್ರಂಥದಲ್ಲಿ ಹಸ್ತರೇಷೆಯ ಮೇಲಿಂದಲೂ ಯಾವನೊಬ್ಬ ಮನುಷ್ಯನ ಮಹತ್ವದ ಎಲ್ಲ ಸಂಗತಿಗಳ ಭವಿಷ್ಯವು ಹೇಗೆ ವರ್ತಿಸುತ್ತದೆಂಬದನ್ನು ಪ್ರಾಚೀನ ಹಾಗೂ ಅರ್ವಾಚೀನ ಪದ್ಧತಿಯಂತೆ ಎಥಾಸಾಂಗ ವಿವೇಚನಾತ್ಮಕ ಸ್ಪಷ್ಟೀಕರಣ ಮಾಡಿರುತ್ತದೆ. ಅದರಂತೆ ಬೇರೆ ಬೇರೆ ಪ್ರಕಾರದ ಯೋಗಕಾರಕ ರೇಷೆಯು ಹಸ್ತಗಳ ಆಕೃತಿಗಳನ್ನು ಕೊಟ್ಟಿರುತ್ತದೆ. ಇದರಲ್ಲಿ ಪ್ರಾಚೀನ ಹಾಗೂ ಅರ್ವಾಚೀನ ಗ್ರಂಥದೊಳಗಿನ ಮಹತ್ವ ಪೂರ್ಣ ಮಾಹಿತಿ ಮತ್ತು ಆ ಮಾಹಿತಿಯು ಚಿಕಿತ್ಸಕ

ದೃಷ್ಟಿಯ ಪರೀಕ್ಷಣ, ಹಾಗೂ ವಿವೇಚನ, ಹಸ್ತಸಾಮುದ್ರಿಕ ಶಾಸ್ತ್ರದೊಳಗಿನ ಮಹತ್ತರ ತತ್ವಗಳು, ಸಾಮುದ್ರಿಕಶಾಸ್ತ್ರ ಹಾಗೂ ಜೋತಿಷಶಾಸ್ತ್ರ ಇವುಗಳ ಸಂಬಂಧ ಮುಖ ಲಕ್ಷಣಗಳ ಮೇಲಿಂದಲೂ ಹಸ್ತರೇಷೆಯ ಮೇಲಿಂದಲೂ ಕುಂಡಲಿಯನ್ನು ಸಿದ್ಧಪಡಿಸುವದು.

ಶಾರೀರಿಕಸ್ಥಿತಿಯ ಮೇಲಿಂದಲೂ ಹಸ್ತರೇಷೆಯ ಮೇಲಿಂದಲೂ ಜನ್ಮಸ್ಥಗೃಹಯೋಗದ ಪರಿಸ್ಥಿತಿ, ಕೈಯೊಳಗಿನ ಗೃಹಗಳ ಎತ್ತರವಾಗಿರುವ ಸ್ಥಾನಗಳು, ಹಸ್ತರೇಷೆಯ ಮೇಲಿನ ಸಪ್ತಗೃಹಗಳ ಮೇಲಿನ ಶುಭಾ ಶುಭಚಿನ್ಹಗಳೂ, ಫಲವರ್ಧಕ ಹಾಗೂ ಭಾಗ್ಯವರ್ಧಕ ರೇಷೆಗಳು ಹಾಗೂ ಭಾಗ್ಯನಾಶಕ ರೇಷೆಗಳು ಮತ್ತು ಚಿನ್ಹಗಳು, ಕೈಗಳ ಇರುವಿಕೆಯು. ಮತ್ತು ಚಿನ್ಹಗಳು, ಮತ್ಸ್ಯ, ಯವ, ತ್ರಿಕೋನ, ಚತುಷ್ಕೋನ ಚಿನ್ಹಗಳು, ಸಂಪತ್ತಿ ಸಂಪನ್ನರೇಷಾ ಮತ್ತು ದರಿದ್ರ ಸೂಚಕ ರೇಷೆಗಳೂ, ಶಾರೀರಿಕಸುಖ, ಸಂಪತ್ತಿ, ಉದ್ಯೋಗ ಧಂದೆಗಳ, ನೌಕರಿಚಾಕರಿಗಳ, ಆಯುಷ್ಯ, ಅಧಿಕಾರ, ಸಂತತಿ, ಸ್ತ್ರೀಸುಖ, ವಿವಾಹ, ಪರದೇಶಗಮನ. ಆಕಸ್ಮಾತ್‌ಲಾಭ, ಸಟ್ಟಾ ಲಾಟರಿಯೋಗ, ಪರೀಕ್ಷೆಯಲ್ಲಿ ಪಾಸ ಅಥವಾ ನಾಪಾಸಯೋಗ, ಶತ್ರು, ಸಂಕಟ, ಹಾನಿ, ಸ್ಥಾವರ, ಜಮೀನ-ಜುಮಲಾ, ವಾಹನಗಳು ನೌಕರ-ಚಾಕರರ, ಪ್ರತಿಷ್ಠೆ, ದತ್ತಕಯೋಗ, ಬಂಧನಯೋಗ ಇತ್ಯಾದಿ ಇತ್ಯಾದಿ, ಆಯುಷ್ಯದಲ್ಲಿ ಸಂಭವಿಸುವ ಪ್ರತಿಯೊಂದು ಸಂಗತಿಯ ಭವಿಷ್ಯದ ನಿರ್ಣಯವು ಕೇವಲ ಹಸ್ತರೇಷೆಯಿಂದಲೇ ಮಾಡಲ್ಪಡುವದು, ಇದನ್ನು ಈ ಪುಸ್ತಕದಲ್ಲಿ ಕೊಡಲ್ಪಟ್ಟಿದೆ.

ಈ ಗ್ರಂಥವನ್ನು ಸಂಪೂರ್ಣ ಓದಿದ ಮೇಲೆ ಇದರಂತಹ **ಗ್ರಂಥರಾಜವು** ಇಂದಿನವರೆಗೂ ಪ್ರಕಟವಾಗಿಲ್ಲವೆಂದು ನಿಮಗನಿಸದೆ ಇರದು.

## ಹಸ್ತರೇಷಾ ಸಾಮುದ್ರಿಕ ದೀಪ

ಅಥವಾ

## ಹಸ್ತಸಾಮುದ್ರಿಕ ಭವಿಷ್ಯ ಕಥನವಿದ್ಯಾ ಅಂದರೆ

ಕೈಯೊಳಗಿನ ರೇಷೆ ಹಾಗೂ ಚಿನ್ಹಗಳ ಮೇಲಿಂದ ಯಾವನೊಬ್ಬ ವ್ಯಕ್ತಿಯು ಅವನು ರಾಜನೇ ಇರಲಿ, ಮಹಾರಾಜನೇ ಇರಲಿ, ರಾಣಿಯೇ ಇರಲಿ, ಮಹಾರಾಣಿಯೇ ಇರಲಿ ಅವರ ಆಯುಷ್ಯದೊಳಗೆ ಸಂಘಟಿಸುವ ಗುಪ್ತ ಹಾಗು ಸ್ಪಷ್ಟ ಸಂಗತಿಗಳನ್ನು ತಿಳಿಸುವ ಸಾಧನವು. ಈ ಸಾಧನವನ್ನು ಪ್ರತಿಯೊಬ್ಬನೂ ಹಸ್ತಗತ ಮಾಡಿಕೊಂಡಿರಲಿಕ್ಕೆ ಬೇಕು. ಕ್ಷಣ ಕ್ಷಣಕ್ಕೆ

ಹಸ್ತಸಾಮುದ್ರಿಕ ಶಾಸ್ತ್ರದ ಮಹತ್ವವೂ ಇದರ ಅವಶ್ಯಕತೆಯೂ ಪ್ರತಿಯೊಬ್ಬನಿಗೂ ಬೀಳುವದು. ಹಸ್ತರೇಷೆಯನ್ನು ನೋಡಲು ಗಣಿತದ ಅವಶ್ಯಕತೆ ಇಲ್ಲ. ಕುಂಡಲಿಯನ್ನು ಹಾಕುವ ಕಾರಣವಿಲ್ಲ, ಅಥವಾ ಇನ್ನಾವದಾದರೊಂದು ಸಾಧನದ ಅವಶ್ಯಕತೆಯಿಲ್ಲ. ಪ್ರತಿಯೊಬ್ಬರ ಕೈಯು ಅವರ ಹತ್ತರವೇ ಇರುತ್ತದೆ. ಇದನ್ನು ವಿಚಾರಿಸುವವನು ಹಿಂದು, ಕ್ರಿಶ್ಚನ್, ಪಾರಸಿ, ಮುಸಲ್ಮಾನ, ಇತ್ಯಾದಿ ಬೇಕಾದ ಧರ್ಮದವನಿರಲಿ, ಹಸ್ತರೇಷೆಯ ಭವಿಷ್ಯಜ್ಞಾನವಿರುತ್ತಿದ್ದರೆ ಸಾಕು. ಅವನ ಹಸ್ತವನ್ನು ನೋಡಿ ಹೇಳಲಿಕ್ಕೆ ಬರುತ್ತದೆ. ಜ್ಯೋತಿಷಶಾಸ್ತ್ರನಲ್ಲಿ ಜನ್ಮವೇಳೆಯ ಮೇಲಿಂದ ಕುಂಡಲಿಯನ್ನು ಹಾಕದ ಹೊರತು ಭವಿಷ್ಯವನ್ನು ಹೇಳಲಿಕ್ಕೆ ಬರುವದಿಲ್ಲ. ಆದರೆ ಹಸ್ತಸಾಮುದ್ರಿಕ ಕಥನವು ಹೀಗಿರುವದಿಲ್ಲ. ಆದುದರಿಂದ ಪ್ರತಿಯೊಬ್ಬನು ಈ ಸಾಮುದ್ರಿಕ ಗ್ರಂಥವನ್ನು ತಕ್ಕೊಳ್ಳಲಿಕ್ಕೇಬೇಕು. ಜ್ಯೋತಿಷಶಾಸ್ತ್ರದ ಅಭ್ಯಾಸಮಾಡಿದವರು ಈಗ್ರಂಥವನ್ನು ತಕ್ಕೊಳ್ಳದ ಹೊರತು ಗತ್ಯಂತರವಿಲ್ಲ. ಯಾಕಂದರೆ ಸಾಮುದ್ರಿಕ ಶಾಸ್ತ್ರದ ಅಭ್ಯಾಸದಿಂದ ಅವರ ಜ್ಞಾನಕ್ಕೂ ಅನುಭವಕ್ಕೂ ಬಲವಾದ ಸಹಾಯವಿರುತ್ತದೆ.

## " ಹಸ್ತಸಾಮುದ್ರಿಕ ಭವಿಷ್ಯನಿರ್ಣಯ "

ಅಂದರೆ ಈಶ್ವರನಿರ್ಮಿತ, ಜನ್ಮದಾರಭ್ಯ, ಹಾಗು ನೈಸರ್ಗಿಕವಾದ ಹಸ್ತರೇಷೆಯೊಳಗಿನ ಆಯುಷ್ಯದಲ್ಲಿ ಸಂಭವಿಸುವ ಶುಭಾ—ಶುಭ ಇಷ್ಟಾನಿಷ್ಟ ಸಂಗತಿಗಳ ಖುಲಾಸವು, ಎಷ್ಟೋ ಜನರ ಹತ್ತರ ಜನ್ಮಕುಂಡಲಿ, ಜನ್ಮವೇಳೆಯೂ, ಇರುವದಿಲ್ಲ. ಜನ್ಮಕಾಲ ಹಾಗು ಜನ್ಮದಿವಸ ಸಹ ಗೊತ್ತಿರುವದಿಲ್ಲ. ಇಂಥವರ ಭವಿಷ್ಯವನ್ನು ಅವರ ಎರಡೂ ಹಸ್ತರೇಷೆಗಳ ಹಾಗೂ ಉಳಿದಚಿನ್ಹಗಳ ಮೇಲಿಂದ ಸಾಮುದ್ರಿಕಶಾಸ್ತ್ರದ್ವಾರ ಪ್ರತ್ಯಕ್ಷ ಹೇಳಲಿಕ್ಕೆ ಬರುತ್ತದೆ. ಈ ಶಾಸ್ತ್ರದ ಮಾಹಿತಿಯೂ, ಜ್ಞಾನವೂ, ಪ್ರತಿಯೊಬ್ಬರಿಗೆ ಸುಲಭವಾಗಿ ತಿಳಿಯಲಿಕ್ಕೆ ಬರಬೇಕೆಂದು ಈ ಗ್ರಂಥವನ್ನು ತಯಾರಿಸಿರುತ್ತದೆ. ಇದರಲ್ಲಿ ಸಾಮುದ್ರಿಕಶಾಸ್ತ್ರದ ಆರಂಭದಿಂದ ಎಲ್ಲ ಮಾಹಿತಿಯೂ, ಬೇರೆ ಬೇರೆ ಹಸ್ತಗಳ ಆಕೃತಿ ಸಹಿತ ಕೊಟ್ಟಿರುತ್ತದೆ. ಇದರಲ್ಲಿ ಗಣಿತದ ಅಥವಾ ಬೇರೊಂದರ ತ್ರಾಸವಿರುವದಿಲ್ಲವಾದ್ದರಿಂದ ಸಾಮಾನ್ಯ ಮನುಷ್ಯನು ಸಹ ಇದನ್ನು ಸಂಗ್ರಹಿಸಲಿಕ್ಕೆ ಅಡ್ಡಿ ಇಲ್ಲ. " ಹಸ್ತ ಸಾಮುದ್ರಿಕ ಭವಿಷ್ಯ ಕಥನ ವಿದ್ಯಾ " ಇದಕ್ಕೆ ಪ್ರತಿಯೊಂದು ಸ್ಥಳದಲ್ಲಿ ಪ್ರತಿಯೊಂದು ಸಮಾಜದಲ್ಲಿ ಅಪೂರ್ವ ಮಾನವಿದೆ. ಇದಕ್ಕೆ ಬೇರೊಂದು ವಿಷಯದ ಅವಶ್ಯಕತೆ

ಇಲ್ಲಿ ಫಕ್ತ ಹಸ್ತರೇಷೆಯ ಮೇಲಿಂದಲೇ ಎಲ್ಲವನ್ನು ನಿರ್ಣಯಿಸಲಿಕ್ಕೆ ಬರುತ್ತದೆ. ಕಾರಣ ಪ್ರತಿಯೊಬ್ಬರೂ ಇದರ ಲಾಭವನ್ನು ಪಡೆಯುತಕ್ಕದ್ದು.

ಹಸ್ತರೇಷಾ ಸಾಮುದ್ರಿಕ ದೀಪ ಗ್ರಂಥ ದೊರೆಯುವ ಪತ್ತೆ:—

**ರಸಿಕರಂಜಿನಿ ಪ್ರಿಂಟಿಂಗ ಪ್ರೆಸ್, ಗದಗ.**

ಪ್ರಸಿದ್ಧ ವ್ಯಕ್ತಿಗಳ **ಸಿಫಾರಸಪತ್ರಗಳಲ್ಲಿಯ** ಕೆಲವುಗಳ ಅವತರಣಿಕೆಗಳಿಂದ ಹಸ್ತರೇಖೆಗಳನ್ನೋಡುವ ವಿದ್ಯೆಯು ಆಶ್ಚರ್ಯಕಾರಕವೆಂದು ವಾಚಕರಿಗೆ ಗೊತ್ತಾಗುವದು. ಅದನ್ನು ಈ ಸಶಾಸ್ತ್ರಿಯ ಅಭ್ಯಾಸಕ್ಕೆ ಉತ್ತೇಜನಗೊಳಿಸುವದು. ಲೇಖಕ:— **ಬಿ. ಎಮ್. ದಿವಾನ.**

"The true translation of the original Certificates in English"

ನನ್ನ **ಅಧ್ಯಕ್ಷ-ಪದದ** ಆಯ್ಕೆಯು ನಾಲ್ಕು (೪) ದಿವಸಗಳ ಪೂರ್ವದಲ್ಲಿ " **ದಿವಾಣರು** " ಹೇಳಿದ ಅವರ್ಣನೀಯ ಭವಿಷ್ಯವು ನಿರ್ದಿಷ್ಟ ಸಮಯದಲ್ಲಿ ಚಮತ್ಕಾರವಾಗಿ ಸತ್ಯವಾಗಿ ಪರಿಣಮಿಸಿತು ಮುಂದೆ ಸಹ ಇದೇ ರೀತಿಯಿಂದ ಅವರ ವಾಕ್ಯವು ಸತ್ಯವಾಗಿ ಸಿದ್ಧಿಗೈಯ್ಯಲೆಂದು ಹಾರೈಸುತ್ತೇನೆ.

ಗದಗ ೧—೪—೧೯೪೦ ನಗರಾಧ್ಯಕ್ಷ,

ಸಹಿ, ಸಿ. **ಎಫ್. ಹುಯಿಲಗೋಳ.**

ಗದಗ-ಬೆಟಗೇರಿ ಮುನ್ಸಿಪಲ್ ಬರೋ ಗದಗ.

**ಶ್ರೀಮಾನ್ ದಿವಾಣರು** ಭವಿಷ್ಯವನ್ನು ಓದಿ ಹೇಳುವದಕ್ಕಿಂತ ಪೂರ್ವದಲ್ಲಿ ಮನುಷ್ಯನ ಜೀವನ ರಹಸ್ಯವು ಅವನ ಹಸ್ತರೇಖೆಗಳಲ್ಲಿ ಗುಪ್ತವಾಗಿರುವದೆಂಬದು ನನಗೆ ಗೊತ್ತಿದ್ದಿಲ್ಲ— " **ದಿವಾಣರು** " ಹಸ್ತದಲ್ಲಿರುವ ಪ್ರತಿಯೊಂದು ರೇಖೆಯ ರಹಸ್ಯ ವಿಷಯವನ್ನು ಆಕರ್ಷಕ ರೀತಿಯಲ್ಲಿ ವ್ಯಾಖ್ಯಾನ ಮಾಡಿ ನಿಜವಾಗಿಯೂ ನನ್ನನ್ನು ಆಶ್ಚರ್ಯಚಕಿತನನ್ನಾಗಿ ಮಾಡಿದರು- ಅವರು ಹೇಳಿದ ಪ್ರತಿಯೊಂದು ಭವಿಷ್ಯವು ನಿಜವಾಗಿ ಸಂಭವಿಸಿತು. ವಿಶೇಷತ: ಗೊತ್ತಿಲ್ಲದ ಆಗಿನ ಭವಿಷ್ಯವು ಆಶ್ಚರ್ಯಕಾರಕ ಸತ್ಯವನ್ನುಂಟು ಮಾಡಿತು. ಅವರು ಹೇಳಿದ ಮುಖ್ಯವಾಗಿರುವ ಎಲ್ಲ ಭವಿಷ್ಯಗಳು ಮೊದಲಿಗೆ ಅಸಂಭವ ಕಂಡಾಗ್ಯೂ ಸಂಭವವಾಗಿ ಪರಿಣಮಿಸಿದವು. ಅರ್ಥಾತ್ ಸತ್ಯವಾದವು. ಗದಗ ೫ - ೪—೧೯೪೦

**ಸಹಿ, ಎಸ್. ಎ. ಮಾನ್ವಿ.**

**ಇಲೆಕ್ಟ್ರಿಕ್ ಮತ್ತು ಪಾವರ ಸಪ್ಲಾಯರ್**

ಗದಗ-ಬೆಟಗೇರಿ, ಬ್ಯಾಡಗಿ, ರಾಣೇಬೆನ್ನೂರ.

ಇಂಥ ಅನೇಕ ಶಿಫಾರಸ ಪತ್ರಗಳು ಪ್ರಸಿದ್ಧ ಪುರುಷರಿಂದ ಬಂದಿದ್ದು ಅವನ್ನು ಇಲ್ಲಿ ಕಾಣಿಸಿಲ್ಲ.

# ಅಚ್ಚಿನಲ್ಲಿರುವ ಪುಸ್ತಕ

**ಮುಳಗುಂದದ**
**ಶ್ರೀ ಬಾಲಲೀಲಾ ಮಹಾಂತ**
**ಶಿವಯೋಗಿ ಸ್ವಾಮಿಗಳ**
**ಚರಿತ್ರೆ.**

ಶ್ರೀ ಮಹಾಂತ ಶಿವಯೋಗಿ ಸ್ವಾಮಿಗಳ ಅದ್ಭುತ ಲೀಲೆಯಿಂದ ಕೂಡಿದ ಸುರಸ ಪುಸ್ತಕವು! ಹಾಳಿಯ ತುಟಾಗ್ರತೆಯ ಮೂಲಕ ನಿಯಮಿತ ಪ್ರತಿಗಳನ್ನು ತೆಗೆಯುವೆವು. ಗ್ರಾಹಕರು ತ್ವರೆ ಮಾಡಿ ಹೆಸರು ತಿಳಿಸಿರಿ.

ಬೆಲೆ ೧। ರೂ.

ನಿವಾಸ:—

ಮ್ಯಾನೇಜರ,
"ವಿದ್ಯಾರಣ್ಯ ಗ್ರಂಥಮಾಲಾ ಆಫೀಸ"
ಪೋ. ಮುಳಗುಂದ.
ಜಿ. ಧಾರವಾಡ.